ಮಂಗಳೂರು ಸೋಮವಾರ, 9 ಮಾರ್ಚ್ 2026 ಸಂಪುಟ 47, ಸಂಚಿಕೆ 340, ಪುಟಗಳು 12+6 hosadigantha.com ■ ಬೆಂಗಳೂರು ■ ಮಂಗಳೂರು ■ ಶಿವಮೊಗ್ಗ ■ ಹುಬ್ಬಳ್ಳಿ REG.No.MNG /121/2024-26 Posted at kodialbail P.O / RNI:29813/78/ Daily ₹5

ರಾಷ್ಟ್ರ ಜಾಗೃತಿಯ ದೈನಿಕ

T20 ವಿಶ್ವಕಪ್ 2026

ಹೊಸ ದಿಗಂತ

ಲೋಕಹಿತಂ ಮಮ ಕರಣೀಯಂ

ಮತ್ತೊಂದು ವಿಶ್ವಗರಿ 3ನೇ ಟಿ20 ವಿಶ್ವಕಪ್ ಗೆದ್ದು ಬೀಗಿದ ಭಾರತ

ಟಿ20 ಧುರಂಧರ್



ಅಹಮದಾಬಾದ್: ಬ್ಯಾಟಿಂಗ್ ಮಾಡುವಾಗ ಸಿಕ್ಸರ್‌ಗಳನ್ನು ಬಾರಿಸುತ್ತಾ, ಬೌಲಿಂಗ್ ಮಾಡುವಾಗ ವಿಕೆಟ್‌ಗಳನ್ನು ತೆಗೆಯುತ್ತಾ ಭಾರತ ತಂಡವು ವಿಶ್ವ ಕ್ರಿಕೆಟ್‌ನಲ್ಲಿ ತನಗೆ ತಾನೇ ಸಾಟಿ ಎಂಬ ವಿಷಯ ಗಟ್ಟಿಯಾಗಿ ಸ್ಪಷ್ಟಪಡಿಸಿದೆ. ಕೋಟ್ಯಾಂತರ ಅಭಿಮಾನಿಗಳ ಕನಸು ಮತ್ತೊಮ್ಮೆ ಈಡೇರಿದೆ. ಸೂರ್ಯಕುಮಾರ್ ಯಾದವ್ ನೇತೃತ್ವದಲ್ಲಿ ಭಾರತ ಮತ್ತೊಮ್ಮೆ ದೊಡ್ಡ ಸಾಧನೆಯೊಂದನ್ನು ಮಾಡಿದೆ. ಕಿವೀಸ್ ತಂಡವನ್ನು ಸೋಲಿಸಿರುವ ಭಾರತವು ಸತತ ಎರಡನೇ ಬಾರಿ ಟಿ20 ವಿಶ್ವಕಪ್ ಗೆದ್ದು ಬೀಗಿದೆ. ಟೂರ್ನಿಯುದ್ದಕ್ಕೂ ಅತ್ಯುತ್ತಮ ಪ್ರದರ್ಶನ ನೀಡಿದ ವಿಶ್ವದ ನಂಬರ್ 1 ತಂಡ ಭಾರತವು ಭಾನುವಾರದ ಫೈನಲ್ ಪಂದ್ಯದಲ್ಲಿ ನ್ಯೂಜಿಲೆಂಡ್ ತಂಡವನ್ನು ಎದುರಿಸಿತು. ಬ್ಯಾಟಿಂಗ್ ಆಹ್ವಾನ ಪಡೆದು 255 ರನ್‌ಗಳ ದೊಡ್ಡ ಮೊತ್ತ ಬಾರಿಸಿತು. ಗುರಿ ಬೆನ್ನತ್ತಿದ ನ್ಯೂಜಿಲೆಂಡ್ ತಂಡವನ್ನು 159ಕ್ಕೆ ಆಲೌಟ್ ಮಾಡಿ ವಿಶ್ವ ಚಾಂಪಿಯನ್ ಆಗಿ ಮೆರೆಯಿತು. ಸಂಜು ಸಾಮ್ಸನ್ ಹಾಗೂ ಇಶಾನ್ ಕಿಶನ್ ಸ್ಫೋಟಕ ಬ್ಯಾಟಿಂಗ್ ಹಾಗೂ ಐತಿಹಾಸಿಕ ಜೊತೆಯಾಟದೊಂದಿಗೆ ಕಿವೀಸ್ ತಂಡಕ್ಕೆ ದುಸ್ವಪ್ನವಾದರು. ಬೂಮ್ರಾ ಮತ್ತೊಮ್ಮೆ ಗೆಲುವಿನ ರೂವಾರಿಯಾದರು. ಇಶಾನ್ ಕಿಶಾನ್ ಎರಡು ಅತ್ಯುತ್ತಮ ಕ್ಯಾಚ್‌ನೊಂದಿಗೆ ಮಿಂಚಿದರು. ಕಿವೀಸ್ ಪರ ಸೈಫರ್ಟ್ ಮಾತ್ರ ಹೇಳಿಕೊಳ್ಳುವ ಬ್ಯಾಟಿಂಗ್ ಮಾಡಿದರು.

ಸಂಜು–ಕಿಶನ್ ಅಬ್ಬರ: ಭಾರತದ ಬ್ಯಾಟರ್‌ಗಳು ಕಿವೀಸ್ ಮೇಲೆ ಸವಾರಿ ನಡೆಸಿದರು. ಯಾರೊಬ್ಬ ಬ್ಯಾಟರ್ ಕೂಡ ಸೆಟ್ ಆಗುವ ಮುಲಾಜಿಗೆ ಬೀಳದೆ ಮೊದಲ ಎಸೆತದಿಂದ ದಂಡಿಸುತ್ತಾ ಬಂದರು. ಬ್ಯಾಟಿಂಗ್ ಬುಲಾವ್ ಪಡೆದ ಭಾರತ ಸಂಜು ಸ್ಯಾಮ್ಸನ್ ಹಾಗೂ ಅಭಿಷೇಕ್ ಶರ್ಮ ಅವರಿಂದ ಅಬ್ಬರದ ಆರಂಭ ಪಡೆಯಿತು. 98 ರನ್‌ಗಳ ಆರಂಭಿಕ ಜೊತೆಯಾಟದ ನಂತರ ಅಭಿಷೇಕ್ 52ಕ್ಕೆ ವಿಕೆಟ್ ಒಪ್ಪಿಸಿದರು. ಮೂರನೇ ಕ್ರಮಾಂಕದಲ್ಲಿ ಬ್ಯಾಟಿಂಗ್‌ಗಿಳಿದ ಕಿಶನ್ ಸ್ಫೋಟಕ ಬ್ಯಾಟಿಂಗ್ ಆರಂಭಿಸಿದರು. ಸಂಜು ಕೂಡ ಅದೇ ಆಟವಾಡಿದರು. ಕಿಶನ್ 54 ರನ್‌ಗೆ ವಿಕೆಟ್ ಒಪ್ಪಿಸಿದರೆ, ಸಂಜು 89 ರನ್‌ಗಳಿಸಿ ಮಿಂಚಿದರು. ಶಿವಂ ದುಬೆ ಕೊನೆಯ ಓವರ್‌ನಲ್ಲಿ ಸ್ಫೋಟಕ ಬ್ಯಾಟಿಂಗ್‌ನೊಂದಿಗೆ ಸ್ಕೋರ್ ಹಿಗ್ಗಿಸಿದರು.

ಸ್ಯಾಮ್ಸನ್ ಆಟಕ್ಕೆ ಕಿವೀಸ್ ತತ್ತರ



89 ರನ್
46 ಎಸೆತ

54 ರನ್
25 ಎಸೆತ

ಸರಣಿ ಶ್ರೇಷ್ಠ: ಸಂಜು ಸ್ಯಾಮ್ಸನ್

ಯಾವ ತಂಡಕ್ಕೆ ಸಿಕ್ಕಿದ್ದೇನು?

ಭಾರತ: ಚಾಂಪಿಯನ್ಸ್
27.48 ಕೋಟಿ ರೂ.

ಕಿವೀಸ್: ರನ್ನರ್ಸ್ ಅಪ್
14.65 ಕೋಟಿ ರೂ.

3

2024ರಲ್ಲಿ ಟಿ20 ವಿಶ್ವಕಪ್
2025ರಲ್ಲಿ ಚಾಂಪಿಯನ್ಸ್ ಟ್ರೋಫಿ
2026ರಲ್ಲಿ ಟಿ20 ವಿಶ್ವಕಪ್

3 ವರ್ಷದಲ್ಲಿ ಭಾರತಕ್ಕೆ 3 ಐಸಿಸಿ ಟ್ರೋಫಿ



ಪಂದ್ಯಶ್ರೇಷ್ಠ: ಜಸ್‌ಪ್ರೀತ್ ಬೂಮ್ರಾ

ಬೂಮ್ರಾಗೆ 4 ವಿಕೆಟ್



ಫೈನಲ್‌ನಲ್ಲಿ ಅತ್ಯಂತ ಅಧಿಕ ಸ್ಕೋರ್

ಟಿ20 ವಿಶ್ವಕಪ್ ಇತಿಹಾಸದಲ್ಲಿ ಭಾರತ ಅಚ್ಚಳಿಯದ ದಾಖಲೆಯೊಂದನ್ನು ಮಾಡಿದೆ. ಫೈನಲ್ ಪಂದ್ಯದಲ್ಲಿ ಬರೋಬ್ಬರಿ 255 ರನ್ ಗಳಿಸಿದೆ. ಇದು ಯಾವುದೇ ತಂಡ ಪ್ಲೇಆಫ್ ಅಥವಾ ಫೈನಲ್ ಪಂದ್ಯದಲ್ಲಿ ಗಳಿಸಿದ ಅತಿ ಹೆಚ್ಚು ರನ್ ಎಂಬ ದಾಖಲೆಯಾಗಿದೆ. ಇದಲ್ಲದೆ, ಟಿ20 ವಿಶ್ವಕಪ್ ಇತಿಹಾಸದಲ್ಲೇ ಎರಡನೇ ಅತಿ ಹೆಚ್ಚು ರನ್ ಆಗಿದೆ. ಸೆಮಿಫೈನಲ್‌ನಲ್ಲಿ ಮಾಡಿದ್ದ 253ರ ದಾಖಲೆಯನ್ನು ಮುರಿದು ಹಾಕಿದೆ.

ಅಹಮದಾಬಾದ್‌ನಲ್ಲಿ ಕೊನೆಗೂ ಗೆದ್ದ ಭಾರತ

ಅಹಮದಾಬಾದ್ ಕ್ರೀಡಾಂಗಣದಲ್ಲಿ ನಡೆದಿರುವ ಫೈನಲ್ ಪಂದ್ಯದಲ್ಲಿ ಭಾರತ ಕೊನೆಗೂ ಗೆಲುವು ಸಾಧಿಸಿದೆ. 2023ರ ಏಕದಿನ ವಿಶ್ವಕಪ್ ಫೈನಲ್‌ಗೇರಿದ್ದರೂ ಆಸ್ಟ್ರೇಲಿಯಾ ವಿರುದ್ಧ ಸೋತಿತ್ತು. ಸೂಪರ್–8 ಪಂದ್ಯದಲ್ಲಿ ದ.ಆಫ್ರಿಕಾ ತಂಡದ ವಿರುದ್ಧ ಸೋತಿತ್ತು. ಈ ಬೆನ್ನಲ್ಲೇ ಅಹಮದಾಬಾದ್ ಕ್ರೀಡಾಂಗಣದಲ್ಲಿ ಭಾರತಕ್ಕೆ ಸೋಲೆ ಗತಿ ಎಂಬಂತೆ ಬಿಂಬಿಸಲಾಗುತ್ತಿತ್ತು. ಆದರೆ ಭಾರತ ನರೇಂದ್ರ ಮೋದಿ ಕ್ರೀಡಾಂಗಣದಲ್ಲಿ ಫೈನಲ್ ಪಂದ್ಯ ಗೆದ್ದಿದೆ.

ಟ್ರೋಫಿ ತಂದಿಟ್ಟ ಧೋನಿ–ರೋಹಿತ್



ಹಾಲಿ ಚಾಂಪಿಯನ್ ಭಾರತ ತಂಡದ ನಾಯಕ ರೋಹಿತ್ ಶರ್ಮ ಮತ್ತು ಮೊದಲ ಟಿ20 ವಿಶ್ವಕಪ್ ಪಂದ್ಯಾವಳಿಯ ವಿಜೇತ ತಂಡದ ನಾಯಕ ಮಹೇಂದ್ರ ಸಿಂಗ್ ಧೋನಿ ಪಂದ್ಯಕ್ಕೂ ಮುನ್ನ ಟ್ರೋಫಿ ತಂದಿಟ್ಟರು. ಅಹಮದಾಬಾದ್ ಕ್ರೀಡಾಂಗಣದಲ್ಲಿ ಹಾಜರಿದ್ದ ಈ ಇಬ್ಬರೂ, ಪಂದ್ಯ ಪೂರ್ಣ ವೀಕ್ಷಿಸಿ ತಂಡಕ್ಕೆ ಹಾರೈಸಿದರು.

ಶಾ ಸೇರಿ ಗಣ್ಯರ ಸಾಕ್ಷಿ

ನರೇಂದ್ರ ಮೋದಿ ಕ್ರೀಡಾಂಗಣದಲ್ಲಿ ನಡೆದ ಕೊನೆಯ ಪಂದ್ಯಕ್ಕೆ ಕೇಂದ್ರ ಗೃಹ ಮಂತ್ರಿ ಅಮಿತ್ ಶಾ ಭಾಗಿಯಾಗಿ ಪಂದ್ಯ ವೀಕ್ಷಿಸಿದರು. ಪಂದ್ಯಕ್ಕಾಗಿ ಹಲವಾರು ಗಣ್ಯರು ಬಂದಿದ್ದರು. ಐಸಿಸಿ ಅಧ್ಯಕ್ಷ ಜಯ್ ಶಾ, ಎಂ.ಎಸ್. ಧೋನಿ ಸೇರಿದಂತೆ ರಾಜಕಾರಣಿಗಳು, ಮಾಜಿ ಕ್ರಿಕೆಟಿಗರು, ಬಾಲಿವುಡ್ ತಾರೆಯರು ಸೇರಿದಂತೆ ಭಾಗಿಯಾಗಿದ್ದರು.

ಟಿ20 ವಿಶ್ವ ಸಮರ ಗೆದ್ದ ಭಾರತ

• ವಿವರ ಕ್ರೀಡಾಪುಟ

ಭಾರತದ ಐತಿಹಾಸಿಕ ಸಾಧನೆ

3 ಬಾರಿ ಟಿ20 ವಿಶ್ವಕಪ್ ಗೆದ್ದ ಮೊದಲ ತಂಡ

2007ರಲ್ಲಿ ಟಿ20 ವಿಶ್ವಕಪ್ ಉದ್ಘಾಟನಾ ಪಂದ್ಯಾವಳಿ ದ.ಆಫ್ರಿಕಾದಲ್ಲಿ ನಡೆದಿತ್ತು. ಅಲ್ಲಿಂದ ಇಲ್ಲಿಯವರೆಗೆ ಭಾರತ ನಾಲ್ಕನೇ ಬಾರಿ ಫೈನಲ್ ಆಡಿದೆ. ಇದರಲ್ಲಿ ಮೂರು ಬಾರಿ ಗೆದ್ದ ಏಕೈಕ ತಂಡ ಎಂಬ ಯಾರೂ ಮಾಡದ ಸಾಧನೆಗೈದು ಭಾರತ ಮೆರೆದಿದೆ. ಧೋನಿ ನಾಯಕತ್ವದಲ್ಲಿ ಮೊದಲ ಸೀಸನ್‌ನಲ್ಲೇ ಭಾರತ ವಿಶ್ವಕಪ್ ಮುಡಿಗೇರಿಸಿಕೊಂಡಿತ್ತು. 2014ರಲ್ಲಿ ಫೈನಲ್‌ಗೇರಿದರೂ ಶ್ರೀಲಂಕಾ ಎದುರು ಸೋತು ರನ್ನರ್–ಅಪ್ ಆಗಿತ್ತು. ಕಳೆದ ಬಾರಿ(2024) ವಿಂಡೀಸ್ ಹಾಗೂ ಅಮೆರಿಕದ ಜಂಟಿ ಆತಿಥ್ಯದಲ್ಲಿ ನಡೆದಿದ್ದ ವಿಶ್ವಕಪ್‌ನಲ್ಲಿ ರೋಹಿತ್ ಶರ್ಮ ನಾಯಕತ್ವದಲ್ಲಿ ಭಾರತ ಕಪ್ ಗೆದ್ದು ಬೀಗಿತ್ತು. ಇದರೊಂದಿಗೆ ಎರಡು ಬಾರಿ ಟಿ20 ವಿಶ್ವಕಪ್ ಗೆದ್ದ ಮೂರನೇ ತಂಡ ಎನಿಸಿಕೊಂಡಿತ್ತು. ತವರಿನಲ್ಲೇ ನಡೆದ ಪಂದ್ಯಾವಳಿಯಲ್ಲಿ ಭಾರತ ಮತ್ತೊಮ್ಮೆ ಕಿರೀಟ ಮುಡಿಗೇರಿಸಿಕೊಂಡಿದೆ.

ಭಾರತ ಚಾಂಪಿಯನ್ ಪಟ್ಟಕ್ಕೇರಿದ ವರ್ಷ

2007



2024



ವಿಶ್ವಕಪ್ ಉಳಿಸಿಕೊಂಡ ಮೊದಲ ತಂಡ

ಭಾರತ 2024ರಲ್ಲಿ ಚಾಂಪಿಯನ್ ಆಗಿತ್ತು. 2026ರಲ್ಲೂ ಗೆದ್ದು ಸತತ ಎರಡನೇ ಬಾರಿ ವಿಶ್ವಕಪ್ ಗೆದ್ದಿರುವ ಭಾರತ ಯಾವ ತಂಡವೂ ಮಾಡದ ಇನ್ನೊಂದು ದಾಖಲೆ ಬರೆದಿದೆ. ಸತತ ಎರಡು ಟ್ರೋಫಿ ಗೆದ್ದಿದ್ದಲ್ಲದೆ, ಟಿ20 ವಿಶ್ವಕಪ್ ತನ್ನಲ್ಲೇ ಉಳಿಸಿಕೊಂಡ ಮೊದಲ ತಂಡ ಎನಿಸಿಕೊಂಡಿದೆ.



ಸ್ವದೇಶದಲ್ಲಿ ಗೆದ್ದ ಹೆಮ್ಮೆಯ ದೇಶ

ಹತ್ತಾರು ದೇಶಗಳು ಕೆಲವೊಮ್ಮೆ ಜಂಟಿಯಾಗಿ, ಕೆಲವೊಮ್ಮೆ ಸ್ವತಂತ್ರವಾಗಿ ಪಂದ್ಯಾವಳಿಗೆ ಆತಿಥ್ಯ ನೀಡಿವೆ. ಹೀಗಾದರೂ ಯಾವುದೇ ತಂಡ ಸ್ವಂತ ಮಣ್ಣಲ್ಲಿ ಚಾಂಪಿಯನ್‌ಗಳಾಗಿರಲಿಲ್ಲ. ಕೆಲವು ತಂಡಗಳು ಸೆಮಿಫೈನಲ್ ಗೇರಿದ್ದರೂ ಕಪ್ ಗೆದ್ದಿರಲಿಲ್ಲ. ಇದೀಗ ಭಾರತ ಶ್ರೀಲಂಕಾದೊಂದಿಗೆ ಜಂಟಿಯಾಗಿ ಆತಿಥ್ಯ ವಹಿಸಿದ್ದು, ಕಪ್ ಗೆಲ್ಲುವುದರೊಂದಿಗೆ ತವರಿನಲ್ಲಿ ಚಾಂಪಿಯನ್ ಆದ ಮೊದಲ ತಂಡ ಎನಿಸಿಕೊಂಡಿದೆ.

ಭಾರತಕ್ಕೆ 8ನೇ ಐಸಿಸಿ ಟ್ರೋಫಿ

ಭಾರತದ ಒಟ್ಟು ಐಸಿಸಿ ಟ್ರೋಫಿಗಳ ಸಂಖ್ಯೆ ಮತ್ತಷ್ಟು ಹೆಚ್ಚಿದೆ. 1983ರಲ್ಲಿ ಆರಂಭವಾದ ಭಾರತ ಟ್ರೋಫಿ ಬೇಟೆ 8ಕ್ಕೇರಿದೆ. ಆಸ್ಟ್ರೇಲಿಯಾ ಈ ವರೆಗೂ ಹೆಚ್ಚು ಐಸಿಸಿ ಟೂರ್ನಿ ಗೆದ್ದ ತಂಡವಾಗಿದೆ 10 ಟ್ರೋಫಿಗಳೊಂದಿಗೆ. ಭಾರತದ ಸಂಖ್ಯೆ 8ಕ್ಕೇರಿದ್ದು ಭಾರತ ಎರಡನೇ ಸ್ಥಾನದಲ್ಲಿ ಭದ್ರವಾಗಿದ್ದಲ್ಲದೆ, ನಂಬರ್ 1 ಸ್ಥಾನಕ್ಕೆ ಇನ್ನೂ ಹತ್ತಿರವಾಗಿದೆ.

ಸ್ಕೋರ್

ಭಾರತ	ನ್ಯೂಜಿಲೆಂಡ್
255-5	159-10
20 ಓವರ್‌ಗಳಲ್ಲಿ	19 ಓವರ್‌ಗಳಲ್ಲಿ

"ಟಿ20 ವಿಶ್ವಕಪ್ ಗೆದ್ದಿರುವ ಭಾರತ ತಂಡಕ್ಕೆ ಅಭಿನಂದನೆಗಳು. ಈ ಗೆಲುವು ನಮ್ಮ ತಂಡದ ಪ್ರದರ್ಶನ, ಪಟ್ಟ ಶ್ರಮ ಮತ್ತು ಪ್ರತಿಯೊಬ್ಬ ಆಟಗಾರರ ಕೌಶಲವನ್ನು ಎತ್ತಿ ತೋರಿಸುತ್ತದೆ. ಈ ಗೆಲುವು ನಮ್ಮ ದೇಶಕ್ಕೆ ಹೆಮ್ಮೆಯಾಗಿದೆ.

■ ನರೇಂದ್ರ ಮೋದಿ, ಪ್ರಧಾನ ಮಂತ್ರಿ



ಕಿರುಸುದ್ದಿ

ಶುಶ್ರೂಷ ಪರೀಕ್ಷೆಯಲ್ಲಿ ಆಳ್ವಾಸ್ ವಿದ್ಯಾರ್ಥಿಗಳ ಸಾಧನೆ

ಮೂಡುಬಿದಿರೆ: ರಾಜೀವ್ ಗಾಂಧಿ ಆರೋಗ್ಯ ವಿಶ್ವವಿದ್ಯಾನಿಲಯದವರು ಡಿಸೆಂಬರ್ 2025 ರಂದು ನಡೆಸಿದ ಶುಶ್ರೂಷ ಪರೀಕ್ಷೆಯಲ್ಲಿ ಆಳ್ವಾಸ್ ಶುಶ್ರೂಷ ಮಹಾವಿದ್ಯಾಲಯದ ಅಂತಿಮ ವರ್ಷದ ಬೇಸಿಕ್ ಬಿ.ಎಸ್ಸಿ ನರ್ಸಿಂಗ್‌ನ 94 ವಿದ್ಯಾರ್ಥಿಗಳ ಪೈಕಿ 63 ವಿದ್ಯಾರ್ಥಿಗಳು ಉನ್ನತ ದರ್ಜೆಯಲ್ಲಿ ಮತ್ತು 30 ವಿದ್ಯಾರ್ಥಿಗಳು ಪ್ರಥಮ ದರ್ಜೆಯಲ್ಲಿ ತೇರ್ಗಡೆ ಹೊಂದಿ ಕಾಲೇಜಿಗೆ ಶೇಕಡಾ 99 ಫಲಿತಾಂಶವನ್ನು ತಂದು ಕೊಟ್ಟಿರುತ್ತಾರೆ. ಆಳ್ವಾಸ್ ಶಿಕ್ಷಣ ಪ್ರತಿಷ್ಠಾನದ ಅಧ್ಯಕ್ಷ ಡಾ.ಎಂ. ಮೋಹನ ಆಳ್ವ, ಟ್ರಸ್ಟಿ, ಡಾ. ವಿನಯ್ ಆಳ್ವ, ಪ್ರಾಂಶುಪಾಲ ಡಾ. ಬಿ.ಎ. ಯತಿಕುಮಾರ ಸ್ವಾಮಿ ಗೌಡ ಮತ್ತು ಕಾಲೇಜಿನ ಪ್ರಾಧ್ಯಾಪಕ ವರ್ಗದವರು ವಿದ್ಯಾರ್ಥಿಗಳಿಗೆ ಅಭಿನಂದನೆ ಸಲ್ಲಿಸಿದರು.

ಡಾ. ಪ್ರಶಾಂತ ಶರ್ಮ ಅಜಕ್ಕಳರಿಗೆ 9ನೇ ರ್‍ಯಾಂಕ್



ಪುತ್ತೂರು: 2025 ನವಂಬರ್‌ನಲ್ಲಿ ರಾಜೀವ ಗಾಂಧಿ ಯೂನಿವರ್ಸಿಟಿ ಆಫ್ ಹೆಲ್ತ್ ಸೈನ್ಸ್ ಕರ್ನಾಟಕ ನಡೆಸಿದ ಸ್ನಾತಕೋತ್ತರ ದಂತ ವೈದ್ಯಕೀಯದ ಕನ್ಸರ್ವೇಟಿವ್ ಡೆಂಟಿಸ್ಟ್ರಿ ಹಾಗೂ ಎಂಡೋಡಾಂಟಿಕ್ಸ್ ವಿಭಾಗದ ಪರೀಕ್ಷೆಯಲ್ಲಿ ಡಾ. ಪ್ರಶಾಂತ ಶರ್ಮ ಅಜಕ್ಕಳ ಅವರು 9ನೇ ರ್‍ಯಾಂಕ್ ಪಡೆದಿರುತ್ತಾರೆ. ಇವರು ಶ್ರೀ ಹಾಸನಾಂಬ ದಂತವಿದ್ಯಕೀಯ ಕಾಲೇಜು ಮತ್ತು ಆಸ್ಪತ್ರೆಯಲ್ಲಿ ಬಿ.ಡಿ.ಎಸ್. ಹಾಗೂ ಎಂ.ಡಿ.ಎಸ್. ಪದವಿಯನ್ನು ಪೂರೈಸಿದ್ದು, ಇವರು ಅಜಕ್ಕಳ ಶ್ಯಾಮ ಭಟ್ ಮತ್ತು ಆಶಾ ಶ್ಯಾಮ್ ಭಟ್ ಅವರ ಪುತ್ರ. ಪ್ರಸ್ತುತ ಪುತ್ತೂರಿನ ಪ್ರಶಾಂತ ಡೆಂಟಲ್ ಕ್ಲಿನಿಕ್‌ನಲ್ಲಿ ರೂಟ್ ಕೆನಾಲ್ ತಜ್ಞರಾಗಿ ಲಭ್ಯರಿದ್ದಾರೆ.

ಕೆರೆಯಲ್ಲಿ ಮುಳುಗಿ ವೃದ್ಧೆ ಸಾವು

ಗಂಗೊಳ್ಳಿ: ಮಾನಸಿಕ ತೊಳಲಾಟದಿಂದ ಬಳಲುತ್ತಿದ್ದ ವೃದ್ಧೆಯೊಬ್ಬರು ತೋಟದ ಕೆರೆಗೆ ಆಯತಪ್ಪಿ ಬಿದ್ದು ಮೃತಪಟ್ಟ ಘಟನೆ ತ್ರಾಸಿ ಗ್ರಾಮದ ಶೆಟ್ಟಿಹಿತ್ಲು ಬಳಿ ನಡೆದಿದೆ. ಸೀತಾ ಮೊಗವೀರ (67) ಮೃತಪಟ್ಟವರು. ಇವರು ಮಾ. 7 ರಂದು ಮಧ್ಯಾಹ್ನ ಪೂಜೆಗಾಗಿ ಬಾಳೆ ಎಲೆ ತರಲು ನೆರೆಮನೆಯ ಅಡಿಕೆ ತೋಟಕ್ಕೆ ಹೋಗಿದ್ದಾಗ, ಅಲ್ಲಿನ ಸಣ್ಣ ಕೆರೆಗೆ ಕಾಲುಜಾರಿ ಬಿದ್ದಿದ್ದಾರೆ.

ಮದ್ಯವ್ಯಸನಿ ಸಾವು

ಉಡುಪಿ: ಅತಿಯಾದ ಮದ್ಯಪಾನದ ಚಟದಿಂದ ಅನಾರೋಗ್ಯಕ್ಕೀಡಾಗಿದ್ದ ಹೆರ್ಮುಂಡೆ ಗ್ರಾಮದ ಶಂಕರ (59) ಎಂಬವರು ಚಿಕಿತ್ಸೆ ಫಲಿಸದೆ ಮೃತಪಟ್ಟಿದ್ದಾರೆ. ಸುಮಾರು ಎರಡು ವರ್ಷಗಳಿಂದ ಕೆಲಸಕ್ಕೆ ಹೋಗದೆ ಅನಾರೋಗ್ಯದಿಂದ ಬಳಲುತ್ತಿದ್ದ ಇವರ ರಕ್ತದ ಒತ್ತಡ ಕಡಿಮೆಯಾದ ಕಾರಣ ಕಾರ್ಕಳ ಸರ್ಕಾರಿ ಆಸ್ಪತ್ರೆಗೆ ಕರೆದೊಯ್ಯಲಾಗಿತ್ತು. ಆದರೆ ಅವರು ಅಷ್ಟರಲ್ಲೇ ಮೃತಪಟ್ಟಿರುವುದಾಗಿ ವೈದ್ಯರು ತಿಳಿಸಿದ್ದಾರೆ.

ಬೆಂಕಿ ತಗಲಿದ್ದ ಮಹಿಳೆ ಸಾವು

ಉಡುಪಿ: ವಿದ್ಯುತ್ ಇಲ್ಲದ ಕಾರಣ ಹಚ್ಚಿಟ್ಟಿದ್ದ ಕ್ಯಾಂಡಲ್‌ನಿಂದ ಆಕಸ್ಮಿಕವಾಗಿ ಮೈಗೆ ಬೆಂಕಿ ತಗುಲಿ ಗಂಭೀರವಾಗಿ ಗಾಯಗೊಂಡಿದ್ದ ಮಹಿಳೆಯೊಬ್ಬರು ಚಿಕಿತ್ಸೆ ಫಲಿಸದೆ ಮೃತಪಟ್ಟಿದ್ದಾರೆ. ಅಲೆವೂರು ಪ್ರಗತಿ ನಗರದ ನಿವಾಸಿ ಭಾಗ್ಯ (40) ಮೃತ ದುರ್ದೈವಿ. ಜ. 23 ರಂದು ರಾತ್ರಿ ಮನೆಯಲ್ಲಿ ಕರೆಂಟ್ ಇಲ್ಲದಿದ್ದಾಗ ಕ್ಯಾಂಡಲ್ ಹಚ್ಚಿ ಪಕ್ಕದಲ್ಲೇ ಇಟ್ಟು ಮಲಗಿದ್ದರು. ಈ ವೇಳೆ ಆಕಸ್ಮಿಕವಾಗಿ ಬೆಂಕಿ ಮೈಗೆ ಹಬ್ಬಿದ್ದು, ಅವರನ್ನು ತಕ್ಷಣ ಮಂಗಳೂರಿನ ವೆನ್‌ಲಾಕ್ ಆಸ್ಪತ್ರೆಗೆ ದಾಖಲಿಸಲಾಗಿತ್ತು. ಒಂದೂವರೆ ತಿಂಗಳಿನಿಂದ ಹೋರಾಡುತ್ತಿದ್ದ ಅವರು ಮಾ. 6 ರಂದು ರಾತ್ರಿ ಕೊನೆಯುಸಿರೆಳೆದಿದ್ದಾರೆ.

ಅನಗತ್ಯ ಮಾನದಂಡ ಹೇರಿ ಗಣಿಗಾರಿಕೆಗೆ ಅನುಮತಿ ನೀಡುವಲ್ಲಿ ವಿಳಂಬ । ವಿವಿಧ ನೆಪವೊಡ್ಡಿ ಪದೇ ಪದೇ ದಾಳಿ

ಸಂಕಷ್ಟಕ್ಕೆ ಸಿಲುಕಿದ ಕೆಂಪುಕಲ್ಲು ಉದ್ಯಮ

ಕಾಸರಗೋಡು: ವಿವಿಧ ಸಮಸ್ಯೆಗಳಿಂದಾಗಿ ಕಾಸರಗೋಡು ಜಿಲ್ಲೆಯ ಕೆಂಪುಕಲ್ಲು ವಲಯವು ಸಂದಿಗ್ಧ ಪರಿಸ್ಥಿತಿ ಎದುರಿಸುತ್ತಿದೆ. ಹೊಸದಾಗಿ ಕೆಂಪುಕಲ್ಲು ಗಣಿಗಾರಿಕೆ ನಡೆಸಲು ಅನುಮತಿ ನೀಡುವುದಕ್ಕೆ ವಿಳಂಬ ಮಾಡುತ್ತಿರುವುದು, ಕೋರೆಗಳಿಗೆ ಪದೇ ಪದೇ ಕಂದಾಯ ಇಲಾಖೆಯ ಅಧಿಕಾರಿಗಳು ದಾಳಿ ನಡೆಸುತ್ತಿರುವುದು, ವಶಪಡಿಸಿಕೊಂಡ ಕೆಂಪುಕಲ್ಲು ಸಾಗಾಟ ವಾಹನಗಳನ್ನು ಬೇಗನೇ ಮರಳಿಸದಿರುವುದು, ಅನಗತ್ಯ ಮಾನದಂಡಗಳನ್ನು ಹೇರುವುದು ಮೊದಲಾದ ನೂರಾರು ಕಾರಣಗಳಿಂದಾಗಿ ಕಳೆದ ಕೆಲವು ವರ್ಷಗಳಿಂದ ಕೆಂಪುಕಲ್ಲು ಕೋರೆ ವಲಯವು ಅಪಾರ ಸಂಕಷ್ಟ ಅನುಭವಿಸುತ್ತಿದೆ. ಮಂಜೇಶ್ವರ, ವರ್ಕಾಡಿ, ಮೀಂಜ, ಪೈವಳಿಕೆ, ಮಂಗಲ್ಪಾಡಿ, ಕುಂಬಳೆ, ಪುತ್ತಿಗೆ, ಎಣ್ಮಕಜೆ ಗ್ರಾಮ ಪಂಚಾಯತ್‌ಗಳ ವ್ಯಾಪ್ತಿಯಲ್ಲಿ ಹಾಗೂ ಕಾಸರಗೋಡು ತಾಲೂಕಿನಲ್ಲಿ ಅಗತ್ಯದ ಮಾನದಂಡಗಳನ್ನು ಪಾಲಿಸಿದರೂ ಕಾಲಕಾಲಕ್ಕೆ ಲೈಸನ್ಸ್‌ಗಳನ್ನು ನೀಡದೇ ಸಂಬಂಧಪಟ್ಟ ಅಧಿಕಾರಿಗಳು ಸತಾಯಿಸುತ್ತಿರುವುದಾಗಿ ಆರೋಪಿಸಲಾಗಿದೆ. ಈ ನಿಟ್ಟಿನಲ್ಲಿ ಕೆಂಪುಕಲ್ಲು ಕೋರೆ ರಂಗದಲ್ಲಿ ದುಡಿಯುವವರಿಗೆ ಹಾಗೂ ಈ ವಲಯ ನಂಬಿಕೊಂಡು ನಿರ್ಮಾಣ ಕಾಮಗಾರಿ ನಡೆಸುವವರಿಗೆ ಉದ್ಯೋಗವಿಲ್ಲದಂತಾಗುತ್ತದೆ. ಈ ವಲಯವನ್ನೇ ನಂಬಿ ಬದುಕುವರು ಅಕ್ಷರಶಃ ಸಂಕಷ್ಟಮಯ ಬದುಕು ಸಾಗಿಸಬೇಕಾಗುತ್ತಿದೆ.



ಜಿಲ್ಲೆಯಿಂದ ಕರ್ನಾಟಕಕ್ಕೆ ಕೆಂಪುಕಲ್ಲು ಸಾಗಾಟ

ಜಿಲ್ಲೆಯ ಗಡಿಪ್ರದೇಶಗಳ ಕೆಂಪುಕಲ್ಲು ಕೋರೆಗಳಿಂದ ಗಣಿಗಾರಿಕೆ ನಡೆಸಿದ ಕಲ್ಲುಗಳನ್ನು ಗಡಿದಾಟಿಸಿ ಕರ್ನಾಟಕಕ್ಕೆ ಸಾಗಿಸಲಾಗುತ್ತಿದೆ. ಇದರಿಂದಾಗಿ ಜಿಲ್ಲೆಯಲ್ಲಿ ಅಗತ್ಯವಿರುವವರಿಗೆ ಹಾಗೂ ನಿರ್ಮಾಣ ವಲಯದವರಿಗೆ ಕಲ್ಲುಗಳು ಲಭಿಸದೆ ಬಹುದೊಡ್ಡ ತೊಂದರೆ ಅನುಭವಿಸುವಂತಾಗಿದೆ. ಮಂಜೇಶ್ವರ ಮತ್ತು ಕಾಸರಗೋಡು ತಾಲೂಕುಗಳ ಗಡಿಭಾಗಗಳ ಹಲವು ಕೋರೆಗಳಿಂದ ಕರ್ನಾಟಕಕ್ಕೆ ಕಲ್ಲುಗಳು ಪೂರೈಕೆಯಾಗುತ್ತಿರುವುದು ಕಂಡುಬರುತ್ತಿದೆ. ಕರ್ನಾಟಕಕ್ಕೆ ದಿನಂಪ್ರತಿ ಅನೇಕ ಲೋಡ್‌ಗಳಷ್ಟು ಕೆಂಪುಕಲ್ಲು ಸಾಗಾಟವಾಗುತ್ತಿರುವುದರಿಂದಲೂ ಜಿಲ್ಲೆಯಲ್ಲಿ ಕೆಂಪುಕಲ್ಲು ಲಭ್ಯತೆಯಲ್ಲಿ ವ್ಯತ್ಯಯವಾಗಿದೆ. ಮೊದಲೇ ಆರ್ಡರ್ ಕೊಟ್ಟವರಿಗೆ ಮಾತ್ರ ಇದೀಗ ಕೆಂಪುಕಲ್ಲು ದೊರಕುತ್ತಿರುವುದಾಗಿ ಹೇಳಲಾಗುತ್ತಿದೆ.

ಕಾಸರಗೋಡು ಜಿಲ್ಲೆಯಲ್ಲಿ ನೂತನ ಕೋರೆಗಳಿಗೆ ತಕ್ಷಣಕ್ಕೆ ಅನುಮತಿ ನೀಡದಿರುವುದರಿಂದ ನಿರ್ಮಾಣ ಚಟುವಟಿಕೆಗಳು ಸಮಯಕ್ಕನುಗುಣವಾಗಿ ನಡೆಯದೆ ಜನಸಾಮಾನ್ಯರು ಕಂಗಾಲಾಗಿದ್ದಾರೆ. ಈ ನಿಟ್ಟಿನಲ್ಲಿ ಬಹುದೊಡ್ಡ ಹೊಡೆತ ಜನರ ಮೇಲೆಯೇ ಬೀಳುವಂತಾಗಿದೆ. ಜಿಲ್ಲೆಯಲ್ಲಿ ಅಗತ್ಯವಿರುವಷ್ಟು ಕಲ್ಲುಗಳನ್ನಾದರೂ ಕಡಿಯಲು ಒಪ್ಪಿಗೆ ನೀಡಬೇಕು. ಮಾತ್ರವಲ್ಲದೆ ಜಿಲ್ಲೆಯ ಬೇಡಿಕೆಗಳನ್ನು ಕೂಡಲೇ ಪೂರೈಸುವತ್ತ ಕೆಂಪುಕಲ್ಲುಗಳನ್ನು ಸಾಗಿಸಲು ಅನುಮತಿ ಒದಗಿಸಬೇಕು ಎಂಬುದು ಸಾರ್ವಜನಿಕ ವಲಯದ ಆಗ್ರಹವಾಗಿದೆ.

ಗಡಿಭಾಗದಲ್ಲಿ ಕೆಂಪುಕಲ್ಲು ಕೊರತೆ ವ್ಯಾಪಕ

ಸಮಯಕ್ಕೆ ಸರಿಯಾಗಿ ಪರ್ಮಿಟ್‌ಗಳನ್ನು ಒದಗಿಸದಿರುವುದು ಮೊದಲಾದ ಕಾರಣಗಳಿಂದ ಗಡಿಭಾಗಗಳಲ್ಲಿ ಮತ್ತು ಮಂಜೇಶ್ವರ ಹಾಗೂ ಕಾಸರಗೋಡು ತಾಲೂಕುಗಳಲ್ಲಿ ಕೆಂಪುಕಲ್ಲುಗಳ ಕೊರತೆ ವ್ಯಾಪಕಗೊಂಡಿದೆ. ಈ ಹಿನ್ನೆಲೆಯಲ್ಲಿ ನಿರ್ಮಾಣ ಕಾಮಗಾರಿಗಳು ಸ್ಥಗಿತಗೊಳ್ಳುವ ಹಂತಕ್ಕೆ ಬಂದು ತಲುಪಿದೆ. ಹೊಸದಾಗಿ ಕೆಂಪುಕಲ್ಲು ಗಣಿಗಾರಿಕೆಗೆ ಅನುಮತಿ ಲಭಿಸಬೇಕಾದರೆ ಹಲವು ಪ್ರಕ್ರಿಯೆಗಳನ್ನು ನಿರ್ವಹಿಸಬೇಕು. ಅಲ್ಲದೆ ಕೆಲವೊಂದು ಅನಗತ್ಯ ಮಾನದಂಡಗಳನ್ನು ಕೂಡಾ ಪಾಲಿಸಬೇಕಾಗುತ್ತದೆ. ವಿವಿಧ ನಿಬಂಧನೆಗಳು ಇರುವುದರಿಂದ ಸುಲಭವಾಗಿ ಕೋರೆಗಳಿಗೆ ಅಂಗೀಕಾರ ದೊರಕದ ಸ್ಥಿತಿ ಉಂಟಾಗಿದೆ.

ಕೋರೆಗಳಿಗೆ ವಿವಿಧ ಅಧಿಕಾರಿಗಳಿಂದ ಆಗಾಗ ದಾಳಿ

ಜಿಲ್ಲೆಯ ಕೆಂಪುಕಲ್ಲು ಕೋರೆಗಳಿಗೆ ಕಂದಾಯ ಮತ್ತು ಜಿಯೋಲಜಿ ಇಲಾಖೆಯ ಅಧಿಕಾರಿಗಳು ಪದೇ ಪದೇ ದಾಳಿ ನಡೆಸುತ್ತಾರೆ. ಪ್ರತೀ ದಾಳಿಗೂ ಗರಿಷ್ಠ ಮೊತ್ತದ ದಂಡ ವಿಧಿಸಲಾಗುತ್ತದೆ. ಜೊತೆಗೆ ಕೆಂಪುಕಲ್ಲು ಸಾಗಾಟದ ಲಾರಿ ಮತ್ತು ಟೆಂಪೋಗಳನ್ನು ವಶಕ್ಕೆ ಪಡೆದು ತೊಂದರೆ ನೀಡಲಾಗುತ್ತಿದೆ ಎಂಬ ಆಕ್ರೋಶ ವ್ಯಕ್ತಗೊಂಡಿದೆ. ಇದರಿಂದಾಗಿಯೂ ಕೆಂಪುಕಲ್ಲು ಕೋರೆ ಕ್ಷೇತ್ರವು ತೊಂದರೆಗೊಳಗಾಗಿದೆ. ಕೆಲವೊಂದು ಬಾರಿ ದಾಳಿ ನಡೆಸುವ ಅಧಿಕಾರಿಗಳು ಲಕ್ಷಗಟ್ಟಲೆ ರೂಪಾಯಿ ದಂಡ ವಿಧಿಸಿ ಕೋರೆ ಮಾಲಕರಿಗೆ ಬಹುದೊಡ್ಡ ಆರ್ಥಿಕ ನಷ್ಟವಾಗುವಂತೆ ಮಾಡುತ್ತಿರುವುದು ಈ ರಂಗವನ್ನು ಕಂಗಾಲಾಗಿಸಿದೆ. ಈ ನಿಟ್ಟಿನಲ್ಲಿ ಸಂಬಂಧಪಟ್ಟ ಅಧಿಕಾರಿಗಳು ಇನ್ನಾದರೂ ದುಡಿಯುವ ಕೈಗಳಿಗೆ ಸಮಸ್ಯೆಯಾಗದಂತೆ ಗಮನ ಹರಿಸಬೇಕಾಗಿದೆ ಎಂಬ ಅಭಿಪ್ರಾಯ ವ್ಯಕ್ತವಾಗಿದೆ.

ಭಟ್ಕಳದಲ್ಲಿ ಹಿಂದು ಸಂಗಮ ಕಾರ್ಯಕ್ರಮ

ಆರೆಸ್ಸೆಸ್ ನಿಷೇಧ ಸಾಧ್ಯವಿಲ್ಲ



ಭಟ್ಕಳ: ರಾಷ್ಟ್ರೀಯ ಸ್ವಯಂಸೇವಕ ಸಂಘ ಕಳೆದ ನೂರು ವರ್ಷಗಳಲ್ಲಿ ಹೆಮ್ಮರವಾಗಿ ಬೆಳೆದಿದ್ದು, ಇದನ್ನು ನಿಷೇಧಿಸಲು ಯಾರಿಂದಲೂ ಸಾಧ್ಯವಿಲ್ಲ. ಸಂಘದ ಸಂಘಟನೆ ಪ್ರಭಲವಾಗಿದ್ದು, ನಮ್ಮನ್ನು ಮುಟ್ಟುವುದು ಅಷ್ಟು ಸುಲಭವಲ್ಲ ಎಂದು ಮಾಜಿ ಸಂಸದ ಅನಂತಕುಮಾರ ಹೆಗಡೆ ಹೇಳಿದರು.

ಪಟ್ಟಣದ ಹಳೇ ತಹಶೀಲ್ದಾರ್ ಕಚೇರಿ ಹಿಂಬದಿಗಿರುವ ಮೈದಾನದಲ್ಲಿ ನಗರ ಹಿಂದು ಸಮ್ಮೇಳನ ಸಮಿತಿ ಏರ್ಪಡಿಸಿದ್ದ ಹಿಂದು ಸಂಗಮ ಕಾರ್ಯಕ್ರಮದಲ್ಲಿ ದಿಕ್ಸೂಚಿ ಭಾಷಣ ಮಾಡಿದ ಅವರು, ನಾವು ದುರ್ಬಲರಲ್ಲ. ನಾವು ದುರ್ಬಲರಾದಾಗ ಮಾತ್ರ ನಮ್ಮನ್ನು ತಡೆಯಲು ಸಾಧ್ಯ. ಸಂಘದ ನೂರನೇ ವರ್ಷ ಆಚರಣೆ ನಿಮಿತ್ತ ದೇಶದ ಮೂಲೆ ಮೂಲೆಯಲ್ಲಿ ಹಿಂದು ಸಮ್ಮೇಳನ ನಡೆಸಿ ಹಿಂದುಗಳಲ್ಲಿ ಜಾಗೃತಿ ಮೂಡಿಸುವ ಕೆಲಸ ಆಗುತ್ತಿದೆ. ಇದೊಂದು ಜಾಗತಿಕ ದಾಖಲೆಯಾಗಿದೆ ಎಂದರು.

ಹಿಂದು ಸಮಾಜ ಒಟ್ಟಾಗಬೇಕು ಎನ್ನುವುದು ಕೋಟ್ಯಂತರ ಜನರ ಆಸೆಯಾಗಿದೆ. ಹಿಂದುತ್ವ ಎಂದರೆ ಸೆಕ್ಯುಲರ್ ಆಗಿದೆ. ಹಿಂದುಗಳು ಎಲ್ಲರನ್ನೂ ಸ್ವಾಗತಿಸಿದ್ದಾರೆ. ಜಗತ್ತಿಗೆ ಶಾಂತಿ ಪಾಠ ಮಾಡಿದವರು ನಾವು. ಇಸ್ಲಾಂ ದೇಶದಲ್ಲಿ ಶಾಂತಿ ಇಲ್ಲ. ಅವರ ದೇಶದಲ್ಲೇ ಯುದ್ಧ ನಡೆಯುತ್ತಿದೆ. ನಮ್ಮಲ್ಲಿ ಜಾತಿಯಿಂದ ಯಾರನ್ನೂ ಗುರುತಿಸಿಲ್ಲ. ಮನೆಯಲ್ಲಿ ಜಾತಿ ಇರಲಿ. ಆದರೆ, ಸಮಾಜದ ಕರೆ ಬಂದಾಗ ನಾವೆಲ್ಲರೂ ಹಿಂದು ಎಂಬ ಭಾವನೆಯಿಂದ ಒಗ್ಗಟ್ಟಾಗಬೇಕೆಂದರು.

ಹಿಂದು ಆಚರಣೆ, ಸಂಸ್ಕೃತಿಯನ್ನು ಜಗತ್ತು ಒಪ್ಪಿಕೊಳ್ಳುತ್ತಿದೆ. ನಮ್ಮ ಯೋಗಾಚರಣೆ ಜಗತ್ತೇ ಮಾಡುತ್ತಿದೆ. ಜಾತಿ, ಭಾಷೆ ಅಪಸ್ವರದ ಮಧ್ಯೆಯೂ ಎಲ್ಲೆಲ್ಲೂ ಹಿಂದು ಧ್ವನಿ ಕೇಳುತ್ತಿದೆ. ಹಿಂದುತ್ವದ ಕಿಚ್ಚು ಎದ್ದಿದೆ. ಆದರೆ, ಜಗತ್ತು ನಮ್ಮನ್ನು ದುರ್ಬಲಗೊಳಿಸಲು ಹುನ್ನಾರ ನಡೆಸುತ್ತಿದೆ ಎಂದರು.

ನಮ್ಮಲ್ಲಿ ಆತ್ಮವಿಶ್ವಾಸ ಬೆಳೆಸಿಕೊಳ್ಳಬೇಕು. ಕೀಳರಿಮೆ ಬಿಡಬೇಕು. ನಮ್ಮಲ್ಲಿ ಮೈಮರೆವು ಹೆಚ್ಚಿದೆ. ನಮ್ಮ ಧರ್ಮಶಾಸ್ತ್ರದಲ್ಲಿ ಎಲ್ಲಿಯೂ ಜಾತಿ ಬಗ್ಗೆ ಹೇಳಿಲ್ಲ. ಪ್ರಸ್ತುತ ದಿನಗಳಲ್ಲಿ ನಡೆಯುವ ಜಾತಿಯ ಸಮಾವೇಶ ಒಂದು ರೀತಿಯ ಫ್ಯಾಶನ್ ಆಗಿದೆ ಎಂದರು.

ದಿವ್ಯ ಉಪಸ್ಥಿತಿ ವಹಿಸಿದ್ದ ಬಂಟ್ವಾಳ ಮಾಣಿಲ ಶ್ರೀಧಾಮದ ಶ್ರೀಮೋಹನದಾಸ ಪರಮಹಂಸ ಸ್ವಾಮೀಜಿ ಮಾತನಾಡಿ, ಹಿಂದುಗಳಲ್ಲಿ ಜಾಗೃತಿ ಮೂಡಿಸಲು ಹಿಂದು ಸಂಗಮ ಕಾರ್ಯಕ್ರಮ ನಡೆಸಲಾಗುತ್ತದೆ. ಹಿಂದುಗಳು ಪರಸ್ಪರ ದ್ವೇಷ, ಅಸೂಯೆ ಬಿಡಬೇಕು. ಎಲ್ಲರ ಬಳಿ ಪ್ರೀತಿಯಿಂದ ನಡೆದುಕೊಳ್ಳಬೇಕು ಎಂದರು.

ಹಿಂದು ಸಮ್ಮೇಳನ ಸಮಿತಿಯ ಗೌರವಾಧ್ಯಕ್ಷ ರಾಮದಾಸ ಪ್ರಭು ಉಪಸ್ಥಿತರಿದ್ದರು. ಹಿಂದು ಸಮ್ಮೇಳನ ಸಮಿತಿಯ ಶ್ರೀಧರ ನಾಯ್ಕ ಆಸರಕೇರಿ ಪ್ರಸ್ತಾವಿಕ ಮಾತನಾಡಿದರು. ಕೃಷ್ಣಾ ನಾಯ್ಕ ಆಸರಕೇರಿ ಸ್ವಾಗತಿಸಿದರು. ಸುರೇಂದ್ರ ಪೂಜಾರಿ ವಂದಿಸಿದರು. ಗಣಪತಿ ಶಿರೂರು ನಿರೂಪಿಸಿದರು. ಪವಿತ್ರಾ ನಾಯ್ಕ ವೈಯಕ್ತಿಕ ಗೀತೆ ಹಾಡಿದರು.

ಬಿಜೆಪಿ ಉಡುಪಿ ನಗರ ಮಹಿಳಾ ಮೋರ್ಚಾ : ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ

ಸಾಧಕ ಮಹಿಳೆಯರಿಗೆ ಸನ್ಮಾನ



ಉಡುಪಿ: ಬಿಜೆಪಿ ಉಡುಪಿ ನಗರ ಮಹಿಳಾ ಮೋರ್ಚಾ ವತಿಯಿಂದ ಅಧ್ಯಕ್ಷೆ ನೀತಾ ಪ್ರಭು ಅವರ ನೇತೃತ್ವದಲ್ಲಿ ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆಯನ್ನು ಕುಂಜಿಬೆಟ್ಟು ಮಾಂಡವಿ ಟ್ರೇಡ್ ಸೆಂಟರ್ ಸಭಾಂಗಣದಲ್ಲಿ ವಿಶೇಷ ರೀತಿಯಲ್ಲಿ ಆಚರಿಸಲಾಯಿತು. ಡಾ. ರಾಜಲಕ್ಷ್ಮಿ ಅವರು ಗಣ್ಯರ ಉಪಸ್ಥಿತಿಯಲ್ಲಿ ಜ್ಯೋತಿ ಬೆಳಗಿಸಿ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು.

ವಿವಿಧ ಕ್ಷೇತ್ರಗಳಲ್ಲಿ ಸಾಧನೆಗೈದ ಮಹಿಳೆಯರಾದ ಶಕುಂತಲಾ ಶೆಟ್ಟಿ –ಹೈನುಗಾರಿಕೆ, ವಿಮಲ – ಸಂಜೀವಿನಿ ಗ್ರೂಪ್, ಅನುಷಾ – ವಕೀಲರು, ಸುಶೀಲ ಸಾಲಿಯಾನ್ – ಮಹಿಳಾ ಹೋಮ್ ಗಾರ್ಡ್, ಗೀತಾ ಕೃಷ್ಣರಾಜ್ – ಆಟೋ ಚಾಲಕಿ, ಲಲಿತ – ಪೌರ ಕಾರ್ಮಿಕರು ಹಾಗೂ ಸಮಾಜ ಸೇವಕರಾದ ನಿತ್ಯಾನಂದ ಒಳಕಾಡು, ವಿಶು ಶೆಟ್ಟಿ ಅಂಬಲಪಾಡಿ ಮತ್ತು ಸತೀಶ್ ಸಾಲಿಯಾನ್ ಅವರನ್ನು ಸನ್ಮಾನಿಸಲಾಯಿತು. ಪರ್ಕಳದ ಮನೆ ಊಟ ಹೋಟೆಲ್‌ನ ಹಿರಿಯ ದಂಪತಿ ಗೋಪಾಲಕೃಷ್ಣ ಮತ್ತು ವಸಂತಿ ಅವರನ್ನು ಗೌರವಿಸಲಾಯಿತು.

ಸಂತೆಕಟ್ಟೆ ವಾತ್ಸಲ್ಯ ಕ್ಲಿನಿಕ್‌ನ ಡಾ. ರಾಜಲಕ್ಷ್ಮಿ ಅವರಿಂದ ಮಹಿಳೆಯರಿಗಾಗಿ ಉಪಯುಕ್ತ ವಿಶೇಷ ಆರೋಗ್ಯ ಮಾಹಿತಿ ಕಾರ್ಯಕ್ರಮ ನಡೆಯಿತು.

ಮನೋರಂಜನಾ ಕಾರ್ಯಕ್ರಮದ ಅಂಗವಾಗಿ ಬಿಜೆಪಿ ಉಡುಪಿ ನಗರ ಮಹಿಳಾ ಮೋರ್ಚಾದ ಅಧ್ಯಕ್ಷೆ ನೀತಾ ಪ್ರಭು ಸಂಯೋಜನೆಯಲ್ಲಿ ಮೋರ್ಚಾದ ಪದಾಧಿಕಾರಿಗಳು ಮತ್ತು ಸದಸ್ಯರ ಸಕ್ರಿಯ ಭಾಗವಹಿಸುವಿಕೆಯಲ್ಲಿ ನಡೆದ ವಿವಿಧ ವಿನೋದಾವಳಿಗಳ ಸಹಿತ 'ನಾರೀ ಶಕ್ತಿ' ಎಂಬ ವಿಶೇಷ ಕಾರ್ಯಕ್ರಮವು ಆಕರ್ಷಕವಾಗಿ ಮೂಡಿ ಬಂದು ಎಲ್ಲರ ಮೆಚ್ಚುಗೆಗೆ ಪಾತ್ರವಾಯಿತು.

ಉಡುಪಿ ಶಾಸಕ ಯಶ್‌ಪಾಲ್ ಎ. ಸುವರ್ಣ, ಸಂಸದ ಕೋಟ ಶ್ರೀನಿವಾಸ ಪೂಜಾರಿ, ಬಿಜೆಪಿ ಉಡುಪಿ ಜಿಲ್ಲಾಧ್ಯಕ್ಷ ಕುತ್ಯಾರು ನವೀನ್ ಶೆಟ್ಟಿ, ಮಾಜಿ ಜಿಲ್ಲಾಧ್ಯಕ್ಷ ಕೆ.ಉದಯ ಕುಮಾರ್ ಶೆಟ್ಟಿ ಅವರು ಕಾರ್ಯಕ್ರಮದಲ್ಲಿ ಭಾಗವಹಿಸಿ ಶುಭ ಹಾರೈಸಿದರು.

ಈ ಸಂದರ್ಭದಲ್ಲಿ ಬಿಜೆಪಿ ಉಡುಪಿ ನಗರ ಮಂಡಲಾಧ್ಯಕ್ಷ ದಿನೇಶ್ ಅಮೀನ್, ಜಿಲ್ಲಾ ಪ್ರಧಾನ ಕಾರ್ಯದರ್ಶಿ ರೇಷ್ಮಾ ಉದಯ ಶೆಟ್ಟಿ, ಮಹಿಳಾ ಮೋರ್ಚಾ ರಾಜ್ಯ ಪ್ರಧಾನ ಕಾರ್ಯದರ್ಶಿ ಶಿಲ್ಪಾ ಜಿ. ಸುವರ್ಣ, ಜಿಲ್ಲಾ ಮಹಿಳಾ ಮೋರ್ಚಾ ಅಧ್ಯಕ್ಷೆ ಸಂಧ್ಯಾ ರಮೇಶ್, ಉಡುಪಿ ನಗರ ಮಹಿಳಾ ಮೋರ್ಚಾ ಪ್ರಧಾನ ಕಾರ್ಯದರ್ಶಿ ಶಾಂತಿ ಮನೋಜ್ ಸಹಿತ ಮಹಿಳಾ ಮೋರ್ಚಾ ಪದಾಧಿಕಾರಿಗಳು, , ಸಮಿತಿ ಸದಸ್ಯರು, ಕಾರ್ಯಕರ್ತರು ಉಪಸ್ಥಿತರಿದ್ದರು.

ಕೃಷ್ಣಾಪುರದ ಜನತೆಗೂ ತಟ್ಟಿದೆ ಕುಡಿಯುವ ನೀರಿನ ಕೊರತೆಯ ಬಿಸಿ

ಇಲ್ಲಿ ತಾಂತ್ರಿಕ ವೈಫಲ್ಯದಿಂದಲೇ ಹೊಡೆತ!

ದಿಗಂತ ವಾಟರ್ ಚೆಕ್

ಮಂಗಳೂರು: ಮಂಗಳೂರು ಮಹಾ ನಗರ ಪಾಲಿಕೆಯ ವಾರ್ಡ್ ನಂಬರ್ ನಾಲ್ಕರಲ್ಲಿ ತಾಂತ್ರಿಕ ವೈಫಲ್ಯದಿಂದ ನೀರಿನ ಸಮಸ್ಯೆ ನಿರಂತರವಾಗಿ ಕಾಡು ತ್ತಿದೆ. ಈ ಸಮಸ್ಯೆ ಯಾವಾಗ ಮುಗಿಯು ವುದೋ ಎಂದು ಕಾಯುತ್ತಿದ್ದಾರೆ ಊರಿನ ಜನತೆ.

ಈಗಾಗಲೇ ವಾರ್ಡ್‌ನ ಹಲವೆಡೆ ಜಲಸಿರಿ ಯೋಜನೆಯ ಕಾಮಗಾರಿ ನಡೆಯುತ್ತಿದ್ದು, ಹಳೆಯ ಪೈಪ್‌ಲೈನ್‌ಗೆ ಸಂಪರ್ಕ ಕೊಡುವ ಸಂದರ್ಭ ಸ್ಪಾಪರ್ ಹಾಕಿ ಹೋಗಿದ್ದಾರೆ. ಇತ್ತ ಹೊಸ ಪೈಪ್ ಲೈನ್ ಹಳೆಯ ಪೈಪ್‌ಲೈನ್ ಎರಡರಲ್ಲೂ ನೀರು ಬಾರದೆ ಯಾರ್‍ಯಾರದ್ದೋ ಬಾವಿಯನ್ನು ಅರಸಿ ಹೋಗುವಂತಾಗಿದೆ ಎನ್ನುತ್ತಾರೆ ವಾರ್ಡಿನ ಜನತೆ.



9ನೇ ಬ್ಲಾಕ್‌ನಲ್ಲಿ ಟ್ಯಾಂಕರ್ ನೀರು ಅನಿವಾರ್ಯ

9ನೆಯ ಬ್ಲಾಕ್ ಪ್ರದೇಶದಲ್ಲಿನ ನಿವಾಸಿಗಳಿಗೆ ಟ್ಯಾಂಕರ್ ನೀರು ಅನಿವಾರ್ಯವಾಗಿದೆ. ಮ್ಯಾಪಿಂಗ್ ಸಂದರ್ಭ ಹಲವಾರು ಮನೆಗಳನ್ನು ಕೈ ಬಿಟ್ಟಿರುವ ಪರಿಣಾಮ ಜಲಸಿರಿಯ ಪೈಪ್ ಲೈನ್ ಭಾಗ್ಯ ಹಲವು ಮನೆಗಳಿಗೆ ಸಿಕ್ಕಿಲ್ಲ. ಇಲ್ಲಿನ ವಿಶ್ವನಾಥ ದೇವಸ್ಥಾನದ ಸಮೀಪ, ನಾಲ್ಕನೆಯ ಬ್ಲಾಕ್ ಸೇರಿದಂತೆ ವಿವಿಧೆಡೆ ಸಮರ್ಪಕ ಪೂರೈಕೆಯ ವ್ಯವಸ್ಥೆ ಹದಗೆಟ್ಟಿರುವುದರಿಂದ ಮನೆ ಮನೆಗೆ ನೀರಿನ ಸಂಪರ್ಕ ಸಿಗದೆ ದಿನನಿತ್ಯ ಬರುವ ನೀರಿನಿಂದ ಈ ಭಾಗದ ಹಲವು ರಸ್ತೆಗಳು ಬಡಾವಣೆಗಳು ವಂಚಿತವಾಗಿವೆ ಎನ್ನುತ್ತಾರೆ ಮಹಾನಗರ ಪಾಲಿಕೆಯ ನಿಕಟ ಪೂರ್ವ ಸದಸ್ಯರಾದ ಲಕ್ಷ್ಮಿ ಶೇಖರ್ ದೇವಾಡಿಗ ಅವರು.

ಜಲಸಿರಿ ಕಾಮಗಾರಿ ಪೂರ್ಣಗೊಳ್ಳದ ಪರಿಣಾಮ ಅಗೆದು ಹಾಕಿದ ರಸ್ತೆಗಳು, ವಿವಿಧೆಡೆ ಸಂಪರ್ಕದ ಸಂದರ್ಭ ಹಳೆಯ ಪೈಪ್‌ಲೈನ್‌ಗಳ ಸ್ಥಗಿತ ಇತ್ಯಾದಿ ಸಮಸ್ಯೆಯಿಂದಾಗಿ ಜನ ತೊಂದರೆಗೆ ಈಡಾಗಿದ್ದಾರೆ.

ವಾರ್ಡ್‌ನ ಜನತೆ ಈ ವಿಚಾರವಾಗಿ ನಮಗೆ ಮಾಹಿತಿ ನೀಡಿದ್ದು, ಅಧಿಕಾರಿಗಳಿಗೆ ತಲುಪಿಸುವ ಕೆಲಸವನ್ನು ಮಾಡಿದ್ದೇವೆ. ಇದರೊಂದಿಗೆ ಎಲ್‌ಇಡಿ ಲೈಟ್ ಸಮಸ್ಯೆ ವಾರ್ಡಿನಾದ್ಯಂತ ಕಾಡುತ್ತಿದ್ದು ದುರಸ್ತಿ ಮಾಡುವ ಬಗ್ಗೆ ಪಾಲಿಕೆ ವಿಳಂಬ ನೀತಿ ಅನುಸರಿಸುತ್ತಿದೆ. ಮಳೆ ನೀರು ಹರಿಯುವ ತೋಡುಗಳು ಫೆಬ್ರವರಿ ಮಾರ್ಚ್ ಆರಂಭಕ್ಕೆ ಬಹುತೇಕ ಆರಂಭವಾಗಿ ಮಾರ್ಚ್ ಅಂತ್ಯಕ್ಕೆ ಪೂರ್ಣಗೊಳ್ಳುತ್ತಿತ್ತು. ಇದೀಗ ಯಾವುದೇ ಜನಪರ ಕೆಲಸ ಕಾರ್ಯಗಳು ಈ ಹಿಂದಿನ ವೇಗದಲ್ಲಿ ನಡೆಯುತ್ತಿಲ್ಲ ಎನ್ನುತ್ತಾರೆ ಲಕ್ಷ್ಮೀಶೇಖರ್.

ಪ್ರತಿಬಾರಿ ಎಪ್ರಿಲ್, ಮೇ ತಿಂಗಳಲ್ಲಿ ನೀರಿನ ಸಮಸ್ಯೆ ನಮ್ಮ ವಾರ್ಡ್‌ನಲ್ಲಿ ಕಾಣಿಸುತ್ತದೆ. ಬಹುತೇಕ ಮಂದಿ ಟ್ಯಾಂಕರ್‌ಗಳಲ್ಲಿ ತರಿಸಿಕೊಳ್ಳು ತ್ತಾರೆ. ಎಪ್ರಿಲ್ ಬಂದೊಡನೆ ಒಮ್ಮೆ ಮಳೆ ಬಂದರೆ ಸಾಕು ಎಂದು ಕಾಯುತ್ತೇವೆ. ಏಕೆಂದರೆ ಮಳೆ ಆರಂಭವಾದರೆ ನೀರಿನ ಸಮಸ್ಯೆ ನೀಗುತ್ತದೆ ಎನ್ನುತ್ತಾರೆ ಕಾಟಿಪಳ್ಳ ಕೃಷ್ಣಾಪುರದ ಜನತೆ.



> ಕುಡಿಯುವ ನೀರಿನ ಸಮಸ್ಯೆ ಮಾತ್ರವಲ್ಲ, ಬೀದಿ ದೀಪಗಳ ಸಮಸ್ಯೆಯೂ ಜನತೆಯನ್ನು ಕಾಡುತ್ತಿದೆ. ಅಧಿಕಾರಿಗಳ ಗಮನಕ್ಕೆ ತಂದರೂ ಸರಿಪಡಿಸುವ ಕಾರ್ಯಗಳು ಇನ್ನೂ ಆಗಿಲ್ಲ.
> ■ ಲಕ್ಷ್ಮೀಶೇಖರ್ ದೇವಾಡಿಗ, ಮಾಜಿ ಕಾರ್ಪೋರೇಟರ್

ಕೆಲವೆಡೆ ಸಂಕಷ್ಟ



> ನಮ್ಮ ವಾರ್ಡ್‌ನಲ್ಲಿ ಬಡಾವಣೆ ಹೆಚ್ಚಿದೆ. ಜತೆಗೆ ಮನೆ ಮನೆ ನೀರಿನ ಸಂಪರ್ಕವಿದೆ. ಹಿಂದಿನ ಪಾಲಿಕೆ ಪೈಪ್ ಲೈನ್ ಸಂಪರ್ಕದಲ್ಲಿ ಮನೆಗೆ ಸಾಕಾಗುವಷ್ಟು ನೀರು ಬರುತ್ತಿತ್ತು. ಆದರೆ 9ನೇ ಬ್ಲಾಕ್, 4ನೆ ಬ್ಲಾಕ್ ಮತ್ತಿತರ ಕಡೆ ನೀರಿನ ಸಮಸ್ಯೆ ಇದೆ.
> ■ ಸತೀಶ್ ಕೃಷ್ಣಾಪುರ

ಮುಗಿಯದ ಕತೆ



> ನೀರಿನ ಬವಣೆ ಮುಗಿಯದ ಕಥೆ. ತುಂಬೆಯಲ್ಲಿ ನೀರಿದೆ. ಮನೆ ಮನೆಗೆ ನೀರಿಲ್ಲ ಯಾಕೆ? ಪಂಪ್ ಹೌಸ್ ನಲ್ಲಿ ಸಮಸ್ಯೆ ಇದ್ದರೆ ಆ ಕಾರಿಗಳು ಸರಿ ಪಡಿಸಲು ಮುಂದಾಗಬೇಕು. ಪ್ರೆಶರ್ ಕೊರತೆ ಎದುರಾಗದಂತೆ ಮಾಡಬೇಕು.
> ■ ನಿತಿನ್, 5ನೇ ಬ್ಲಾಕ್

ನಾಳೆ ವಾರ್ಡ್ 5-ಕಾಟಿಪಳ್ಳ ಉತ್ತರದ ಸ್ಥಿತಿಗತಿ

ರಮಾನಾಥ ರೈ ಮುಂದಿನ ಅಭ್ಯರ್ಥಿ ಹೇಳಿಕೆ ಸಂಚಲನ ಸೃಷ್ಟಿ

ಕಂಬಳ ಕಣ್ತುಂಬಿಕೊಂಡ ಸಿಎಂ

ಬಂಟ್ವಾಳ: ತಾಲೂಕಿನ ನಾವೂರು ಗ್ರಾಮದ ಕೂಡಿಬೈಲಿನಲ್ಲಿ ಮಾಜಿ ಮಂತ್ರಿ ರಮಾನಾಥ ರೈ ಸಾರಥ್ಯದಲ್ಲಿ ನಡೆದ 15 ನೇ ವರ್ಷದ ಮೂಡೂರು–ಪಡೂರು ಜೋಡುಕರೆ ಕಂಬಳದಲ್ಲಿ ನಾಡಿನದೊರೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಭಾಗವಹಿಸಿ ಕಂಬಳದ ಕೋಣಗಳ ಓಟವನ್ನು ಸ್ವತಃ ಕಣ್ತುಂಬಿಕೊಂಡು ಮೆಚ್ಚುಗೆ ವ್ಯಕ್ತಪಡಿಸಿದರು.

ಬೆಂಗಳೂರಿಗೆ ತೆರಳುವ ತುರ್ತಿನ ಮಧ್ಯೆಯು ತಮ್ಮ ಭಾಷಣದ ಕೊನೆಯಲ್ಲಿ ಕೋಣದ ಓಟವನ್ನು ನನಗೂ ನೋಡಬೇಕು ಉತ್ಸುಕನಾಗಿದ್ದೆನೆ ಎಂದು ಹೇಳಿಕೊಂಡರಲ್ಲದೆ ಎರಡು ಜೊತೆ ಕೋಣಗಳ ಓಟವನ್ನು ಕಣ್ತುಂಬಿ ಖುಷಿಪಟ್ಟರು.

ರೈ ಅವರೇ ಅಭ್ಯರ್ಥಿ

ತಮ್ಮ ಭಾಷಣದಲ್ಲಿ 2028 ರಲ್ಲೂ ಮತ್ತೆ ರಮಾನಾಥ್ ರೈ ಚುನಾವಣೆಗೆ ನಿಲ್ತಾರೆ, ಗೆಲ್ಲಿಸಿ ಕೊಡಿ ಎಂದು ಜನರಲ್ಲಿ ಮನವಿ ಮಾಡಿದರು. ಮುಖ್ಯಮಂತ್ರಿಯವರ ಈ ಅನಿರೀಕ್ಷಿತ ಹೇಳಿಕೆ ಬಂಟ್ವಾಳದಲ್ಲಿ ಕಾಂಗ್ರೆಸ್ ಪಕ್ಷದಿಂದ ಅಭ್ಯರ್ಥಿಯಾಗಲು ಟವಲ್ ಹಾಕಿದ್ದ ಹಲವು ನಾಯಕರಿಗೆ ಈಗ ನಿರಾಸೆ ತಂದಿದೆ ಎಂಬ ಸುದ್ದಿ ಇದೀಗ ಪಕ್ಷದ ಪಡಸಾಲೆಯಿಂದ ಕೇಳಿ ಬರುತ್ತಿದೆ. ರಮಾನಾಥ ರೈ ಅವರು 2023 ರ ವಿಧಾನಸಭಾ ಚುನಾವಣೆಯ ಪ್ರಚಾರ ಕಾರ್ಯದ ಸಂದರ್ಭ ಇದು ನನ್ನ ಕೊನೆಯ ಸ್ಪರ್ಧೆ ಎಂದೇ ಘೋಷಿಸುತ್ತಾ ಬಂದಿದ್ದರು. ಇವರು ಚುನಾವಣೆಯಲ್ಲಿ ಸೋಲನ್ನನುಭವಿಸಿದ್ದರು.

ರಾಜ್ಯದಲ್ಲಿ ಕಾಂಗ್ರೆಸ್ ಸರಕಾರ ಬರುತ್ತಿದ್ದಂತೆ ರೈ ಅವರು ರಾಜಕಾರಣದಲ್ಲಿ ಮತ್ತೆ ಸಕ್ರಿಯರಾಗಿದ್ದಾರೆ. ದ.ಕ.ಜಿಲ್ಲೆಯಲ್ಲಿ ಕಾಂಗ್ರೆಸ್ ಪಕ್ಷದಿಂದ ಆರು ಬಾರಿ ಶಾಸಕ, ಮೂರು ಬಾರಿ ಸಚಿವರಾಗಿರುವ ಅನುಭವ ಹೊಂದಿರುವ ಹಿರಿಯ ಕಾಂಗ್ರೆಸಿಗರು ಮತ್ತು ಪಕ್ಷದ ಬಗ್ಗೆ ಸದಾ ನಿಷ್ಠೆ ಹೊಂದಿರುವ ಅವರು ಇಲ್ಲಿನ ಮಟ್ಟಿಗೆ ಅವರೇ ಪಕ್ಷದ ಹೈಕಮಾಂಡ್ , ಇವರ ಮಾತಿಗೆ ಸರಕಾರದ ಮಟ್ಟದಲ್ಲಿ ಈಗಲು ಒಂದು ತೂಕವಿದೆ.ಅವರ ನಿವಾಸದಲ್ಲೂ ಪ್ರತಿನಿತ್ಯ ಬೆಳಗ್ಗಿನ ಹೊತ್ತು ವರ್ಗಾವಣೆ ಬಯಸಿ ಬರುವ ಅಧಿಕಾರಿಗಳು, ಸಮಸ್ಯೆ ಹೇಳಿಕೊಂಡು ಪರಿಹಾರಕ್ಕೆ ಬರುವ ಜನಸಾಮಾನ್ಯರು, ಸರಕಾರಿ ಮಟ್ಟದಲ್ಲಿ ಆಗಬೇಕಾದ ಕೆಲಸಗಳಿಗೆ ಬರುವ ಪಕ್ಷದ ಮುಖಂಡರು, ಕಾರ್ಯಕರ್ತರ ದಂಡೇ ಇರುತ್ತದೆ.

ವಿಶೇಷವೆಂದರೆ ರಮಾನಾಥ ರೈ ಅವರು ಸಿ.ಎಂ. ಸಿದ್ದರಾಮಯ್ಯ ಅವರ ಆಪ್ತರಲ್ಲಿ ಒಬ್ಬರಾಗಿದ್ದಾರೆ. ಕಂಬಳದ ಆಮಂತ್ರಣ ಕೊಟ್ಟಾಗಲೇ ಈ ಬಾರಿ ಕಂಬಳಕ್ಕೆ ಬಂದೇ ಬರುವುದಾಗಿ ಸಿಎಂ ಸಿದ್ದರಾಮಯ್ಯ ಅವರೇ ಖುದ್ದು ರೈ ಅವರಿಗೆ ಮಾತು ಕೊಟ್ಟಿದ್ದರಂತೆ. ಆದರಂತೆ ನುಡಿದಂತೆ ಸಿಎಂ ಅವರು ಕಂಬಳ ಕೂಟದಲ್ಲಿ ಭಾಗವಹಿಸಿ, ಕೋಣಗಳ ಓಟವನ್ನು ಕಣ್ತುಂಬಿಕೊಂಡು ಮರಳಿದ್ದಾರೆ.

ರಮಾನಾಥ ರೈ ಅವರೇ ಅಭ್ಯರ್ಥಿ ಎಂದು ಮುಖ್ಯಮಂತ್ರಿಯವರ ಈ ಬಹಿರಂಗ ಹೇಳಿಕೆಗೆ ರೈ ಅವರ ಆಪ್ತ ವಲಯ ಖುಷಿಯಾಗಿದೆ.



ನಾಟಿ ಕೋಳಿ ಸವಿದ ಸಿಎಂ

ಕಂಬಳಕ್ಕೆ ಬರುವುದಕ್ಕೆ ಮುನ್ನ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಕಂಬಳ ಸಮಿತಿಯ ಅಧ್ಯಕ್ಷ, ಕೆಪಿಸಿಸಿ ಸದಸ್ಯ ಪಿಯೂಸ್ ಎಲ್. ರೋಡ್ರಿಗಸ್ ಅವರ ಲೊರೆಟ್ಟೋ ಅಲ್ಲಿರುವ ನಿವಾಸಕ್ಕೆ ತೆರಳಿ ತುಳುನಾಡಿನ ನಾಟಿಕೋಳಿ ಸಾರ್, ನೀರ್ ದೋಸೆ ಹಾಗೂ ರಾಗಿಮುದ್ದೆಯನ್ನು ಸವಿದರು.
ಈ ಸಂದರ್ಭ ಮಾಜಿ ಸಚಿವ ರಮಾನಾಥ ರೈ, ವಿನಯಕುಮಾರ್ ಸೊರಕೆ, ಎಂಎಲ್‌ಸಿ ಸಲೀಂ ಅಹ್ಮದ್, ಪಿಯೂಸ್ ಎಲ್. ರೊಡ್ರಿಗಸ್ ಸಹಿತ ಪಕ್ಷದ ಮುಖಂಡರು ಹಾಜರಿದ್ದರು.

ಮಂಗಳೂರು

ಸೋಮವಾರ, 9 ಮಾರ್ಚ್ 2026

ಸಂಪುಟ 47, ಸಂಚಿಕೆ 340 ಪುಟಗಳು 12+6

■ ಬೆಂಗಳೂರು ■ ಮಂಗಳೂರು ■ ಶಿವಮೊಗ್ಗ ■ ಹುಬ್ಬಳ್ಳಿ

₹5

REG.No.MNG /121/2024-26 Posted at kodialbail P.O / RNI:29813/78/ Daily

hosadigantha.com

epaper.hosadigantha.com

Hosadigantha Digital

ರಾಷ್ಟ್ರ ಜಾಗೃತಿಯ ದೈನಿಕ

ಹೊಸ ದಿಗಂತ

ಲೋಕಹಿತಂ ಮಮ ಕರಣೀಯಂ



ಮಾ.19: ರಾಮ ಮಂದಿರಕ್ಕೆ ರಾಷ್ಟ್ರಪತಿ | ೦೨

ತೈಲದಷ್ಟೇ ನೀರಿನ ಮೂಲಗಳೂ ಗುರಿ | ೦೨

ಜೆಡಿಯು ಸೇರಿದ ಸಿಎಂ ನಿತೀಶ್ ಪುತ್ರ | ೦೨

ಶುಭ ದಿನ

ಕಲಿಯುಗಾಬ್ದ 5127, ವಿಶ್ವಾವಸು ಸಂವತ್ಸರ, ಉತ್ತರಾಯಣ, ಶಿಶಿರ ಋತು, ಫಾಲ್ಗುನ ಮಾಸ, ಕೃಷ್ಣ ಪಕ್ಷ, ತಿಥಿ: ಷಷ್ಠಿ, ನಕ್ಷತ್ರ: ವಿಶಾಖೆ

ದಿನದ ಮಾತು

ದೊರೆ ಕೊಟ್ಟ ನಿಲುವಂಗಿ ಬೆಲೆಬಾಳುವುದೇ ಇರಬಹುದು, ವಿಚಾರಿಸಿ ನೋಡಿದಲ್ಲಿ ನಮ್ಮ ಹರಕು ವಸ್ತ್ರವೇ ಅದಕ್ಕಿಂತ ಮೇಲು.

▲ ಲೋಕೋಕ್ತಿ

ತರಕಾರಿ, ಆಹಾರ ವಿಷಮಯ; ಮನಸ್ಸು ಕಲುಷಿತ

ನೇರ ನೋಟ

• ದು.ಗು.ಲಕ್ಷ್ಮಣ

• ಪುಟ ೬

ಕಿರುಸುದ್ದಿ

ಶಾಲೆಯಲ್ಲೇ ವಿದ್ಯಾರ್ಥಿಗಳ ಮಾರಾಮಾರಿ: ಬಾಲಕ ಸಾವು

• **ಬಳ್ಳಾರಿ:** ನಗರದ ಖಾಸಗಿ ಶಾಲೆಯೊಂದರಲ್ಲಿ ವಿದ್ಯಾರ್ಥಿಗಳ ಮಧ್ಯೆ ನಡೆದ ಹಲ್ಲೆ ಪ್ರಕರಣದಲ್ಲಿ ಶಾಲೆಯ ವಿದ್ಯಾರ್ಥಿಯೊಬ್ಬ ಮೃತಪಟ್ಟ ಘಟನೆ ನಡೆದಿದೆ. ನಗರದ ಖಾಸಗಿ ಶಾಲೆಯಲ್ಲಿ ವಿದ್ಯಾರ್ಥಿಯೊಬ್ಬ ಇತರೆ ವಿದ್ಯಾರ್ಥಿಗಳ ಮೇಲೆ ರಾಡ್ ಮೂಲಕ ಹಲ್ಲೆ ನಡೆಸಿದ್ದಾನೆ. ವಿದ್ಯಾರ್ಥಿಯೊಬ್ಬನಿಗೆ ಬಲವಾದ ಪೆಟ್ಟು ತಗುಲಿದ ಹಿನ್ನೆಲೆಯಲ್ಲಿ ಸ್ಥಳದಿಂದ ಪರಾರಿಯಾಗಿದ್ದಾನೆ. ನಂತರ ನಗರದ ಜಿಲ್ಲಾ ಸರ್ಕಾರಿ ಆಸ್ಪತ್ರೆಗೆ ಚಿಕಿತ್ಸೆಗೆ ದಾಖಲಿಸಿದರೂ ಚಿಕಿತ್ಸೆ ಫಲಕಾರಿಯಾಗದೆ ವಿದ್ಯಾರ್ಥಿ ಮೃತಪಟ್ಟಿದ್ದಾನೆ. ಸ್ಥಳಕ್ಕೆ ಎಸ್ಪಿ ಡಾ.ಸುಮನ್ ಡಿ.ಪೆನ್ನೇಕರ್ ಭೇಟಿ ನೀಡಿ ಘಟನೆ ಕುರಿತು ಮಾಹಿತಿ ಪಡೆದರು. ➡ಪುಟ ೪

ಗ್ರಾಪಂ ಸದಸ್ಯೆ ಕುಟುಂಬಸ್ಥರ ಹಲ್ಲೆ: ನೊಂದ ರೈತ ಆತ್ಮಹತ್ಯೆ

• **ಹುಬ್ಬಳ್ಳಿ:** ಗ್ರಾಮ ಪಂಚಾಯಿತಿ ಸದಸ್ಯೆ ಹಾಗೂ ಅವರ ಕುಟುಂಬಸ್ಥರು ರೈತನ ಹಲ್ಲೆ ನಡೆಸಿ, ವೈಯಕ್ತಿಕ ನಿಂದನೆ ಮಾಡಿದ ಹಿನ್ನೆಲೆ ಆತ ಮನನೊಂದು ಆತ್ಮಹತ್ಯೆ ಮಾಡಿಕೊಂಡ ಘಟನೆ ಶನಿವಾರ ತಾಲೂಕಿನ ಉಮಚಗಿ ಗ್ರಾಮದಲ್ಲಿ ನಡೆದಿದೆ. ಗ್ರಾಮದ ನಿಂಗಪ್ಪ ಅಂಗಡಿ(48) ಮೃತಪಟ್ಟ ರೈತ. ಗ್ರಾಪಂ ಸದಸ್ಯೆ ಮಂಜುಳಾ ಹರಿಜನ, ಮುತ್ತಪ್ಪ ಹರಿಜನ, ವೆಂಕಪ್ಪ ದಾಸರ, ಯಲ್ಲಪ್ಪ ಹರಿಜನ, ಶಿವರಾಯಪ್ಪ ಹರಿಜನ, ಮಂಜುನಾಥ ಮೇಗಳಮನಿ, ಲಕ್ಷ್ಮವ್ವ ಮುತ್ತಣ್ಣವರ, ಪಾರ್ವತೆವ್ವ ಗೂಳಣ್ಣವರ, ಬಸವ್ವ ವಾಲಿ, ಪ್ರವೀಣ ನಾಗರಹಳ್ಳಿ ಎಂಬುವರ ವಿರುದ್ಧ ಮೃತನ ಪತ್ನಿ ರೇಣುಕಾ ಅಂಗಡಿ ದೂರು ನೀಡಿದ್ದಾರೆ. ➡ಪುಟ ೪

ಕುತೂಹಲ ಕೆರಳಿಸಿದ ಸ್ಪೀಕರ್ ಅವಿಶ್ವಾಸ! • ಪುಟ ೨

ಸಂವಿಧಾನದ ಆಶಯ ಜಾರಿಗೆ ತರಲು ಕೈ ಹಿಂದೇಟು • ಪುಟ ೫

ಉಪಚುನಾವಣೆ: ಕಾಂಗ್ರೆಸ್ ಉಸ್ತುವಾರಿ ಸಮಿತಿ ರಚನೆ • ಪುಟ ೫

ಶೇ.33 ಮೀಸಲಾತಿ ಬಗ್ಗೆ ಆತ್ಮತೃಪ್ತಿ ಇದೆ: ದೇವೇಗೌಡ • ಪುಟ ೫

ಟ್ರಂಪ್‌ಗಾಗಿ ದೇಶ ಗಿರವಿ: ಮಲ್ಲಿಕಾರ್ಜುನ ಖರ್ಗೆ • ಪುಟ ೫

ಅಡುಗೆ ಅನಿಲ ದರ ಹೆಚ್ಚಳಕ್ಕೆ ಕಿಡಿ • ಪುಟ ೫


ಸ್ಪೀಕರ್ ಅವಿಶ್ವಾಸ ನಿರ್ಣಯ: ಮರುಕಳಿಸಲಿದೆಯೇ ಇತಿಹಾಸ?

▸ **ಸುಪ್ರೀತಾ ಹೆಬ್ಬಾರ್/ಗೋವಿಂದ ಎನ್.ಎಸ್.**

ದಿಗಂತ ವಿಶ್ಲೇಷಣೆ

ಲೋಕಸಭೆಯ ಬಜೆಟ್ 2026-27ರ ಅಧಿವೇಶನದ ಮೊದಲ ಭಾಗದಲ್ಲಿ ವಿಪಕ್ಷಗಳು ಹಚ್ಚಿದ್ದ ಅವಿಶ್ವಾಸ ನಿರ್ಣಯ ಮಂಡನೆಯ ಚಿಂಗಾರಿ ಮಾ.9ರಿಂದ ಆರಂಭವಾಗಲಿರುವ ಎರಡನೇ ಭಾಗದಲ್ಲಿ ದೊಡ್ಡ ಕಿಚ್ಚಿನ ರೂಪ ಪಡೆದುಕೊಳ್ಳುವ ಲಕ್ಷಣ ಕಾಣಿಸುತ್ತಿದೆ. ಸೋಮವಾರದಿಂದ ಆರಂಭವಾಗಲಿರುವ ಅಧಿವೇಶನದಲ್ಲಿ ಸದನ ನಡೆಸಬೇಕಾದ ಸ್ಪೀಕರ್ ಅವರನ್ನೇ ಹೊರಗಿಡುವ ಪ್ರಯತ್ನ ನಡೆದಿದೆ. ಸ್ಪೀಕರ್ ಓಂ ಬಿರ್ಲಾ ಅವರು ಸಾಮಾನ್ಯ ಸದಸ್ಯರಂತೆ ಕುಳಿತು ಅವಿಶ್ವಾಸ ಪ್ರಕ್ರಿಯೆಯಲ್ಲಿ ಪಾಲ್ಗೊಳ್ಳಲಿದ್ದಾರೆ. ಈ ಸಂಬಂಧ ಆಡಳಿತ ಪಕ್ಷ ಹಾಗೂ ವಿಪಕ್ಷಗಳು ತಮ್ಮ ಸದಸ್ಯರಿಗೆ ವಿಪ್ ಜಾರಿ ಮಾಡಿರುವುದು ಪರಿಸ್ಥಿತಿಯ ಗಂಭೀರತೆ ಸೂಚಿಸುತ್ತಿದೆ.

ಕಲಾಪದಲ್ಲಿ ಬಿರ್ಲಾ ಅವರ ಕಾರ್ಯವೈಖರಿ ಕುರಿತು 2-3 ದಿನ ಗಂಭೀರ ಚರ್ಚೆಯಾಗುವ ನಿರೀಕ್ಷೆಯಿದೆ. ಈ ನಡುವೆ, ಈವರೆಗೆ ಈ ವಿಷಯದಲ್ಲಿ ಅಂತರ ಕಾಯ್ದುಕೊಂಡಿದ್ದ ಇಂಡಿಯಾ ಮೈತ್ರಿಕೂಟದ ತೃಣಮೂಲ ಕಾಂಗ್ರೆಸ್(ಟಿಎಂಸಿ) ಕೂಡ ಅವಿಶ್ವಾಸ ನಿರ್ಣಯಕ್ಕೆ ಬೆಂಬಲ ವ್ಯಕ್ತಪಡಿಸಿದೆ. ಚರ್ಚೆಯ ನಂತರ ಮತ ವಿಭಜನೆಯ ಮೂಲಕ ಮತದಾನ ನಡೆದಲ್ಲಿ, ಪಕ್ಷದ ಸದಸ್ಯರ ಬಲಾಬಲ ನಿರ್ಣಾಯಕ ಪಾತ್ರ ವಹಿಸಲಿದೆ.



ಫೆಬ್ರವರಿಯ ಅಧಿವೇಶನದಲ್ಲಿ ಸ್ಪೀಕರ್ ಓಂ ಬಿರ್ಲಾ ಮೇಲೆ ಅವಿಶ್ವಾಸ ವ್ಯಕ್ತಪಡಿಸಿದ್ದ ವಿಪಕ್ಷಗಳು ಮುಖ್ಯವಾಗಿ ಕಾಂಗ್ರೆಸ್ ನಾಯಕರು, ಅವರ ಪದಚ್ಯುತಿಗೆ ಆಗ್ರಹಿಸಿ ನಿಲುವಳಿ ಮಂಡಿಸಿದ್ದರು. ಇದಕ್ಕೆ ವಿಪಕ್ಷಗಳ 118 ಮಂದಿ ಸಹಿ ಹಾಕಿದ್ದಾರೆ. ಈಗ ಅದು ಚರ್ಚೆಗೆ ಬಂದಿರುವ ಹಿನ್ನೆಲೆಯಲ್ಲಿ ಎನ್‌ಡಿಎ ತಮ್ಮ ಸ್ಪೀಕರ್ ಅನ್ನು ಸಮರ್ಥಿಸಿಕೊಳ್ಳಬೇಕಿದೆ.

ಇನ್ನೊಂದೆಡೆ, ಓಂ ಬಿರ್ಲಾ ಕೂಡ ತಮ್ಮ ನಡೆ ನುಡಿಗಳಿಗೆ ಸಮರ್ಥನೆ ನೀಡಬೇಕಿದೆ. ಬಜೆಟ್ ಅಧಿವೇಶನದಲ್ಲಿ ವಿಪಕ್ಷ ನಾಯಕ ರಾಹುಲ್ ಗಾಂಧಿ ಅವರಿಗೆ ರಾಷ್ಟ್ರಪತಿಗಳ ಭಾಷಣದ ವಂದನಾ ನಿರ್ಣಯದ ಕುರಿತು ಮಾತನಾಡಲು ಅವಕಾಶ ನಿರಾಕರಿಸಿದ್ದು, ಮತ್ತು ಎಂಟು ಸದಸ್ಯರನ್ನು ಅಶಿಸ್ತಿನ ಆರೋಪದ ಮೇಲೆ ಅಮಾನತು ಮಾಡಿರುವುದನ್ನೇ ಆಧಾರವಾಗಿರಿಸಿಕೊಂಡು ವಿಪಕ್ಷಗಳು ಓಂ ಬಿರ್ಲಾ ವಿರುದ್ಧ ಅವಿಶ್ವಾಸ ನಿಲುವಳಿ ಮಂಡಿಸಿವೆ. ಸದನದಲ್ಲಿ ನಿಷ್ಪಕ್ಷಪಾತವಾಗಿ ಕಾರ್ಯನಿರ್ವಹಿಸಬೇಕಾದ ಸ್ಪೀಕರ್, ಬಹಿರಂಗವಾಗಿಯೇ ಆಡಳಿತ ಪಕ್ಷದ ಪರವಾಗಿ ನಡೆದುಕೊಳ್ಳುತ್ತಿದ್ದಾರೆ, ವಿಪಕ್ಷಗಳನ್ನು ನಿರ್ಲಕ್ಷಿಸುತ್ತಿದ್ದಾರೆ ಎಂಬುದು ಅವರ ಪ್ರಮುಖ ಆರೋಪಗಳಾಗಿವೆ.

ಲೋಕಸಭಾ ಸ್ಪೀಕರ್ ವಿರುದ್ಧ ಅವಿಶ್ವಾಸ ನಿರ್ಣಯ ಮಂಡನೆಯಾಗುತ್ತಿರುವುದು ಇದೇ ಮೊದಲೇನಲ್ಲ. ಈ ಮೊದಲು ಮೂರು ಬಾರಿ ಸ್ಪೀಕರ್ ವಿರುದ್ಧ ಅವಿಶ್ವಾಸ ಗೊತ್ತುವಳಿ ಮಂಡನೆಯಾಗಿತ್ತು. 1954ರ ಡಿಸೆಂಬರ್ 18ರಂದು ಮೊದಲ ಬಾರಿಗೆ ಸ್ಪೀಕರ್ ಜಿ.ವಿ. ಮಾಲ್ವಂಕರ್ ವಿರುದ್ಧ ಅವಿಶ್ವಾಸ ನಿರ್ಣಯ ಮಂಡಿಸಿದ್ದ ಪ್ರತಿಪಕ್ಷಗಳು ಪಕ್ಷಪಾತ ಧೋರಣೆ, ಪ್ರಶ್ನೆಗಳನ್ನು ಕೇಳಲು ಅವಕಾಶ ನೀಡದ ಆರೋಪ ಹೊರಿಸಿದ್ದರು. ➡ಪುಟ ೪

ಇರಾನ್ ರಾಜಧಾನಿಯಲ್ಲಿ ತೈಲಮಿಶ್ರಿತ ಕಪ್ಪುನೀರಿನ ಮಳೆ

ಟೆಹ್ರಾನ್ ವಿಷದ ಮಳೆ!

• **ಟೆಹ್ರಾನ್:** ಇಸ್ರೇಲ್ ನಡೆಸಿದ ವಾಯುದಾಳಿಗಳ ಪರಿಣಾಮವಾಗಿ ಇರಾನ್ ರಾಜಧಾನಿ ಟೆಹ್ರಾನ್‌ನಲ್ಲಿ ಭಾನುವಾರ ತೈಲಮಿಶ್ರಿತ ಕಪ್ಪುನೀರಿನ ಮಳೆಯಂತಹ ಅಪರೂಪದ ಪರಿಸ್ಥಿತಿ ನಿರ್ಮಾಣವಾಗಿದೆ. ಇರಾನ್ ರಾಜಧಾನಿ ಟೆಹ್ರಾನ್‌ನಲ್ಲಿನ ತೈಲ ಉತ್ಪಾದನಾ ಘಟಕಗಳ ಮೇಲೆ ಇಸ್ರೇಲ್ ನಡೆಸಿದ ದಾಳಿ ನಂತರ ನಗರದ ಮೇಲೆ ಕಪ್ಪು ಮೋಡಗಳು ಕವಿದು ತೈಲದಂತಹ ಪದಾರ್ಥಗಳೊಂದಿಗೆ ಮಳೆ ಸುರಿದಿರುವುದಾಗಿ ಅಂತಾರಾಷ್ಟ್ರೀಯ ಮಾಧ್ಯಮಗಳು ವರದಿ ಮಾಡಿವೆ.

ಶನಿವಾರ ಮಧ್ಯರಾತ್ರಿ ಇಸ್ರೇಲ್ ಪಡೆಗಳು ಟೆಹ್ರಾನ್‌ನ ತೈಲ ಶುದ್ಧೀಕರಣ ಘಟಕಗಳು ಹಾಗೂ ಮೂಲ ಸೌಕರ್ಯಗಳನ್ನು ಗುರಿಯಾಗಿಸಿಕೊಂಡು ದಾಳಿ ನಡೆಸಿದವು. ಈ ದಾಳಿಯಿಂದ ತೈಲ ಸಂಗ್ರಹಣಾ ಕೇಂದ್ರಗಳಲ್ಲಿ ಉಂಟಾದ ಬೆಂಕಿ ಮತ್ತು ಹೊಗೆ ವಾತಾವರಣಕ್ಕೆ ಕಪ್ಪುಮೋಡಗಳು ರೂಪುಗೊಂಡು ಬಳಿಕ ಮಳೆ ಸುರಿದಿರುವ ಸಾಧ್ಯತೆಯಿದೆ ಎಂದು ವರದಿಗಳು ತಿಳಿಸಿವೆ. ಮಳೆ ನೀರು ಕಪ್ಪು ಬಣ್ಣದಿಂದ ಕೂಡಿದ್ದು, ತೈಲಮಿಶ್ರಿತವಾಗಿತ್ತೆಂದು ಸಿಎನ್‌ಎನ್ ವರದಿ ಮಾಡಿದೆ. ಈ ಕುರಿತು ಇರಾನ್‌ನ ರೆಡ್ ಕ್ರೆಸೆಂಟ್ ಸೊಸೈಟಿ ಎಚ್ಚರಿಕೆ ನೀಡಿದ್ದು, ಮಳೆಯ ನೀರಲ್ಲಿ ವಿಷಕಾರಿ ಹೈಡ್ರೋಕಾರ್ಬನ್ ಸಂಯುಕ್ತಗಳು, ಗಂಧಕ ಮತ್ತು ನೈಟ್ರೋಜನ್ ಆಕ್ಸೈಡ್‌ಗಳು ಮಿಶ್ರಣವಾಗಿರುವ ಸಾಧ್ಯತೆ ಇದೆ ಎಂದು ಹೇಳಿದೆ. ಇಂತಹ ರಾಸಾಯನಿಕಗಳು ಆಮ್ಲ ಮಳೆ ಉಂಟುಮಾಡುವ ಸಂಭವವಿದ್ದು, ಇದರಿಂದ ಚರ್ಮ ಹಾಗೂ ಶ್ವಾಸಕೋಶ ಸಮಸ್ಯೆಗಳು ಉಂಟಾಗಬಹುದು ಎಂದು ವೈದ್ಯರು ಎಚ್ಚರಿಸಿದ್ದಾರೆ. ಮಳೆ ವೇಳೆ ಮನೆಯಿಂದ ಹೊರಬರದಂತೆ ಜನರಿಗೆ ಸೂಚಿಸಲಾಗಿದೆ.





ಇರಾನ್ ಮೇಲೆ ಪತಿದಾಳಿ ಸುಳ್ಳು ಸುದ್ದಿ: ಯುಎಇ ಸ್ಪಷ್ಟನೆ • ಪುಟ ೪

ಇಸ್ರೇಲ್ ದಾಳಿಗೆ ಇರಾನ್ ತತ್ತರ

ಭಾನುವಾರವೂ ಇರಾನ್‌ನ ತೈಲ ಸಂಸ್ಕರಣಾ ಘಟಕಗಳನ್ನು ಗುರಿಯಾಗಿಸಿ ಇಸ್ರೇಲ್ ದಾಳಿ ನಡೆಸಿದ್ದು, ಇರಾನ್ ರಾಜಧಾನಿ ಟೆಹ್ರಾನ್‌ನಲ್ಲಿ ಆಗಸವು ಸಂಪೂರ್ಣ ದಟ್ಟವಾದ ಕಪ್ಪು ಹೊಗೆಯಿಂದ ಆವೃತವಾಗಿದೆ. ಇದಲ್ಲದೆ, ಟೆಹ್ರಾನ್ ಸೇರಿ ಇರಾನ್ ನಗರಗಳ ಮೂಲಸೌಕರ್ಯ ವ್ಯವಸ್ಥೆಗಳನ್ನು ಗುರಿಯಾಗಿಸಿ ಇಸ್ರೇಲ್ ದಾಳಿ ನಡೆಸಿದೆ. ➡ಪುಟ ೪

ನೆರೆ ರಾಷ್ಟ್ರಗಳ ಮೇಲೆ ಹೊಸ ದಾಳಿ!

ಬಹ್ರೈನ್, ಕುವೈತ್, ಯುಎಇ ಮತ್ತು ನೆರೆಯ ಗಲ್ಫ್ ರಾಷ್ಟ್ರಗಳಲ್ಲಿನ ಅಮೆರಿಕ ಸೇನಾ ನೆಲೆಗಳ ಮೇಲೆ ಪ್ರತಿದಾಳಿ ನಡೆಸಿದ ಇರಾನ್ ಅಲ್ಲಿನ ಹೋಟೆಲ್, ವಸತಿ ಕಟ್ಟಡಗಳ ಮೇಲೆ ಕ್ಷಿಪಣಿ ಮತ್ತು ಡ್ರೋನ್‌ಗಳಿಂದ ದಾಳಿ ನಡೆಸಿದೆ. ಇರಾನ್ ದಾಳಿ ವೇಳೆ ಕ್ಷಿಪಣಿ ಅವಶೇಷ ಬಿದ್ದಿದ್ದರಿಂದ ದುಬೈನ ವಸತಿ ಕಟ್ಟಡವೊಂದು ನಾಶವಾಗಿದೆ. ಭಾನುವಾರ 16 ಖಂಡಾಂತರ ಕ್ಷಿಪಣಿಗಳು ಮತ್ತು 117 ಡ್ರೋನ್‌ಗಳಿಂದ ಇರಾನ್ ಹೊಸ ದಾಳಿ ನಡೆಸಿದೆಯೆಂದು ಯುನೈಟೆಡ್ ಅರಬ್ ಎಮಿರೇಟ್ಸ್ (ಯುಎಇ) ರಕ್ಷಣಾ ಸಚಿವಾಲಯ ಹೇಳಿದೆ. ➡ಪುಟ ೪

ರಾಷ್ಟ್ರಪತಿ ಭೇಟಿ ವೇಳೆ ಶಿಷ್ಟಾಚಾರ ಉಲ್ಲಂಘನೆ

ಪ.ಬಂಗಾಳದ ವಿವರಣೆ ಕೇಳಿದ ಕೇಂದ್ರ ಸರ್ಕಾರ

• **ಹೊಸದಿಲ್ಲಿ:** ಪಶ್ಚಿಮ ಬಂಗಾಳಕ್ಕೆ ರಾಷ್ಟ್ರಪತಿ ದ್ರೌಪದಿ ಮುರ್ಮು ಭೇಟಿ ನೀಡಿದ್ದ ಸಂದರ್ಭದಲ್ಲಿ ಬ್ಲೂ ಬುಕ್ ನಿಯಮಗಳನ್ನು ಉಲ್ಲಂಘಿಸಲಾಗಿದೆ ಎಂಬ ಆರೋಪದ ಹಿನ್ನೆಲೆಯಲ್ಲಿ ಕೇಂದ್ರ ಗೃಹ ಸಚಿವಾಲಯ ರಾಜ್ಯ ಸರ್ಕಾರಕ್ಕೆ ವಿವರವಾದ ವರದಿ ನೀಡುವಂತೆ ಕೇಳಿದೆ.

ಶನಿವಾರ ನಡೆದ ಕಾರ್ಯಕ್ರಮದಲ್ಲಿ ಭದ್ರತೆ ಮತ್ತು ಆತಿಥ್ಯಕ್ಕೆ ಸಂಬಂಧಿಸಿದಂತೆ ಗಂಭೀರ ಲೋಪಗಳು ಕಂಡುಬಂದಿವೆ ಎಂದು ವರದಿಯಾಗಿದೆ. ರಾಷ್ಟ್ರಪತಿಗಳನ್ನು ಸಿಲಿಗುರಿ ಮೇಯರ್ ಬರಮಾಡಿಕೊಂಡಿದ್ದು, ನಿಯಮದಂತೆ ಇರಬೇಕಾಗಿದ್ದ ಮುಖ್ಯಮಂತ್ರಿ, ಮುಖ್ಯ ಕಾರ್ಯದರ್ಶಿ ಮತ್ತು ಪೊಲೀಸ್ ಮಹಾ ನಿರ್ದೇಶಕರ ಅನುಪಸ್ಥಿತಿಯನ್ನು ಮೂಲಗಳು ಉಲ್ಲೇಖಿಸಿವೆ. ಅಲ್ಲದೆ, ರಾಷ್ಟ್ರಪತಿಗಳಿಗಾಗಿ ಸಿದ್ಧಪಡಿಸಲಾಗಿದ್ದ ಶೌಚಾಲಯದಲ್ಲಿ ನೀರಿನ ಕೊರತೆ ಮತ್ತು ಅಧಿಕೃತ ಪ್ರಯಾಣದ ಮಾರ್ಗದಲ್ಲಿ ಕಸದ ರಾಶಿ ಕಂಡುಬಂದಿದ್ದರ ಬಗ್ಗೆಯೂ ರಾಜ್ಯ ಸರ್ಕಾರವನ್ನು ಪ್ರಶ್ನಿಸಲಾಗಿದೆ. ➡ಪುಟ ೪

ಮಮತಾ ಸಮರ್ಥನೆ

ಶಿಷ್ಟಾಚಾರ ಉಲ್ಲಂಘನೆಯ ಆರೋಪಗಳನ್ನು ಸಿಎಂ ಮಮತಾ ಬ್ಯಾನರ್ಜಿ ಸ್ಪಷ್ಟವಾಗಿ ನಿರಾಕರಿಸಿದ್ದಾರೆ. ಎಲ್ಲ ರೀತಿಯ ನಿರ್ವಹಣಾ ಲೋಪಗಳಿಗೆ ಖಾಸಗಿ ಸಂಘಟಕರು ಮತ್ತು ಭಾರತೀಯ ವಿಮಾನ ನಿಲ್ದಾಣ ಪ್ರಾಧಿಕಾರವೇ ಹೊಣೆ ಎಂದು ಮುಖ್ಯಮಂತ್ರಿ ಪ್ರತಿಪಾದಿಸಿದ್ದಾರೆ. ಸ್ಥಳದ ಆಯ್ಕೆಯ ವಿಷಯದಲ್ಲಿ ರಾಜ್ಯ ಸರ್ಕಾರವನ್ನು ವಿಶ್ವಾಸಕ್ಕೆ ತೆಗೆದುಕೊಂಡಿರಲಿಲ್ಲ ಎಂದು ಅವರು ತಿಳಿಸಿದ್ದಾರೆ. ಅಲ್ಲದೆ, ತಮ್ಮ ಸರ್ಕಾರ ರಾಷ್ಟ್ರಪತಿಗಳ ಹುದ್ದೆಗೆ ಪೂರ್ಣ ಗೌರವ ನೀಡುತ್ತದೆ ಎಂದು ಅವರು ಸ್ಪಷ್ಟಪಡಿಸಿದ್ದಾರೆ.



ಪ್ರಧಾನಿ ಮೋದಿ ಕಿಡಿ

ಪಶ್ಚಿಮ ಬಂಗಾಳದ ಭೇಟಿಯ ಸಂದರ್ಭದಲ್ಲಿ ರಾಷ್ಟ್ರಪತಿ ಮುರ್ಮು ಅವರಿಗೆ ಅವಮಾನ ಮಾಡಲಾಗಿದೆ ಎಂದು ರಾಜ್ಯ ಸರ್ಕಾರದ ವಿರುದ್ಧ ವಾಗ್ದಾಳಿ ನಡೆಸಿದ ಪ್ರಧಾನಿ ಮೋದಿ ಅವರು, ಇದು ಅತ್ಯಂತ ನಾಚಿಕೆಗೇಡಿನ ಮತ್ತು ಆಘಾತಕಾರಿ ಘಟನೆ ಎಂದು ಕಿಡಿಕಾರಿದರು. ತೃಣಮೂಲ ಕಾಂಗ್ರೆಸ್ ಆಡಳಿತವು ನಿಜವಾಗಿಯೂ ಎಲ್ಲಾ ಮಿತಿಗಳನ್ನು ಮೀರಿದೆ ಎಂದು ಅವರು ಟೀಕಿಸಿದರು. ಆಂಧ್ರಪ್ರದೇಶದ ಸಿಎಂ ಎನ್. ಚಂದ್ರಬಾಬು ನಾಯ್ಡು ಮತ್ತು ಒಡಿಶಾದ ಮುಖ್ಯಮಂತ್ರಿ ಮೋಹನ್ ಚರಣ್ ಮಾಝಿ ಕೂಡ ಈ ಶಿಷ್ಟಾಚಾರ ಉಲ್ಲಂಘನೆ ಬಗ್ಗೆ ಕಳವಳ ವ್ಯಕ್ತಪಡಿಸಿದ್ದಾರೆ.

ಚಿತ್ತಾಪುರ: ₹1,069 ಕೋಟಿ ಕಾಮಗಾರಿಗೆ ಚಾಲನೆ

400 ಕೆರೆಗಳ ತುಂಬಿಸುವ ಯೋಜನೆ ಜಾರಿ: ಡಿಸಿಎಂ



ಚುನಾವಣಾ ಪೂರ್ವ ನೀಡಿದ ವಾಗ್ದಾನದಂತೆ ಗ್ಯಾರಂಟಿ ಯೋಜನೆಗಳ ಜತೆಗೆ ಅಭಿವೃದ್ಧಿ ಕೆಲಸವನ್ನೂ ಮಾಡುತ್ತೇವೆ.

■ **ಪ್ರಿಯಾಂಕ್ ಖರ್ಗೆ,** ಉಸ್ತುವಾರಿ ಸಚಿವ, ಕಲಬುರಗಿ

• **ಕಲಬುರಗಿ:** ರಾಜ್ಯದಲ್ಲಿ ಈಗಾಗಲೆ ಪಂಚ ಗ್ಯಾರಂಟಿ ಯೋಜನೆಗಳ ಜಾರಿಯಿಂದ ರಾಜ್ಯದ ಜನರು ನೆಮ್ಮದಿ ಜೀವನ ನಡೆಸುತ್ತಿದ್ದು, ಇದರ ಮುಂದುವರಿದ ಭಾಗವಾಗಿ ಅಂತರ್ಜಲ ಹೆಚ್ಚಿಸುವ ನಿಟ್ಟಿನಲ್ಲಿ 400ಕ್ಕೂ ಹೆಚ್ಚಿನ ಕೆರೆ ತುಂಬಿಸುವ ನೀರಾವರಿ ಗ್ಯಾರಂಟಿ ಯೋಜನೆ ಕೈಗೆತ್ತಿಕೊಂಡಿದ್ದೇವೆ ಎಂದು ರಾಜ್ಯ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ತಿಳಿಸಿದರು. ಚಿತ್ತಾಪುರದಲ್ಲಿ ಕಲಬುರಗಿ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್ ಹಾಗೂ ಕಲ್ಯಾಣ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿ ಇವುಗಳ ಸಂಯುಕ್ತಾಶ್ರಯದಲ್ಲಿ ಭಾನುವಾರ ಚಿತ್ತಾಪುರ ವ್ಯಾಪ್ತಿಯಲ್ಲಿನ ವಿವಿಧ ಇಲಾಖೆಗಳ 1,069.41 ಕೋಟಿ ರೂ. ಮೊತ್ತದ ಅಭಿವೃದ್ಧಿ ಕಾಮಗಾರಿಗಳ ಶಂಕುಸ್ಥಾಪನೆ, ಉದ್ಘಾಟಿಸಿ ಮಾತನಾಡಿದ ಅವರು, ಚಿತ್ತಾಪುರದಲ್ಲಿಯೇ 365 ಕೋಟಿ ರೂ.ಮೊತ್ತದ ನೀರಾವರಿ ಯೋಜನೆಗಳಿಗೆ ಚಾಲನೆ ನೀಡಲಾಗಿದೆ ಎಂದರು. ➡ಪುಟ ೪

ಮಹಿಳಾ ಸಿಬ್ಬಂದಿಯಿಂದಲೇ ವಂದೇ ಭಾರತ್ ನಿರ್ವಹಣೆ

• **ಬೆಂಗಳೂರು:** ಅಂತಾರಾಷ್ಟ್ರೀಯ ಮಹಿಳಾ ದಿನ ಹಿನ್ನೆಲೆಯಲ್ಲಿ ಭಾನುವಾರ ವಂದೇ ಭಾರತ್ ಎಕ್ಸ್‌ಪ್ರೆಸ್‌ನ್ನು ನೈಋತ್ಯ ರೈಲ್ವೆ ಬೆಂಗಳೂರು ವಿಭಾಗದ ಮಹಿಳಾ ಸಿಬ್ಬಂದಿಯೇ ನಿರ್ವಹಿಸಿದರು. ರೈಲು ಸಂಖ್ಯೆ 20607ಡಾ.ಎಂ.ಜಿ.ಆರ್. ಚೆನ್ನೈ ಸೆಂಟ್ರಲ್- ಮೈಸೂರು ವಂದೇ ಭಾರತ್ ಎಕ್ಸ್‌ಪ್ರೆಸ್ ನ್ನು ಬೆಂಗಳೂರು ಮತ್ತು ಮೈಸೂರು ನಡುವೆ ಮಹಿಳಾ ಸಿಬ್ಬಂದಿಯೇ ನಿರ್ವಹಿಸಿದರು. ಲೋಕೋ ಪೈಲಟ್ ಬಲ್ಲ ಶಿವಪಾರ್ವತಿ, ಸಹಾಯಕ ಲೋಕೋ ಪೈಲಟ್ ಅಶ್ವತಿ ಎಸ್. ನಾಯರ್, ರೈಲು ವ್ಯವಸ್ಥಾಪಕಿ ಪ್ರಿಯದರ್ಶಿನಿ ಗಾರ್ಡ್ ಆಗಿ ಕಾರ್ಯ ನಿರ್ವಹಿಸಿದರು. ಬೆಂಗಳೂರು ವಿಭಾಗದ ಹಿರಿಯ ವಿಭಾಗೀಯ ಪರಿಚಾಲನಾ ವ್ಯವಸ್ಥಾಪಕಿ ಪ್ರಿಯಾ, ಹಿರಿಯ ವಿಭಾಗೀಯ ಸಿಬ್ಬಂದಿ ಅಧಿಕಾರಿ ಉಮಾ ಶರ್ಮಾ, ವಿಭಾಗೀಯ ವಾಣಿಜ್ಯ ವ್ಯವಸ್ಥಾಪಕಿ ನಿವೇದಿತಾ ಬಾಲರಡ್ಡಿ ಮತ್ತು ವಿಭಾಗೀಯ ವಿದ್ಯುತ್ ಇಂಜಿನಿಯರ್ ಅಖಿಲ್ ಮಟ್ಟುರವರು ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ರೈಲ್ವೆ ನಿಲ್ದಾಣದಲ್ಲಿ ಈ ರೈಲಿಗೆ ನಿಶಾನೆ ತೋರಿದರು. ➡ಪುಟ ೪



ನೇಪಾಳ ಮುಂದಿನ ಪ್ರಧಾನಿ ಬಾಲೇನ್?

• **ಕಠ್ಮಂಡು:** ಯುವ ರ್‍ಯಾಪರ್‌ನಿಂದ ರಾಜಕಾರಣಿಯಾದ ಬಾಲೇಂದ್ರ ಶಾ ಬಾಲೇನ್ ಅವರ ರಾಷ್ಟ್ರಿಯ ಸ್ವತಂತ್ರ ಪಕ್ಷ(ಆರ್‌ಎಸ್‌ಪಿ) ಸಾಮಾನ್ಯ ಚುನಾವಣೆಯಲ್ಲಿ ಐತಿಹಾಸಿಕ ಜಯದತ್ತ ಸಾಗುತ್ತಿದೆ. ಹಳೆಯ ಪರಂಪರಾಗತ ರಾಜಕೀಯ ಪಕ್ಷಗಳು ಸಾರ್ವತ್ರಿಕ ಚುನಾವಣೆಯಲ್ಲಿ ಭಾರೀ ಸೋಲು ಕಂಡಿವೆ.



• ವಿವರ ಪುಟ ೨

ಹೊಸ ದಿಗಂತ
ರಾಷ್ಟ್ರ ಜಾಗೃತಿಯ ದೈನಿಕ
೦೪

ಸೋಮವಾರ
9 ಮಾರ್ಚ್ 2026
ಮಂಗಳೂರು

ವ್ಯಾಪಾರಿಗಳಿಗೆ ಗುರುತಿನ ಚೀಟಿ

ಬೆಂಗಳೂರು: ಜಿಬಿಎ ವ್ಯಾಪ್ತಿಯಲ್ಲಿ ಬೀದಿ ಬದಿ ವ್ಯಾಪಾರಿಗಳಿಗೆ ಕ್ಯೂ-ಆರ್ ಕೋಡ್ ಒಳಗೊಂಡ ಗುರುತಿನ ಚೀಟಿಯನ್ನು ತಿಂಗಳಾಂತ್ಯದೊಳಗಾಗಿ ವಿತರಿಸಲು ಕ್ರಮ ಕೈಗೊಳ್ಳುವಂತೆ ಮುಖ್ಯ ಆಯುಕ್ತ ಮಹೇಶ್ವರ್ ರಾವ್ ಅಧಿಕಾರಿಗಳಿಗೆ ಸೂಚನೆ ನೀಡಿದರು.

ಜಿಬಿಎ ವ್ಯಾಪ್ತಿಯಲ್ಲಿ ಕಲ್ಯಾಣ ಕಾರ್ಯಕ್ರಮಗಳಿಗೆ ಸಂಬಂಧಿಸಿದಂತೆ ಇಂದು ನಡೆದ ವರ್ಚುವಲ್ ಸಭೆಯಲ್ಲಿ ಮಾತನಾಡಿದ ಅವರು, ಬೀದಿ ಬದಿ ವ್ಯಾಪಾರಿಗಳಿಗೆ ಸಂಪೂರ್ಣ ಮಾಹಿತಿ ಒಳಗೊಂಡ ಗುರುತಿನ ಚೀಟಿಯನ್ನು ಮುದ್ರಿಸಿ ವಿತರಣೆ ಮಾಡಬೇಕು. ಈ ಸಂಬಂಧ ಮತದಾರರ ಗುರುತಿನ ಚೀಟಿ ಮಾದರಿಯಲ್ಲಿ ಗುರುತಿನ ಚೀಟಿಯನ್ನು ಮುದ್ರಿಸಿ ಅವಶ್ಯಕ ಮಾಹಿತಿಯನ್ನು ಗುರುತಿನ ಚೀಟಿಯಲ್ಲಿ ನೀಡಬೇಕು. ಉಳಿದ ಸಂಪೂರ್ಣ ಮಾಹಿತಿಯನ್ನು ಕ್ಯೂ-ಆರ್ ಕೋಡ್‌ನಲ್ಲಿ ಲಭ್ಯವಾಗುವಂತೆ ಸೂಕ್ತ ಕ್ರಮ ಕೈಗೊಳ್ಳಬೇಕೆಂದು ಸೂಚನೆ ನೀಡಿದರು.

ಬೀದಿ ವ್ಯಾಪಾರಿಗಳಿಗೆ ಹೊಸದಾಗಿ ನೀಡುವ ಗುರುತಿನ ಚೀಟಿಯಲ್ಲಿ ಯಾವುದೇ ಲೋಪದೋಷಗಳಿರದಂತೆ ನೋಡಿಕೊಳ್ಳಬೇಕು. ಎಲ್ಲಾ 5 ನಗರ ಪಾಲಿಕೆಗಳಲ್ಲಿ ಒಂದೇ ಮಾದರಿಯ ಗುರುತಿನ ಚೀಟಿಯನ್ನು ಮುದ್ರಿಸಿ ಮಾರ್ಚ್ ತಿಂಗಳಾಂತ್ಯದೊಳಗಾಗಿ ವಿತರಿಸಲು ಕ್ರಮ ಕೈಗೊಳ್ಳುವಂತೆ ಅಧಿಕಾರಿಗಳಿಗೆ ಸೂಚಿಸಿದರು.

ಒಂಟಿ ಮನೆಗಳಿಗೆ ಅನುದಾನ ಒದಗಿಸಿ

ಜಿಬಿಎ ವ್ಯಾಪ್ತಿಯ 5 ನಗರ ಪಾಲಿಕೆಗಳಲ್ಲಿ ಒಂಟಿ ಮನೆ ಯೋಜನೆಗೆ ಆಯ್ಕೆಯಾಗಿರುವ ಫಲಾನುಭವಿಗಳಿಗೆ ಕೂಡಲೇ ಅನುದಾನ ಬಿಡುಗಡೆಗೊಳಿಸಲು ಕ್ರಮ ಕೈಗೊಳ್ಳಬೇಕು. ತಿಂಗಳಾಂತ್ಯದೊಳಗಾಗಿ ಆಯ್ಕೆಯಾದ ಎಲ್ಲರಿಗೂ ಕಾರ್ಯದೇಶ ನೀಡಿ ಕೆಲಸ ಪ್ರಾರಂಭಿಸಲು ಕ್ರಮ ವಹಿಸುವಂತೆ ಅಧಿಕಾರಿಗಳಿಗೆ ಸೂಚನೆ ನೀಡಿದರು.

ರಾಮ ಬಾಣ



ಸರ್ಕಾರದ ವಿರುದ್ಧ ಹೋರಾಟಕ್ಕೆ ಸಜ್ಜು

ಬೆಂಗಳೂರು: ರಾಜ್ಯ ಸರ್ಕಾರದ 2026-27ನೇ ಸಾಲಿನ ಬಜೆಟ್‌ಗೆ ನಿರಾಸೆ ವ್ಯಕ್ತಪಡಿಸಿರುವ ವಿರೋಧ ಪಕ್ಷಗಳು ಸರ್ಕಾರದ ಮೇಲೆ ಮುಗಿಬೀಳಲಿದ್ದು, ಸೋಮವಾರದಿಂದ ಬಜೆಟ್‌ಕಲಾಪದಲ್ಲಿ ಬಜೆಟ್‌ನ ಲೋಪ ದೋಷಗಳ ಬಗ್ಗೆ ಗಮನ ಸೆಳೆಯಲು ಸಿದ್ಧತೆ ನಡೆಸಿವೆ.

ಸಾಕಷ್ಟು ನಿರೀಕ್ಷೆ ಮೂಡಿಸಿದ್ದ ಮುಖ್ಯಮಂತ್ರಿಗಳ ಐತಿಹಾಸಿಕ 17ನೇ ಬಜೆಟ್‌ನಲ್ಲಿ ಹೊಸ ಯೋಜನೆಗಳ ಘೋಷಣೆ ಇಲ್ಲ, ಒಂದು ಸಮುದಾವನ್ನು ಓಲೈಸಲು ಸಾಕಷ್ಟು ಅನುದಾನ ನೀಡಲಾಗಿದೆ ಎಂದಿರುವ ವಿಪಕ್ಷಗಳು ಜಂಟಿಯಾಗಿ ಸರ್ಕಾರದ ವಿರುದ್ಧ ಹೋರಾಟಕ್ಕೆ ಸಜ್ಜುಗೊಂಡಿವೆ. ಬಜೆಟ್ ಕುರಿತ ಚರ್ಚೆಯಲ್ಲಿ ಸರ್ಕಾರ ಮತ್ತು ವಿಪಕ್ಷಗಳ ನಡುವೆ ಗದ್ದಲ ಉಂಟಾಗುವುದು ನಿಶ್ಚಿತವಾಗಿದ್ದು, ಸರ್ಕಾರವನ್ನು ಸಮರ್ಥಿಸಿಕೊಳ್ಳಲು ಸಚಿವರು ಮತ್ತು ಶಾಸಕರೂ ಕೂಡಾ ಸಿದ್ಧರಾಗಿದ್ದು, ಸುದೀರ್ಘ ದಿನಗಳ ಬಜೆಟ್ ಕಲಾಪವು ಜಟಾಪಟಿಗೆ ಸಾಕ್ಷಿಯಾಗಲಿದೆ.

ಮಾಗಡಿ ತಹಸೀಲ್ದಾರ್ ಮೇಲೆ ಹಲ್ಲೆಗೆ ಯತ್ನ

ಮಾಗಡಿ: ತಹಸೀಲ್ದಾರ್ ಶರತ್ ಕುಮಾರ್ ಹಾಗೂ ಗ್ರಾಮಸ್ಥರ ನಡುವೆ ಮಾತಿನ ಚಕಮುಕಿ ನಡೆದು ತಹಶೀಲ್ದಾರ್ ಮೇಲೆ ಹಲ್ಲೆ ಯತ್ನ ಹಿನ್ನೆಲೆಯಲ್ಲಿ ಮಾಗಡಿ ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿದೆ.

ಶುಕ್ರವಾರ ತಾಲೂಕು ಕಚೇರಿ ಆವರಣದಲ್ಲಿ ಹರ್ತಿ ಮಾರಮ್ಮ ದೇವಾಲಯದ ಅರ್ಚಕರ ವ್ಯಾಜ್ಯ ತಹಶೀಲ್ದಾರ್ ಕೋರ್ಟ್ ನಲ್ಲಿ ನಡೆಯುವ ಸಂದರ್ಭದಲ್ಲಿ ಗ್ರಾಮಸ್ಥರಾದ ಸಿದ್ದೇಶ್, ಹೊನ್ನರಾಜು ಸಂಗಡಿಗರ ಜತೆ ದೇವಸ್ಥಾನದ ಜಾಗದ ವಿಚಾರವಾಗಿ ಗ್ರಾಮಸ್ಥರು ಮತ್ತು ತಹಶೀಲ್ದಾರ್ ನಡುವೆ ಮಾತಿನ ಚಕಮಕಿ ನಡೆದಿದೆ. ತಹಶೀಲ್ದಾರ್ ಶರತ್ ಕುಮಾರ್ ವಿರುದ್ಧ ಗ್ರಾಮಸ್ಥರ ವಾಗ್ವಾಳಿ ನಡೆಸಿ ಹಲ್ಲೆ ನಡೆಸುವ ಹಂತಕ್ಕೂ ಮುಂದಾದರು. ಗಾಬರಿಗೊಂಡ ತಹಶೀಲ್ದಾರ್ ಅವರು ಕೂಡಲೇ ಪೊಲೀಸರಿಗೆ ದೂರವಾಣಿ ಮೂಲಕ ಮಾಹಿತಿ ನೀಡಿ ಕ್ರಮ ಕೈಗೊಳ್ಳುವಂತೆ ಸೂಚಿಸಿದರು.

ಕಿಡಿ ನುಡಿ

ವಾಸುದೇವರಾವ್ ಕಕ್ಕೆನೇಜಿ

ಇದು ಸಾಲ ಗ್ಯಾರಂಟಿ ಬಜೆಟ್ ಆಗಿದೆ
– ಕ್ಯಾಪ್ಟನ್ ಗಣೇಶ್ ಕಾರ್ಣಿಕ್

-ಸಾಲ ಮಾಡಿ ತುಪ್ಪ ತಿನ್ನು, ಜಾಲಿ ಮಾಡಿ ಖಾಲಿ ಮಾಡಿಯಾದ ಮೇಲೆ ಮಣ್ಣು ತಿನ್ನು!

ದಿನ ಭವಿಷ್ಯ

ಮೇಷ ಸಂಧಾನದ ದಾರಿಯಿಂದ ನೀವು ಕಾರ್ಯ ಸಾಧಿಸಬಲ್ಲಿರಿ. ಹಾಗಾಗಿ ಸಂಘರ್ಷದ ದಾರಿ ಏಕೆ? ವಿವೇಕದಿಂದ ಹೆಜ್ಜೆ ಇಡುವುದೊಳಿತು.

ವೃಷಭ ನೀವು ಮುಚ್ಚಿಟ್ಟ ವಿಷಯವೊಂದು ಬಹಿರಂಗವಾದೀತು. ಪರಿಣಾಮ ಎದುರಿಸಲು ಸಜ್ಜಾಗಿ. ವಿದ್ಯಾರ್ಥಿಗಳಿಗೆ ತುಸು ಕಠಿಣ ಹಾದಿ.

ಮಿಥುನ ಆರೋಗ್ಯ ಸ್ಥಿರ. ಪ್ರಮುಖ ಕಾರ್ಯಕ್ಕೆ ಗಮನ ಕೊಡಲು ಇದರಿಂದ ಸಹಕಾರಿ. ಕಟು ಮಾತು ಮನೆಯಲ್ಲಿ ಸಂಬಂಧ ಕೆಡಿಸಬಹುದು.

ಕಟಕ ಇತ್ತೀಚಿನ ಸಮಸ್ಯೆ ಪರಿಹಾರ. ಆದರಿಂದ ನಿರಾಳತೆ. ಕೆಲವರ ಜತೆ ವ್ಯವಹಾರದಲ್ಲಿ ಎಚ್ಚರವಿರಲಿ. ಜಗಳ, ನಷ್ಟ ಉಂಟಾದೀತು.

ಸಿಂಹ ನೀವು ಹಿಡಿದ ದಾರಿ ಖಚಿತವಾಗಿರಲಿ. ಗೊಂದಲ ಬೇಡ. ಕೋಪ ನಿಮ್ಮ ಕೆಲಸ ಕೆಡಿಸದಂತೆ ಎಚ್ಚರ ವಹಿಸಿ. ತಾಳ್ಮೆಯ ವರ್ತನೆ ಅಗತ್ಯ.

ಕನ್ಯಾ ಇಂದು ಚಿಂತಿಸುವ ಪ್ರಮೇಯ ಉದ್ಭವಿಸದು. ಎಲ್ಲವೂ ನಿರಾಳ. ವೃತ್ತಿ ಕಾರ್ಯ ಸುಲಲಿತ. ಆಪ್ತರ ಸಾಧನೆ ಸಂತೋಷ ತರಲಿದೆ. ಧನಪ್ರಾಪ್ತಿ.

ತುಲಾ ವ್ಯವಹಾರದಲ್ಲಿ ಹೊಸ ಅವಕಾಶ ವ್ಯರ್ಥ ಮಾಡಬೇಡಿ. ಉದ್ಯಮ ಒತ್ತಡ ಹೆಚ್ಚಳ. ಆರೋಗ್ಯ ಕಡೆಗಣಿಸಬೇಡಿ. ದೇಹ, ಮನಸ್ಸಿಗೆ ವಿರಾಮ ನೀಡಿ.

ವೃಶ್ಚಿಕ ಆರೋಗ್ಯಕ್ಕೆ ಗಮನ ಕೊಡಿ. ಸಂಗಾತಿ ಜತೆ ಕಲಹ ನಡೆದೀತು. ವೃತ್ತಿಯಲ್ಲಿ ಏರುಪೇರು ಸಂಭವ. ವಿದ್ಯಾರ್ಥಿಗಳಿಗೆ ಶೈಕ್ಷಣಿಕ ಯಶಸ್ಸು.

ಧನು ಆರಾಮದ ಬದುಕಿಗೆ ಧಕ್ಕೆ ಒದಗುವ ಪ್ರಸಂಗ ಉಂಟಾದೀತು. ದಿನವಿಡೀ ಓಡಾಟ ನಡೆಸುವ ಪರಿಸ್ಥಿತಿ. ಆಗದವರನ್ನು ಓಲೈಸಲು ಹೋಗಬೇಡಿ.

ಮಕರ ನಿಮ್ಮ ಗುರಿಸಾಧನೆಗೆ ಅಡ್ಡಿಗಳು ಒದಗಬಹುದು. ಅನವಶ್ಯ ಮಾತು ಕಡಿಮೆಗೊಳಿಸಿ. ವೃತ್ತಿ ಸಂಬಂಧಿ ಪ್ರಯಾಣ. ವಿದ್ಯಾರ್ಥಿಗಳಿಗೆ ಯಶ.

ಕುಂಭ ಹಳೆಯ ಸಮಸ್ಯೆ ಮತ್ತೆ ಕಾಡಬಹುದು. ಪರಿಹಾರದ ಪ್ರಯತ್ನಕ್ಕೆ ಕೆಲವರ ಅಡ್ಡಿ. ಅನವಶ್ಯ ಖರ್ಚು ತಗ್ಗಿಸಿ. ಕೌಟುಂಬಿಕ ಸಹಕಾರ.

ಮೀನ ದುಬಾರಿ ವಸ್ತು ಖರೀದಿಯ ಅವಕಾಶ. ವ್ಯವಹಾರದಲ್ಲಿ ಉನ್ನತಿ. ಆದರೂ ಮಾನಸಿಕ ಒತ್ತಡ ನಿವಾರಣೆಯಾಗದು. ಕೌಟುಂಬಿಕ ಉದ್ವಿಗ್ನತೆ.

ರಾಹುಕಾಲ: 7.30-9.00
ಗುಳಿಕಕಾಲ: 1.30-3.00

ಅದೃಷ್ಟ ಸಂಖ್ಯೆ 3,7,2,6

ಹಿಂದಿನ ಆಪ್ ಸರಕಾರದ ಕೆಲಸ ಕಡಿಮೆ: ನರೇಂದ್ರ ಮೋದಿ

ದಿಲ್ಲಿಯ ಸಮಗ್ರ ಅಭಿವೃದ್ಧಿ

ಹೊಸದಿಲ್ಲಿ: ವರ್ಷದ ಹಿಂದೆ ಬಿಜೆಪಿ ಸರಕಾರ ಅಧಿಕಾರ ಸೂತ್ರ ಹಿಡಿದ ನಂತರ, ದಿಲ್ಲಿಯಲ್ಲಿ ಸಮಗ್ರ ಅಭಿವೃದ್ಧಿಯ ಗತಿಯು ತುಂಬು ವಿಸ್ತೃತಗೊಂಡಿದೆ ಎಂದು ಹೆಮ್ಮೆ ವ್ಯಕ್ತಪಡಿಸಿರುವ ಪ್ರಧಾನಿ ನರೇಂದ್ರ ಮೋದಿ, ಹಿಂದಿನ ಆಪ್ ಸರಕಾರದ ಕಡಿಮೆ ಕೆಲಸ ಮತ್ತು ಹೆಚ್ಚು ನೆಪಗಳಿಗೆ ಅವಕಾಶದ ನೀತಿಯಿಂದಾಗಿ ಅಭಿವೃದ್ಧಿ ಕಾರ್ಯಗಳು ವಸ್ತುಶ: ಸ್ಥಗಿತಗೊಂಡಿದ್ದವು ಮತ್ತು ಯೋಜನೆಗಳು ಕಡತಗಳಲ್ಲೇ ಸತ್ತು ಹೋಗಿದ್ದವು ಎಂದು ಆರೋಪಿಸಿದ್ದಾರೆ.

ಭಾರತದ ಅಸ್ಮಿತೆ ದಿಲ್ಲಿ: ದಿಲ್ಲಿಯು ಕೇವಲ ದೇಶದ ರಾಜಧಾನಿ ಮಾತ್ರವಲ್ಲ, ಭಾರತದ ಅಸ್ಮಿತೆ ಕೂಡ. ಭಾರತಾಂಬೆಯ ಶಕ್ತಿಯ ಲಾಂಛನವೂ ಆಗಿದೆ ಎಂದು ಪ್ರಧಾನಿ ಮೋದಿ ಬಣ್ಣಿಸಿದರು. ಎರಡು ಹೊಸ ಮೆಟ್ರೊ ಕಾರಿಡಾರ್‌ಗಳ ಸಹಿತ 33,500ಕೋಟಿ ರೂ.ಮೊತ್ತದ ಯೋಜನೆಗಳ ಉದ್ಘಾಟನೆ, ಲೋಕಾರ್ಪಣೆ ಬಳಿಕ ಬುರಾರಿ ಗ್ರೌಂಡ್‌ನಲ್ಲಿ ನಡೆದ ಕಾರ್ಯ ಕ್ರಮದಲ್ಲಿ ಜನಸ್ತೋಮವನ್ನು ಉದ್ದೇಶಿಸಿ ಪ್ರಧಾನಿ ಮಾತನಾಡಿದರು.

ಮಾತೆಯರು ಗಂಟೆಗಟ್ಟಲೆ ಬಸ್ಸಿಗೆ ಕಾಯಬೇಕಿಲ್ಲ: ದಿಲ್ಲಿಯಲ್ಲಿ ಸಾರಿಗೆ ವ್ಯವಸ್ಥೆ ಏನೇನೂ ಸರಿಯಿಲ್ಲ ಎಂದು ಟೀಕಿಸುವ ಕಾಲವೊಂದಿತ್ತು. ನಗರದ ಒಂದೆಡೆಯಿಂದ ಇನ್ನೊಂದೆಡೆಗೆ ತಲುಪಲು ಹಲವು ತಾಸು ಗಳು ಬೇಕಾಗುತ್ತಿತ್ತು. ಮಹಿಳೆಯರು ಬಸ್ ಅಥವಾ ಆಟೋಗಳಿಗಾಗಿ ಬಸ್‌ಸ್ಟಾಪ್‌ಗಳಲ್ಲಿ ಗಂಟೆಗಟ್ಟಲೆ ಕಾದು ಸುಸ್ತಾಗುವ ಪ್ರಮೇಯ ಮಾಮೂಲಾಗಿತ್ತು. ಆದರೆ ಇಂದು ದಿಲ್ಲಿಯಲ್ಲಿ ಸನ್ನಿವೇಶ ಕ್ಷಿಪ್ರಗತಿಯಿಂದ ಬದಲಾಗುತ್ತಿದೆ. ಕೆಲ ದಿನಗಳ ಹಿಂದಷ್ಟೆ ನಮೋ ಭಾರತ್ ರೈಲಿನ ಮುಖೇನ ದಿಲ್ಲಿಯನ್ನು ಪಶ್ಚಿಮ ಉತ್ತರಪ್ರದೇಶದೊಂದಿಗೆ ಜೋಡಿಸಲಾಗಿದೆ. ತನ್ಮೂಲಕ ಎರಡು ವಲಯಗಳ ನಡುವಣ ಪಯಣ ಸುಗಮವಾಗಿದೆ.

ದಿಲ್ಲಿ ಮೆಟ್ರೋ ಜಾಲವೀಗ 375ಕಿಮೀ ಮೀರಿ ವಿಸ್ತೃತಗೊಂಡಿದೆ. ತನ್ಮೂಲಕ ಸಂಪರ್ಕ ವ್ಯವಸ್ಥೆಯಲ್ಲಿ ಸಾಕಷ್ಟು ಪ್ರಗತಿಯಾಗಿದೆ ಮತ್ತು ಜನರಿಗೂ ಪಯಣವು ತುಂಬು ಸುಗಮವಾಗಿದೆ. ಜಗತ್ತಿನ ಯಾರೇ ಯಾವುದೇ ಕ್ಷಣ ಭಾರತದ ಬಗ್ಗೆ ಚಿಂತನೆ ಮಾಡುವಾಗ ದಿಲ್ಲಿಯ ಬಗ್ಗೆ ಮನಸ್ಸಲ್ಲಿ ಕಲ್ಪನೆ ಮೂಡೇ ಮೂಡುತ್ತೆ. ಯಾಕೆಂದರೆ ದಿಲ್ಲಿಯು ಭಾರತದ ರಾಜಧಾನಿ ಮಾತ್ರವಲ್ಲ, ಭಾರತದ ಅಸ್ಮಿತೆ, ರಾಷ್ಟ್ರದ ಶಕ್ತಿ ಸಾಮರ್ಥ್ಯ ಕೂಡ ಎಂದು ಪ್ರಧಾನಿ ಮೋದಿ ವರ್ಣಿಸಿದರು.



10ವರ್ಷ ಅಭಿವೃದ್ಧಿ ಮೂಲೆಗುಂಪು ಮಾಡಿತ್ತು

ಹಿಂದಿನ ಆಪ್‌ದಾ (ಗಂಡಾಂತರ) ಸರಕಾರ 10ವರ್ಷಗಳ ಕಾಲ ಅಭಿವೃದ್ಧಿ ಕಾರ್ಯಗಳನ್ನು ಸ್ತಬ್ಧಗೊಳಿಸಿಬಿಟ್ಟಿತ್ತು. ಕಡಿಮೆ ಕೆಲಸ ಮಾಡುವುದು ಮತ್ತು ಹೆಚ್ಚು ಎಕ್ಸ್‌ಕ್ಯೂಸ್‌ಗಳಿಗೆ ಆಪ್‌ದಾ ಸರಕಾರ ಮಣೆ ಹಾಕಿತ್ತು. ಹಾಗಾಗಿ ಯೋಜನೆಗಳ್ಯಾವುದೂ ಕಾರ್ಯಗತಗೊಳ್ಳಲೇ ಇಲ್ಲ. ಎಲ್ಲವೂ ಕಡತಗಳೊಳಗೆ ಸಾಯುತ್ತಿದ್ದವು. ಆದರೆ ಇಂದು ಯಾವುದೇ ಯೋಜನೆಗಳು ಕಡತಗಳಿಗೆ ಸೀಮಿತವಾಗಿಲ್ಲ, ಬದಲಾಗಿ ವಸ್ತುನಿಷ್ಠವಾಗಿ ಅತಿವೇಗವಾಗಿ ಅನುಷ್ಠಾನಗೊಳ್ಳುತ್ತಿವೆ. ಇಂದೀಗ ದಿಲ್ಲಿಯ ಸವಾಲುಗಳ ಬಗೆಹರಿಸಲು ನಮ್ಮ ಸರಕಾರ ಶರವೇಗದಲ್ಲಿ ಕಾರ್ಯತತ್ಪರವಾಗಿದೆ ಎಂದು ಗಮನ ಸೆಳೆದರು. ಜನರಲ್ ಪೂಲ್ ರೆಸಿಡೆನ್ಶಿಯಲ್ ಅಕೊಮೊಡೇಶನ್ (ಜಿಪಿಆರ್‌ಎ) ರಿ ಡೆವಲಪ್‌ಮೆಂಟ್ ಪ್ಲ್ಯಾನ್‌ನಡಿ ಸುಮಾರು 15,200ಕೋಟಿ ರೂ.ಮೊತ್ತದ ಯೋಜನೆಗಳಿಗೆ ಪ್ರಧಾನಿ ಮೋದಿ ಶಿಲಾನ್ಯಾಸಗೈದರು.ಕೇಂದ್ರ ವಸತಿ ಮತ್ತು ನಗರಾಭಿವೃದ್ಧಿ ಸಚಿವ ಮನೋಹರಲಾಲ್ ಖಟ್ಟರ್ ಮೋದಿ ಜತೆಗಿದ್ದರು.

ಇಡೀ ದೇಶದ ಪ್ರತಿಷ್ಠೆಯ ವಿಚಾರ

ದಿಲ್ಲಿಯ ಅಭಿವೃದ್ಧಿಯೆಂದರೆ ಬರೇ ಒಂದು ನಗರದ ಅಭಿವೃದ್ಧಿಯಲ್ಲ, ಇಡೀ ರಾಷ್ಟ್ರದ ಪ್ರತಿಷ್ಠೆಯ ವಿಚಾರವಾಗಿದೆ. ನೀವು ಯಾವ ಹೊಸ ಭರವಸೆ ಮತ್ತು ಸಂಕಲ್ಪದೊಂದಿಗೆ ವರ್ಷದ ಹಿಂದೆ ಬಿಜೆಪಿ ಸರಕಾರ ರಚಿಸಿದಿರೋ ಆ ಸಂಕಲ್ಪ, ಭರವಸೆಗಳಿಂದು ಸಾಕಾರಗೊಳ್ಳುತ್ತಿದೆ. ದಿಲ್ಲಿಯಲ್ಲಿ ನಡೆದಿರೋ ಅಬಾಧಿತ ಅಭಿವೃದ್ಧಿ ಪ್ರಕ್ರಿಯೆಗಳಿಗಾಗಿ ದಿಲ್ಲಿಯ ಎಲ್ಲಾ ಜನರಿಗೆ ನನ್ನ ಹೃತ್ಪೂರ್ವಕ ಅಭಿನಂದನೆಗಳನ್ನು ಸಲ್ಲಿಸುತ್ತೇನೆಂದು ಹೇಳಿದರು.

ಬ್ಲ್ಯಾಕ್ ಸ್ಪಾಟ್ ಗುರುತಿಸಿ ಸ್ವಚ್ಛತೆ

ಬೆಂಗಳೂರು: ನಗರದ ಹಲವು ಪ್ರದೇಶಗಳಲ್ಲಿ ಬ್ಲ್ಯಾಕ್ ಸ್ಪಾಟ್ ಸ್ಥಳ ಗುರುತಿಸಿ ಅವುಗಳನ್ನು ಸಂಪೂರ್ಣವಾಗಿ ತೆರವುಗೊಳಿಸಲು ನಿಯಮಿತ ಸ್ವಚ್ಛತಾ ಕಾರ್ಯಗಳ ಜತೆಗೆ ವಿಶೇಷ ಸ್ವಚ್ಛತಾ ಕಾರ್ಯಾಚರಣೆಯನ್ನು ಯೋಜಿತ ರೀತಿಯಲ್ಲಿ ನಡೆಸಲಾಗುತ್ತಿದೆ ಎಂದು ಕೇಂದ್ರ ನಗರ ಪಾಲಿಕೆ ಆಯುಕ್ತ ರಾಜೇಂದ್ರ ಚೋಳನ್ ತಿಳಿಸಿದರು.

ನಗರವನ್ನು ಸ್ವಚ್ಛ ಹಾಗೂ ಆರೋಗ್ಯಕರವಾಗಿಡುವ ಉದ್ದೇಶದಿಂದ ಕೇಂದ್ರ ನಗರ ಪಾಲಿಕೆ ವ್ಯಾಪ್ತಿಯ ಆರು ವಿಧಾನಸಭಾ ಕ್ಷೇತ್ರಗಳ ವಿವಿಧ ಪ್ರಮುಖ ಸ್ಥಳದಲ್ಲಿ ವಿಶೇಷ ಸ್ವಚ್ಛತಾ ಅಭಿಯಾನ ಹಾಗೂ ಬ್ಲ್ಯಾಕ್ ಸ್ಪಾಟ್ ತೆರವು ಕಾರ್ಯಾಚರಣೆಗಳನ್ನು ಕೈಗೊಳ್ಳಲಾಗಿದೆ. ನಗರ ಪಾಲಿಕೆ ವ್ಯಾಪ್ತಿಯಲ್ಲಿನ ಬ್ಲ್ಯಾಕ್ ಸ್ಪಾಟ್ ಗಳನ್ನು ಶಾಶ್ವತವಾಗಿ ನಿರ್ಮೂಲನೆ ಮಾಡುವ ಉದ್ದೇಶದಿಂದ ಬ್ಲ್ಯಾಕ್ ಸ್ಪಾಟ್ ನಿರ್ಮೂಲನಾ ಅಭಿಯಾನ ವನ್ನು ಮತ್ತಷ್ಟು ಬಲಪಡಿಸಲಾಗಿದೆ ಎಂದು ಮಾಹಿತಿ ನೀಡಿದರು. ಬೆಂಗಳೂರು ಕೇಂದ್ರ ನಗರ ಪಾಲಿಕೆಯ ಅಭಿವೃದ್ಧಿ ಅಪರ ಆಯುಕ್ತ ದಲ್ಜಿತ್ ಕುಮಾರ್ ಅವರ ಮಾರ್ಗ ದರ್ಶನದಲ್ಲಿ ನಡೆದ ಈ ಸ್ವಚ್ಛತೆ ಕಾರ್ಯದಲ್ಲಿ ಚಿಕ್ಕಪೇಟೆ, ಗಾಂಧಿನಗರ, ಶಾಂತಿನಗರ, ಶಿವಾಜಿನಗರ, ಸಿ.ವಿ. ರಾಮನ್ ನಗರ ವಿಧಾನಸಭ ಕ್ಷೇತ್ರಗಳಲ್ಲಿ ಪರಿಣಾಮಕಾರಿಯಾಗಿ ನಡೆಸಲಾಯಿತು. ಒಟ್ಟು 8.45 ಕಿ.ಮೀ ವ್ಯಾಪ್ತಿಯಲ್ಲಿ ನಡೆದ ಈ ಅಭಿಯಾನದಲ್ಲಿ 8 ಜೆಸಿಬಿಗಳು ಹಾಗೂ 40 ಟ್ರ್ಯಾಕ್ಟರ್‌ಗಳ ಸಹಾಯದಿಂದ ರಸ್ತೆ ಬದಿಗಳಲ್ಲಿ ಸಂಗ್ರಹವಾಗಿದ್ದ 51 ಲೋಡ್ ತ್ಯಾಜ್ಯವನ್ನು ತೆರವುಗೊಳಿಸಲಾಯಿತು.

- 8.45 ಕಿ.ಮೀ ವ್ಯಾಪ್ತಿಯಲ್ಲಿ ಸ್ವಚ್ಛತೆ ಕಾರ್ಯಾಚರಣೆ
- 21 ಬ್ಲ್ಯಾಕ್ ಸ್ಪಾಟ್‌ಗಳ ತೆರವು
- 8 ಜೆಸಿಬಿಗಳು ಹಾಗೂ 40 ಟ್ರ್ಯಾಕ್ಟರ್‌ಗಳ ಸಹಾಯದಿಂದ, 51 ಲೋಡ್ ತ್ಯಾಜ್ಯ ತೆರವು



- ಒಟ್ಟು 203 ಪೌರಕಾರ್ಮಿಕರು ಮತ್ತು ಸ್ವಚ್ಛತಾ ಸಿಬ್ಬಂದಿ ಭಾಗಿ

ಶಾಲೆಯಲ್ಲೇ ವಿದ್ಯಾರ್ಥಿಗಳ ಮಾರಾಮಾರಿ: ಬಾಲಕ ಸಾವು

ಪುಟ ೩➜ ನಂತರ ಮಾತನಾಡಿ, ನಗರದ ಖಾಸಗಿ ಶಾಲೆಯ ವಿದ್ಯಾರ್ಥಿಯೊಬ್ಬ ರಾಡ್ ಬಳಸಿ ವಿದ್ಯಾರ್ಥಿಗಳ ಮೇಲೆ ಹಲ್ಲೆ ನಡೆಸಿದ್ದಾನೆ. ಈ ವೇಳೆ, ವಿದ್ಯಾರ್ಥಿಯೊಬ್ಬನಿಗೆ ಗಂಭೀರ ಗಾಯಗಳಾಗಿ ಚಿಕಿತ್ಸೆ ಫಲಕಾರಿಯಾಗದೆ ಮೃತಪಟ್ಟಿದ್ದಾನೆ. ಮೃತ ಬಾಲಕನ ತಂದೆ ನೀಡಿದ ದೂರು ಆಧರಿಸಿ, ವಿದ್ಯಾರ್ಥಿ ವಿರುದ್ಧ ಹಾಗೂ ಖಾಸಗಿ ಶಾಲೆಯ ಆಡಳಿತ ಮಂಡಳಿ ವಿರುದ್ಧ ಪ್ರಕರಣ ದಾಖಲಿಸಲಾಗಿದೆ. ಸದ್ಯ ಹಲ್ಲೆ ನಡೆಸಿದ ವಿದ್ಯಾರ್ಥಿ ತಲೆಮರೆಸಿಕೊಂಡಿದ್ದು, ಪತ್ತೆಗಾಗಿ ಪ್ರತ್ಯೇಕ ತಂಡ ರಚಿಸಲಾಗಿದೆ. ಈ ಘಟನೆಯಲ್ಲಿ ಭಾಗಿಯಾದ ಎಲ್ಲರೂ ಅಪ್ರಾಪ್ತರೆ ಎಂದರು.

ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗ ಸ್ವಯಂಪ್ರೇರಿತ ಪ್ರಕರಣ ದಾಖಲಿಸಿ ಕೊಂಡಿದೆ ಎಂದು ರಾಜ್ಯ ಮಕ್ಕಳ ಹಕ್ಕುಗಳ ಆಯೋಗದ ಅಧ್ಯಕ್ಷ ಶಶಿಧರ್ ಕೋಸಂಬೆ ತಿಳಿಸಿದ್ದಾರೆ. ಈಗಾಗಲೇ ಘಟನೆ ಕುರಿತು ಬಳ್ಳಾರಿ ವಲಯದ ಐಜಿಪಿ ಅವರೊಂದಿಗೆ ಮಾತನಾಡಿ, ಮಾಹಿತಿ ಪಡೆದಿರುವೆ ಹಾಗೂ ಡಿಸಿಪಿಒ ಅವರಿಂದ ವರದಿ ಪಡೆಯಲಾಗಿದೆ ಎಂದು ತಿಳಿಸಿದ್ದಾರೆ.

ಮಹಿಳಾ ಸಿಬ್ಬಂದಿಯಿಂದಲೇ ವಂದೇ ಭಾರತ್ ನಿರ್ವಹಣೆ

ಪುಟ ೩➜ ಈ ವೇಳೆ ರೈಲ್ವೆ ಅಧಿಕಾರಿಗಳು ಮತ್ತು ಮಹಿಳಾ ಪ್ರಯಾಣಿಕರಿಗೆ ಗುಲಾಬಿ ಹೂಗಳನ್ನು ನೀಡಿ ಶುಭಾಶಯ ಕೋರಲಾಯಿತು. ಕಳೆದ ವರ್ಷ ಕೆಎಸ್‌ಆರ್ ಬೆಂಗಳೂರು-ಮೈಸೂರು ಮಾಲ್ಗುಡಿ ಎಕ್ಸ್‌ಪ್ರೆಸ್‌ನ್ನು ಮಹಿಳಾ ಸಿಬ್ಬಂದಿಯೇ ನಿರ್ವಹಿಸಿದ್ದರು.



400 ಕೆರೆಗಳ ತುಂಬಿಸುವ ಯೋಜನೆ ಜಾರಿ: ಡಿಸಿಎಂ

ಪುಟ ೩➜ ಚುನಾವಣಾ ಪೂರ್ವ ನೀಡಿದ ಭರವಸೆಯಂತೆ ಪ್ರತಿ ವರ್ಷ ರೂ. 52,000 ಕೋಟಿಗೂ ಅಧಿಕ ಮೊತ್ತ ಗ್ಯಾರಂಟಿ ಯೋಜನೆಗಳಿಗೆ ಸರ್ಕಾರ ಖರ್ಚು ಮಾಡುತ್ತಿದೆ. ಅಭಿವೃದ್ಧಿ ಕಾರ್ಯ ನಿಂತಿಲ್ಲ. ಚಿತ್ತಾಪುರ ಕ್ಷೇತ್ರದಲ್ಲಿಯೆ ಕಳೆದ ಎರಡೂವರೆ ವರ್ಷದಲ್ಲಿ 2,000 ಕೋಟಿ ರೂ. ಅನುದಾನ ನೀಡಿದ್ದೇವೆ ಎಂದರು. ರಾಜ್ಯಸಭೆಯ ವಿರೋಧ ಪಕ್ಷದ ನಾಯಕ ಡಾ. ಮಲ್ಲಿಕಾರ್ಜುನ ಖರ್ಗೆ ಮಾತನಾಡಿ, ಕೊಲ್ಲಿ ರಾಷ್ಟ್ರಗಳ ಮಧ್ಯೆ ಯುದ್ಧ ನಡೆಯುತ್ತಿದೆ. ಯುದ್ಧದಿಂದ ಯಾರಿಗೂ ಒಳ್ಳೆಯದಾಗಲ್ಲ. ಬದಲಾಗಿ ಅಭಿವೃದ್ಧಿಗೆ ಮಾರಕವಾಗಲಿದೆ. ಹಿಂದಿಗಿಂತಲೂ ಇಂದು ವಿಶ್ವ ಶಾಂತಿಗೆ ಮಹಾತ್ಮ ಗಾಂಧಿ ಅವರ ಅಹಿಂಸೆ ತತ್ವ ಅಗತ್ಯವಿದೆ ಎಂದು ಹೇಳಿದರು.

ದೇಶದ ಕೃಷಿ ಉತ್ಪನ್ನಗಳಾದ ತೊಗರಿ, ಅಕ್ಕಿ, ಹೆಸರು, ಉದ್ದು ರಫ್ತಿಗೆ ಅಮೆರಿಕ ಹೇರುತ್ತಿರುವ ತೆರಿಗೆ ಕಡಿಮೆಗೊಳಿಸುತ್ತಿಲ್ಲವೇಕೆ ಎಂದು ಪ್ರಶ್ನಿಸಿದ ಅವರು, ಭಾರತದ ಶೇ.65ರಷ್ಟು ಜನ ಕೃಷಿ ಮೇಲೆ ಅವಲಂಬಿತರಾಗಿದ್ದಾರೆ. ಹೀಗಾಗಿ ಇಲ್ಲಿನ ಕೃಷಿ ಉತ್ಪನ್ನ ಅಮೆರಿಕಾಗೆ ರಫ್ತು ಮಾಡಿದರೆ ರೈತರಿಗೆ ಅನುಕೂಲವಾಗಲಿದೆ. ಅದು ಬಿಟ್ಟು ಅಲ್ಲಿ ಶೇ.3ರಷ್ಟು ರೈತರು ಬೆಳೆಯುವ ಕೃಷಿ ಉತ್ಪನ್ನ ಖರೀದಿ ಮಾಡಿದರೆ ಇಲ್ಲಿನ ರೈತರಿಗೆ ನ್ಯಾಯ ನೀಡಲು ಸಾಧ್ಯವೆ ಎಂದರು. ಸಚಿವರಾದ ಡಾ. ಶರಣಪ್ರಕಾಶ ಆರ್. ಪಾಟೀಲ, ಶರಣಬಸಪ್ಪ ದರ್ಶನಾಪುರ, ಶಾಸಕರಾದ ಕನೀಜ್ ಫಾತೀಮಾ, ಬಾಬುರಾವ ಚಿಂಚನಸೂರು, ಎಂ.ವೈ.ಪಾಟೀಲ, ಅಲ್ಲಮಪ್ರಭು ಪಾಟೀಲ, ಚೆನ್ನಾರೆಡ್ಡಿ ತುನ್ನೂರ, ಜಗದೇವ ಗುತ್ತೇದಾರ್, ತಿಮ್ಮಣ್ಣಪ್ಪ ಕಮಕನೂರ, ದೇವಿಂದ್ರಪ್ಪ ಮರತೂರು, ಅರುಣಕುಮಾರ್ ಎಂ.ವೈ. ಪಾಟೀಲ, ಅಬ್ದುಲ್ ರಶೀದ, ಸೈಯ್ಯದ್ ಮಹೆಬೂಬ್ ಚಿಸ್ತಿ ಸಾಹೇಬ್, ಪ್ರವೀಣ ಪಾಟೀಲ ಹರವಾಳ, ಚಂದ್ರಿಕಾ ಪರಮೇಶ್ವರ್, ಮಜಹರ್ ಆಲಂ ಖಾನ್,ರೇವುನಾಯಕ ಬೆಳಮಗಿ, ಡಿಸಿ ಫೌಜಿಯಾ ತರನ್ನುಮ್ ಅಧಿಕಾರಿಗಳಾದ ಪಂಡ್ವೆ ರಾಹುಲ್, ಎಸ್.ಪಿ.ಅಡ್ಡೂರು ಶ್ರೀನಿವಾಸುಲು, ಅಪರ ಜಿಲ್ಲಾಧಿಕಾರಿ ರಾಯಪ್ಪ ಹುಣಸಗಿ, ಹೆಚ್ಚುವರಿ ಎಸ್.ಪಿ ಮಹೇಶ ಮೇಘಣ್ಣನವರ್ ಸೇರಿದಂತೆ ಜಿಲ್ಲಾ, ತಾಲೂಕು ಮಟ್ಟದ ಅಧಿಕಾರಿಗಳು ಉಪಸ್ಥಿತರಿದ್ದರು.

ಗ್ರಾಪಂ ಸದಸ್ಯೆ ಕುಟುಂಬಸ್ಥರಿಂದ ಹಲ್ಲೆ: ನೊಂದ ರೈತ ಆತ್ಮಹತ್ಯೆ

ಪುಟ ೩➜ ಮನೆಯ ಮುಂದೆ ಜಲಜೀವನ ಮಿಷನ್ ಯೋಜನೆಯಲ್ಲಿ ಕಾಮಗಾರಿ ಸಲುವಾಗಿ ತಗ್ಗು ತೆಗೆದು ತಿಂಗಳು ಕಳೆದಿದ್ದು, ಇನ್ನೂ ಮುಚ್ಚಿಲ್ಲ. ಇದರಿಂದ ದನ-ಕರು ಸಂಚಾರಕ್ಕೆ ಸಮಸ್ಯೆಯಾಗುತ್ತಿದೆ ಎಂದು ರೈತ ನಿಂಗಪ್ಪ ಅವರು ಗ್ರಾಮ ಪಂಚಾಯತಿ ಸದಸ್ಯೆ ಎದುರು ನೋವು ತೋಡಿಕೊಂಡಿದ್ದಾರೆ. ಸದಸ್ಯೆ ಕೊಪಗೊಂಡು ನಿಂಗಪ್ಪ ಅವರನ್ನು ನಿಂದಿಸಿದ್ದಲ್ಲದೆ ಸದಸ್ಯೆ ಹಾಗೂ ಕುಟುಂಬಸ್ಥರು ಹಲ್ಲೆ ನಡೆಸಿ, ಜಾತಿನಿಂದನೆ ಪ್ರಕರಣ ದಾಖಲಿಸುತ್ತೇವೆ ಎಂದು ಬೆದರಿಕೆ ಹಾಕಿದ್ದಾರೆ.

ಇದರಿಂದ ಮನನೊಂದ ರೈತ ನಿಂಗಪ್ಪ ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಗ್ರಾಮೀಣ ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿದೆ.

ಪ.ಬಂಗಾಳದ ವಿವರಣೆ ಕೇಳಿದ ಕೇಂದ್ರ ಸರ್ಕಾರ

ಪುಟ ೩➜ **ಸ್ಥಳ ಬದಲಾವಣೆ:** ಬಿಧಾ ನಗರದಿಂದ ಘೋಷಾಯಿಪುರಕ್ಕೆ ಬುಡಕಟ್ಟು ಸಮುದಾಯದ ಕಾರ್ಯಕ್ರಮವನ್ನು ಕೊನೆಯ ಕ್ಷಣದಲ್ಲಿ ಸ್ಥಳಾಂತರಿಸಿದ ಬಗ್ಗೆ ರಾಷ್ಟ್ರಪತಿ ಮುರ್ಮು ಅವರು ಅಸಮಾಧಾನ ವ್ಯಕ್ತಪಡಿಸಿದ್ದಾರೆ. ಈ ಬದಲಾವಣೆಯಿಂದಾಗಿ ಕಾರ್ಯಕ್ರಮದಲ್ಲಿ ಜನರ ಸಂಖ್ಯೆ ಗಣನೀಯವಾಗಿ ಕಡಿಮೆಯಾಗಿದ್ದು, ಇದನ್ನು ಬುಡಕಟ್ಟು ಜನಾಂಗದ ಕಲ್ಯಾಣಕ್ಕೆ ಅಡ್ಡಿಪಡಿಸುವ ಕ್ರಮ ಎಂದು ರಾಷ್ಟ್ರಪತಿ ದೂರಿದ್ದಾರೆ.



ರಾಷ್ಟ್ರಪತಿ ದ್ರೌಪದಿ ಮುರ್ಮು ಅವರನ್ನು ವಮಾನಿಸಿರುವುದು ಸಂವಿಧಾನಕ್ಕೆ ಮಾಡಿದ ಅಪಮಾನಕ್ಕಿಂತ ಕಡಿಮೆಯೇನಲ್ಲ. ನಮ್ಮ ಸಾಂವಿಧಾನಿಕ ಚೌಕಟ್ಟನ್ನು ರಕ್ಷಿಸುವ ಸಂಸ್ಥೆಯ ಘನತೆ ಎತ್ತಿಹಿಡಿಯುವುದು ಪಕ್ಷಾತೀತವಾಗಿ ಪ್ರತಿ ಸರ್ಕಾರದ ಜವಾಬ್ದಾರಿಯಾಗಿದೆ.

■ ಎಚ್.ಡಿ. ಕುಮಾರಸ್ವಾಮಿ, ಕೇಂದ್ರ ಸಚಿವ

ಸ್ಪೀಕರ್ ಅವಿಶ್ವಾಸ ನಿರ್ಣಯ: ಮರುಕಳಿಸಲಿದೆಯೇ ಇತಿಹಾಸ?

ಪುಟ ೩➜ 1966ರಲ್ಲಿ ಸ್ಪೀಕರ್ ಆಗಿದ್ದ ಹುಕ್ಕುಂ ಸಿಂಗ್ ಅವರ ವಿರುದ್ಧ ಪ್ರಧಾನ ಮಂತ್ರಿ, ಇತರ ಸಚಿವರು, ಹಿರಿಯ ಕಾಂಗ್ರೆಸ್ ನಾಯಕರು ಮತ್ತು ಹಿರಿಯ ಸರ್ಕಾರಿ ಅಧಿಕಾರಿಗಳಿಗೆ ಮುಜುಗರ ಉಂಟುಮಾಡುವಂತಹ ಪ್ರಶ್ನೆಗಳನ್ನು ಕೇಳಲು ಅವಕಾಶ ನೀಡದ ಪಕ್ಷಪಾತಿ ಧೋರಣೆ ಮತ್ತು ಹುದ್ದೆಯ ದುರುಪಯೋಗದ ಆರೋಪ ಹೊರಿಸಲಾಗಿತ್ತು. 1987ರ ಏಪ್ರಿಲ್ 15ರಂದು ಸ್ಪೀಕರ್ ಬಲರಾಮ್ ಜಾಕರ್ ವಿರುದ್ಧ ಗೊತ್ತುವಳಿ ನಿರ್ಣಯಗಳ ಮೂಲಕ ಪ್ರಮುಖ ಸಾಂವಿಧಾನಿಕ, ನಿಯಮಬದ್ಧ ಮತ್ತು ಜ್ವಲಂತ ಸಮಸ್ಯೆಗಳನ್ನು ಕೇಳಲು ಅವಕಾಶ ಕಲ್ಪಿಸದ ಆರೋಪ ಹೊರಿಸಲಾಗಿತ್ತು. ಆದರೆ, ಈ ಯಾವುದೇ ನಿರ್ಣಯಗಳು ಕನಿಷ್ಠ 50 ಸಂಸದರ ಸಹಮತ ಕೂಡ ಪಡೆಯಲು ವಿಫಲವಾದ್ದರಿಂದ, ಅವಿಶ್ವಾಸ ನಿರ್ಣಯಗಳನ್ನು ಕೈಬಿಡಲಾಗಿತ್ತು. ಈ ಮೇಲಿನ ಪ್ರಕರಣಗಳಲ್ಲಿ ವಿಪಕ್ಷ ಸ್ಥಾನದಲ್ಲಿ ಬಿಜೆಪಿ ಹಾಗೂ ಕಾಂಗ್ರೆಸ್ ಎರಡೂ ಇದ್ದವು ಎಂಬುದು ಗಮನಿಸಬೇಕಾದ ವಿಷಯ.

ಆದರೆ, 2024ರಲ್ಲಿ ರಾಜ್ಯಸಭೆ ಕೂಡ ಮೊದಲ ಬಾರಿಗೆ ಇಂತಹದೊಂದು ಬೆಳವಣಿಗೆಗೆ ಸಾಕ್ಷಿಯಾಯಿತು. 2024ರ ಡಿಸೆಂಬರ್‌ನಲ್ಲಿ ಸಭಾಪತಿ ಜಗದೀಪ್ ಧನ್ಕರ್ ವಿರುದ್ಧ ಪಕ್ಷಪಾತ ಧೋರಣೆ, ನಿಯಮಗಳ ಉಲ್ಲಂಘನೆ ಆರೋಪದ ಅಡಿಯಲ್ಲಿ ಪ್ರತಿಪಕ್ಷಗಳು ಸಂವಿಧಾನದ ಪರಿಚ್ಛೇದ 67 (ಬಿ)ರಲ್ಲಿ ಅವಿಶ್ವಾಸ ನಿರ್ಣಯವನ್ನು ಮಂಡಿಸಿದ್ದವು. ಇದಕ್ಕೆ 60ಕ್ಕೂ ಹೆಚ್ಚು ಸದಸ್ಯರು ಸಹಿ ಹಾಕಿದ್ದರು. ಆದರೆ, ಇದು 14 ದಿನಗಳ ನೋಟಿಸ್‌ನ ನಿಯಮ ಪಾಲನೆಯಾಗದ ಹಿನ್ನೆಲೆಯಲ್ಲಿ 2024ರ ಡಿಸೆಂಬರ್ 19ರಂದು ತಿರಸ್ಕೃತಗೊಂಡಿತ್ತು. ಇದಕ್ಕೂ ಮೊದಲು 2020ರ ಸೆಪ್ಟೆಂಬರ್‌ನಲ್ಲಿ ಅಂದಿನ ಸಭಾಪತಿ ಹರಿವಂಶ ನಾರಾಯಣ ಸಿಂಗ್ ವಿರುದ್ಧ ವಿಪಕ್ಷಗಳು ಅವಿಶ್ವಾಸ ನಿರ್ಣಯ ಸಲ್ಲಿಸಿದ್ದವಾದರೂ, ಅದು ಚರ್ಚೆಗೆ ಬರಲಿಲ್ಲ.

ಈಗ ವಿವಾದದ ಕೇಂದ್ರಬಿಂದುವಾಗಿರುವ ಸ್ಪೀಕರ್ ಓಂ ಬಿರ್ಲಾ ಅವರು ಹಂತಹಂತವಾಗಿ ರಾಜಕೀಯವಾಗಿ ಏಳಿಗೆ ಕಂಡವರು. ರಾಜಸ್ತಾನದ ಕೋಟಾ ಕ್ಷೇತ್ರದಿಂದ 2014ರಲ್ಲಿ ಲೋಕಸಭೆಗೆ ಆಯ್ಕೆಯಾಗಿ ಬಂದ ಇವರು, 2019ರಲ್ಲಿ ಮೊದಲ ಬಾರಿಗೆ ಸ್ಪೀಕರ್ ಹುದ್ದೆ ಅಲಂಕರಿಸಿದ್ದರು. 2024ರಲ್ಲಿ ಎರಡನೇ ಬಾರಿಗೆ ಸ್ಪೀಕರ್ ಆಗಿ ಆಯ್ಕೆಯಾದರು. ಈ ಸಂದರ್ಭದಲ್ಲಿ ಪ್ರಧಾನಿ ನರೇಂದ್ರ ಮೋದಿ ಬಿರ್ಲಾ ಅವರನ್ನು ಅಭಿನಂದಿಸಿ ಕೋಟಾದಲ್ಲಿ ಅವರು ಮಾಡಿದ ಸಮಾಜ ಸೇವೆಯನ್ನು ಶ್ಲಾಘಿಸಿದ್ದರು. ಆರೋಗ್ಯ ಮತ್ತು ಕ್ರೀಡೆಗೆ ಅವರು ನೀಡಿದ್ದ ಪ್ರೋತ್ಸಾಹವನ್ನು ಸ್ಮರಿಸಿದ್ದರು.

ಹಳೆಯ ಸಂಸತ್ ಭವನದಿಂದ ಹೊಸ ಸಂಸತ್ ಭವನಕ್ಕೆ ಸದನ ಸ್ಥಳಾಂತರಗೊಂಡ ನಂತರ ಮೊದಲ ಸ್ಪೀಕರ್ ಹುದ್ದೆಯಲ್ಲಿ ಕೂಡ ಬಿರ್ಲಾ ಅವರೇ ವಿರಾಜಮಾನರಾಗಿದ್ದರು. ಹಸನ್ಮುಖಿಯಾಗಿ ಸದನ ನಡೆಸುವುದರ ಜತೆಗೆ, ಅಗತ್ಯ ಬಿದ್ದಾಗ ಕಠಿಣ ನಿರ್ಣಯಗಳನ್ನು ತೆಗೆದುಕೊಳ್ಳುವಲ್ಲಿ ಕೂಡ ಬಿರ್ಲಾ ಅವರು ಹಿಂದೆ ಬೀಳಲಿಲ್ಲ. ಸದನದಲ್ಲಿ ಸದಸ್ಯರ ಅಶಿಸ್ತಿನ ವರ್ತನೆಗಳನ್ನು ಖಂಡಿಸುತ್ತಿದ್ದರು. ಪ್ರಶ್ನೋತ್ತರ ಅವಧಿಯಲ್ಲಿ ಉತ್ತರ ನೀಡುವಲ್ಲಿ ತಡವರಿಸಿದ ಸಚಿವರ ಕಿವಿ ಹಿಂಡಲು ಕೂಡ ಅವರು ಮುಲಾಜು ನೋಡಲಿಲ್ಲ.

ಹೊಸ ಸಂಸತ್ ಭವನವನ್ನು ಡಿಜಿಟಲೀಕರಣಗೊಳಿಸಿದ, ಸಂಸದರ ಹಾಜರಾತಿಗಳನ್ನು ಕಡ್ಡಾಯಗೊಳಿಸಿದ ಕೀರ್ತಿ ಇವರಿಗೆ ಸಲ್ಲುತ್ತದೆ. ಸದನದ ಕಲಾಪಗಳಲ್ಲಿ ಸಂವಿಧಾನದ 8ನೇ ಪರಿಚ್ಛೇದದಲ್ಲಿನ ಎಲ್ಲಾ 22 ಭಾಷೆಗಳಲ್ಲಿ ಲಭ್ಯವಾಗಿಸಿದ ಮತ್ತು ಯಾವುದೇ ಸದಸ್ಯರು ಪೂರ್ವ ನೋಟಿಸ್ ನೀಡದೆ ತಮ್ಮ ಮಾತೃಭಾಷೆಯಲ್ಲಿ ಮುಕ್ತವಾಗಿ ಮಾತನಾಡಲು ಅವಕಾಶ ಕಲ್ಪಿಸಿದ ಕೀರ್ತಿಯೂ ಇವರಿಗೇ ಸಲ್ಲಬೇಕು. ಇವರು ಅಂತಾರಾಷ್ಟ್ರೀಯ ಸ್ಪೀಕರ್ ಸಮಾವೇಶದ ಸಾರಥ್ಯ ಕೂಡ ವಹಿಸಿದ್ದರು.

18ನೇ ಲೋಕಸಭೆಯ ಸ್ಪೀಕರ್ ಆಯ್ಕೆ ಪ್ರಕ್ರಿಯೆಯಲ್ಲಿ ಪ್ರೊಟೆಮ್(ಹಂಗಾಮಿ) ಸ್ಪೀಕರ್ ಆಗಿ ಮತದಾನ ಪ್ರಕ್ರಿಯೆ ನಿರ್ವಹಿಸಿದ ಸಂಸದ ಬರ್ತ್ಯಹರಿ ಮಹತಾಬ್ ಅವರು ಓಂ ಬಿರ್ಲಾ ಅವರಿಗೆ ಸ್ಥಾನ ಬಿಟ್ಟುಕೊಡುವ ವೇಳೆ ನಿಮ್ಮ ಪೀಠ ನೀವು ಸಂಭಾಳಿಸಿ ಎಂದು ಸೂಚ್ಯವಾಗಿ ಹೇಳಿದ್ದರು. ಈಗ ವಾಸ್ತವದಲ್ಲಿ ಸ್ಪೀಕರ್ ತಮ್ಮ ಪೀಠವನ್ನು ಸಂಭಾಳಿಸಿಕೊಳ್ಳಬಲ್ಲರೇ ಎಂಬುದಕ್ಕೆ ಒಂದೆರಡು ದಿನಗಳಲ್ಲಿ ಉತ್ತರ ದೊರೆಯಲಿದೆ. ಇತಿಹಾಸದ ಪುಟಗಳನ್ನು ಗಮನಿಸಿದಾಗ, ಮಹತ್ತರ ಬದಲಾವಣೆಗಳನ್ನು ನಿರೀಕ್ಷಿಸುವುದು ಕಷ್ಟವಾಗಿದೆ.

ನೆರೆ ರಾಷ್ಟ್ರಗಳ ಮೇಲೆ ಹೊಸ ದಾಳಿ!

ಪುಟ೩➜ ಇರಾನ್ ಕಳುಹಿಸಿದ 16 ಖಂಡಾಂತರ ಕ್ಷಿಪಣಿ ಗಳನ್ನು ಹೊಡೆದುರುಳಿಸಿದ್ದು, 17ನೇ ಕ್ಷಿಪಣಿ ಗುರಿ ತಪ್ಪಿ ಸಮುದ್ರಕ್ಕೆ ಬಿದ್ದಿದೆ. ಬಹುತೇಕ ಎಲ್ಲಾ ಡ್ರೋನ್‌ಗಳನ್ನು ಹೊಡೆದುರುಳಿಸಿದ್ದೇವೆ. ಆದರೆ 4 ಡ್ರೋನ್‌ಗಳು ಮಾತ್ರ ಯುಎಇ ಗಡಿಯೊಳಗೆ ಬಂದು ಬಿದ್ದಿವೆಯೆಂದು ಸಚಿವಾಲಯ ತಿಳಿಸಿದೆ. ಕುವೈತ್ ವಿಮಾನ ನಿಲ್ದಾಣದ ಇಂಧನ ಟ್ಯಾಂಕ್ ಗಳು ಮತ್ತು ಬಹ್ರೈನ್‌ನ ನೀರು ಶುದ್ಧೀಕರಣ ಘಟಕಗಳಿಗೆ ಹಾನಿಯಾಗಿದೆ. ಇರಾಕ್‌ನ ಬಾಗ್ದಾದ್‌ನಲ್ಲಿ ಭಾರೀ ಸ್ಫೋಟದ ಸದ್ದು ಆತಂಕ ಹೆಚ್ಚಿಸಿದೆ.

ಟ್ರಂಪ್‌ಗೆ ನೆತನ್ಯಾಹು ಕೃತಜ್ಞತೆ

ಇರಾನ್ ವಾಯು ಪ್ರದೇಶದಲ್ಲಿ ಇಸ್ರೇಲ್ ಮತ್ತು ಅಮೆರಿಕ ವಾಯುಪಡೆಗಳು ಸಂಪೂರ್ಣ ಪ್ರಾಬಲ್ಯ ಮೆರೆದಿವೆ. ಈ ಸಂದರ್ಭ ನನ್ನ ಆತ್ಮೀಯ ಮಿತ್ರ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರಿಗೆ ಕೃತಜ್ಞತೆ ಸಲ್ಲಿಸುತ್ತೇನೆ ಎಂದು ಇಸ್ರೇಲ್ ಪ್ರಧಾನಿ ಬೆಂಜಮಿನ್ ನೆತನ್ಯಾಹು ಹೇಳಿದ್ದಾರೆ.

ಇರಾನ್ ಮೇಲೆ ಪ್ರತಿದಾಳಿ ಸುಳ್ಳು ಸುದ್ದಿ: ಯುಎಇ

ಭಾನುವಾರ ಇರಾನ್ ನಡೆಸಿದ ದಾಳಿಗೆ ಪ್ರತಿದಾಳಿ ನಡೆಸಿರು ವುದನ್ನು ಯುಎಇ ನಿರಾಕರಿಸಿದೆ. ನಾವೇನಾದರೂ ದಾಳಿ ನಡೆಸಿದರೆ ಅದನ್ನು ಘೋಷಿಸುವ ಧೈರ್ಯ ನಮಗಿದೆ. ನಾವು ಇರಾನ್ ಮೇಲೆ ಪ್ರತಿದಾಳಿ ನಡೆಸಿಲ್ಲ. ಇದು ಸುಳ್ಳು ಸುದ್ದಿ ಎಂದು ಯುಎಇ ರಕ್ಷಣಾ ಸಮಿತಿ ಕಾರ್ಯದರ್ಶಿ ಡಾ.ಅಲಿ ರಶೀದ್ ಅಲಿ ನುಐಮಿ ಎಕ್ಸ್ ಪೋಸ್ಟ್ ಮಾಡಿದ್ದಾರೆ.

ಖಮೇನಿ ಪುತ್ರ ಹೊಸ ನಾಯಕ?

ಇರಾನ್ ತನ್ನ ಹೊಸ ಸರ್ವೋಚ್ಚ ನಾಯಕನನ್ನು ಆಯ್ಕೆ ಮಾಡಿದ್ದು, ಹೆಸರನ್ನು ಘೋಷಿಸದೆ ಗೌಪ್ಯತೆ ಕಾಪಾಡಿಕೊಂಡಿದೆ. ಕೆಲವು ಮೂಲಗಳ ಪ್ರಕಾರ, ಖಮೇನಿ ಅವರ ಪುತ್ರ ಮೊಜ್ತಬಾ ಖಮೇನಿ ಅವರನ್ನೇ ಹೊಸ ಸರ್ವೋಚ್ಚ ನಾಯಕನನ್ನಾಗಿ ಆಯ್ಕೆ ಮಾಡಲಾಗಿದೆ. ಹೊಸ ನಾಯಕನ ಹತ್ಯೆ ಮಾಡುವುದಾಗಿ ಇಸ್ರೇಲ್ ಮತ್ತು ಅಮೆರಿಕ ಶಪಥಗೈದಿವೆ. ಹೊಸ ನಾಯಕ ಯಾರಾಗ್ತಾರೆಂದು ಯಾರಿಗೂ ಗೊತ್ತಿಲ್ಲ ಎಂದು ವಿದೇಶಾಂಗ ಸಚಿವ ಅಬ್ಬಾಸ್ ಅರಘ್ಚಿ ಹೇಳಿದ್ದಾರೆ.

ಇಸ್ರೇಲ್ ದಾಳಿಗೆ ಇರಾನ್ ತತ್ತರ

ಪುಟ ೩➜ ಇಸ್ರೇಲ್ ತೈಲ ಮತ್ತು ಅನಿಲ ಉದ್ಯಮವನ್ನು ಗುರಿಯಾಗಿಸಿ ದಾಳಿ ಮಾಡುವ ಇಚ್ಛೆ ನಮಗಿಲ್ಲವೆಂದು ಅಮೆರಿಕದ ಇಂಧನ ಕಾರ್ಯದರ್ಶಿ ಕ್ರಿಸ್ ರೈಟ್ ಹೇಳಿದ್ದಾರೆ.ಹಾರ್ಮುಜ್ ಜಲಸಂಧಿಯಲ್ಲಿ ಇರಾನ್ ದಾಳಿಗೆ ಯುಎಇ ಹಡಗಿಗೆ ಹಾನಿಯಾಗಿದ್ದು, 3 ಇಂಡೋನೇಷ್ಯಾ ಕ್ರೂ ಸದಸ್ಯರು ಕಾಣೆಯಾಗಿದ್ದಾರೆ ಎಂದು ವರದಿ ತಿಳಿಸಿದೆ.

ರಾಜ್ಯ ಕಲಾಶ್ರೀ ಪ್ರಶಸ್ತಿ ಪ್ರಕಟ

ಬೆಂಗಳೂರು: ಕರ್ನಾಟಕ ಸಂಗೀತ ನೃತ್ಯ ಅಕಾಡೆಮಿಯು 2025–26ನೇ ಸಾಲಿನ ಕರ್ನಾಟಕ ಕಲಾಶ್ರೀ ಪ್ರಶಸ್ತಿಗಳನ್ನು ಪ್ರಕಟಿಸಿದ್ದು, ಗೌರವ ಪ್ರಶಸ್ತಿಗೆ ದಕ್ಷಿಣ ಕನ್ನಡದ ಗಮಕಿ ಮಧೂರು ಮೋಹನ ಕಲ್ಲೂರಾಯ ಹಾಗೂ ಹಾಸನದ ಕಥಾ ಕೀರ್ತನ ಕಲಾವಿದ ಲೋಕೇಶ್ ದಾಸ್ ಆಯ್ಕೆಯಾಗಿದ್ದಾರೆ.

ಅಕಾಡೆಮಿ ಅಧ್ಯಕ್ಷೆ ಶುಭಾ ಧನಂಜಯ್ ಹಾಗೂ ರಿಜಿಸ್ಟ್ರಾರ್ ಎನ್. ನರೇಂದ್ರಬಾಬು ಅವರು ಪ್ರಶಸ್ತಿ ಪುರಸ್ಕೃತರ ಪಟ್ಟಿಯನ್ನು ಬಿಡುಗಡೆ ಮಾಡಿದ್ದಾರೆ. ಕರ್ನಾಟಕ ಸಂಗೀತ, ಹಿಂದೂಸ್ತಾನಿ ಸಂಗೀತ, ನೃತ್ಯ ಸೇರಿದಂತೆ ವಿವಿಧ ವಿಭಾಗಗಳಿಂದ 15 ಕಲಾವಿದರು ಹಾಗೂ ಒಂದು ಸಂಸ್ಥೆಯನ್ನು ವಾರ್ಷಿಕ ಪ್ರಶಸ್ತಿಗೆ ಆಯ್ಕೆ ಮಾಡಲಾಗಿದೆ. ಗೌರವ ಪ್ರಶಸ್ತಿಯು ತಲಾ 50 ಸಾವಿರ ರೂ. ಹಾಗೂ ವಾರ್ಷಿಕ ಪ್ರಶಸ್ತಿ ತಲಾ 25 ಸಾವಿರ ರೂ.ನಗದು ಬಹುಮಾನ ಒಳಗೊಂಡಿದೆ.

ವಾರ್ಷಿಕ ಪ್ರಶಸ್ತಿ: ಕರ್ನಾಟಕ ಸಂಗೀತ ವಿಭಾಗದಲ್ಲಿ ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಎಂ. ವೆಂಕಟರಾಯ್(ಡೋಲ್), ಕೋಲಾರದ ಎ.ವಿ.ವಿಶ್ವನಾಥ (ಹಾರ್ಮೋನಿಯಂ), ಮೈಸೂರಿನ ಹಂಸಿನಿ ನಾಗೇಂದ್ರ (ಗಾಯನ), ದಕ್ಷಿಣ ಕನ್ನಡದ ನಾಗೇಶ್ ಎ. ಬಪ್ಪನಾಡು (ನಾದಸ್ವರ), ಹಿಂದೂಸ್ತಾನಿ ಸಂಗೀತ ವಿಭಾಗದಲ್ಲಿ ಧಾರವಾಡದ ಮೃತ್ಯುಂಜಯ ಶೆಟ್ಟರ್ (ಗಾಯನ), ಬಾಗಲಕೋಟೆಯ ರವೀಂದ್ರ ಸೊರಗಾವಿ (ಗಾಯನ), ಗದಗದ ಪಂಚಾಕ್ಷರಿ ಅಣ್ಣಿಗೇರಿ (ಹಾರ್ಮೋನೀಯಂ) ಹಾಗೂ ಬೀದರ್‌ನ ವಿಠಲ್ ಸಿದ್ದಪ್ಪ ಪೂಜಾರಿ (ತಬಲಾ) ಅವರು ವಾರ್ಷಿಕ ಪ್ರಶಸ್ತಿಗೆ ಆಯ್ಕೆಯಾಗಿದ್ದಾರೆ. ನೃತ್ಯ ವಿಭಾಗದಲ್ಲಿ ಬಳ್ಳಾರಿಯ ಜಿಲಾನಿ ಭಾಷಾ (ಕೂಚಿಪುಡಿ), ಚಿತ್ರದುರ್ಗದ ಶಿವಪ್ರಕಾಶ (ಭರತನಾಟ್ಯ), ಧಾರವಾಡದ ನಾಗರತ್ನ ಹಡಗಲಿ (ಭರತನಾಟ್ಯ), ಸುಗಮ ಸಂಗೀತ ವಿಭಾಗದಲ್ಲಿ ಕೋಲಾರದ ಶ್ರೀಧರ್ ಅಯ್ಯರ್, ಕಥಾಕೀರ್ತನ ವಿಭಾಗದಲ್ಲಿ ಬೆಂಗಳೂರಿನ ಪಿ. ರಾಮಯ್ಯ (ತಬಲಾ), ಗಮಕ ವಿಭಾಗದಲ್ಲಿ ಧಾರವಾಡದ ವಿಶ್ವನಾಥ ಕುಲಕರ್ಣಿ (ವಾಚನ), ವಾದ್ಯ ತಯಾರಿಕೆಯಲ್ಲಿ ಬೆಂಗಳೂರಿನ ಕೃಷ್ಣಮೂರ್ತಿ ಅವರನ್ನು ಹಾಗೂ ಸಂಘ ಸಂಸ್ಥೆ ವಿಭಾಗದಲ್ಲಿ ಕೊಪ್ಪಳದ ಗಂಗಾವತಿಯ ಕೊಟ್ಟೂರೇಶ್ವರ ಸಂಗೀತ ವಿದ್ಯಾಲಯವನ್ನು ಆಯ್ಕೆ ಮಾಡಲಾಗಿದೆ.

ರಥೋತ್ಸವ



ಕಲಬುರಗಿಯ ಐತಿಹಾಸಿಕ ಶ್ರೀಶರಣಬಸವೇಶ್ವರರ 204ನೇ ಜಾತ್ರಾ ಮಹೋತ್ಸವದ ಅಂಗವಾಗಿ ಭಾನುವಾರ ರಥೋತ್ಸವ ಅದ್ದೂರಿಯಾಗಿ ನಡೆಯಿತು.

ಅಡುಗೆ ಅನಿಲದ ಬೆಲೆ ಏರಿಕೆಗೆ ಸಚಿವೆ ಲಕ್ಷ್ಮೀ ಹೆಬ್ಬಾಳಕರ್ ಕಿಡಿ

ಬೆಂಗಳೂರು: ಮಹಿಳಾ ದಿನಾಚರಣೆಯ ದಿನವೇ ದೇಶದ ಮಹಿಳೆಯರಿಗೆ ಕೇಂದ್ರದ ಬಿಜೆಪಿ ಸರ್ಕಾರ ಅಡುಗೆ ಅನಿಲದ ಬೆಲೆ ಏರಿಕೆ ಎಂಬ ಉಡುಗೊರೆ ನೀಡಿದೆ. ಕೇಂದ್ರದ ಈ ಕ್ರಮ ಅತ್ಯಂತ ದುಃಖಕರ ಹಾಗೂ ಖಂಡನೀಯವಾಗಿದೆ ಎಂದು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವೆ ಲಕ್ಷ್ಮೀ ಹೆಬ್ಬಾಳಕರ್ ಕಿಡಿಕಾರಿದ್ದಾರೆ.

ಗೃಹ ಬಳಕೆಯ ಸಿಲಿಂಡರ್ ಬೆಲೆಯಲ್ಲಿ ಏಕಾಏಕಿ 60 ರೂ. ಹೆಚ್ಚಳ ಮಾಡಲಾಗಿದ್ದು, ವಾಣಿಜ್ಯ ಬಳಕೆಯ ಸಿಲಿಂಡರ್ ಬೆಲೆಯಲ್ಲಿ 115 ರೂ. ಏರಿಕೆ ಮಾಡಲಾಗಿದೆ. ಕಳೆದ 11 ತಿಂಗಳಲ್ಲಿ ಗೃಹ ಬಳಕೆಯ ಸಿಲಿಂಡರ್ ಬೆಲೆ ಒಟ್ಟು 110 ರೂ. ಹೆಚ್ಚಳ ಮಾಡಿರುವುದು ಮಧ್ಯಮ ವರ್ಗ ಮತ್ತು ಬಡ ಕುಟುಂಬಗಳ ಮೇಲೆ ಭಾರೀ ಹೊರೆ ಹಾಕಿದಂತಾಗಿದೆ ಎಂದು ಮಾಧ್ಯಮ ಹೇಳಿಕೆಯಲ್ಲಿ ತಿಳಿಸಿದ್ದಾರೆ. ಅಡುಗೆ ಅನಿಲವು ಪ್ರತಿಯೊಂದು ಮನೆಯ ಅಗತ್ಯ ವಸ್ತುವಾಗಿದೆ. ಮನೆಗಳನ್ನು ನಡೆಸುವ ಮಹಿಳೆಯರ ಬದುಕಿನೊಂದಿಗೆ ನೇರವಾಗಿ ಸಂಬಂಧ ಹೊಂದಿರುವ ಈ ಅಗತ್ಯ ವಸ್ತುವಿನ ಬೆಲೆ ಹೆಚ್ಚಿಸುವುದು ಮಹಿಳೆಯರ ಮೇಲೆ ಮತ್ತಷ್ಟು ಆರ್ಥಿಕ ಒತ್ತಡ ತರುವ ಕ್ರಮವಾಗಿದೆ. ಮಹಿಳಾ ಸಬಲೀಕರಣದ ಬಗ್ಗೆ ಮಾತಾಡುವ ಕೇಂದ್ರ ಸರ್ಕಾರ ಮಹಿಳಾ ದಿನದಂದೇ ಇಂತಹ ನಿರ್ಧಾರ ಕೈಗೊಂಡಿರುವುದು ಅತ್ಯಂತ ವಿಷಾದಕರ ಎಂದು ಹೆಬ್ಬಾಳಕರ್ ಆಕ್ರೋಶ ವ್ಯಕ್ತಪಡಿಸಿದ್ದಾರೆ. ರಾಜ್ಯ ಸರ್ಕಾರದ ವಿರುದ್ಧ ಪ್ರತಿಭಟನೆ ಮಾಡುವ ಬಿಜೆಪಿ ನಾಯಕರು ಈಗ ಏನು ಹೇಳುತ್ತಾರೆ? ಕೇಂದ್ರ ಸರ್ಕಾರದ ಈ ಬೆಲೆ ಏರಿಕೆಯನ್ನು ಅವರು ಸಮರ್ಥಿಸಿಕೊಳ್ಳುತ್ತಾರೆಯೇ? ಅಥವಾ ಬಡವರ ಮತ್ತು ಮಹಿಳೆಯರ ಪರವಾಗಿ ಧ್ವನಿ ಎತ್ತುತ್ತಾರೆಯೇ? ಎಂದು ಪ್ರಶ್ನಿಸಿದ್ದಾರೆ. ಕೇಂದ್ರ ಸರ್ಕಾರವು ತಕ್ಷಣವೇ ಈ ಬೆಲೆ ಏರಿಕೆ ನಿರ್ಧಾರವನ್ನು ಹಿಂಪಡೆದು ಜನರಿಗೆ, ವಿಶೇಷವಾಗಿ ಮಹಿಳೆಯರಿಗೆ ಉಂಟಾಗಿರುವ ಆರ್ಥಿಕ ಭಾರವನ್ನು ಕಡಿಮೆ ಮಾಡಬೇಕು ಎಂದು ಸಚಿವರು ಆಗ್ರಹಿಸಿದ್ದಾರೆ.



ಕಿರುಸುದ್ದಿ

ಬಜೆಟ್‌ನಿಂದ ಮಕ್ಕಳ ಮೇಲೂ ಸಾಲ: ಶ್ರೀರಾಮುಲು

ಚಿತ್ರದುರ್ಗ: ಸಿದ್ದರಾಮಯ್ಯ ಅವರಿಂದ ಸಾಲದ ಮೂಟೆಯ ಬಜೆಟ್ ಮಂಡನೆ ಆಗಿದೆ. ಇದರಿಂದ ಹುಟ್ಟುವ ಮಕ್ಕಳ ಮೇಲೂ ಸಾಲ ಹೊರಿಸುವ ಕೆಲಸವಾಗಿದೆ ಎಂದು ಮಾಜಿ ಸಚಿವ ಬಿ.ಶ್ರೀರಾಮುಲು ವಾಗ್ದಾಳಿ ನಡೆಸಿದರು.



ನಗರದಲ್ಲಿ ಭಾನುವಾರ ಸುದ್ದಿಗಾರರ ಜೊತೆ ಮಾತನಾಡಿದ ಅವರು, ಸಿದ್ದರಾಮಯ್ಯ ಸರ್ಕಾರದ ಖಜಾನೆ ಖಾಲಿ ಆಗಿದೆ. ಐವತ್ತು ಸಾವಿರ ಹುದ್ದೆ ನೇಮಕಾತಿ ಕೇವಲ ಕುಂಟು ನೆಪವಾಗಿದೆ. ಸಿದ್ದರಾಮಯ್ಯ ಸಾಲದ ಬಜೆಟ್ ನೋಡಿದರೆ ಡಿ.ಕೆ. ಶಿವಕುಮಾರ್ ಸಿಎಂ ಆಗಲ್ಲ. ರಾಜ್ಯ ದಿವಾಳಿಯಾದ ವೇಳೆ ಡಿ.ಕೆ.ಶಿವಕುಮಾರ್ ಸಿಎಂ ಆಗಿ ಏನು ಮಾಡುತ್ತಾರೆ. ಹೀಗಾಗಿ ಡಿಸಿಎಂ ಡಿ.ಕೆ.ಶಿವಕುಮಾರ್ ಸಿಎಂ ಸ್ಥಾನದಿಂದ ಹಿಂದೆ ಸರಿಯುತ್ತಾರೆ ಎಂದು ಭವಿಷ್ಯ ನುಡಿದರು.

ಬಸವರಾಜ ಬೊಮ್ಮಾಯಿರವರ ಆಡಳಿತದಲ್ಲಿ ಎಸ್‌ಸಿ., ಎಸ್‌ಟಿ ಮೀಸಲಾತಿ ಹೆಚ್ಚಳ ಮಾಡಿದ್ದರು. ಒಟ್ಟು ಶೇ.50 ರಷ್ಟಿದ್ದ ಮೀಸಲಾತಿಯನ್ನು ಶೇ.56ಕ್ಕೆ ಹೆಚ್ಚಿಸಲಾಯಿತು. ಕಾಂಗ್ರೆಸ್ ಆಡಳಿತದಲ್ಲಿ ಶೇ.50 ಮೀಸಲಾತಿ ನೀಡುವ ಕೆಲಸ ಆಗಿದೆ. ಜನಸಂಖ್ಯೆ ಆಧಾರದ ಮೀಸಲಾತಿ ಪಡೆಯುವುದು ನಮ್ಮ ಹಕ್ಕು. ನಾಗಮೋಹನದಾಸ್ ವರದಿ ಜಾರಿಗೆ ಕ್ರಮ ಕೈಗೊಂಡಿದ್ದೆವು. ಕಾಂಗ್ರೆಸ್ ಸರ್ಕಾರ ಮೀಸಲಾತಿ ಕಸಿಯುವ ದಲಿತ ವಿರೋಧದ ವಿರುದ್ಧ ಉಗ್ರ ಹೋರಾಟ ಮಾಡುವ ನಿಟ್ಟಿನಲ್ಲಿ ತೀರ್ಮಾನಿಸಲಾಗಿದೆ ಎಂದರು.

2 ಅವಧಿಯ ಪರೀಕ್ಷೆ ರದ್ದು ಆದೇಶ ಎತ್ತಿಹಿಡಿದ ಹೈ

ಬೆಂಗಳೂರು: ಕೇಂದ್ರೀಯ ಪ್ರೌಢ ಶಿಕ್ಷಣ ಮಂಡಳಿ (ಸಿಬಿಎಸ್‌ಇ) ಮಾರ್ಗಸೂಚಿಗಳನ್ನು ಉಲ್ಲಂಘಿಸಿ ಪರೀಕ್ಷಾ ಕೇಂದ್ರಕ್ಕೆ ಮೊಬೈಲ್ ಫೋನ್ ತಂದಿದ್ದ ಆರೋಪದಲ್ಲಿ 12ನೇ ತರಗತಿ ವಿದ್ಯಾರ್ಥಿಯೊಬ್ಬರಿಗೆ ಎರಡು ಅವಧಿಯ ಪರೀಕ್ಷೆಗಳನ್ನು ರದ್ದುಗೊಳಿಸಿದ್ದ ಮಂಡಳಿಯ ಕ್ರಮವನ್ನು ಹೈಕೋರ್ಟ್ ಎತ್ತಿ ಹಿಡಿದಿದೆ. ಮೊಬೈಲ್ ಫೋನ್ ಸಂವಹನಕ್ಕಾಗಿ ಬಳಸುವ ಎಲೆಕ್ಟ್ರಾನಿಕ್ ಸಾಧನವಾಗಿದೆ. ಪರೀಕ್ಷಾ ಸಮಯದಲ್ಲಿ ಅಭ್ಯರ್ಥಿಯ ಬಳಿ ಫೋನ್ ಇದ್ದಲ್ಲಿ ಪ್ರಶ್ನೆ ಪತ್ರಿಕೆ ಸೋರಿಕೆ ಮತ್ತು ಪರೀಕ್ಷೆಗಳನ್ನು ಹಾಳು ಮಾಡುವ ಅಪಾಯವಿರಲಿದೆ ಎಂದು ತಿಳಿಸಿದೆ. ವಿದ್ಯಾರ್ಥಿಯ ಪರೀಕ್ಷೆಗಳನ್ನು ರದ್ದುಪಡಿಸಿದ್ದ ಕ್ರಮವನ್ನು ವಜಾಗೊಳಿಸಿದ್ದ ಏಕಸದಸ್ಯ ಪೀಠದ ಆದೇಶ ಪ್ರಶ್ನಿಸಿ, ಸಿಬಿಎಸ್‌ಇ ಸಲ್ಲಿಸಿದ್ದ ಮೇಲ್ಮನವಿ ಅರ್ಜಿ ವಿಚಾರಣೆ ನಡೆಸಿದ್ದ ಮುಖ್ಯ ನ್ಯಾಯಮೂರ್ತಿ ವಿಭು ಬಖ್ರು ಮತ್ತು ನ್ಯಾ.ಸಿ.ಎಂ.ಪೂಣಚ್ಚ ಅವರಿದ್ದ ಪೀಠ ಈ ಆದೇಶ ನೀಡಿದೆ. ಸಿಬಿಎಸ್‌ಇ ಹೊರಡಿಸಿರುವ ಪರಿಷ್ಕೃತ ಮಾರ್ಗಸೂಚಿಯಲ್ಲಿ ಮೊಬೈಲ್ ಫೋನ್‌ಅನ್ನು ಪರೀಕ್ಷಾ ಕೇಂದ್ರಕ್ಕೆ ಕೊಂಡೊಯ್ಯುವವರ ವಿರುದ್ಧ ಕಠಿಣ ಶಿಕ್ಷೆ ವಿಧಿಸಬಹುದಾಗಿ ತಿಳಿಸಲಾಗಿದೆ ಎಂದು ಪೀಠ ಹೇಳಿದೆ. ಪರೀಕ್ಷೆ ವೇಳೆ ಮೊಬೈಲ್ ಫೋನ್ ಬಳಕೆಯನ್ನು ನಿಷೇಧಿಸಿರುವ ಕಟ್ಟುನಿಟ್ಟಿನ ಮಾರ್ಗಸೂಚಿಗಳನ್ನು ಮಾರ್ಪಡಿಸಲು ಪರೀಕ್ಷಾ ಸಮಿತಿ ನೀಡಿದ್ದ ಶಿಫಾರಸನ್ನು 2024ರ ಜೂನ್24ರಂದು ನಡೆಸಿದ್ದ 139ನೇ ಸಭೆಯಲ್ಲಿ ಸಿಬಿಎಸ್‌ಇ ಅನುಮೋದಿಸಿದೆ. ಈ ಹಿಂದೆ ಇದ್ದಂತಹ ಮಾರ್ಗಸೂಚಿಗಳ ಪ್ರಕಾರ ಮೊಬೈಲ್ ಫೋನ್ ತರುವುದು ಮತ್ತು ನಕಲು ಮಾಡುವವರನ್ನು ಸೌಮ್ಯ ದೃಷ್ಟಿಕೋನದಿಂದ ನೋಡುವ ವರ್ಗ 1ರಲ್ಲಿ ಪರಿಗಣಿಸಲಾಗಿತ್ತು. ಆದರೆ, ತಿದ್ದುಪಡಿ ಮಾರ್ಗಸೂಚಿಗಳ ಪ್ರಕಾರ ಈ ಆರೋಪವನ್ನು ವರ್ಗ 3ಯಲ್ಲಿ ಸೇರಿಸಲಾಗಿದೆ. ಕಠಿಣ ಶಿಕ್ಷೆ ವಿಧಿಸಬಹುದಾಗಿದೆ. ಆದ್ದರಿಂದ ಸಿಬಿಎಸ್‌ಇಯ ಈ ಪ್ರಕ್ರಿಯೆಯಲ್ಲಿ ನ್ಯಾಯಪೀಠ ಮಧ್ಯಪ್ರವೇಶ ಮಾಡುವ ಅಗತ್ಯವಿಲ್ಲ ಎಂದರು.

ಕೇಂದ್ರದ ವಿರುದ್ಧ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ವಾಗ್ದಾಳಿ

ಟ್ರಂಪ್‌ಗಾಗಿ ದೇಶ ಗಿರವಿ

ಕಲಬುರಗಿ: ಪ್ರಧಾನಿ ನರೇಂದ್ರ ಮೋದಿ ವಿದೇಶಾಂಗ ನೀತಿಯಿಂದಾಗಿ ದೇಶಕ್ಕೆ ಅಂತಾರಾಷ್ಟ್ರೀಯ ಮಟ್ಟದಲ್ಲಿ ಕೆಟ್ಟ ಹೆಸರು ತರುತ್ತಿದ್ದಾರೆ ಎಂದು ರಾಜ್ಯಸಭೆ ವಿರೋಧ ಪಕ್ಷದ ನಾಯಕ ಹಾಗೂ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಟೀಕಿಸಿದರು.

ಜಿಲ್ಲೆಯ ಚಿತ್ತಾಪುರ ಪಟ್ಟಣದಲ್ಲಿ ರೂ.1069ಕೋಟಿ ವೆಚ್ಚದ ಕಾಮಗಾರಿಗಳು ಅಡಿಗಲ್ಲು ಹಾಗೂ ಉದ್ಘಾಟನೆ ನೆರವೇರಿಸಿ ಅವರು ಮಾತನಾಡಿ,ಟ್ರಂಪ್ ಒಬ್ಬ ಡಿಕ್ಟೇಟರ್, ಮೋದಿ ಅವರು ಗುಲಾಮರಂತೆ ನಡೆದುಕೊಳ್ಳುತ್ತಿದ್ದಾರೆ. ರಷ್ಯಾದಿಂದ ಈಗ ಒಂದು ತಿಂಗಳ ಮಾತ್ರ ತೈಲ ಖರೀದಿಗೆ ಅಮೆರಿಕ ಅನುಮತಿ ನೀಡಿದೆ. ಅಮೆರಿಕದವರು ಹೇಳಿದಂತೆ ಮೋದಿ ಕೇಳುತ್ತಿದ್ದಾರೆ. ಟ್ರಂಪ್ ಜೊತೆ ಸ್ನೇಹ ಮಾಡಿಕೊಂಡು ನಮ್ಮ ದೇಶವನ್ನು ಗಿರಿವಿ ಇಟ್ಟಿದ್ದಾರೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಭಾರತ ದೇಶದ 65% ರೈತರು ಕೃಷಿ ಅವಲಂಬಿತ ರಾಗಿದ್ದರೆ ಅಮೆರಿಕಾದಲ್ಲಿ 3% ಅವಲಂಬಿತರಾಗಿದ್ದಾರೆ. ನಮ್ಮ ದೇಶದ ಉತ್ಪನ್ನಗಳಿಗೆ ಅಮೆರಿಕಾದಲ್ಲಿ ಟ್ಯಾಕ್ಸ್ ಇಲ್ಲ. ಆದರೆ, ಅಮೆರಿಕಾದ ಉತ್ಪನ್ನಗಳ ಮೇಲೆ ಮನಬಂದಂತೆ ಟ್ಯಾಕ್ಸ್ ಹಾಕಲಾಗುತ್ತಿದೆ. ಟ್ರಂಪ್ ನನ್ನ ಸ್ನೇಹಿತ ಎನ್ನುತ್ತಾರೆ. ಆದರೆ, ರಷ್ಯಾದಿಂದ ತೈಲ ಖರೀದಿ ಮಾಡದರೆ ನಿಮ್ಮ ಮೇಲೆ ಟ್ಯಾಕ್ಸ್ ಹಾಕುತ್ತೇನೆ ಟ್ರಂಪ್ ಹೇಳುತ್ತಾರೆ. ಟ್ರಂಪ್ ಜೊತೆ ದಿನಾಲೂ ಮಾತನಾಡುತ್ತಿರುವುದಾಗಿ ಮೋದಿ ಹೇಳುತ್ತಾರೆ. ಟ್ಯಾಕ್ಸ್ ಹಾಕುವ ಬಗ್ಗೆನೆ ಮಾತನಾಡುತ್ತಾರ? ಎಪ್ಟಿನ್ ಫೈಲ್‌ನಲ್ಲಿ ಯಾರು ಯಾರು ಎಲ್ಲಿ ಹೋಗಿದ್ದರು ಎನ್ನುವ ಮಾಹಿತಿ ಇದೆ ಎನ್ನಲಾಗುತ್ತಿದೆ. ಅದನ್ನು ಇಟ್ಟುಕೊಂಡೆ ಟ್ರಂಪ್ ಮೋದಿಗೆ ಹೆದರಿಸುತ್ತಿದ್ದಾರೆ ಎಂದರು.



ಡಿಸಿಎಂ ಡಿ.ಕೆ.ಶಿವಕುಮಾರ ಮಾತನಾಡಿ, ಕಳೆದ ಎರಡು ವರ್ಷಗಳಲ್ಲಿ ಸುಮಾರು 2 ಸಾವಿರ ಕೋಟಿ ರೂಪಾಯಿಗೂ ಹೆಚ್ಚು ಹಣ ಕಲಬುರಗಿ ಜಿಲ್ಲೆಗೆ ನೀಡಲಾಗಿದೆ. ಸುಮಾರು 2000 ಮನೆಗಳನ್ನು ಕೊಳಚೆ ನಿರ್ಮೂಲನಾ ಮಂಡಳಿಯಿಂದ ಹಂಚಿಕೆ ಮಾಡಲಾಗಿದೆ. 365 ಕೋಟಿ ರೂ.ವೆಚ್ಚದಲ್ಲಿ ಬೆಣ್ಣೆತೊರ ಜಲಾಶಯಕ್ಕೆ ಕಾಗಿಣಾ ಮತ್ತು ಭೀಮಾ ನದಿ ಸಂಗಮದಿಂದ ನೀರು ತುಂಬಿಸಲಾಗುತ್ತಿದೆ. ಐದು ಗ್ಯಾರಂಟಿಗಳ ಜೊತೆಗೆ ಭೂ ಗ್ಯಾರಂಟಿ ನೀಡಿ ಬಡವರ ಮನೆ ಬೆಳಕಾಗಿದ್ದೇವೆ ಎಂದರು.

ಶಿಕ್ಷಣ ಇಲಾಖೆ ಅಡಿಯಲ್ಲಿ ರಾಜ್ಯದಲ್ಲಿ 2000 ಕೆಪಿಎಸ್ ಶಾಲೆಗಳನ್ನು ಸ್ಥಾಪಿಸಲು ತೀರ್ಮಾನ ಮಾಡಿದ್ದೇವೆ. ಕಲ್ಯಾಣ ಕರ್ನಾಟಕ ಭಾಗದಲ್ಲಿ 330 ಶಾಲೆಗಳನ್ನು ಸ್ಥಾಪಿಸಲಾಗುತ್ತದೆ. ಜೊತೆಗೆ 2.50 ಲಕ್ಷ ಖಾಲಿ ಹುದ್ದೆಗಳನ್ನು ಹಂತ ಹಂತವಾಗಿ ತುಂಬಲಾಗುವುದು. ಸದ್ಯ 56,000ಕ್ಕೂ ಅಧಿಕ ಖಾಲಿ ಹುದ್ದೆ ತುಂಬಲು ಈಗಾಗಲೇ ಕ್ರಮವಹಿಸಲಾಗಿದೆ ಎಂದರು.

ವೈದ್ಯಕೀಯ ಶಿಕ್ಷಣ ಸಚಿವ ಸಚಿವ ಡಾ.ಶರಣಪ್ರಕಾಶ್ ಪಾಟೀಲ್, ಸಚಿವ ಪ್ರಿಯಾಂಕ್ ಖರ್ಗೆ, ಶರಣಬಸಪ್ಪ ದರ್ಶನಾಪುರ, ಅಂಬಿಗರ ಚೌಡಯ್ಯ ಅಭಿವೃದ್ಧಿ ನಿಗಮ ಅಧ್ಯಕ್ಷ ಬಾಬುರಾವ್ ಚಿಂಚನಸೂರ್, ಶಾಸಕರಾದ ಚನ್ನಾರೆಡ್ಡಿ, ಎಂ.ವೈ. ಪಾಟೀಲ, ಅಲ್ಲಮ್ಮಪ್ರಭು ಪಾಟೀಲ, ವಿಧಾನ ಪರಿಷತ್ ಸದಸ್ಯರಾದ ಚಂದ್ರಶೇಖರ ಪಾಟೀಲ, ಜಗದೇವ ಗುತ್ತೇದಾರ, ತಿಪ್ಪಣ್ಣಪ್ಪ ಕಮಕನೂರ ಮತ್ತಿತರರ ಮುಖಂಡರು ಉಪಸ್ಥಿತರಿದ್ದರು.

ನಾನ್ ಅಲೈನ್‌ಮೆಂಟ್ ಒಪ್ಪಂದ

ಮಧ್ಯಪ್ರಾಚ್ಯನಲ್ಲಿ ನಡೆಯುತ್ತಿರುವ ಯುದ್ಧದ ಬಗ್ಗೆ ಪ್ರಸ್ತಾಪಿಸಿದ ಮಲ್ಲಿಕಾರ್ಜುನ ಖರ್ಗೆ, ಜವಾಹರ್ ಲಾಲ್ ನೆಹರು ಪ್ರಧಾನಿಯಾಗಿದ್ದಾಗ ನಾನ್ ಅಲೈನ್‌ಮೆಂಟ್ ಒಪ್ಪಂದ ಮಾಡಿಕೊಂಡಿದ್ದರಿಂದ ಅದು ವಿಶ್ವಶಾಂತಿಗೆ ಕಾರಣವಾಗಿತ್ತು. ಆದರೆ, ಮೋದಿ ಈಗ ಮಾಡುತ್ತಿರುವುದೇನು? ಮೋದಿ ಇಸ್ರೇಲ್‌ಗೆ ಹೋಗಿ ಬಂದ ನಂತರ ಅದು ಇರಾನ್ ಮೇಲೆ ಬಾಂಬ್ ಹಾಕಿತು. ದೇಶದ ಮುಖ್ಯಸ್ಥ ಖಮೇನಿಯನ್ನು ಅಮೆರಿಕದವರು ಹತ್ಯೆ ಮಾಡಿದರು. ಒಂದು ದೇಶದ ಮುಖ್ಯಸ್ಥನನ್ನು ಹತ್ಯೆ ಮಾಡಿದರೆ ಆ ದೇಶ ಶಾಂತಿಯಿಂದ ಇರುತ್ತದಯೇ? ಎಂದು ಪ್ರಶ್ನಿಸಿದರು.


ಕ್ವಾಂಟಮ್ ಅನುಷ್ಠಾನಕ್ಕೆ ₹10 ಕೋಟಿ ಮೀಸಲು

ಬೆಂಗಳೂರು: ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಈ ಬಾರಿಯ ಆಯವ್ಯಯದಲ್ಲಿ ಕ್ವಾಂಟಮ್ ರೋಡ್ ಮ್ಯಾಪ್‌ನ ಅನುಷ್ಠಾನಕ್ಕೆ 10 ಕೋಟಿ ರೂ.ಗಳನ್ನು ಘೋಷಿಸಿರುವುದು ರಾಜ್ಯ ವನ್ನು ಕ್ವಾಂಟಮ್ ಕ್ಷೇತ್ರದ ಕೇಂದ್ರಬಿಂದುವನ್ನಾಗಿಸುವ ನಿಟ್ಟಿನಲ್ಲಿ ಪ್ರಮುಖ ಹೆಜ್ಜೆಯಾಗಿದೆ ಎಂದು ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವ ಎನ್.ಎಸ್. ಭೋಸರಾಜು ತಿಳಿಸಿದ್ದಾರೆ.

ಕ್ವಾಂಟಮ್ ವಲಯದಲ್ಲಿ ಕರ್ನಾಟಕವು ಜಾಗತಿಕ ಶಕ್ತಿಯಾಗಿ ಹೊರಹೊಮ್ಮಲು ಸಜ್ಜಾಗಿದೆ. ಬೆಂಗಳೂರು ಕ್ವಾಂಟಮ್ ಶೃಂಗಸಭೆಯಲ್ಲಿ ಕ್ವಾಂಟಮ್ ತಂತ್ರಜ್ಞಾನ ಕ್ಷೇತ್ರದ ಅಭಿವೃದ್ಧಿಗೆ 1,000 ಕೋಟಿ ರೂ. ಹೂಡಿಕೆ ಮಾಡುವುದಾಗಿ ಮುಖ್ಯಮಂತ್ರಿಗಳು ಭರವಸೆ ನೀಡಿದ್ದರು. ಈ ಕನಸನ್ನು ನನಸು ಮಾಡುವ ನಿಟ್ಟಿನಲ್ಲಿ, ಕರ್ನಾಟಕ ಕ್ವಾಂಟಮ್ ರೋಡ್‌ಮ್ಯಾಪ್‌ನ ಮೊದಲ ಹಂತದ ಅನುಷ್ಠಾನಕ್ಕೆ ಸರ್ಕಾರವು 10 ಕೋಟಿ ರೂ. ಅನುದಾನ ಒದಗಿಸಿದೆ. ಮುಂದಿನ ಐದು ವರ್ಷಗಳಲ್ಲಿ ಈ ಭವಿಷ್ಯದ ವಲಯವನ್ನು ಮುನ್ನಡೆಸಲು ಅಗತ್ಯವಿರುವ ಅತ್ಯುತ್ತಮ ಮಾನವ ಸಂಪನ್ಮೂಲವನ್ನು ಅಭಿವೃದ್ಧಿಪಡಿಸುವತ್ತ ಈ ರೋಡ್ ಮ್ಯಾಪ್ ಗಮನ ಹರಿಸಲಿದೆ ಎಂದು ಹೇಳಿಕೆಯಲ್ಲಿ ತಿಳಿಸಿದ್ದಾರೆ. ಬೆಂಗಳೂರು ನಗರವು ಈಗಾಗಲೇ ಕ್ವಾಂಟಮ್ ಕಂಪ್ಯೂಟಿಂಗ್ ಕ್ಷೇತ್ರದಲ್ಲಿ ಶೈಕ್ಷಣಿಕ ಸಂಸ್ಥೆಗಳು ಮತ್ತು ನವೋದ್ಯಮಗಳ ಬಲಿಷ್ಠ ಪರಿಸರ ವ್ಯವಸ್ಥೆಯನ್ನು ಹೊಂದಿದೆ. ಅಗತ್ಯ ಮೂಲಸೌಕರ್ಯ ಮತ್ತು ನೀತಿ ರೂಪಿಸುವ ಮೂಲಕ 2035ರ ವೇಳೆಗೆ ಶೇ. 20ರಷ್ಟು ಜಾಗತಿಕ ಮಾರುಕಟ್ಟೆ ಪಾಲನ್ನು ಸಾಧಿಸುವ ರಾಜ್ಯ ಸರ್ಕಾರದ ದೃಷ್ಟಿಕೋನಕ್ಕೆ ಈ ಬದ್ಧತೆಯು ಮತ್ತಷ್ಟು ಬಲ ತುಂಬಲಿದೆ ಎಂದು ಅಭಿಪ್ರಾಯಪಟ್ಟಿದ್ದಾರೆ.

ಕ್ವಾಂಟಮ್ ಸಿಟಿ ನಿರ್ಮಾಣಕ್ಕಾಗಿ ಹೆಸರಘಟ್ಟದಲ್ಲಿ ಈಗಾಗಲೇ ಭೂಮಿಯನ್ನು ಸರ್ಕಾರ ಮಂಜೂರು ಮಾಡಿದೆ. ಐಐಎಸ್‌ಸಿಯಂತಹ ವಿಶ್ವದರ್ಜೆಯ ಸಂಸ್ಥೆಗಳು, ಸುಧಾರಿತ ಕ್ವಾಂಟಮ್ ಕಂಪ್ಯೂಟರ್‌ಗಳ ಲಭ್ಯತೆ ಮತ್ತು ನಮ್ಮ ರಾಜ್ಯದ ತಾಂತ್ರಿಕ ಮಾನವ ಸಂಪನ್ಮೂಲದಿಂದಾಗಿ, ಕರ್ನಾಟಕವು ಕ್ವಾಂಟಮ್ ತಂತ್ರಜ್ಞಾನದಲ್ಲಿ ಅಭೂತಪೂರ್ವ ಪ್ರಗತಿಗೆ ಸಾಕ್ಷಿಯಾಗಲಿದೆ. ನಾವು ಜಗತ್ತನ್ನೇ ಮುನ್ನಡೆಸುವ ಶಕ್ತಿಯನ್ನು ಅಭಿವೃದ್ಧಿಪಡಿಸುತ್ತಿದ್ದೇವೆ ಎಂದರು.

» ತಂತ್ರಜ್ಞಾನ ಕ್ಷೇತ್ರದ ಅಭಿವೃದ್ಧಿಗೆ ಒತ್ತು: ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವ ಎನ್.ಎಸ್. ಭೋಸರಾಜು



ಕಾಂಗ್ರೆಸ್ ಉಸ್ತುವಾರಿ ಸಮಿತಿ ರಚನೆ

ಬೆಂಗಳೂರು: ಶಾಸಕರಾದ ಶಾಮನೂರು ಶಿವಶಂಕರಪ್ಪ ಮತ್ತು ಎಚ್.ವೈ ಮೇಟಿ ಅವರ ನಿಧನದಿಂದ ತೆರವಾಗಿರುವ ದಾವಣಗೆರೆ ಹಾಗೂ ಬಾಗಲಕೋಟೆ ವಿಧಾನಸಭೆ ಉಪಚುನಾವಣೆಗೆ ಕಾಂಗ್ರೆಸ್ ತಯಾರಿ ಆರಂಭಿಸಿದ್ದು, ಈ 2 ಕ್ಷೇತ್ರಗಳಿಗೆ ಪ್ರತ್ಯೇಕ ಉಸ್ತುವಾರಿ ಸಮಿತಿಯನ್ನು ರಚಿಸಿದೆ.

ದಾವಣಗೆರೆ ಹಾಗೂ ಬಾಗಲಕೋಟೆ ಎರಡು ಕ್ಷೇತ್ರ ಕಾಂಗ್ರೆಸ್‌ನ ಕ್ಷೇತ್ರಗಳಾಗಿರು ವುದರಿಂದ ಉಪಚುನಾವಣೆಯಲ್ಲೂ ಗೆಲ್ಲವು ಮೂಲಕ ಕ್ಷೇತ್ರವನ್ನು ಉಳಿಸಿಕೊಳ್ಳುವ ನಿಟ್ಟಿನಲ್ಲಿ ಕಾಂಗ್ರೆಸ್ ತಂತ್ರ ರೂಪಿಸಿದ್ದು, ಸಮಿತಿಯಲ್ಲಿ 18 ಸಚಿವರು, ಮಾಜಿ ಸಚಿವರು ಸೇರಿದಂತೆ ಹಾಲಿ ಮತ್ತು ಮಾಜಿ ವಿಧಾನ ಪರಿಷತ್ ಸದಸ್ಯರಿದ್ದಾರೆ. ಸಮಿತಿಯು ಈ ಕ್ಷೇತ್ರದಲ್ಲಿ ನಮ್ಮ ಪಕ್ಷದ ಸಂಭಾವ್ಯ ಅಭ್ಯರ್ಥಿಯನ್ನು ಕೆಪಿಸಿಸಿಗೆ ಶಿಫಾರಸ್ಸು ಮಾಡಲು ಹಾಗೂ ಉಪಚುನಾವಣೆಯಲ್ಲಿ ಪಕ್ಷದ ಅಭ್ಯರ್ಥಿಯ ಗೆಲುವಿಗೆ ಅಗತ್ಯವಾದ ಕ್ರಮಗಳನ್ನು ಕೈಗೊಳ್ಳುವ ಪ್ರಕ್ರಿಯೆಯಲ್ಲಿ ಸ್ಥಳೀಯ ನಾಯಕರು, ಪಕ್ಷದ ಪದಾಧಿಕಾರಿಗಳು ಹಾಗೂ ಇತರರೊಂದಿಗೆ ಸಮಾಲೋಚನೆ ನಡೆಸಿ ತಕ್ಷಣ ಕೆಪಿಸಿಸಿಗೆ ವರದಿ ಸಲ್ಲಿಸಲು ಕಾಂಗ್ರೆಸ್ ರಾಜ್ಯಾಧ್ಯಕ್ಷ ಡಿ.ಕೆ. ಶಿವಕುಮಾರ್ ಆದೇಶಿಸಿದ್ದಾರೆ.

ಅಪಘಾತ: ನ್ಯಾಯಾಧೀಶರಿಗೆ ಗಾಯ

ದಾಬಸ್ ಪೇಟೆ: ಕಲಬುರ್ಗಿ ಹೈಕೋರ್ಟ್ ಪೀಠದ ನ್ಯಾಯಮೂರ್ತಿ ಪ್ರಯಾಣಿಸುತ್ತಿದ್ದ ಕಾರು ಅಪಘಾತ ಸಂಭವಿಸಿ, ನ್ಯಾಯಾಧೀಶರು, ಬೆಂಗಾವಲು ಪೊಲೀಸ್ ಸಿಬ್ಬಂದಿಗೆ ಸಣ್ಣಪುಟ್ಟ ಗಾಯವಾಗಿದ್ದು ಪ್ರಾಣಾಪಾಯದಿಂದ ಪಾರಾದ ಘಟನೆ ರಾಯರಪಾಳ್ಯ ಬಳಿ ನಡೆದಿದೆ.

ನ್ಯಾಯಮೂರ್ತಿ ಜಿ ಬಸವರಾಜು ಅವರು ಕಲಬುರ್ಗಿ ನಗರಕ್ಕೆ ಹೋಗುತ್ತಿದ್ದಾಗ ರಸ್ತೆ ಬದಿಯಲ್ಲಿರುವ ಸಿಮೆಂಟ್ ವಾಲ್‌ಗೆ ಕಾರು ಡಿಕ್ಕಿಯಾಗಿ ಉರುಳಿ ಬಿದ್ದಿದೆ. ಹಿಂಬಾಲಿಸುತ್ತಿದ್ದ ಪೊಲೀಸ್ ಬೆಂಗಾವಲು ಪಡೆ ವಾಹನ ನ್ಯಾಯಾಧೀಶರಿದ್ದ ಕಾರಿಗೆ ಡಿಕ್ಕಿ ಹೊಡೆದಿದೆ ಎನ್ನಲಾಗಿದೆ. ನ್ಯಾಯಾಧೀಶರು ಮತ್ತು ಕಾರಿನಲ್ಲಿದ್ದವರಿಗೆ ಸಣ್ಣಪುಟ್ಟ ಗಾಯವಾಗಿವೆ. ಸ್ಥಳೀಯ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದು ಬಳಿಕ ಕಲಬುರ್ಗಿಗೆ ತೆರಳಿದ್ದಾರೆ. ಎಸ್ಕಾರ್ಟ್ ಕಾರಿನ ಚಾಲಕನಿಗೆ ತೀವ್ರವಾಗಿ ಗಾಯಗೊಂಡಿದ್ದಾರೆ. ಇತರೆ ಪೊಲೀಸರಿಗೂ ಗಾಯವಾಗಿರುವುದರಿಂದ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ . ಸ್ಥಳಕ್ಕೆ ನೆಲಮಂಗಲ ಸಂಚಾರಿ ಪೊಲೀಸರು ಭೇಟಿ ನೀಡಿ ಸ್ಥಳ ಪರಿಶೀಲಿಸಿ ದೂರು ದಾಖಲಿಸಿಕೊಂಡಿದ್ದಾರೆಂದು ಸಂಚಾರಿ ವೃತ್ತ ನಿರೀಕ್ಷಕ ರವಿ ತಿಳಿಸಿದ್ದಾರೆ.

ಶೇ.33 ಮೀಸಲಾತಿ; ಆತ್ಮತೃಪ್ತಿ ಇದೆ: ದೇವೇಗೌಡ

ಬೆಂಗಳೂರು: ಸರ್ಕಾರದ ಎಲ್ಲ ಇಲಾಖೆಗಳಲ್ಲಿ ಶೇ.33 ರಷ್ಟು ಮಹಿಳಾ ಮೀಸಲಾತಿ ಕೊಟ್ಟಿದ್ದು ನಾವು. ಶೇ.33 ರಷ್ಟು ಮಹಿಳಾ ಮೀಸಲಾತಿ ಕೊಡಲು ತೀರ್ಮಾನ ಮಾಡಿದ್ದು ನಾವು. ಇವತ್ತು ಅದೆಲ್ಲವೂ ಜಾರಿಗೆ ಬರುತ್ತಿದೆ. ಈ ಬಗ್ಗೆ ನನಗೆ ಆತ್ಮತೃಪ್ತಿ ಇದೆ ಎಂದು ಮಾಜಿ ಪ್ರಧಾನಿ ಎಚ್.ಡಿ ದೇವೇಗೌಡ ಹೇಳಿದರು.

ನಗರದ ಡಾ. ಬಾಬು ಜಗಜೀವನ ರಾಮ್ ಭವನದಲ್ಲಿ ಜೆಡಿಎಸ್ ಮಹಿಳಾ ಘಟಕ ಹಮ್ಮಿಕೊಂಡಿದ್ದ ಮಹಿಳಾ ದಿನಾಚರಣೆ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಮಾತನಾಡಿದ ಅವರು, ಅಷ್ಟೊಂದು ಮಹಿಳೆಯರಿಗೆ ಟಿಕೆಟ್ ದೊರೆಯುತ್ತದೆ. ಇದಕ್ಕಾಗಿ ನಾನು ಶ್ರಮಿಸಿದೆ. ಮೋದಿ ಅವರು ಅದಕ್ಕೆ ಅಂತಿಮ ಸ್ವರೂಪ ಕೊಟ್ಟರು ಎಂದು ಮೆಚ್ಚುಗೆ ಸೂಚಿಸಿದರು. ಮುಂದಿನ ವಿಧಾನಸಭೆ, ಲೋಕಸಭೆಗೆ ಬಹುಶಃ ಮಹಿಳಾ ಮೀಸಲಾತಿ ಬರಬಹುದು. ಕ್ಷೇತ್ರ ಪುನರ್ ವಿಂಗಡನೆ ಸುಗಮವಾಗಿ ನಡೆದರೆ, ಶೇ.33 ರಷ್ಟು ಮೀಸಲಾತಿ ಬರುತ್ತದೆ. 75 ರಿಂದ 80 ಜನ ಮಹಿಳೆಯರು ವಿಧಾನಸಭೆಗೆ ಸ್ಪರ್ಧಿಸಬೇಕಾಗುತ್ತದೆ ಎಂದು ಹೇಳಿದರು.

ಜಿಬಿಎ ಮೀಸಲಾತಿ ಪಟ್ಟಿ ಅಂತಿಮವಾಗಿ ಪ್ರಕಟವಾಗಿದೆ. ಮುಂಬರುವ ಈ ಚುನಾವಣೆಯಲ್ಲಿ ಜೆಡಿಎಸ್ ಪಕ್ಷದಿಂದ ಹೆಚ್ಚು ಮಹಿಳೆಯರು ಸ್ಪರ್ಧೆ ಮಾಡಬೇಕು. ಜಿಬಿಎನಲ್ಲಿ 369 ವಾರ್ಡುಗಳಲ್ಲಿ ಜೆಡಿಎಸ್ ಗೆ ಎಷ್ಟು ವಾರ್ಡ್ ಗಳಲ್ಲಿ ಸ್ಪರ್ಧಿಸುವ ಶಕ್ತಿ ಇದೆ ಎಂಬುದನ್ನು ಗಮನಿಸಿ, ಬಳಿಕ ಮಹಿಯರಿಗೆ ಎಷ್ಟು ಜನರಿಗೆ ಅವಕಾಶ ನೀಡಬಹುದು ಎಂದು ತೀರ್ಮಾನ ಮಾಡಿ. ಅದಷ್ಟು ಹೆಚ್ಚು ಪ್ರಮಾಣದಲ್ಲಿ ಮಹಿಳೆಯರು ಸ್ಪರ್ಧೆ ಮಾಡಬೇಕು. ಆಗ ಮಾತ್ರ ಮಹಿಳಾ ಮೀಸಲುಗೆ ಅರ್ಥ ಬರುತ್ತದೆ ಎಂದು ಅವರು ಒತ್ತಿ ಹೇಳಿದರು.

ಕಾರ್ಯಕ್ರಮದಲ್ಲಿ ಮಾಜಿ ಶಾಸಕಿ ಅನಿತಾ ಕುಮಾರಸ್ವಾಮಿ, ಜೆಡಿಎಸ್ ಮಹಿಳಾ ಘಟಕದ ಅಧ್ಯಕ್ಷೆ ರಶ್ಮಿ ರಾಮೇಗೌಡ, ಪಕ್ಷದ ಕೋರ್ ಕಮಿಟಿ ಅಧ್ಯಕ್ಷ ಎಂ. ಕೃಷ್ಣಾರೆಡ್ಡಿ, ಜೆಡಿಎಸ್ ಜಿಬಿಎ ಅಧ್ಯಕ್ಷ ಎಚ್.ಎಂ ರಮೇಶ್ ಗೌಡ, ವಿಧಾನ ಪರಿಷತ್ ಸದಸ್ಯರಾದ ಟಿ.ಎ. ಶರವಣ, ಜವರಾಯಿ ಗೌಡ, ಮಾಜಿ ಸಚಿವ ವೆಂಕಟರಾವ್ ನಾಡಗೌಡ ಮುಂತಾದವರು ಹಾಜರಿದ್ದರು.



> ಶೇ.33 ರಷ್ಟು ಮಹಿಳಾ ಮೀಸಲಾತಿ ಜಾರಿಗೆ ಬಂದರೆ, ವಿಧಾನಸಭೆಯಲ್ಲಿ 75 ಜನ ಮಹಿಳೆಯರೇ ಶಾಸಕಿಯರು ಇರುತ್ತಾರೆ. ಎಲ್ಲ ಪಕ್ಷಗಳ ಮಹಿಳೆಯರು ಮನಸ್ಸು ಮಾಡಿದರೆ ಮಹಿಳಾ ಮುಖ್ಯಮಂತ್ರಿಯೇ ಆಗಬಹುದು. ಅಂಥ ಅವಕಾಶ ಮೀಸಲಾತಿಯಿಂದ ಸಾಧ್ಯವಾಗುತ್ತದೆ.
> ■ ಎಚ್.ಡಿ ಕುಮಾರಸ್ವಾಮಿ, ಕೇಂದ್ರ ಸಚಿವ

» ಮಹಿಳೆಯರಿಗೆ ಮೀಸಲಾತಿ ಜೆಡಿಎಸ್ ತೀರ್ಮಾನ

» ಜಿಬಿಎನಲ್ಲಿ 369 ವಾರ್ಡುಗಳಲ್ಲಿ ಜೆಡಿಎಸ್ ಸ್ಪರ್ಧೆ

ಎಸ್‌ಸಿ, ಎಸ್‌ಟಿ ಜನಪ್ರತಿನಿಧಿಗಳು ರಾಜೀನಾಮೆ ನೀಡಲಿ: ಗೋವಿಂದ ಕಾರಜೋಳ

ಸಂವಿಧಾನದ ಆಶಯ ಜಾರಿಗೆ ತರಲು ಕೈ ಹಿಂದೇಟು

ಚಿತ್ರದುರ್ಗ: ಕಾಂಗ್ರೆಸ್ ಪಕ್ಷದಲ್ಲಿರುವ ಎಸ್‌ಸಿ, ಎಸ್‌ಟಿ ಜನಪ್ರತಿನಿಧಿಗಳಿಗೆ ಸ್ವಾಭಿಮಾನ, ಮಾನ, ಮರ್ಯಾದೆ ಇದ್ದಲ್ಲಿ ರಾಜೀನಾಮೆ ಬಿಸಾಕಿ ಹೊರಬರಲಿ ಎಂದು ಸಂಸದ ಗೋವಿಂದ ಕಾರಜೋಳ ಹೇಳಿದರು.

ರಾಜ್ಯ ಸರ್ಕಾರದ ಮೀಸಲಾತಿ ಅನ್ಯಾಯದ ನೀತಿ ವಿರುದ್ಧ ಬೃಹತ್ ಜನಾಂದೋಲನ ಕುರಿತು ಚಿತ್ರದುರ್ಗದಲ್ಲಿ ಭಾನುವಾರ ಹಮ್ಮಿಕೊಂಡಿದ್ದ ರಾಜ್ಯ ಮಟ್ಟದ ಪೂರ್ವಭಾವಿ ಸಭೆ ಉದ್ಘಾಟಿಸಿ ಮಾತನಾಡಿದ ಅವರು, ಕಾಂಗ್ರೆಸ್ ಪಕ್ಷವು ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡದವರನ್ನು ಕೇವಲ ವೋಟ್‌ಬ್ಯಾಂಕ್ ಮಾಡಿಕೊಂಡಿದೆ.

ಮುಖ್ಯಮಂತ್ರಿ ಸಿದ್ದರಾಮಯ್ಯ, ಸಮಾಜ ಕಲ್ಯಾಣ ಸಚಿವ ಎಚ್.ಸಿ.ಮಹದೇವಪ್ಪ ಮಾತೆತ್ತಿದರೆ ಅಂಬೇಡ್ಕರ್, ಸಂವಿಧಾನ ಎಂದು ಹೇಳು ತ್ತಾರೆ. ಆದರೆ ಅವರು ನೀಡಿದ ಸಂವಿಧಾನದ ಆಶಯಗಳನ್ನು ಜಾರಿ ತರುವಲ್ಲಿ ಹಿಂದೇಟು ಹಾಕುತ್ತಾರೆ ಎಂದರು. ಕೊಳ್ಳೆಗಾಲದ ಮಾಜಿ ಸಚಿವ ಎನ್.ಮಹೇಶ್ ಮಾತನಾಡಿ, ಜನಸಂಖ್ಯೆಗೆ ಅನುಗುಣವಾಗಿ ಮೀಸಲಾತಿ ನೀಡಲು ಸಂವಿಧಾನದಲ್ಲಿ ಅವಕಾಶವಿದೆ. ಯಾವ ನ್ಯಾಯಾಲಯ ಈ ಕುರಿತು ಪ್ರಶ್ನೆ ಮಾಡಿಲ್ಲ. ಮೀಸಲಾತಿ ಶೇಕಡಾ 50 ಮೀರಿದ ಬಗ್ಗೆ ವಿವರಣೆ ಕೇಳಿದೆ. ಆದರೆ ರಾಜ್ಯ ಸರ್ಕಾರ ಸ್ಪಷ್ಟನೆ ನೀಡುವಲ್ಲಿ ವಿಫಲವಾಗಿದೆ ಎಂದು ದೂರಿದರು.



ಮಾಜಿ ಸಚಿವ ಶಿವನಗೌಡ ನಾಯಕ ಮಾತನಾಡಿ, ಮೀಸಲಾತಿ ಹೆಚ್ಚಳ ಮಾಡುವುದಾಗಿ ರಾಜ್ಯಪಾಲರ ಅಂಕಿತ ಪಡೆಯುತ್ತಾರೆ. ಬಳಿಕ ಅದೇ ದಿನ ಮೀಸಲಾತಿ ಹೆಚ್ಚಳ ಮಾಡದಿರಲು ತೀರ್ಮಾನ ಕೈಗೊಳ್ಳುತ್ತಾರೆ. ದಲಿತ ಸಚಿವರೇ ದಲಿತರಿಗೆ ವೈರಿಗಳಾಗಿದ್ದಾರೆ ಎಂದರು.

ಮಾಜಿ ಸಚಿವ ಬಿ.ಶ್ರೀರಾಮುಲು ಮಾತನಾಡಿ, ಕಾಂಗ್ರೆಸ್ ಸರ್ಕಾರ ಶೋಷಿತರಿಗೆ ದ್ರೋಹ ಮಾಡಿದೆ. ಬಿಜೆಪಿ ನೀಡಿದ ಮೀಸಲಾತಿ ಕಸಿಯುವ ಕೆಲಸ ಮಾಡುತ್ತಿದೆ ಎಂದರು. ಮಾಜಿ ಸಚಿವ ರಾಜುಗೌಡ ಮಾತನಾಡಿ, ಬಿಜೆಪಿ ಅಧಿಕಾರಕ್ಕೆ ಬಂದರೆ ಮೀಸಲಾತಿ ತೆಗೆಯುತ್ತಾರೆ ಎಂದು ಕಾಂಗ್ರೆಸ್‌ನವರು ಅಪ್ರಚಾರ ಮಾಡುತ್ತಿದ್ದರು. ಈಗ ಅವರೇ ಮೀಸಲಾತಿ ಕಡಿತ ಮಾಡುತ್ತಿದ್ದಾರೆ. ಈಗ ಕಾಂಗ್ರೆಸ್‌ನಲ್ಲಿರುವ 14 ಜನ ಎಸ್‌ಟಿ ಶಾಸಕರು ಒಬ್ಬರೂ ಚಕಾರವೆತ್ತಿಲ್ಲ ಎಂದು ಅಸಮಾಧಾನ ಹೊರ ಹಾಕಿದರು. ಮಾಜಿ ಸಂಸದ ಡಾ.ಉಮೇಶ್ ಜಾದವ್, ಮಾಜಿ ಕೇಂದ್ರ ಸಚಿವ ಎ.ನಾರಾಯಣ ಸ್ವಾಮಿ, ಶಾಸಕ ಡಾ.ಎಂ.ಚಂದ್ರಪ್ಪ ಇದ್ದರು.

ಶೋಷಿತರಿಗೆ ನಿರಂತರ ವಂಚನೆ

ಕಾಂಗ್ರೆಸ್ ಸರ್ಕಾರ ಶೋಷಿತರಿಗೆ ನಿರಂತರ ವಂಚನೆ ಮಾಡುತ್ತಿದೆ. ಇದನ್ನು ವಿರೋಧಿಸಿ ಮಾ.22 ರಂದು ಚಿತ್ರದುರ್ಗದಿಂದ ಬೆಂಗಳೂರಿಗೆ ಪಾದಯಾತ್ರೆ ಆರಂಭಿಸಲಾಗುವುದು. ಸರ್ಕಾರದ ಮೇಲೆ ಒತ್ತಡ ಹಾಕಲು ವಿಧಾನಸೌಧ ಮುತ್ತಿಗೆ ಹಾಕಲಾಗುವುದು ಎಂದು ಮಾಜಿ ಶಾಸಕ ಪಿ.ರಾಜೀವ್ ಎಚ್ಚರಿಸಿದರು.

ಬಜೆಟ್ ಕುರಿತು ಶಾಸಕರಿಗೆ ಶಿಬಿರ

ಬೆಂಗಳೂರು: ವಿಧಾನಸಭೆ ಸಚಿವಾಲಯದ ವತಿಯಿಂದ ಶಾಸಕರಿಗೆ ಬಜೆಟ್ ಅಧಿವೇಶನದಲ್ಲಿ ಸಕ್ರಿಯವಾಗಿ ಭಾಗವಹಿಸಲು ಅನುಕೂಲವಾಗುವಂತೆ, ಆಯವ್ಯಯ ರಾಜಸ್ವಗಳ ಸಂಗ್ರಹಣೆ, ಅನುದಾನಗಳ ವರ್ಗೀಕರಣ ಮತ್ತು ಹಂಚಿಕೆ ಹಾಗೂ ಆಯವ್ಯ ಅನುದಾನಗಳ ಬಳಕೆ ಮತ್ತು ನಿರ್ವಹಣೆ ಕುರಿತು ತರಬೇತಿ ಶಿಬಿರ ಹಮ್ಮಿಕೊಳ್ಳಾಗಿದೆ.

ಸೋಮವಾರ ಸಂಜೆ 5 ಗಂಟೆಗೆ ಖಾಸಗಿ ಹೋಟೆಲ್‌ನಲ್ಲಿ ಆಯೋಜಿಸಿರುವ ಶಿಬಿರದಲ್ಲಿ ಶಾಸಕರಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ತರಬೇತಿ ನೀಡಲಿದ್ದು, 17 ಬಜೆಟ್ ಮಂಡಿಸಿರುವ ಮುಖ್ಯಮಂತ್ರಿಗಳು ಹಣಕಾಸಿನ ಕುರಿತಾದ ಶಾಸಕರ ಪ್ರಶ್ನೆಗಳಿಗೆ ಉತ್ತರ ನೀಡಲಿದ್ದಾರೆ. ಈ ಶಿಬಿರದಲ್ಲಿ ಎಲ್ಲಾ ಪಕ್ಷದ ಶಾಸಕರಿಗೆ ಭಾಗವಹಿಸಸಲು ಆಹ್ವಾನ ನೀಡಲಾಗಿದೆ. ಕಳೆದ ವಿಧಾನಸಭೆ ಚುನಾವಣೆಯಲ್ಲಿ ಮೊದಲ ಬಾರಿಗೆ ಆಯ್ಕೆಯಾಗಿದ್ದ ಶಾಸಕರಿಗೆ ತಮ್ಮ ಕಾರ್ಯವೈಖರಿ, ಶಿಷ್ಟಾಚಾರ, ಸದನದ ಕಾರ್ಯಕಲಾಪಗಳಲ್ಲಿ ಭಾಗವಹಿಸುವ ಬಗ್ಗೆ ಶಿಬಿರ ಆಯೋಜಿಸಿದ್ದ ವಿಧಾನಸಭೆಯ ಸಮಾಧ್ಯಕ್ಷರು ಇದೀಗ ಮತ್ತೊಂದು ವಿಶೇಷ ಶಿಬಿರ ಹಮ್ಮಿಕೊಂಡಿದ್ದಾರೆ. ಈ ಶಿಬಿರದಲ್ಲಿ ಶಾಸಕರು ಈ ಬಗ್ಗೆ ಯಾವುದೇ ರೀತಿಯ ಸಂಶಯ, ಅನುಮಾನಗಳನ್ನು ಪರಿಹರಿಸಿಕೊಳ್ಳಬಹುದು.



» ಶಿಬಿರದಲ್ಲಿ ಎಲ್ಲಾ ಪಕ್ಷದ ಶಾಸಕರಿಗೆ ಆಹ್ವಾನ

» ಬಜೆಟ್ ಭಾಷಣದ ಚರ್ಚೆಗೆ ಅವಕಾಶ ಇಲ್ಲ

ಇದು ಬಜೆಟ್ ಭಾಷಣದ ಚರ್ಚೆ ಅಲ್ಲ. ಇಂದಿನ ಶಾಸಕರು ಮುಂದೆ ಹಣಕಾಸು ಸಚಿವರೂ ಆಗಬಹುದು, ಹಾಗಾಗಿ ಕರೆಲ್ಲರಿಗೂ ಹಣಕಾಸಿನ ನಿರ್ವಹಣೆ ಕುರಿತಂತೆ ಮಾಹಿತಿಯನ್ನು ಒದಗಿಸುವ ಉದ್ದೇಶ ಈ ಕಾರ್ಯಾಗಾರದ್ದಾಗಿದೆ. ಇಂತಹ ಕಾರ್ಯಾಗಾರ ಇದೇ ಮೊದಲ ಬಾರಿಗೆ ನಡೆಸಲಾಗುತ್ತಿದೆ ಸಭಾಧ್ಯಕ್ಷ ಯು.ಟಿ ಖಾದರ್ ತಿಳಿಸಿದ್ದಾರೆ.

ಸಂಪಾದಕೀಯ

ತಾರ್ಕಿಕ ಅಂತ್ಯದತ್ತ ಇರಾನ್ ಯುದ್ಧ?

ಮಧ್ಯಪ್ರಾಚ್ಯದ ಕದನಗಳಿಗೆ ಆರಂಭವೂ ಇಲ್ಲ, ಅಂತ್ಯವೂ ಇಲ್ಲ. ಮಧ್ಯಪ್ರಾಚ್ಯದಲ್ಲಿ ಯಾರೂ ಶತ್ರುಗಳಲ್ಲ, ಮಿತ್ರರಲ್ಲ. ಅರಬ್ ಒಕ್ಕೂಟವೆಂಬುದು 80ರ ದಶಕದಲ್ಲೇ ಮುಗಿದುಹೋದ ಅಧ್ಯಾಯ, ಈಗದಕ್ಕೆ ಯಾವ ಮಹತ್ತ್ವವೂ ಇಲ್ಲ. ಮಧ್ಯಪ್ರಾಚ್ಯದ ರಾಜಕೀಯ ಅಸ್ಥಿರತೆ ಮತ್ತು ಯುದ್ಧಗಳು ಹಿಂದಿನಂತೆ ಜಗತ್ತಿನ ಮೇಲೆ ಪರಿಣಾಮ ಬೀರಲಾರವು–ಇಂಥ ಮಾತುಗಳು ಕೆಲವು ದಶಕಗಳಿಂದ ಜಗತ್ತಿನಾದ್ಯಂತ ಕೇಳಿಬರುತ್ತಿದ್ದವು. ಮಧ್ಯಪ್ರಾಚ್ಯದಲ್ಲಿ ಯಾವಾಗ ಯುದ್ಧ ಆರಂಭವಾಗುತ್ತವೆ, ಯಾವಾಗ ನಿಲ್ಲುತ್ತವೆ ಎಂಬುದು ಜಗತ್ತಿನ ಲೆಕ್ಕಕ್ಕೆ ಸಿಗದಷ್ಟು ಘಟನೆಗಳು ನಡೆದಿರುವುದು ಮತ್ತು ಬಹುತೇಕ ಎಲ್ಲಾ ಅರಬ್ ರಾಷ್ಟ್ರಗಳಲ್ಲಿ ಹಲವು ಬಾರಿ ಕ್ರಾಂತಿಗಳು ನಡೆದು, ಅವು ಯಶಸ್ವಿಯಾಗಿವೆ ಎನ್ನುವಷ್ಟರಲ್ಲಿ ಕ್ರಾಂತಿ ನೆಲಕಚ್ಚಿ ಮತ್ತೊಂದು ಸ್ವರೂಪಕ್ಕೆ ಹೊರಳಿಕೊಂಡಿದ್ದು, ಅರಬ್ ರಾಷ್ಟ್ರಗಳ ನಾಯಕರು ತಮಗೆ ಸಂಬಂಧಿಸದ ಬೆಳವಣಿಗೆಗಳತ್ತ ಮೂಗು ತೂರಿಸುವುದು ಹಾಗೂ ಇಂದು ಜಗತ್ತಿನ ಬಹುತೇಕ ರಾಷ್ಟ್ರಗಳು ತೈಲಕ್ಕಾಗಿ ಪರ್ಯಾಯ



ವ್ಯವಸ್ಥೆಯನ್ನು ಮಾಡಿಕೊಂಡಿರುವುದರಿಂದ ಜಗತ್ತಿನ ಚಿಂತಕರು ಇಂಥ ನಿಲುವಿಗೆ ಬಂದಿರುವುದರಲ್ಲಿ ಸತ್ಯಾಂಶಗಳಿತ್ತು. ಆದರೆ ಪ್ರಸ್ತುತ ನಡೆಯುತ್ತಿರುವ ಯುದ್ಧ ತಾರ್ಕಿಕ ಅಂತ್ಯ ಕಾಣುವವರೆಗೆ ನಿಲ್ಲುವ ಲಕ್ಷಣಗಳು ಕಾಣುತ್ತಿಲ್ಲ. ಜಗತ್ತಿನ ತೈಲ ಪೂರೈಕೆಯ ಮೇಲೆ ಹೇಳಿಕೊಳ್ಳುವ ಪರಿಣಾಮವನ್ನೇನೂ ಬೀರದಿದ್ದರೂ ಸ್ವಲ್ಪ ಅಲ್ಲಾಡಿಸಿದ್ದಂತೂ ಸತ್ಯ. ಜೊತೆಗೆ ಇದುವರೆಗೆ ನಡೆದ ಎಲ್ಲಾ ಬೆಳವಣಿಗೆಗಳು ಒಂದು ತೂಕದ್ದಾದರೆ ಈ ಬಾರಿ ನಿರ್ಣಾಯಕ ಎಂಬಂತೆ ಅಮೆರಿಕಾ ಹಾಗು ಇಸ್ರೇಲ್ ನಡೆದುಕೊಳ್ಳುತ್ತಿರುವುದು ಜಗತ್ತಿನ ಯುದ್ಧೇತಿಹಾಸಕ್ಕೆ ಹೊಸ ವ್ಯಾಖ್ಯಾವನ್ನು ಬರೆದಿವೆ.

ಯುದ್ಧದಲ್ಲಿ ಪ್ರಬಲರು ಮಾತ್ರ ಯಶಸ್ಸನ್ನು ಸಾಧಿಸಬಲ್ಲರು. ಇರಾನ್ ಎಷ್ಟೇ ಬಡಾಯಿ ಕೊಚ್ಚಿಕೊಂಡರೂ ಯುದ್ಧ ಆರಂಭವಾದಂದಿನಿಂದಲೇ ಅದು ಚಡಪಡಿಸುತ್ತಿದೆ. ಅಮೆರಿಕಾ ಮತ್ತು ಇಸ್ರೇಲಿಗೆ ಯುದ್ಧವನ್ನು ಮಾಡುವುದರ ಜೊತೆಗೆ ಅದನ್ನು ದಕ್ಕಿಸಿಕೊಳ್ಳುವುದು ತಿಳಿದಿದೆ. ಆ ಶಕ್ತಿಯೂ ಇದೆ. ಆದರೆ ಇರಾನ್ ಇಂದು ಯಾರನ್ನೂ ನಂಬುವ ಪರಿಸ್ಥಿತಿಯಲ್ಲಿಲ್ಲ. ಯಾರೂ ಇರಾನಿಗೆ ಬಹಿರಂಗ ಬೆಂಬಲ ಕೊಡುವ ಧೈರ್ಯವನ್ನೂ ಮಾಡುತಿಲ್ಲ. ಒಂದು ಕಾಲದಲ್ಲಿ ಇರಾನನ್ನು ನೆಚ್ಚಿಕೊಂಡು ಅದರ ಸಂಗದಲ್ಲಿದ್ದವರೇ ಇಂದು ಅದಕ್ಕೆ ಶತ್ರುಗಳಾಗಿದ್ದಾರೆ. ಅದಕ್ಕಾಗಿ ಈಗ ಇರಾನ್ ಮತ್ತು ಜಗತ್ತಿನಾದ್ಯಂತ ಇರುವ ಅವರ ಅಭಿಮಾನಿಗಳು ತಮ್ಮ ಎಂದಿನ ಚಾಳಿಗೆ ಬಿದ್ದಿದ್ದಾರೆ. ಅಮೆರಿಕಾ ಮತ್ತು ಇಸ್ರೇಲ್ ಸೇನೆ ಮಕ್ಕಳನ್ನು ಕೊಲ್ಲುತ್ತಿದೆ, ಮಾನವಹಕ್ಕುಗಳನ್ನು ಬಲಿಕೊಡುತ್ತಿದೆ ಎಂದು ಆಲಾಪಿಸುತ್ತಿದೆ. ಭಾರತದಲ್ಲಿ ಮಾಧ್ಯಮಗಳು ಇಂಥ ಸುದ್ದಿಗಳಿಗೆ ಅತಿಯಾದ ಮಹತ್ತ್ವವನ್ನು ಕೊಡುತ್ತಿರುವ ಹಿಂದೆ ಇರಾನ್ ಪ್ರೇರಿತವಾದ ಹಿತಾಸಕ್ತಿಯಿದೆ. ಖಮೇನಿಯ ಸಹಾಯದಿಂದ ಹಿಜ್ಬುಲ್ಲಾ, ಹಮಾಸ್ ಇಸ್ರೇಲ್ ಮೇಲೆ ಯಾವ ಸ್ವರೂಪದ ದಾಳಿಯನ್ನು ಮಾಡುತ್ತಿತ್ತು? ಪ್ಯಾಲೆಸ್ಟೀನ್ ಸೋಲಿನ ಅಂಚಿಗೆ ತಲುಪುವ ಹೊತ್ತಲ್ಲೆಲ್ಲಾ ಜಗತ್ತಿನ ಗಮನ ಸೆಳೆಯಲು ಇಂಥದ್ದೇ ತಂತ್ರದ ಮೊರೆಹೋಗುತ್ತಿದ್ದರು ಎಂಬುದಿಲ್ಲಿ ಉಲ್ಲೇಖಾರ್ಹ. ಇರಾನಿಗೆ ಬೆಂಬಲವನ್ನು ಸೂಚಿಸಲು ಇಂಥ ಅರ್ಧಸತ್ಯವನ್ನು ಬಿಂಬಿಸಲಾಗುತ್ತಿದೆ. ಈ ಬಾರಿ ಅಮೆರಿಕಾ ಮತ್ತು ಇಸ್ರೇಲ್ ಅದಕ್ಕೆ ಬಲಿಯಾಗಲಾರೆ ಎಂಬಂತೆ ನಡೆದುಕೊಂಡಿದೆ. ಹಾಗಾಗಿ ಯುದ್ಧ ತಾರ್ಕಿಕ ಅಂತ್ಯದತ್ತ ಸಾಗುತ್ತಿದೆ ಎಂದು ಅಂದಾಜಿಸಬಹುದು.

ತರಕಾರಿ, ಆಹಾರ ವಿಷಮಯ; ಮನಸ್ಸು ಕಲುಷಿತ

ಈಗ ಎಲ್ಲರೂ ವಿಷಕನ್ಯೆಯರೇ! ಎಲ್ಲರೂ ವಿಷ ಪುರುಷರೇ! ತರಕಾರಿ, ಮಾಂಸ, ಹಣ್ಣು, ಹಾಲಿನ ಮೂಲಕ ವಿಷ ಸೇವಿಸದವರೇ ಈಗ ಬಹುಶಃ ಇರಲಿಕ್ಕಿಲ್ಲ.

ನೇರ ನೋಟ
• ದು.ಗು. ಲಕ್ಷ್ಮಣ
dugulakshman@yahoo.com



ಕೆಲವು ದಿನಗಳ ಹಿಂದೆ ಪ್ರಮುಖ ಮಾಧ್ಯಮಗಳಲ್ಲಿ ಪ್ರಕಟವಾದ ಪ್ರತಿಯೊಬ್ಬರಿಗೂ ಸಂಬಂಧಿಸಿದ ಒಂದು ಆಘಾತಕಾರಿ ಸುದ್ದಿ ಅದೆಷ್ಟು ಜನರನ್ನು ಬಡಿದೆಬ್ಬಿಸಿತೋ, ಇನ್ನು ಅದೆಷ್ಟು ಜನರ ಅರಿವಿಗೇ ಬಾರದೆ ಮರೆಯಾಯಿತೋ ಗೊತ್ತಿಲ್ಲ. ಆದರೆ ಎಲ್ಲರೂ ತಲ್ಲಣಗೊಳ್ಳುವಂತಹ ಸುದ್ದಿ ಅದಾಗಿತ್ತು. ಆ ಸುದ್ದಿಯೇನೆಂದರೆ ಬೆಂಗಳೂರು ನಗರ ಮತ್ತು ಸುತ್ತಲಿನ ಪ್ರದೇಶಗಳಲ್ಲಿ ಬೆಳೆಯುವ ತರಕಾರಿಗಳಲ್ಲಿ ಅಪಾಯಕಾರಿ ಸೀಸದ ಅಂಶ ಮತ್ತು ಕ್ರಿಮಿನಾಶಕಗಳ ಅಂಶಗಳು ಕಂಡು ಬಂದಿದ್ದು ಇಂತಹ ತರಕಾರಿಗಳನ್ನು ಸೇವಿಸಿದರೆ ಕಿಡ್ನಿ ಹಾಗೂ ಮಿದುಳು ಕಾಯಿಲೆ ಬರಲಿದೆ ಎಂದು ಕೂಡ ವರದಿ ತಿಳಿಸಿತ್ತು.

ಇದನ್ನು ಯಾರೋ ಪರಿಸರ ತಜ್ಞರೋ ಆಹಾರ ತಜ್ಞರೋ ತಮ್ಮ ಪ್ರಚಾರದ ತೆವಲು ತೀರಿಸಿಕೊಳ್ಳಲು ಹೇಳಿದ್ದಾಗಿರಲಿಲ್ಲ. ರಾಷ್ಟ್ರೀಯ ಹಸಿರು ನ್ಯಾಯಮಂಡಳಿ (ಎನ್‌ಜಿಟಿ) ಸ್ವಯಂಪ್ರೇರಿತ ದೂರು ದಾಖಲಿಸಿಕೊಂಡು ಪರೀಕ್ಷೆ ನಡೆಸಿದ ಬಳಿಕ ಪತ್ತೆಯಾದ ಸತ್ಯಾಂಶ ಇದಾಗಿತ್ತು. ಎನ್‌ಜಿಟಿ ನಿರ್ದೇಶನದಂತೆ ತರಕಾರಿಗಳ ಪರೀಕ್ಷೆ ನಡೆಸಲು ಕೇಂದ್ರ ಮಾಲಿನ್ಯ ನಿಯಂತ್ರಣ ಮಂಡಳಿಯು ಐವರು ತಜ್ಞರ ಸಮಿತಿಯನ್ನು ರಚಿಸಿತ್ತು. ಆ ಸಮಿತಿಯ ಸದಸ್ಯರು ಬೆಂಗಳೂರಿನ ನಗರ, ನೆಲಮಂಗಲ, ಚಿಕ್ಕಬಳ್ಳಾಪುರದ ವಿವಿಧ ಎಪಿಎಂಸಿಗಳು, ಹಾಪ್‌ಕಾಮ್ಸ್‌ಗಳು, ತರಕಾರಿ ಬೆಳೆಯುವ ಪ್ರದೇಶದಿಂದ 72 ಮಾದರಿಯ ತರಕಾರಿಗಳನ್ನು ಸಂಗ್ರಹಿಸಿ, ಜೊತೆಗೆ ಪರೀಕ್ಷೆಯ ಭಾಗವಾಗಿ ಹೊಲಗಳಲ್ಲಿನ ಮಣ್ಣು ಮತ್ತು ಬೆಳೆಗಳಿಗೆ ಬಳಸುವ ಸಂಸ್ಕರಿಸಿದ ನೀರು, ಅಂತರ್ಜಲ ಕೂಡ ಸಂಗ್ರಹಿಸಿ ಎಫ್‌ಎಸ್‌ಎಸ್‌ಐ ಅನುಮೋದಿತ ಪ್ರಯೋಗಾಲಯಗಳಲ್ಲಿ ಪರೀಕ್ಷೆ ನಡೆಸಿದರು. ಆಗ ಕಂಡುಬಂದಿದ್ದು – ಬದನೆಕಾಯಿ, ಸೋರೇಕಾಯಿ, ತೊಂಡೆ ಕಾಯಿ, ಬೀನ್ಸ್, ಕ್ಯಾಬೇಜ್, ಹಾಗಲಕಾಯಿ, ಬೀಟ್‌ರೂಟ್, ಬಜ್ಜಿ ಮೆಣಸಿನ ಕಾಯಿ ಸೇರಿದಂತೆ ಅನೇಕ ತರಕಾರಿಗಳಲ್ಲಿ ಭಾರತೀಯ ಆಹಾರ ಸುರಕ್ಷತೆ ಮತ್ತು ಗುಣಮಟ್ಟ ಪ್ರಾಧಿಕಾರ (ಎಫ್‌ಎಸ್‌ಎಸ್‌ಐ) ನಿಗದಿಪಡಿಸಿದ ಮಾನದಂಡಗಳನ್ನು ಮೀರಿ ಹಾನಿಕಾರಕ ಲೋಹಗಳು ಪತ್ತೆಯಾಗಿರುವುದು.

72 ಮಾದರಿಗಳಲ್ಲಿ 53 ಮಾದರಿಗಳನ್ನು ರಾಜಾಜಿನಗರ, ನೆಲಮಂಗಲ, ಕೋಲಾರ ಮಾರುಕಟ್ಟೆಗಳಿಂದ, ಉಳಿದ ಮಾದರಿಗಳನ್ನು ನೆಲಮಂಗಲ, ಚಿಕ್ಕಬಳ್ಳಾಪುರ ಹೊಲಗಳಿಂದ ಸಂಗ್ರಹಿಸಲಾಗಿತ್ತು. 72ರ ಪೈಕಿ 19ರಲ್ಲಿ ನಿಗದಿತ ಪ್ರಮಾಣಕ್ಕಿಂತ ಹೆಚ್ಚು ಸೀಸದ ಅಂಶ ಪತ್ತೆಯಾಗಿದೆ.

ತಮಾಷೆಯೆಂದರೆ ಸಾವಯವ ತರಕಾರಿ ಎಂದು ಮಾರಾಟ ಮಾಡಲಾಗುತ್ತಿದ್ದ ಒಂದು ಕೆಜಿ ಬದನೆಕಾಯಿಯಲ್ಲಿ 1.953 ಮಿ.ಗ್ರಾಂ ಸೀಸ ಪತ್ತೆಯಾಗಿದೆ. ಇದು ಎಫ್‌ಎಸ್‌ಎಸ್‌ಐ ನಿಗದಿಪಡಿಸಿದ್ದಕ್ಕಿಂತ 20 ಪಟ್ಟು ಹೆಚ್ಚು! ತೊಂಡೆಕಾಯಿಯಲ್ಲಿ 18 ಪಟ್ಟು ಹೆಚ್ಚು, ಬೀನ್ಸ್‌ನಲ್ಲಿ 9 ಪಟ್ಟು ಅಧಿಕ ಸೀಸ ಕಂಡು ಬಂದಿದೆ. ಹಸಿರೆಲೆಗಳು ಹಾಗೂ ಕ್ಯಾಬೇಜ್‌ನಲ್ಲಿ ನಿಗದಿಪಡಿಸಿದ್ದಕ್ಕಿಂತ 5 ಪಟ್ಟು ಹೆಚ್ಚು ಸೀಸ, ಸೌತೆಕಾಯಿ, ದಪ್ಪ ಮೆಣಸಿನಕಾಯಿ (ಕ್ಯಾಪ್ಸಿಕಂ), ಹಾಗಲಕಾಯಿ, ಬೀಟ್‌ರೂಟ್‌ನಲ್ಲೂ ನಿಗದಿತ ಪ್ರಮಾಣಕ್ಕಿಂತ ಅಧಿಕ ಸೀಸದ ಪ್ರಮಾಣ ಪತ್ತೆಯಾಗಿದೆ.

ಬೆಂಗಳೂರು ನಗರಕ್ಕೆ ಪ್ರತಿನಿತ್ಯ ಸರಬರಾಜಾಗುವ ಟನ್‌ಗಟ್ಟಲೆ ತರಕಾರಿಗಳು ಪೂರೈಕೆಯಾಗುತ್ತಿರುವುದು ಸೀಸದ ಅಂಶ ಪತ್ತೆಯಾದ ಜಿಲ್ಲೆಗಳಿಂದಲೇ. ಶೇ. 90ರಷ್ಟು ತರಕಾರಿ ಕೋಲಾರ, ಚಿಕ್ಕಬಳ್ಳಾಪುರ, ಬೆಂಗಳೂರು ಗ್ರಾಮಾಂತರ ಜಿಲ್ಲೆಗಳಿಂದಲೇ ಪೂರೈಕೆಯಾಗುತ್ತಿರುವುದು. ರಾಮನಗರ, ತುಮಕೂರು, ಮಂಡ್ಯ, ಮೈಸೂರು ಮತ್ತಿತರ ಭಾಗದಿಂದ ಸರಬರಾಜಾಗುತ್ತಿರುವುದು ಅಲ್ಪ ಪ್ರಮಾಣದಲ್ಲಿ. ಬೆಂಗಳೂರು ಸುತ್ತಮುತ್ತಲಿನ ಪ್ರದೇಶಗಳಿಂದಲೇ ಪ್ರತಿನಿತ್ಯ ನಗರಕ್ಕೆ ಸರಬರಾಜಾಗುತ್ತಿರುವುದು 700 ಟನ್‌ಗೂ ಅಧಿಕ ತರಕಾರಿ. ಇವೆಲ್ಲವೂ ಒಂದು ರೀತಿಯಲ್ಲಿ ವಿಷಯುಕ್ತ ತರಕಾರಿಗಳೇ. ಸರಳವಾಗಿ ಹೇಳಬೇಕೆಂದರೆ ಬೆಂಗಳೂರಿನ ಸುಮಾರು 1.48 ಕೋಟಿ ನಿವಾಸಿಗಳು ಪ್ರತಿನಿತ್ಯ ಸ್ವಲ್ಪ ಸ್ವಲ್ಪವೇ ವಿಷವನ್ನು ಸೇವಿಸುತ್ತಿದ್ದಾರೆ. ತನ್ಮೂಲಕ ವಿಷ ಮಾನವರಾಗುತ್ತಿದ್ದಾರೆ.

ಕೇವಲ ತರಕಾರಿ ಅಷ್ಟೇ ಅಲ್ಲ. ಕೋಲಾರ, ಚಿಕ್ಕಬಳ್ಳಾಪುರ ಮತ್ತು ನೆಲಮಂಗಲದಲ್ಲಿನ ಮಣ್ಣು ಕೂಡ ಕಲುಷಿತ. 23 ಮಾದರಿ ಮಣ್ಣು ಸಂಗ್ರಹಿಸಿ ಪರೀಕ್ಷೆ ನಡೆಸಿದಾಗ ಬಂದ ಫಲಿತಾಂಶವಿದು. ಬೆಂಗಳೂರು ಮತ್ತು ಸುತ್ತಮುತ್ತ ಇರುವ 142 ಕೆರೆಗಳ ನೀರು ಕೂಡ ಅತ್ಯಂತ ಕಳಪೆ ಗುಣಮಟ್ಟ ಎಂದು ಕಂಡುಬಂದಿದೆ. ಉತ್ತಮವಾಗಿ ನಿರ್ವಹಿಸಲ್ಪಟ್ಟಿದೆ ಎಂದು ಹೇಳಲಾಗುವ ಮಲ್ಲೇಶ್ವರದ ಸ್ಯಾಂಕಿ ಕೆರೆಯ ನೀರು ಕೂಡ ಕಳಪೆ ಗುಣಮಟ್ಟದ್ದು. ಕೇವಲ ಜಲಚರಗಳು ಮತ್ತು ಹಕ್ಕಿಗಳು ಮಾತ್ರ ಕುಡಿಯಲು ಯೋಗ್ಯವಾದುದು. ಕೆರೆಗಳ ನೀರಿನ ಗುಣಮಟ್ಟವನ್ನು ಎ,ಬಿ,ಸಿ,ಡಿ,ಇ ಎಂದು ಐದು ವಿಭಾಗಗಳಲ್ಲಿ ವರ್ಗೀಕರಣ ಮಾಡಲಾಗಿದೆ. ಆದರೆ ಬೆಂಗಳೂರಿನ 142 ಕೆರೆಗಳು ಡಿ ಮತ್ತು ಇ ವಿಭಾಗದಲ್ಲಿವೆ. ಎ,ಬಿ,ಸಿ ಈ ವಿಭಾಗದಲ್ಲಿ ಯಾವ ಕೆರೆಯ ನೀರೂ ಬರುವುದಿಲ್ಲ. ಈ ಕೆರೆಗಳ ನೀರನ್ನು ಕುಡಿಯಲು, ಸ್ನಾನಕ್ಕೆ ಬಳಸಲು ನಿಮಗೆ ಹೇಳಿದವರ್‍ಯಾರು? ಎಂದು ಉಪಮುಖ್ಯಮಂತ್ರಿಗಳು ಈ ಸುದ್ದಿ ಪ್ರಕಟವಾದ ಕೂಡಲೇ ಆರ್ಭಟಿಸಿದ್ದಾರೆ. ತಿಪ್ಪಗೊಂಡನಹಳ್ಳಿ



ಕೆರೆ ನೀರನ್ನು ಮಾತ್ರ ಕುಡಿಯಿರಿ ಎಂದು ಅಪ್ಪಣೆ ಕೊಡಿಸಿದ್ದಾರೆ! (ಅದನ್ನು ಜಲಮಂಡಳಿ ಶುದ್ಧೀಕರಿಸುತ್ತಿದೆಯಂತೆ!).

ಬೆಂಗಳೂರು ನಗರದ ನೂರಾರು ಕೆರೆಗಳ ನೀರಿನ ಗುಣಮಟ್ಟ ಕಳಪೆಯಾಗಲು ಕಾರಣ– ಮೋರಿ ನೀರು ಸೇರ್ಪಡೆ, ಎಲ್ಲಾ ಮಾದರಿಯ ತ್ಯಾಜ್ಯಗಳನ್ನು ಕೆರೆಗೆ ಎಸೆಯುವುದು, ಕೈಗಾರಿಕಾ ಪ್ರದೇಶಗಳ ಸೇರ್ಪಡೆ ಇತ್ಯಾದಿ. ಕಳೆದ ಅನೇಕ ವರ್ಷಗಳಿಂದ ಕೆರೆಗಳ ನಿರ್ವಹಣೆಯನ್ನು ಆಡಳಿತ ವ್ಯವಸ್ಥೆ ಸಂಪೂರ್ಣ ನಿರ್ಲಕ್ಷಿಸಿರುವುದು ಇಂತಹ ದುಸ್ಥಿತಿಗೆ ಮುಖ್ಯ ಕಾರಣವೆನ್ನುವುದು ಅಸಲಿ ಸತ್ಯ.

ತಿನ್ನುವ ತರಕಾರಿ, ಕುಡಿಯುವ ನೀರು ಕಲುಷಿತವಾಗಿದ್ದಕ್ಕೆ ಸಂಕಟಪಟ್ಟು ವೆಂಕಟರಮಣನಿಗೆ ಮೊರೆ ಇಟ್ಟರೆ, ತಿರುಪತಿಯಲ್ಲಿ ವಿತರಿಸಲಾಗುವ ಲಡ್ಡು ಪ್ರಸಾದ ಕೂಡ ಕಲಬೆರಕೆ. ತಿರುಪತಿಯ ಲಡ್ಡು ಪ್ರಸಾದಕ್ಕೂ ಕಲಬೆರಕೆ ತುಪ್ಪ ಹಾಗೂ ಹಲವು ರಾಸಾಯನಿಕ ಬಳಸಲಾಗಿದೆ ಎಂಬ ಸತ್ಯವನ್ನು ಸಿಬಿಐ ಈಚೆಗೆ ದೃಢಪಡಿಸಿದೆ. ತಿರುಪತಿ ಲಡ್ಡು ತಯಾರಿಕೆಗೆ ಕಲಬೆರಕೆ ತುಪ್ಪ ಹಾಗೂ ರಾಸಾಯನಿಕಗಳ ಬಳಕೆ ಮಾಡಲಾಗಿದೆ ಎಂಬುದನ್ನು ತಿರುಮಲ ತಿರುಪತಿ ದೇವಸ್ಥಾನಮ್ (ಟಿಟಿಡಿ) ಮಾಜಿ ಅಧ್ಯಕ್ಷ ವೈ.ವಿ. ಸುಬ್ಬಾ ರೆಡ್ಡಿ ಅವರೇ ಸ್ವತಃ ಒಪ್ಪಿಕೊಂಡಿದ್ದಾರೆ. ಆದರೆ ಈ ಗೋಲ್‌ಮಾಲ್‌ನಲ್ಲಿ ತಾನು ಶಾಮೀಲಾಗಿರಲಿಲ್ಲ ಎಂದು ಜಾರಿಕೊಂಡಿದ್ದಾರೆ! ಸೂಕ್ತ ತನಿಖೆ ನಡೆದರೆ ಮಾಜಿ ಅಧ್ಯಕ್ಷರ ಬಣ್ಣ ಬಯಲಾಗುವುದು ಖಂಡಿತ. ಕಲಬೆರಕೆ ಲಡ್ಡು ಪ್ರಸಾದ ಹಗರಣವನ್ನು ಧಾರ್ಮಿಕ ಮುಖಂಡರು, ಮಠಾಧಿಪತಿಗಳು ಖಂಡಿಸಿ ಪ್ರಧಾನಿಗೆ ಪತ್ರ ಬರೆದು ತಪ್ಪಿತಸ್ಥರ ವಿರುದ್ಧ ಕಠಿಣ ಕ್ರಮಕ್ಕೆ ಆಗ್ರಹಿಸಿದ್ದಾರೆ. ಕಲಬೆರಕೆ ಲಡ್ಡು ಪ್ರಸಾದವನ್ನು ಭಕ್ತಿಯಿಂದ ಸೇವಿಸಿದ ಕೋಟ್ಯಂತರ ಮುಗ್ಧ ಭಕ್ತರ ಆರೋಗ್ಯದ 'ಕಥೆ' ಏನಾಗಿರಬಹುದೆಂದು ನೀವೇ ಯೋಚಿಸಿ. (ನೀವೂ ಆ ಪ್ರಸಾದವನ್ನು ಸೇವಿಸಿದವರಲ್ಲಿ ಒಬ್ಬರಾಗಿರಬಹುದು!) ದೇವರ ಭಯವಿಲ್ಲದ, ಆಡಳಿತ ವ್ಯವಸ್ಥೆಯ ನಿಯಂತ್ರಣವಿಲ್ಲದ ಜನರು ಅಮೃತಕ್ಕೂ ವಿಷ ಬೆರೆಸಿ, ಇದೇ ಅಮೃತವೆಂದು ವಿತರಿಸಲೂ ಸಂಕೋಚ ಪಡಲಾರರು.

ಆಂಧ್ರದಲ್ಲಿ ವೈಎಸ್‌ಆರ್ ಕಾಂಗ್ರೆಸ್ ಪಕ್ಷದ ಆಡಳಿತವಿದ್ದಾಗ ತಿರುಪತಿ ತಿರುಮಲಕ್ಕೆ ಉತ್ತರಾಖಂಡದ ಭಗವಾನ್‌ಪುರದ ಭೋಲೇಬಾಬಾ ಡೈರಿಯಿಂದ ಲಕ್ಷಾಂತರ ಕಿಲೋ ಗ್ರಾಂ ಕಲಬೆರಕೆ ತುಪ್ಪ ಪೂರೈಕೆ ಆಗುತ್ತಿತ್ತು . ಈ ಕಲಬೆರಕೆ ತುಪ್ಪ ತಯಾರಿಕೆಗೆ ಬಳಕೆಯಾಗುತ್ತಿದ್ದದು ಮೋನೋಗ್ಲೈಸಿರೆಡ್ಸ್ (Monoglycerides) ಎಂಬ ರಾಸಾಯನಿಕ ಪದಾರ್ಥ. ಇದರ ಅಧಿಕ ಬಳಕೆಯಿಂದ ಮನುಷ್ಯನ ಆರೋಗ್ಯದ ಮೇಲೆ ಹಾನಿಯಾಗುವುದು ನಿಶ್ಚಿತ ಎಂದು ತಜ್ಞರ ಅಭಿಮತ. ಈ ರಾಸಾಯನಿಕವನ್ನು ಕೊರಿಯಾದ ಇಲ್ ಶಿನ್ ವೆಲ್ಸ್ ಕಂಪೆನಿ ಲಿಮಿಟೆಡ್ ಉತ್ಪಾದಿಸಿ ಭಾರತಕ್ಕೆ ಕಳುಹಿಸುತ್ತಿತ್ತು. ಇವೆಲ್ಲವನ್ನೂ ಎಸ್‌ಐಟಿ ತನ್ನ ದೋಷಾರೋಪ ಪಟ್ಟಿಯಲ್ಲಿ ದಾಖಲೆ ಸಹಿತ ಆರೋಪಿಸಿದೆ.

ದಿಢೀರ್ ಶ್ರೀಮಂತರಾಗಬೇಕು, ಶ್ರಮವಿಲ್ಲದೆ ತನ್ನ ಖಜಾನೆ ಭರ್ತಿಯಾಗಬೇಕು, ಇದರಿಂದಾಗಿ ಇತರರಿಗೆ ತೊಂದರೆಯಾದರೂ ಪರವಾಗಿಲ್ಲ, ಜೀವಕ್ಕೆ ಸಂಚಕಾರ ಬಂದೊದಗಿದರೂ ಅದೇನೂ ದೊಡ್ಡ ಸಂಗತಿಯಲ್ಲ– ಇಂತಹ ಕಲುಷಿತ ಮನಸ್ಸುಗಳ ವಿಕೃತ ಚಿಂತನೆಗಳು ತಿನ್ನುವ ತರಕಾರಿಗೆ ವಿಷ ಉಣಿಸುವ, ಕುಡಿಯುವ ನೀರನ್ನು ಕಲುಷಿತಗೊಳಿಸುವ, ಕೊನೆಗೆ ತಿರುಪತಿ ಲಡ್ಡು ಪ್ರಸಾದದ ಪಾವಿತ್ರ್ಯತೆಗೂ ಭಂಗ ತರುವ ಹೀನಾತಿಹೀನ ಮಟ್ಟಕ್ಕೆ ಇಳಿದಿವೆ. ತರಕಾರಿಗಳ ಗಾತ್ರ, ಆಕಾರ ಹೆಚ್ಚಿಸಲು ಬೆಳೆಯುವ ಹಂತದಲ್ಲಿ ಅವಕ್ಕೆ ರಾಸಾಯನಿಕಗಳನ್ನು ಇಂಜೆಕ್ಟ್ ಮಾಡುವುದು ಇದೆಯಂತೆ. ಹಾಗಾಗಿಯೇ ಕೆಲವು ತರಕಾರಿಗಳನ್ನು ಕತ್ತರಿಸಿ ಹೆಚ್ಚು ಹೊತ್ತು ಇಟ್ಟರೆ ಅವುಗಳ ಮೂಲ ಬಣ್ಣವೇ ಬದಲಾಗಿಬಿಡುತ್ತದೆ. ದ್ರಾಕ್ಷಿ ಹಣ್ಣನ್ನು ಎಷ್ಟು ಉಪ್ಪು ನೀರಿನಲ್ಲಿ ನೆನೆಸಿ, ತೊಳೆದು ತಿಂದರೂ, ತಿಂದ ಬಳಿಕ ತುಟಿ ಉರಿಯುವುದು ತಪ್ಪುವುದಿಲ್ಲ. ಹೊಳೆಯುವ ಹಳದಿ ಬಣ್ಣದ ಬಾಳೆಹಣ್ಣು ತಿಂದರೆ ಬಾಳೆಹಣ್ಣಿನ ರುಚಿಯೇ ಇರುವುದಿಲ್ಲ.ಅನಾನಸ್ ಗಂತೂ ಅದನ್ನು ರಕ್ಷಿಸಿಡಲು ಮಿತಿಮೀರಿ ರಾಸಾಯನಿಕ ಸಿಂಪಡನೆ ಮಾಡಲಾಗುತ್ತದೆ.


ಇಂತಹ ಕಲಬೆರಕೆ, ಕಲುಷಿತ ತರಕಾರಿ, ಹಣ್ಣು, ಆಹಾರ ಸೇವಿಸಿದರೆ ಹೊಸ ಹೊಸ ಕಾಯಿಲೆಗಳ ಕೊಡುಗೆಯಂತೂ ಗ್ಯಾರಂಟಿ. ಹಿಂದೆಲ್ಲ ತಮ್ಮ ಶತ್ರುಗಳನ್ನು ಉಪಾಯವಾಗಿ ಸಾಯಿಸಲು ರಾಜರು ವಿಷ ಕನ್ಯೆಯರನ್ನು ಬಳಸಿ ಕೊಳ್ಳುತ್ತಿದ್ದರಂತೆ. ಈಗ ಎಲ್ಲರೂ ವಿಷಕನ್ಯೆಯರೇ! ಎಲ್ಲರೂ ವಿಷ ಪುರುಷರೇ! ತರಕಾರಿ, ಮಾಂಸ, ಹಣ್ಣು, ಹಾಲಿನ ಮೂಲಕ ವಿಷ ಸೇವಿಸ ದವರೇ ಈಗ ಬಹುಶಃ ಇರಲಿಕ್ಕಿಲ್ಲ. ಇರುವುದೊಂದೇ ಭೂಮಿ . ಅದನ್ನು ಕಲುಷಿತಗೊಳಿಸುತ್ತಿದ್ದೇವೆ. ಎಲ್ಲವೂ ವಿಷಮಯವಾದರೆ ತಿನ್ನುವುದಾದರೂ ಏನನ್ನು!

ಮೊದಲು ಮನುಷ್ಯನ ಮನಸ್ಸಿನ ದುರಾಸೆ ಅಳಿಯಬೇಕು. ಆಗ ಮಾತ್ರ ಶುದ್ಧ ನೀರು, ಶುದ್ಧ ಆಹಾರ, ಶುದ್ಧ ಗಾಳಿ ದೊರೆಯಬಹುದಷ್ಟೇ.

ತಾರುಣ್ಯದಲ್ಲಿ ಬದಲಾವಣೆಗಳು-2

ಹರೆಯದವರಲ್ಲಿ ಭಾವನೆಗಳ ಏರಿಳಿತಗಳು ಸಾಮಾನ್ಯ. ಸಫಲರಾದರೆ ಆಕಾಶಕ್ಕೇರುತ್ತಾರೆ. ವಿಫಲರಾದರೆ ಪಾತಾಳಕ್ಕಿಳಿಯುತ್ತಾರೆ. ವಾಸ್ತವಗಳ ಪರಿವೆಯಾಗಲಿ, ಭಾವನೆಗಳನ್ನು ಹಿಡಿತದಲ್ಲಿಟ್ಟುಕೊಳ್ಳುವ ಸಾಮರ್ಥ್ಯ ಹರೆಯದವರಲ್ಲಿ ಕಡಿಮೆ

ತಾರುಣ್ಯ ತಲ್ಲಣ
• ಡಾ.ಕೆ.ಆರ್. ಶ್ರೀಧರ್
drkrsridhar208@gmail.com



ಮಿದುಳಿನಲ್ಲಿ ಜರುಗುವ ಬದಲಾವಣೆಗಳು

ಹರೆಯದಲ್ಲಿ ಜರುಗುವ ಮಾನಸಿಕ ಮತ್ತು ಭಾವನಾತ್ಮಕ ಬದಲಾವಣೆಗಳಿಗೆ ಮುಖ್ಯವಾದದ್ದು ನಮ್ಮ ಮಿದುಳು. ನಾಲ್ಕು ದಶಕಗಳ ಹಿಂದೆ ಮಿದುಳಿನ ಕುರಿತಾದ ಮಾಹಿತಿಗಳು ಅಷ್ಟಾಗಿ ವೈದ್ಯ ಲೋಕಕ್ಕೆ ತಿಳಿದಿರಲಿಲ್ಲ. ಕಳೆದ ಶತಕದ ತೊಂಭತ್ತರ ದಶಕವನ್ನು ವೈದ್ಯ ವಿಜ್ಞಾನಿಗಳು ಮಿದುಳಿನ ಅವಿಷ್ಕಾರಗಳಿಗೆ ಮೀಸಲಾಗಿರಿಸಿದರು. ಅವಿಷ್ಕಾರಗಳು ಮಿದುಳಿನ ಬೇರೆ ಬೇರೆ ಭಾಗಗಳ ರಚನೆ, ಅವುಗಳು ನಿರ್ವಹಿಸುವ ಕ್ರಿಯೆಯನ್ನು ಎಳೆ ಎಳೆಯಾಗಿ ತೆರೆದಿಟ್ಟವು. ಅದರ ಫಲವಾಗಿ ಹರೆಯದವರಲ್ಲಿ ಜರುಗುವ ಮನೋವಿಕಾಸ ಮತ್ತು ಭಾವನಾತ್ಮಕ ಬದಲಾವಣೆಗಳಿಗೂ, ಮಿದುಳಿನಲ್ಲಿ ಜರುಗುವ ಬೆಳವಣಿಗೆಗಳಿಗೂ ನಿಕಟವಾದ ಸಂಬಂಧವಿದೆ ಎಂಬುದು ಸಾಬೀತಾಯಿತು.

ಹರೆಯದಲ್ಲಿ ಮಿದುಳಿನ ನರ ಸಮೂಹಗಳು ಮರು ಸಂಘಟನೆಗೊಂಡು, ಮರು ರೂಪುಗೊಳ್ಳುತ್ತವೆ. ಬಾಲ್ಯದಲ್ಲಿ ಉಪಯೋಗಿಸದೆ ಇರುವ ನರತಂತುಗಳ ಜೋಡಣೆ (Synapse) ಗಳು ಮಾಯವಾಗುತ್ತವೆ. ಅದೇ ರೀತಿ ನರಕೋಶಗಳು ಸಂದೇಶಗಳನ್ನು ಕಳುಹಿಸುವ ನರತಂತುಗಳ ವೇಗ ಹೆಚ್ಚಿಸಲು ಅವುಗಳ ಸುತ್ತ ಮೈಲಿನ್ ಎಂಬ ಕವಚ ಬೆಳೆಯುತ್ತದೆ. ಕ್ರಿಯಾಶಕ್ತಿಯನ್ನು ಹೆಚ್ಚು ಶಕ್ತವಾಗಿರಿಸಲು ಮುಮ್ಮೆದುಳು ಮರುರಚನೆಗೊಳ್ಳುತ್ತದೆ. ತೀರ್ಮಾನ ತೆಗೆದುಕೊಳ್ಳಲು, ಅಪಾಯದ ಸಂಕೇತವನ್ನು ಗ್ರಹಿಸಲು ಮತ್ತು ಯೋಜನೆಗಳನ್ನು ರೂಪಿಸಲು ಇದು ಅವಶ್ಯ. ಭಾವನಾತ್ಮಕ ಅಂಶಗಳು, ಸಾಮಾಜಿಕವಾಗಿ ಬೆರೆಯುವಿಕೆ, ಭಯ ಆತಂಕಗಳಿಗೆ ಲಿಂಬಿಕ್ (Limbic) ನರಕೋಶದ ಸಮೂಹಗಳು ಅವಶ್ಯ. ಇವೂ ಹಲವಾರು ರೀತಿಯಲ್ಲಿ ಮರುರೂಪುಗೊಳ್ಳುತ್ತವೆ. ಇದೇ ಅವಧಿಯಲ್ಲಿ ಮಿದುಳಿನ ನರವ್ಯೂಹಗಳಲ್ಲಿ ಹೊಂದಿಕೊಳ್ಳುವ (Plasitcity) ಗುಣಗಳು ವೃದ್ಧಿಯಾಗುತ್ತವೆ. ಈ ಅವಧಿಯಲ್ಲಿ ಕೆಲವು ನರಚೋದನಿಕೆಗಳು ಸ್ರವಿಸಲ್ಪಡುತ್ತವೆ.


ಮಾನಸಿಕ ಬದಲಾವಣೆಗಳು

ಬಾಲ್ಯದಲ್ಲಿ ಮಗುವಿಗೆ ವಸ್ತು ಎದುರಿಗೆ ಇಲ್ಲದಿದ್ದಿರೆ ಅದನ್ನು ಕಲ್ಪನೆ ಮಾಡಿಕೊಳ್ಳಲಾಗುವುದಿಲ್ಲ. ಇದಕ್ಕೆ ಮೂರ್ತರೂಪದ ಆಲೋಚನೆ (Abstract thinking) ಎನ್ನುತ್ತಾರೆ. ಹರೆಯಕ್ಕೆ ತಲುಪಿದಂತೆ ಮಗುವಿಗೆ ಒಂದು ವಸ್ತುವಿನ ಕುರಿತು ಹೇಳಿದರೆ, ವಸ್ತು ಇಲ್ಲದಿದ್ದರೂ, ಅದರ ಚಿತ್ರಣವನ್ನು ಅದು ಕಲ್ಪಿಸಿಕೊಳ್ಳಬಹುದು. ಹಾಗೆಯೇ ಅದರ ಕುರಿತು ಬೇರೆ ಬೇರೆ ದೃಷ್ಟಿಕೋನಗಳಿಂದ ಆಲೋಚಿಸಲು ಸಾಧ್ಯ. ಇದಕ್ಕೆ ಅಮೂರ್ತ ರೂಪದ ಆಲೋಚನೆ (Concrete thinking) ಎಂದು ಕರೆಯುತ್ತಾರೆ. ಇದರೊಂದಿಗೆ ಸೃಜನಶೀಲ ಚಿಂತನೆ (Creative thinking), ತಾರ್ಕಿಕ ಚಿಂತನೆ (Reasoning) ಉದ್ವೇಗ ಹಿಡಿತ (Impusle control) ಸಮಸ್ಯೆಗಳನ್ನು ಬಗೆಹರಿಸುವುದು (Problem solving) ಮತ್ತು ತೀರ್ಮಾನ ತೆಗೆದುಕೊಳ್ಳುವ (Desicion making) ಸಾಮರ್ಥ್ಯ ಉಂಟಾಗುತ್ತದೆ. ಇದು ಸುಮಾರು ಏಳು ವರ್ಷ ವಯಸ್ಸಿಗೆ ಪ್ರಾರಂಭವಾಗಿ ತಾರುಣ್ಯದ ಮೊದಲ ಹಂತದವರೆಗೆ ವಿಕಾಸಗೊಳ್ಳುತ್ತಿರುತ್ತದೆ. ಹರೆಯದಲ್ಲಿ ಜರುಗುವ ಮನೋವಿಕಾಸವು ಇತರರಿಗಾಗದ ಬದಲಾವಣೆಗಳು ತನ್ನಲ್ಲಿ ಏಕೆ ಆಗುತ್ತದೆ ಎಂದು ಮೊದಲು ಕಾಣಿಸಿಕೊಂಡವರ ಕುರಿತು ಬೇಸರಗೊಳ್ಳುತ್ತದೆ. ಬದಲಾವಣೆಗಳು ತಡವಾದಲ್ಲಿ, ಅರೇ ತನ್ನಲ್ಲೇಕೆ ಇನ್ನೂ ಇತರರಿಗಾದ ಬದಲಾವಣೆಗಳು ಕಾಣಿಸಿಕೊಳ್ಳಲಿಲ್ಲ ಎಂಬ ಯೋಚನೆ ಕಾಣಿಸಿಕೊಳ್ಳುತ್ತದೆ. ಇವು ಹರೆಯದ ಮನಸ್ಸನ್ನು ತಲ್ಲಣಗಳಿಗೆ ಎಡೆ ಮಾಡಿಕೊಡುತ್ತವೆ.

ಮನೋವಿಕಾಸವು ಹರೆಯದ ಮನಸ್ಸಿಗೆ ಜೀವನ ಮೌಲ್ಯಗಳು, ಸಮಾಜದಲ್ಲಿರುವ ಆಗು ಹೋಗುಗಳು, ಜನರ ನಡೆ ನುಡಿಗಳು, ಅವರ ನಂಬಿಕೆಗಳು, ಟೀಕೆ ಟಿಪ್ಪಣಿಗಳು ಮತ್ತು ಜೀವನದ ಗುರಿ ಇವುಗಳ ಕುರಿತು ಪ್ರಶ್ನಿಸಲು ಪ್ರಾರಂಭಿಸುತ್ತದೆ. ಹಿರಿಯರ ದ್ವಂದ್ವ ಸಂದೇಶಗಳು, ಅವರ ನಡೆ ನುಡಿಗಳ ಕುರಿತು ಅವಲೋಕನ ಮಾಡುತ್ತದೆ. ಇದರಿಂದ ಪೋಷಕರಿಂದ ತಾನು ಯಾವ ರೀತಿ ಬೇರೆ ಎಂಬ ಪ್ರಶ್ನೆ ಉದ್ಭವಿಸುತ್ತದೆ. ಕಾಲ್ಪನಿಕವಾಗಿ ಚಿಂತನೆ ನಡೆಸುವುದು, ತಾರ್ಕಿಕವಾಗಿ ಯೋಚಿಸುವುದು, ಯೋಜನೆಗಳನ್ನು ರೂಪಿಸುವುದು ಮತ್ತು ಸಮಸ್ಯೆಗಳನ್ನು ಬಗೆಹರಿಸುವುದು ಹೀಗೆ ಹಲವಾರು ಅಂಶಗಳ ಕುರಿತು ಚಿಂತನೆ ನಡೆಸುವ ಶಕ್ತಿ ಮನೋವಿಕಾಸದಿಂದ ಉಂಟಾಗುತ್ತದೆ. ಹರೆಯದಲ್ಲಿ ಜರುಗುವ, ಭವಿಷ್ಯದ ಅಡಿಗಲ್ಲು ಎಂದು ಹೇಳಬಹುದಾದ "ತನ್ನತನ (Self Identity) ವು ಒಂದು ಮುಖ್ಯವಾದ ಹರೆಯದ ಘಟಕ. "ತನ್ನತನ" ಎಂದರೆ ಒಬ್ಬ ವ್ಯಕ್ತಿ ತನ್ನ ಕುರಿತು ತಾನೇ ಹೊಂದಿರುವ ಕಲ್ಪನೆ, ನಂಬಿಕೆ, ಸ್ವಗ್ರಹಿಕೆ, ತಾನು ಅಳವಡಿಸಿಕೊಳ್ಳಬೇಕಾದ ಮೌಲ್ಯಗಳು, ಕೌಶಲಗಳು, ಆತ್ಮಗೌರವ, ಆತ್ಮವಿಶ್ವಾಸ, ಸಮಾಜದಲ್ಲಿ ತನ್ನ ಸ್ಥಾನಮಾನಗಳು ಹೀಗೆ ಹಲವಾರು ಅಂಶಗಳು ಕೂಡಿರುತ್ತವೆ. ಹರೆಯದಲ್ಲಿ ಯಾರು 'ತನ್ನತನ' ವನ್ನು ಸ್ಪಷ್ಟವಾಗಿ ಹೊಂದುತ್ತಾರೋ ಅವರು ಭವಿಷ್ಯದಲ್ಲಿ ಸಾಧನೆ ಮಾಡಲು ಮುಂದಾಗುತ್ತಾರೆ.

ಭಾವನಾತ್ಮಕ ಬದಲಾವಣೆಗಳು

ಹರೆಯದವರಲ್ಲಿ ಭಾವನೆಗಳ ಏರಿಳಿತಗಳು ಸಾಮಾನ್ಯ. ಸಫಲರಾದರೆ ಆಕಾಶಕ್ಕೇರುತ್ತಾರೆ. ವಿಫಲರಾದರೆ ಪಾತಾಳಕ್ಕಿಳಿಯುತ್ತಾರೆ. ವಾಸ್ತವಗಳ ಪರಿವೆಯಾಗಲಿ, ಭಾವನೆಗಳನ್ನು ಹಿಡಿತದಲ್ಲಿಟ್ಟುಕೊಳ್ಳುವ ಸಾಮರ್ಥ್ಯ ಹರೆಯದವರಲ್ಲಿ ಕಡಿಮೆ ಎಂದು ಹೇಳಬಹುದು. ಈ ವಿಧದ ಭಾವನೆಗಳ ಏರುಪೇರು ಉಂಟಾಗಲು ಕಾರಣ ಮಿದುಳಿನಲ್ಲಿ ಭಾವನೆಗಳ ಪ್ರಕ್ರಿಯೆ ವಹಿಸುವ ಲಿಂಬಿಕ್ ಮತ್ತು ಮುಮ್ಮೆದುಳಿನ ಭಾಗಗಳು. ಇದರ ಜೊತೆಗೆ ನರ ಚೋದನಿಕೆ (Neurohormone) ಎಂಬ ನರರಸಧೂತಗಳು ಕಾರಣ. ಹರೆಯದವರು ತಮ್ಮ ರೂಪದ ಕುರಿತು ಚಿಂತಿಸುತ್ತಾರೆ. ಇತರರಿಗೆ ಹೋಲಿಸಿಕೊಂಡು ತಾನು ಅವರಷ್ಟು ಚೆನ್ನಾಗಿಲ್ಲವಲ್ಲಾ ಎಂದು ಬೇಸರಿಸಬಹುದು. ತನ್ನನ್ನು ನೋಡಿ ಗೇಲಿ ಮಾಡುತ್ತಾರೆಂಬ ಭಾವನೆ ಉಂಟಾಗಬಹುದು. ಇದರಿಂದ ಅವರಲ್ಲಿ ಕೀಳರಿಮೆ ಉಂಟಾಗುತ್ತದೆ. ಇನ್ನೊಂದು ಮುಖ್ಯವಾದ ಅಂಶ ಸ್ವತಂತ್ರತೆಯನ್ನು ಬಯಸುವ



ಹರೆಯದವರು, ಪೋಷಕರೊಂದಿಗೆ ಘರ್ಷಣೆಗಳಿಗಿಳಿಯಬಹುದು. ಅವರ ಮಾರ್ಗದರ್ಶನಗಳಿಗೆ ವಿರುದ್ಧವಾಗಿ ನಡೆದುಕೊಳ್ಳಬಹುದು. ಹೆಚ್ಚು ಹೆಚ್ಚು ಗೌಪ್ಯತೆಯನ್ನು ಬಯಸುವುದು ಹರೆಯದವರ ಗುಣ.

ಹರೆಯದ ಮನಸ್ಸು ರೋಚಕ ಮತ್ತು ಪ್ರಣಯದ ಅಂಶಗಳನ್ನು ಹೆಚ್ಚು ಹೆಚ್ಚು ಬಯಸುತ್ತದೆ. ಇದರಿಂದ ಕೆಲವು ವೇಳೆ ಪೋಷಕರಿಂದ ದೂರವಾಗಿ ಸ್ನೇಹಿತರ ಆಕರ್ಷಣೆ ಹೆಚ್ಚಾಗುತ್ತದೆ. ಸಾಮಾಜಿಕ ಜಾಲತಾಣಗಳಲ್ಲಿ ಕಾಣುವ ರೋಚಕ ಮತ್ತು ಪ್ರಣಯದ ದೃಶ್ಯಗಳು ಹರೆಯದವರನ್ನು ಹೆಚ್ಚಾಗಿ ಆಕರ್ಷಿಸುತ್ತವೆ.

ಸಾಮಾಜಿಕ ಬದಲಾವಣೆಗಳು

ಇಷ್ಟು ದಿನವೂ ಪೋಷಕರ ನಿಕಟ ಸಂಬಂಧದಿಂದ ಕೂಡಿದ್ದ ಹರೆಯದ ಮನಸ್ಸು ಈಗ ಹೊರಗಿನ ಸ್ನೇಹಿತರ ಸಂಬಂಧವನ್ನು ಬಯಸುತ್ತದೆ. ಅಲ್ಲಿಯೂ ತನ್ನತನವನ್ನು ಬೆಳೆಸಿಕೊಳ್ಳಲು ಪ್ರಯತ್ನಿಸುತ್ತದೆ. ಇದರಿಂದ ಪೋಷಕ–ಮಕ್ಕಳ ಸಂಬಂಧದಲ್ಲಿ ಘರ್ಷಣೆಗಳಾಗುತ್ತವೆ. ಹರೆಯದವರು ಸಹಪಾಠಿಗಳೊಂದಿಗೆ ಒಡನಾಡಲು ಬಯಸುತ್ತಾರೆ. ಅವರ ಸಲಹೆಗಳು ಇವರಿಗೆ ಪ್ರಿಯವಾಗುತ್ತವೆ. ಪೋಷಕರ ಸಲಹೆಗಳಿಗಿಂತ ಸ್ನೇಹಿತರ ಮತ್ತು ಸಹಪಾಠಿಗಳ ಸಲಹೆಗಳು ಸರಿ ಎನಿಸುತ್ತದೆ. ಸಾಮಾಜಿಕ ಜವಾಬ್ದಾರಿಯನ್ನು ತೆಗೆದುಕೊಳ್ಳಲು ಮನಸ್ಸು ಬಯಸುತ್ತದೆ. ಪ್ರೀತಿ, ಪ್ರೇಮ ಸಂಬಂಧಗಳೆಡೆಗೆ ಮನಸ್ಸು ಎಳೆಯುತ್ತದೆ. ಸಾಮಾಜಿಕ ಜಾಲತಾಣಗಳ ಕುರಿತು ಮನಸ್ಸು ಆಕರ್ಷಣೆಗೊಳ್ಳುತ್ತದೆ. ಆದರೆ ಹರೆಯದವರ ಅಪಕ್ವ ಮನಸ್ಸಿನಿಂದಾಗಿ ಸಾಮಾಜಿಕ ಸಂಬಂಧಗಳಲ್ಲಿ ಆಗುವ ಬದಲಾವಣೆಗಳು, ವಾಸ್ತವವೋ ಅಲ್ಲವೋ, ಅವುಗಳಿಂದ ತನಗೆ ಭವಿಷ್ಯದಲ್ಲಿ ಒಳಿತಾಗುವುದೋ ಇಲ್ಲವೋ, ಎಂಬ ಅರಿವು ಕಡಿಮೆ. ಹಾಗಾಗಿ ಕ್ಷಣಿಕ ಮುದ ನೀಡುವ ದೃಶ್ಯಗಳು ಮತ್ತು ಘಟನೆಗಳನ್ನು ನೋಡಿ ಅವು ವಾಸ್ತವವೆಂದು ನಂಬಿ ಮೋಸ ಹೋಗುವ ಸಂದರ್ಭಗಳು ಹೆಚ್ಚು.

ಹೀಗೆ ಜರುಗುವ ಬದಲಾವಣೆಗಳಿಂದ ಹರೆಯದವರು ಒತ್ತಡದ ಸುಳಿಯಲ್ಲಿ ಸಿಕ್ಕುವುದರೊಂದಿಗೆ, ಹಲವಾರು ಸವಾಲುಗಳನ್ನು ಎದುರಿಸಬೇಕಾಗುತ್ತದೆ. ಅವುಗಳನ್ನು ಯಶಸ್ವಿಯಾಗಿ ನಿಭಾಯಿಸಿ, ಮನಸ್ಸು ಸಾಧನೆಯತ್ತ ಮುಂದುವರೆಯಲು ವಾಸ್ತವದ ಅರಿವು ಅವಶ್ಯ.

ಹೀಗೊಂದು ಬೊಂಡಾವಲೋಕನ

ವಾರದ ವರಸೆ
• ಸಂದೇಶ್ ನಾಯ್ಕ್ ಹಕ್ಲಾಡಿ
naiksh2@gmail.com



ಬೇಸಿಗೆಯ ಬೇಗೆಯು ತೀರಾ ಬೇಗ ಬೇಗ ಅಲ್ಲದೇ ಹೋದರೂ ನಿಧಾನಕ್ಕೆ ತನ್ನ ತೀವ್ರತೆಯನ್ನು ಹೆಚ್ಚಿಸಿಕೊಳ್ಳುತ್ತಿದೆ. ಈ ಬೇಗೆಯನ್ನು ಬಗ್ಗು ಬಡಿಯುವ ಬೇರೆ ಬೇರೆ ವ್ಯವಸ್ಥೆಗಳನ್ನು ಈ ಕಾಲದಲ್ಲಿ ಮಾಡಿಕೊಳ್ಳುವುದು ಸಹಜ. ಬೇಡ ಬೇಡವೆಂದರೂ ನಮ್ಮನ್ನು ಕೈ ಬೀಸಿ ಕರೆಯುವ ಬಿಸಿಯನ್ನು ಕೊಂಚ ದೂರ ಸರಿಸಿ, 'ತಂಪಾದವೋ ಎಲ್ಲಾ ತಂಪಾದವೋ' ಎಂದು ನಿರಾಳತೆಯಿಂದ ಮನಸಾರೆ ಗುನುಗಬೇಕು ಅಂದರೆ, ಈ ಕಾಲದಲ್ಲಿ ಸಾಧ್ಯವಾದಷ್ಟೂ ತಣ್ಣನೆಯ ಆಹಾರ ಪದಾರ್ಥ ಹಾಗೂ ಪಾನೀಯಗಳ ಸೇವನೆ ಮಾಡಬೇಕು. ಬಿಸಿ ಬಿಸಿ ಏನಿದೆ ಎಂದು ಕೇಳುವವರ ಬಾಯಲ್ಲೂ ಈ ಕಾಲದಲ್ಲಿ 'ತಣ್ಣಗೆ ಏನಿದೆಯಪ್ಪಾ?' ಎಂಬ ಮಾತು ಹೊರಳುತ್ತದೆ ಎಂದರೆ, ಕಾಲವು ಬೇಸಿಗೆಯತ್ತ ಹೊರಳುತ್ತಿದೆ ಎಂದರ್ಥ. ಇಂತಿಪ್ಪ ಬೇಸಿಗೆಯ ಕಾಲದಲ್ಲಿ ಅನ್ಯರ ಹೊಟ್ಟೆ ತಣ್ಣಗಿರಲಿ ಎಂದು ತನ್ನ ಉದರದೊಳಗೆ ಸಂಗ್ರವಾಗಿರುವ ಸ್ವಾದಭರಿತ ಉದಕವನ್ನು ಉದಾರವಾಗಿ ಧಾರೆ ಎರೆಯುವ ಈ ಎಳನೀರೆಂದರೆ ಬಲು ಅಚ್ಚುಮೆಚ್ಚು. ಹಾಗಾಗಿ 'ಬನ್ನಿ ಒಂದು ಬೊಂಡ ಕುಡಿಯೋಣ..' ಎಂಬ ಮಾತು ಹೆಚ್ಚಾಗಿ ಕೇಳಿಬರುತ್ತದೆ.

ಎಲ್ಲ ಕಾಲದಲ್ಲೂ ಲಭ್ಯವಿದ್ದರೂ, ಈ ಬೊಂಡಕ್ಕೆ ಬೇರೆ ಕಾಲಗಳಿಗಿಂತಲೂ ಬೇಸಿಗೆಯಲ್ಲೇ ತುಸು ಡಿಮ್ಯಾಂಡ್ ಜಾಸ್ತಿ. ಬೀದಿ ಬೀದಿಗಳಲ್ಲಿ ಆಳೆತ್ತರಕ್ಕೆ ಜೋಡಿಸಿಟ್ಟು, ಅದರ ಮೇಲೆ ದಪ್ಪನೇ ದಟ್ಟಿಯಂಥ ಹಳೆಯ ಬಟ್ಟೆಯೋ, ಗೋಣಿಯೋ ಅಥವಾ ಟರ್ಪಾಲನ್ನೋ ಅರೆಬರೆ ಮುಚ್ಚಿಟ್ಟಿರುವ ದೃಶ್ಯ ಹೆಚ್ಚಾಗಿ ಕಾಣಿಸುತ್ತಿದೆ ಎಂದರೆ ಸಂಶಯವೇ ಬೇಡ, ಬೇಸಿಗೆ ಕಾಲಿಟ್ಟಿದೆ ಎಂದೇ ಅರ್ಥ. ಇನ್ನು ಕೆಲವೆಡೆಗಳಲ್ಲಿ ಪುಟ್ಟ ಅಂಗಡಿಯ ಮುಂಭಾಗದ ಗಟ್ಟಿಯಾದ ಜಂತಿಗೇ ಅದನ್ನು ನೇತುಹಾಕಿ, ಅದಕ್ಕೆ ಬಿಸಿಲು ಬೀಳದಂತೆ ರಕ್ಷಿಸಲು ಸೊಪ್ಪನ್ನು ದಪ್ಪಕ್ಕೆ ಹೊದೆಸಿ, ರಕ್ಷಾ ಕವಚವನ್ನು ತಯಾರಿಸಿಡುತ್ತಾರೆ. ಇನ್ನು ಅದು ಬೊಂಡಾ ಕುಡಿಯುವ ಆಕಾಂಕ್ಷಿ ಗ್ರಾಹಕರನ್ನು ಸೆಳೆಯುವ ತಂತ್ರವೂ ಕೂಡಾ ಆಗಿರಲಿಕ್ಕೂ ಸಾಕು. ಬೇಸಿಗೆ ಬಂತೆಂದರೆ ಎಲ್ಲೆಲ್ಲೂ ನೀರಿಗೆ ಕೊರತೆ, ಹಾಹಾಕಾರ ಎಂಬ ಮಾತುಗಳೇ ಕೇಳಿಬರುವಾಗ, ಈ ಎಳನೀರಿಗೆ ಮಾತ್ರ ಕೊರತೆಯೇ ಇರಲಿಕ್ಕಿಲ್ಲ ಎಂಬಂತೆ ಭಾರೀ ಪ್ರಮಾಣದಲ್ಲಿ ಲಭ್ಯವಿರುತ್ತದೆ. ಬಾಟಲಿಗಳಲ್ಲಿ ತುಂಬಿರುವಂಥ ವಿವಿಧ ಬಣ್ಣ, ರುಚಿ ಹಾಗೂ ಬೆಲೆಯ ರೆಡಿಮೇಡ್ ಜ್ಯೂಸ್‌ಗಳು ಜನರಿಗೆ ಮಂಕುಬೂದಿ ಎರಚುವ ನಡುವೆಯೂ, ಬೊಂಡಗಳು ಒಂದು ಮಟ್ಟಿಗಿನ ಪೈಪೋಟಿ ನೀಡುತ್ತವೆ.

ನಾವು ಕುಡಿಯುವ ಪಾನೀಯಗಳಲ್ಲಿ ಕೆಲವೊಂದನ್ನು ಓಪನರ್ ಸಾಧನದ ಮೂಲಕ ಒಮ್ಮೆಗೆ ಮುಚ್ಚಳ ತೆಗೆಯುವ ಮೂಲಕ, ಇನ್ನು ಕೆಲವನ್ನು ಕೈಯ್ಯಿಂದ ತಿರುಗಿಸಿ ಮುಚ್ಚಳ ತೆಗೆಯುವ ಮೂಲಕ ತೆರೆಯುತ್ತೇವೆ. ಹಾಗೆಯೇ ಮಿಕ್ಸಿಗೆ ಹಾಕಿ ಅರೆಯುವ ಮೂಲಕವೂ ಜ್ಯೂಸ್‌ನ್ನು ಪಡೆಯುತ್ತೇವೆ. ಅವುಗಳಿಗೆಲ್ಲ ಹೋಲಿಸಿದರೆ, ಎಳನೀರನ್ನು ಸರಿಯಾಗಿ ಕೆತ್ತಿ ಅಥವಾ ಕೊಚ್ಚಿ ಸರಿಯಾದ ರಂಧ್ರ ತೆಗೆದು, ಅದನ್ನು ಕುಡಿಯುವವರಿಗೆ ನೀಡುವುದು ಕೊಂಚ ಸವಾಲಿನ ಕೆಲಸವೇ ಸರಿ. ಅದರಲ್ಲೂ ಒಂದು ಕೈಯ್ಯಲ್ಲಿ ಬೊಂಡ ಇನ್ನೊಂದರಲ್ಲಿ ದಪ್ಪನೆಯ ಕತ್ತಿ ಹಿಡಿದುಕೊಂಡು ಕ್ಷಣಾರ್ಧದಲ್ಲಿ ಹಾಗೆ ಕೆತ್ತಿ ನೀಡುವ ಕೆಲವರ ಪ್ರಾವೀಣ್ಯತೆಯನ್ನು ಗಮನಿಸುತ್ತಿದ್ದರೆ, 'ಅರೇ ಇವರೇನಾದರೂ ಕತ್ತಿ ವರಸೆ ಪಾರಂಗತರೇ?' ಎಂಬ ಅನುಮಾನ ಮೂಡುತ್ತದೆ. ಈಗೀಗ ಇದನ್ನು ಕೆತ್ತಲೂ ಯಂತ್ರಗಳಂಥ ಸಾಧನಗಳೆಲ್ಲ ಮಾರುಕಟ್ಟೆಗೆ ಲಗ್ಗೆ ಇಟ್ಟರೂ ಕೂಡಾ, ಕೈಯ್ಯಲ್ಲಿ ಒಂದೊಂದೇ ಪಾರ್ಶ್ವವನ್ನು ಕೆತ್ತಿ ಒಂದು ಹದಕ್ಕೆ ಬಂದ ಮೇಲೆ, ಕತ್ತಿಯ ಚೂಪಾದ ತುದಿಯಿಂದ ಒಂದು ಲಘುವಾದ ಹೊಡೆತ ನೀಡಿ, ಚಳ್ ಎಂದು (ನೆತ್ತರೇ ಹಾರಿದಂತೆ) ನೀರು ಸಣ್ಣಗೆ ಹೊರಗೆ ಹಾರುವಂತೆ ಮಾಡಿ ರಂಧ್ರವನ್ನು ಸರಿಪಡಿಸಿ, ಕುಡಿಯುವವರ ಕೈಗೆ ನೀಡುವವರೆಗಿನ ಆ ಇಡೀ ಪ್ರಕ್ರಿಯೆಯ ಚೆಂದವೇ ಬೇರೆ ಬಿಡಿ. ತಮ್ಮ ಕೈ ಮೇಲೇ ಹಿಡಿದು ಇಷ್ಟನ್ನೆಲ್ಲಾ ಕರಾರುವಕ್ಕಾಗಿ ಮಾಡಿ ಮುಗಿಸುವ ಅವರ ಧೈರ್ಯವನ್ನು ನಾವು 'ಬೊಂಡ ಧೈರ್ಯ' ಎನ್ನಬಹುದು. ಮತ್ತಿದು ಭಂಡ ಧೈರ್ಯಕ್ಕಿಂತ ಒಂದು ಕೈ ಒಳ್ಳೆಯದೇ ಸರಿ.

ಇನ್ನು ಹೀಗೆ ಈ ಬೊಂಡ ಕತ್ತರಿಸಿ ಕೊಡುವ ಅವರಲ್ಲಿ ಒಂದು ಬಗೆಯ ದಿವ್ಯ ದೃಷ್ಟಿಯೂ ಇದೆಯೇ ಎಂಬ ಅನುಮಾನವೊಂದು ಮೂಡಲೂ ಕಾರಣವಿದೆ. ನೋಡಿ ಒಬ್ಬರು ಬರ್ತಾರೆ ದಪ್ಪ ಕಾಯಿ, ಇನ್ನೊಬ್ಬರು ಗಂಜಿ, ಮತ್ತೊಬ್ಬರು ತೆಳು ಗಂಜಿ, ಮಗದೊಬ್ಬರು ಬರೀ ನೀರು ಎನ್ನುತ್ತಾರೆ. ಹೀಗೆ ಬೇರೆ ಬೇರೆ ಬಗೆಯ ಎಳನೀರನ್ನು ಕಣ್ಣಳತೆಯಲ್ಲೇ ಅಥವಾ ಬೆರಳಿನಿಂದ ಸಿಡಿದು ಪರೀಕ್ಷಿಸಿ ಅವರವರಿಗೆ ತಕ್ಕುದಾದ ಎಳನೀರನ್ನು ಆರಿಸಿ ನೀಡುವ ಚಾಕಚಕ್ಯತೆ ಕಡಿಮೆಯದ್ದೇನಲ್ಲ. ಇವರ ಈ ಪರಿ ಯಾವುದೇ ಸ್ಕ್ಯಾನಿಂಗ್ ಯಂತ್ರವನ್ನೂ ಮೀರಿಸುವಂಥದ್ದು ಅನಿಸುತ್ತದೆ. ಅವತ್ತೊಂದಿನ ಎಳನೀರು ಕುಡಿಯುತ್ತಾ ನಿಂತಿದ್ದೆ. ಅಷ್ಟರಲ್ಲಿ ಒಬ್ಬಾತ ಬಂದು 'ದೋಸೆ' ಅಂದ. ನನಗೋ ಎಳನೀರು ಮಾರುವಲ್ಲಿ ದೋಸೆಯೂ ಸಿಗುತ್ತದೆಯೋ ಎಂಬ ಗೊಂದಲವುಂಟಾಗಿ ಅತ್ತ ತಿರುಗಿದರೆ, ದಪ್ಪ ಕಾಯಿಯುಳ್ಳ ಎಳನೀರನ್ನು ಅಂಗಡಿಯಾತ ಕತ್ತರಿಸಿ ನೀಡುತ್ತಿದ್ದ. ಆದರೂ ಅವರಲ್ಲಿ, "ಅದು ಹೇಗೆ ನೀವು, ಎಲ್ಲರೂ ಬಂದು ಬಗೆ ಬಗೆಯ ಎಳನೀರನ್ನು ಕೇಳುವಾಗ, ಅವರು ಕೇಳಿದ್ದಕ್ಕೆ ಅನುಗುಣವಾಗಿ ಸೂಕ್ತವಾದುದನ್ನೇ, ಹುಡುಕಿ ಹೆಕ್ಕಿ ನೀಡುವಿರಲ್ಲ?" ಎಂದು ಕೇಳಿದರೆ, ಅದಕ್ಕವರು "ಅಯ್ಯೋ ಅದೇನಿಲ್ಲ. ಅವರು ಕೇಳಿದಾಕ್ಷಣ ಸುಮ್ಮನೆ ಬೆರಳಲ್ಲಿ ಮೂರು ನಾಲ್ಕು ಸಲ ಟಿಕ್ ಟಿಕ್ ಸಿಡಿದು ನೋಡಿ, ಬೇರೆ ಬೇರೆ ಎರಡು ಮೂರನ್ನು ಹೆಕ್ಕಿ, ಅತ್ತಿತ್ತ ಸರಿಸಿ ಕೊನೆಗೊಂದು ಎತ್ತಿ ನೀಡಿದರೆ ಆಯ್ತು. ಗಿರಾಕಿ ಸಂತೃಪ್ತರಾಗುತ್ತಾರೆ" ಎಂದೆನ್ನಲೂಬಹುದು.

ಈ ಅಂಶ ಒಂದು ಮಟ್ಟಿಗೆ ನಿಜವೂ ಹೌದು. ಯಾರಾದರೂ ಇಂಥದ್ದೇ ಎಳನೀರು ಬೇಕೆಂದಾಗ ಅವರು ಒಮ್ಮೆಗೇ ನೇರವಾಗಿ ಒಂದನ್ನು ಎತ್ತಿ ನೀಡಿದರೆ, ಅದು ಅವರು ಹೇಳಿದ್ದ ರೀತಿಯದ್ದೇ ಆದರೂ ಗ್ರಾಹಕರಿಗೆ ಅದರಿಂದ ಅಷ್ಟೇನೂ ಖುಷಿಯಾಗದು. ಆತ ಸರಿಯಾಗಿ ಹುಡುಕಿ, ನನಗೆಂದೇ ಆರಿಸಿ ಕೊಡಲಿಲ್ಲ ಎಂಬ ಆಕ್ಷೇಪವೊಂದು ಉಳಿಯುತ್ತದೆ. ಅದೇ ಈ ಮೇಲೆ ಹೇಳಿದಂತೆಲ್ಲ ಮಾಡಿ, ಸ್ವಲ್ಪ ಸಮಯ ತೆಗೆದುಕೊಂಡು ನೀಡಿದಾಗ, ಅದು ಅವರು ಹೇಳಿದ್ದಕ್ಕಿಂತಲೂ ಸ್ವಲ್ಪ ವ್ಯತ್ಯಾಸವಾಗಿದ್ದರೂ ಕೂಡಾ ಅದಕ್ಕವರು



ಕಮಕ್ ಕಿಮಕ್ ಎನ್ನದೇ ಸುಮ್ಮನೇ ಎತ್ತಿ ಕಣ್ಣು ಮುಚ್ಚಿ ಕುಡಿದುಕೊಂಡು ಹೋಗುತ್ತಾರೆ. ಈ ಎಲ್ಲಾ ಅಂಶಗಳನ್ನು ಗಮನಿಸಿದರೆ ಒಂದಂತೂ ನಿಜ, ಈ ಎಳನೀರು ಮಾರಾಟವೂ ಒಂದು ಕಲೆಯೇ ಹೌದು. ಬೇಕಿದ್ದರೆ ಅದನ್ನು ಕೆತ್ತಿ, ಕತ್ತರಿಸಿ, ಕೊಚ್ಚಿಯೋ ನೀಡುವಾಗ ಅದರ ಚೊಗರಿನ ಅಂಶ ಬಟ್ಟೆಗೆ, ಕತ್ತಿಗೆ ಹಾಗೂ ಮೈಕೈಗೆಲ್ಲಾ ಅಂಟಿಕೊಂಡು ಉಂಟಾಗುವ ಕಲೆಯ ಕಾರಣಕ್ಕೂ ನಾವು ಹಾಗೆ ಹೇಳಬಹುದು.

ಆರೋಗ್ಯ ಹದಗೆಟ್ಟಾಗಲೂ ಈ ಎಳನೀರು ಬೇಕು, ತುಂಬಾ ಸುಸ್ತು ಎನಿಸಿದಾಗ, ಆ ಸುಸ್ತನ್ನು ಬೇಸ್ತು ಬೀಳಿಸಲೂ ಸಹ ಇದೇ ಎಳನೀರು ನೆರವಿಗೆ ಬರುತ್ತದೆ. ಇನ್ನು ಮನೆಗೆ ಬಂದ ಅತಿಥಿಗಳು ಎಷ್ಟು ಪ್ರಮುಖರು ಎನ್ನುವುದನ್ನೂ ಕೂಡಾ ಈ ಬೊಂಡ ನೀಡಿ ಸ್ವಾಗತಿಸಿದರೋ ಇಲ್ಲವೋ ಎಂಬ ಆಧಾರದಲ್ಲಿ ನಿರ್ಧರಿಸುವುದಿದೆ. ಮನುಷ್ಯರಷ್ಟೇ ಅಲ್ಲ ದೈವ–ದೇವರೂ ಸಹ ಬೊಂಡ ಪ್ರಿಯರು ಎನ್ನುವುದಕ್ಕೆ, ಸೀಯಾಳ ಸೇವೆ, ಸೀಯಾಳಾಭಿಷೇಕಗಳೇ ಸಾಕ್ಷಿಯಾಗಿವೆ. ಇಷ್ಟೆಲ್ಲಾ ಸಾಲದು ಎಂಬಂತೆ ಬೊಂಡದ ನೀರು, ಗಂಜಿಯನ್ನು ಬಳಸಿ ಜ್ಯೂಸ್‌ನ್ನು ಕೂಡಾ ತಯಾರಿಸಿ ಮಾರಲಾಗುತ್ತದೆ. ಇಷ್ಟೇ ಅಲ್ಲದೇ, ಎಳನೀರನ್ನು ಕಡಿದು ಅದರೊಳಗಿನ ನೀರನ್ನು ಬಾಟಲ್‌ಗಳಲ್ಲಿ ಹಾಕಿ ಸೀಲ್ ಮಾಡಿ ಮಾರುವುದು, ಅದರ ಮೇಲ್ಮೈ ಪದರವನ್ನೆಲ್ಲಾ ಚೆನ್ನಾಗಿ ಕೆತ್ತಿ ಮೇಲೊಂದು ಪ್ಲಾಸ್ಟಿಕ್ ಹೊದಿಕೆ ಹೊದೆಸಿ, ಸ್ಟಿಕ್ಕರ್ ಅಂಟಿಸಿ, ಸೀಲ್ ಮಾಡಿ ಮಾರುವುದಿದೆಯಲ್ಲ ಅದು ನಿಜಕ್ಕೂ ಬೊಂಡದ ಮೇಲಿನ ಶೋಷಣೆಯೇ ಸರಿ! ಏನೇ ಹೇಳಿ, ಮನುಷ್ಯರಿಗೆ ಸುಲಭಕ್ಕೆ ಲಭ್ಯವಾಗುವಂತೆ ಎಲ್ಲೆಡೆಯೂ ಸಿಹಿ ನೀರಿನ ಸೆಲೆಯನ್ನು ಸೃಷ್ಟಿಸಲು ಆಗಲಿಕ್ಕಿಲ್ಲ ಎಂದೇ ಆ ದೇವರು ಈ ಎಳನೀರನ್ನು ಸೃಷ್ಟಿಸಿರಬೇಕು. ಅದು, ಬಿರು ಬೇಸಿಗೆಯಲ್ಲೂ ಆದಷ್ಟೂ ಎಲ್ಲರನ್ನೂ ತಣ್ಣಗಿರಿಸಲಿ.

ಓವರ್‌ಡೋಸ್: ಹೆಚ್ಚಿನ ಅಮರಣಾಂತ ಉಪವಾಸ ಕೊನೆಗೊಳ್ಳುವುದೇ ಎಳನೀರಿನ ಸೇವನೆಯೊಂದಿಗೆ. ಅಂದರೆ ಅದೆಷ್ಟೋ ಜನರ ಪ್ರಾಣ ಉಳಿಸಿದ ಹೆಚ್ಚುಗಾರಿಕೆ ಈ ಎಳನೀರಿನದ್ದು ಎಂದಾಯ್ತು!



ಮಧ್ಯಪ್ರಾಚ್ಯ ಯುದ್ಧದ ತಂತ್ರಗಾರಿಕೆಯಲ್ಲಿ ಅಪಾಯಕಾರಿ ಬದಲಾವಣೆ | ಜೀವಜಲಕ್ಕೂ ಸಂಚಕಾರ

ತೈಲದಷ್ಟೇ ನೀರಿನ ಮೂಲಗಳೂ ಗುರಿ

ಅಪಾಯಕಾರಿ ಯುದ್ಧ ತಂತ್ರಗಳು

ನೀರು ಶುದ್ಧೀಕರಣ ಘಟಕಗಳನ್ನು ಗುರಿಯಾಗಿಸುವುದನ್ನು ತಜ್ಞರು ಅಸಮ್ಮಿತ ಯುದ್ಧ (ಅಸಿಮಿಟ್ರಿಕಲ್) ಎಂದು ಬಣ್ಣಿಸಿದ್ದಾರೆ. ಅಮೆರಿಕ ಅಥವಾ ಇಸ್ರೇಲ್ ಮೇಲೆ ಸಮಾನ ಬಲದೊಂದಿಗೆ ಸಾಂಪ್ರದಾಯಿಕ ದಾಳಿ ನಡೆಸುವ ಸಾಮರ್ಥ್ಯ ಇರಾನ್‌ಗೆ ಇಲ್ಲದಿರುವುದರಿಂದ, ಅದು ತನ್ನ ಕೊಲ್ಲಿ ನೆರೆಹೊರೆಯ ರಾಷ್ಟ್ರಗಳ ಮೇಲೆ ಒತ್ತಡ ಹೇರುತ್ತಿದೆ. ಅವರ ಮೂಲಭೂತ ಜೀವನ ಬೆಂಬಲ ವ್ಯವಸ್ಥೆಗಳಿಗೆ ಬೆದರಿಕೆ ಹಾಕುವ ಮೂಲಕ ಈ ರಾಷ್ಟ್ರಗಳು ಯುದ್ಧ ನಿಲ್ಲಿಸಲು ಮಧ್ಯಸ್ಥಿಕೆ ವಹಿಸುವಂತೆ ಮಾಡುವುದು ಇರಾನ್‌ನ ಗುರಿ ಎನ್ನಲಾಗಿದೆ.

ಪ್ರಾದೇಶಿಕ ದುರ್ಬಲತೆ ಮೇಲೆ ಕಣ್ಣು

ಈ ಘಟಕಗಳ ಕಾರ್ಯತಂತ್ರದ ಗಂಭೀರತೆಯನ್ನು ಹಗುರವಾಗಿ ತೆಗೆದುಕೊಳ್ಳುವಂತಿಲ್ಲ. ನೈಸರ್ಗಿಕ ಸಿಹಿನೀರಿನ ಕೊರತೆಯಿರುವ ಈ ಪ್ರದೇಶದಲ್ಲಿ, ಕೊಲ್ಲಿ ರಾಷ್ಟ್ರಗಳು ಕುಡಿಯುವ ನೀರಿಗಾಗಿ ಸಂಪೂರ್ಣವಾಗಿ ಸಂಸ್ಕರಿಸಿದ ಸಮುದ್ರದ ನೀರನ್ನು ಅವಲಂಬಿಸಿವೆ. ಕುವೈತ್ ತನ್ನ ಕುಡಿಯುವ ನೀರಿನ ಶೇ.90ರಷ್ಟನ್ನು, ಒಮಾನ್ ಶೇ.86ರಷ್ಟನ್ನು ಮತ್ತು ಸೌದಿ ಅರೇಬಿಯಾ ಶೇ.70ರಷ್ಟನ್ನು ಸಮುದ್ರದ ನೀರಿನ ಈ ಶುದ್ಧೀಕರಣ ಘಟಕಗಳಿಂದಲೇ ಪಡೆಯುತ್ತದೆ. ಜುಬೈಲ್‌ನಂತಹ ಪ್ರಮುಖ ಘಟಕಗಳು ಸ್ಥಗಿತಗೊಂಡರೆ ರಿಯಾದ್‌ನಂತಹ ನಗರಗಳನ್ನು ಕೇವಲ ಒಂದು ವಾರದೊಳಗೆ ಸಂಪೂರ್ಣವಾಗಿ ಖಾಲಿ ಮಾಡಬೇಕಾಗಬಹುದು ಎಂದು ವಿಶ್ಲೇಷಕರು ಎಚ್ಚರಿಸಿದ್ದಾರೆ.

ದುಬೈ: ಇರಾನ್ ಮೇಲೆ ಅಮೆರಿಕ-ಇಸ್ರೇಲ್ ಮೈತ್ರಿಕೂಟದ ನಡುವಿನ ಸಂಘರ್ಷ ತೀವ್ರಗೊಳ್ಳುತ್ತಿದ್ದಂತೆ ಯುದ್ಧದ ತಂತ್ರಗಾರಿಕೆಯಲ್ಲಿ ಅಪಾಯಕಾರಿ ಬದಲಾವಣೆ ಕಂಡುಬಂದಿದೆ. ಜಾಗತಿಕ ಗಮನವು ಕಚ್ಚಾ ತೈಲ ಬೆಲೆಗಳ ಮೇಲೆ ಕೇಂದ್ರೀಕೃತವಾಗಿದ್ದರೂ, ಪ್ರಮುಖ ಸಮುದ್ರದ ನೀರು ಶುದ್ಧೀಕರಣ ಘಟಕಗಳನ್ನು ಪ್ರಮುಖ ಗುರಿಗಳೆಂದು ಗುರುತಿಸಲಾಗಿದ್ದು, ಇದು ಲಕ್ಷಾಂತರ ಜನರ ಉಳಿವಿಗೇ ಸಂಚಕಾರ ತಂದಿದೆ.

ಪ್ರಮುಖ ಶುದ್ಧೀಕರಣ ಘಟಕವೊಂದರ ಮೇಲೆ ಇರಾನ್ ನಡೆಸಿದ ಡ್ರೋನ್ ದಾಳಿಯಿಂದ ಭೌತಿಕ ಹಾನಿ ಸಂಭವಿಸಿದೆ ಎಂದು ಬಹ್ರೇನ್ ಭಾನುವಾರ ಅಧಿಕೃತವಾಗಿ ಆರೋಪಿಸಿದೆ. ಇದಕ್ಕೂ ಮುನ್ನ ಕ್ವೆಶ್ಮ್ ದ್ವೀಪದಲ್ಲಿರುವ ತನ್ನ ನೀರು ಶುದ್ಧೀಕರಣ ಘಟಕವನ್ನು ಅಮೆರಿಕದ ವೈಮಾನಿಕ ದಾಳಿ ಧ್ವಂಸಗೊಳಿಸಿದೆ ಎಂದು ಇರಾನ್ ಆರೋಪಿಸಿತ್ತು. ಇದರಿಂದಾಗಿ 30 ಗ್ರಾಮಗಳ ನೀರಿನ ಸಂಪರ್ಕ ಕಡಿತಗೊಂಡಿದೆ ಎಂದು ವರದಿಯಾಗಿದೆ. ನಾಗರಿಕರ ಬದುಕಿಗೆ ಅತ್ಯಗತ್ಯವಾದ ಮೂಲಸೌಕರ್ಯಗಳ ಮೇಲೆ ದಾಳಿ ಮಾಡುವುದನ್ನು ನಿಷೇಧಿಸುವ ಅಂತಾರಾಷ್ಟ್ರೀಯ ಮಾನವೀಯ ಕಾನೂನನ್ನು ಈ ದಾಳಿಗಳು ಉಲ್ಲಂಘಿಸಿವೆ.


ಪರಿಸರ ಮತ್ತು ಮಾನವೀಯ ಅಪಾಯಗಳು: ಇದಲ್ಲದೆ, ಈ ಘಟಕಗಳನ್ನು ನಡೆಸಲು ಅಗತ್ಯವಿರುವ ಇಂಧನ ಪೂರೈಕೆಗೂ ಯುದ್ಧದಿಂದ ವ್ಯತ್ಯಯ ಉಂಟಾಗಿದೆ. ಹೆಚ್ಚಿನ ಘಟಕಗಳು ವಿದ್ಯುತ್ ಕೇಂದ್ರಗಳೊಂದಿಗೆ ಸಂಯೋಜಿತವಾಗಿವೆ. ಆದ್ದರಿಂದ, ವಿದ್ಯುತ್ ಜಾಲಗಳ ಮೇಲೆ ನಡೆಯುವ ಯಾವುದೇ ದಾಳಿ ಏಕಕಾಲದಲ್ಲಿ ನೀರಿನ ಉತ್ಪಾದನೆಯನ್ನೂ ಸ್ಥಗಿತಗೊಳಿಸುತ್ತದೆ. ಅಸುರಕ್ಷಿತ ಕರಾವಳಿ ತೀರಗಳಲ್ಲಿ ನೂರಾರು ಘಟಕಗಳು ಇರುವುದರಿಂದ, ಯುದ್ಧ ವಿಸ್ತರಿಸಿದಂತೆ ಭೀಕರ ಮಾನವೀಯ ಬಿಕ್ಕಟ್ಟು ಸಂಭವಿಸುವ ಸಾಧ್ಯತೆ ದಟ್ಟವಾಗಿದೆ.

ಐದು ವರ್ಷಗಳ ತೀವ್ರ ಬರಗಾಲದ ನಂತರ, ಟೆಹ್ರಾನ್‌ನ ಜಲಾಶಯಗಳಲ್ಲಿನ ನೀರಿನ ಮಟ್ಟ ಅದರ ಸಾಮರ್ಥ್ಯದ ಶೇ.10ಕ್ಕೆ ಕುಸಿದಿರುವುದರಿಂದ ಇರಾನ್ ಅಪಾಯದಲ್ಲಿದೆ ಎಂದು ಸುದ್ದಿ ಸಂಸ್ಥೆಯೊಂದು ತಿಳಿಸಿದೆ. ಇರಾನ್ ಇನ್ನೂ ನದಿಗಳು ಮತ್ತು ಅಂತರ್ಜಲ ಮೂಲಗಳ ಮೇಲೆ ಅವಲಂಬಿತವಾಗಿದೆ. ಯುಎಸ್ ನೇತೃತ್ವದ ಅಂತಾರಾಷ್ಟ್ರೀಯ ನಿರ್ಬಂಧಗಳಿಂದ ಇವುಗಳ ವಿಸ್ತರಣೆಯೂ ಅಸಾಧ್ಯ ಎನಿಸಿದೆ.

ಚೇತರಿಕೆಗೆ ಬೇಕು ದೀರ್ಘಾವಧಿ: 1990–91ರ ಕೊಲ್ಲಿ ಯುದ್ಧದ ಸಮಯದಲ್ಲಿ ಇರಾಕಿ ಪಡೆಗಳು ಕುವೈತ್ ನೀರು ಶುದ್ಧೀಕರಣ ಸೌಲಭ್ಯಗಳನ್ನು ಹಾಳುಗೆಡವಿದ್ದವು. ಲಕ್ಷಾಂತರ ಬ್ಯಾರೆಲ್‌ಗಳಷ್ಟು ತೈಲವನ್ನು ಸಮುದ್ರಕ್ಕೆ ಬಿಡುಗಡೆ ಮಾಡಲಾಗಿತ್ತು. ಇದರಿಂದ ಕುವೈತ್ ಶುದ್ಧ ನೀರಿಲ್ಲದೆ ಪರದಾಡಿತ್ತು, ಇದರಿಂದ ಚೇತರಿಸಿಕೊಳ್ಳಲು ವರ್ಷಗಳೇ ಬೇಕಾಯಿತು.

ಯುಎಇ ಮೇಲೆ 16 ಕ್ಷಿಪಣಿ, 117 ಡ್ರೋನ್ ದಾಳಿ!

ಭಾನುವಾರ 16 ಖಂಡಾಂತರ ಕ್ಷಿಪಣಿಗಳು ಮತ್ತು 117 ಡ್ರೋನ್‌ಗಳಿಂದ ಇರಾನ್ ಹೊಸ ದಾಳಿ ನಡೆಸಿದೆಯೆಂದು ಯುನೈಟೆಡ್ ಅರಬ್ ಎಮಿರೇಟ್ಸ್ (ಯುಎಇ) ರಕ್ಷಣಾ ಸಚಿವಾಲಯ ಹೇಳಿದೆ. ಇರಾನ್ ಕಳುಹಿಸಿದ 16 ಖಂಡಾಂತರ ಕ್ಷಿಪಣಿಗಳನ್ನು ಹೊಡೆದುರುಳಿಸಿದ್ದು, 17ನೇ ಕ್ಷಿಪಣಿ ಗುರಿ ತಪ್ಪಿ ಸಮುದ್ರಕ್ಕೆ ಬಿದ್ದಿದೆ. ಬಹುತೇಕ ಎಲ್ಲಾ ಡ್ರೋನ್‌ಗಳನ್ನು ಹೊಡೆದುರುಳಿಸಿದ್ದೇವೆ. ಆದರೆ 4 ಡ್ರೋನ್‌ಗಳು ಮಾತ್ರ ಯುಎಇ ಗಡಿಯೊಳಗೆ ಬಂದು ಬಿದ್ದಿವೆಯೆಂದು ಸಚಿವಾಲಯ ತಿಳಿಸಿದೆ. ಯುಎಇ ಮೇಲಿನ ಯಾವುದೇ ಆಕ್ರಮಣವನ್ನು ದೃಢವಾಗಿ ಎದುರಿಸಲು ಸಿದ್ಧರಿದ್ದೇವೆ ಎಂದು ಯುಎಇ ಸ್ಪಷ್ಟ ಸಂದೇಶವನ್ನು ನೀಡಿದೆ. ಆದರೆ ಭಾನುವಾರ ಎಲ್ಲೆಲ್ಲಾ ದಾಳಿ ನಡೆದಿವೆಯೆಂದು ಯುಎಇ ಮಾಹಿತಿ ನೀಡಿಲ್ಲ. ಮಧ್ಯ ಪ್ರಾಚ್ಯದೆಲ್ಲೆಡೆ ಅಮೆರಿಕದ ಸೇನಾ ನೆಲೆಗಳ ಮೇಲೆ ದಾಳಿ ತೀವ್ರತೆ ಹೆಚ್ಚಿಸುವುದಾಗಿ ಭಾನುವಾರ ಬೆಳಗ್ಗೆ ಇರಾನ್ ಅಧ್ಯಕ್ಷ ಮಸೂದ್ ಪೆಜೆಶ್ಕಿಯನ್ ಯುಎಇ ಸೇರಿ ನೆರೆಯ ರಾಷ್ಟ್ರಗಳಿಗೆ ಬೆದರಿಕೆಯೊಡ್ಡಿದ್ದರು. ಆದರೆ ಇರಾನ್ ನಡೆಸಿದ ದಾಳಿಯನ್ನು ಯುಎಇ ಸಮರ್ಥವಾಗಿ ಎದುರಿಸಿದೆ.



200 ಹೆಜ್ಬೊಲ್ಲಾ ಉಗ್ರರ ಬಲಿ

ಮಾ.2ರಂದು ಇಸ್ರೇಲ್ ಮೇಲೆ ದಾಳಿ ನಡೆಸಿದ ಬಳಿಕ ಇಲ್ಲಿಯವರೆಗೆ 200 ಹೆಜ್ಬೊಲ್ಲಾ ಉಗ್ರರನ್ನು ಹೊಡೆದುರುಳಿಸಿದ್ದೇವೆ ಎಂದು ಇಸ್ರೇಲ್ ಸೇನೆ (ಐಡಿಎಫ್) ಭಾನುವಾರ ಘೋಷಿಸಿದೆ. ಲೆಬನಾನ್ ಉಗ್ರ ಸಂಘಟನೆ ವಿರುದ್ಧದ ಹೋರಾಟದಲ್ಲಿ ಶನಿವಾರ ರಾತ್ರಿಯವರೆಗೆ 14 ಮಂದಿ ಇಸ್ರೇಲಿ ಯೋಧರು ಗಾಯಗೊಂಡಿದ್ದಾರೆ ಎಂದು ಐಡಿಎಫ್ ತಿಳಿಸಿದೆ. ಶುಕ್ರವಾರ ಹೆಜ್ಬೊಲ್ಲಾ ಟ್ಯಾಂಕ್ ವಿರೋಧಿ ಕ್ಷಿಪಣಿಯ ಮೂಲಕ ದಾಳಿ ನಡೆಸಿದ್ದಾಗ ಇಬ್ಬರು ಇಸ್ರೇಲಿ ಯೋಧರು ಗಾಯಗೊಂಡಿದ್ದರು. ಇಸ್ರೇಲಿ ದಾಳಿ ಹಿನ್ನೆಲೆ ದಕ್ಷಿಣ ಲೆಬನಾನ್‌ನಲ್ಲಿ ವಾಸವಿದ್ದ 5 ಲಕ್ಷ ಬೆಂಬಲಿಗರನ್ನು ಹೆಜ್ಬೊಲ್ಲಾ ಸುರಕ್ಷಿತ ಸ್ಥಳಾಂತರ ಮಾಡಿದೆ. ಕಳೆದೊಂದು ವಾರದಲ್ಲಿ ಹೆಜ್ಬೊಲ್ಲಾ ವಿರುದ್ಧ 500 ದಾಳಿಗಳನ್ನು ಮಾಡಿದ್ದಾಗಿ ಐಡಿಎಫ್ ಹೇಳಿದೆ.



ಇರಾನ್‌ನ ಐದು ತೈಲ ಘಟಕಗಳ ಮೇಲೆ ದಾಳಿ

ಯುದ್ಧ ಆರಂಭವಾದಲ್ಲಿಂದ ಇಲ್ಲಿಯವರೆಗೆ ಇದೇ ಮೊದಲ ಬಾರಿಗೆ ಇರಾನ್ ತೈಲ ಸಂಸ್ಕರಣಾ ಘಟಕಗಳ ಮೇಲೆ ಇಸ್ರೇಲ್ ಭಾನುವಾರ ಭಾರೀ ದಾಳಿ ನಡೆಸಿದ್ದು, ಕನಿಷ್ಠ 4 ಮಂದಿ ಬಲಿಯಾಗಿದ್ದಾರೆ. ಇರಾನ್‌ನ ಐದು ತೈಲ ಶೇಖರಣಾ ಮತ್ತು ಉತ್ಪಾದನಾ ಘಟಕಗಳ ಮೇಲೆ ಇಸ್ರೇಲ್ ಶನಿವಾರ ತಡರಾತ್ರಿ ಭಾರೀ ದಾಳಿ ನಡೆಸಿದೆ. ಟೆಹ್ರಾನ್ ಮತ್ತು ಅಲ್ಬೋರ್ಜ್ ಎಂಬಲ್ಲಿನ ತೈಲ ಘಟಕಗಳ ಮೇಲೆ ದೊಡ್ಡ ಪ್ರಮಾಣದ ದಾಳಿ ನಡೆದಿದ್ದು, 4 ಮಂದಿ ಟ್ಯಾಂಕರ್ ಚಾಲಕರು ಸ್ಥಳದಲ್ಲೇ ಮೃತಪಟ್ಟಿದ್ದಾರೆ. ಕಳೆದ ಜೂನ್‌ನಲ್ಲಿ 12 ದಿನಗಳ ಕಾಲ ಯುದ್ಧ ನಡೆದಿದ್ದಾಗ ಇರಾನ್ ತೈಲ ಘಟಕಗಳನ್ನು ಇಸ್ರೇಲ್ ಗುರಿಯಾಗಿಸಿತ್ತು.

ಎಫ್-14 ಯುದ್ಧ ವಿಮಾನ ಹೊಡೆದುರುಳಿಸಿದ ಇಸ್ರೇಲ್

ದಕ್ಷಿಣ ಟೆಹ್ರಾನ್‌ನ ಇಸ್ಫಹಾನ್ ವಿಮಾನ ನಿಲ್ದಾಣದಲ್ಲಿ ನಿಲುಗಡೆಗೊಳಿಸಿದ್ದ ಅಮೆರಿಕ ನಿರ್ಮಿತ ಎಫ್-14 ಯುದ್ಧ ವಿಮಾನಗಳನ್ನು ನಾಶ ಮಾಡಿದ್ದಾಗಿ ಇಸ್ರೇಲ್ ಹೇಳಿದೆ. 1979ರ ಇಸ್ಲಾಮಿಕ್ ಕ್ರಾಂತಿಗೂ ಮುನ್ನ ಎಫ್-14 ಯುದ್ಧ ವಿಮಾನಗಳನ್ನು ಇರಾನ್ ಅಮೆರಿಕದಿಂದ ಖರೀದಿಸಿತ್ತು. ಇವು ಇರಾನ್ ವಾಯು ರಕ್ಷಣೆಯಲ್ಲಿ ಪ್ರಮುಖ ಪಾತ್ರ ವಹಿಸುತ್ತಿದ್ದವು.

ರಷ್ಯಾ ವಿಮಾನದಲ್ಲಿ 117 ಇರಾನಿಯನ್ನರ ಸ್ಥಳಾಂತರ

ಇಸ್ರೇಲ್ ದಾಳಿ ನಡುವೆ ಲೆಬನಾನ್‌ನ ಬೈರತ್‌ನಲ್ಲಿ ಸಿಲುಕಿದ್ದ ಒಟ್ಟು 117 ಇರಾನಿಯನ್ನರನ್ನು ರಷ್ಯಾ ವಿಮಾನವನ್ನು ಬಳಸಿ ಸುರಕ್ಷಿತ ಸ್ಥಳಾಂತರ ಮಾಡಲಾಗಿದೆ ಎಂದು ಲೆಬನಾನಿ ಅಧಿಕಾರಿಗಳು ಭಾನುವಾರ ತಿಳಿಸಿದ್ದಾರೆ.

ವೆಸ್ಟ್ ಬ್ಯಾಂಕ್‌ನಲ್ಲಿ 3 ಪ್ಯಾಲೆಸ್ತೀನಿಯರ ಸಾವು

ವೆಸ್ಟ್ ಬ್ಯಾಂಕ್‌ನಲ್ಲಿ ಶನಿವಾರ ತಡರಾತ್ರಿ ಇಸ್ರೇಲಿ ನಾಗರಿಕರು ಮೂವರು ಪ್ಯಾಲೆಸ್ತೀನಿಯರ ಹತ್ಯೆಗೈದ ಘಟನೆ ಸಂಭವಿಸಿದ್ದು, ಭಾನುವಾರ ಐಡಿಎಫ್ ಕಾರ್ಯಾಚರಣೆ ನಡೆಸಿದೆ.

ಲೆಬನಾನ್‌ನಲ್ಲಿ 12 ಸಾವು

ಭಾನುವಾರ ಬೆಳಗ್ಗೆ ದಕ್ಷಿಣ ಲೆಬನಾನ್ ಮತ್ತು ಬೈರತ್ ಮೇಲೆ ಇಸ್ರೇಲ್ ನಡೆಸಿದ ದಾಳಿಗೆ ಕನಿಷ್ಠ 12 ಮಂದಿ ಬಲಿಯಾಗಿದ್ದಾರೆ ಎಂದು ಲೆಬನಾನ್ ಆರೋಗ್ಯ ಸಚಿವಾಲಯ ಹೇಳಿದೆ.

ಕಿರುಸುದ್ದಿ

ಮಾ.19ಕ್ಕೆ ಶ್ರೀರಾಮ ಮಂದಿರಕ್ಕೆ ರಾಷ್ಟ್ರಪತಿ

ಅಯೋಧ್ಯೆ: ರಾಷ್ಟ್ರಪತಿ ದ್ರೌಪದಿ ಮುರ್ಮು ಮಾ.19ರಂದು ಅಯೋಧ್ಯೆ ಶ್ರೀರಾಮ ಮಂದಿರಕ್ಕೆ ಭೇಟಿ ನೀಡಲಿದ್ದಾರೆ ಎಂದು ಶ್ರೀರಾಮ ಮಂದಿರ ನಿರ್ಮಾಣ ಸಮಿತಿ ಅಧ್ಯಕ್ಷ ನೃಪೇಂದ್ರ ಮಿಶ್ರಾ ಭಾನುವಾರ ಹೇಳಿದ್ದಾರೆ. ಶ್ರೀರಾಮ ಜನ್ಮಭೂಮಿ ಸಂಕೀರ್ಣದಲ್ಲಿ ಸುಮಾರು 3 ತಾಸುಗಳ ಕಾಲ ರಾಷ್ಟ್ರಪತಿ ಮುರ್ಮು ಇರಲಿದ್ದಾರೆ. ಶ್ರೀರಾಮ ಮಂದಿರ ನಿರ್ಮಾಣಕ್ಕೆ ಕೊಡುಗೆ ನೀಡಿದ ಕಾರ್ಮಿಕರು, ಉದ್ಯೋಗಿಗಳನ್ನು ಸಮ್ಮಾನಿಸುವರು ಎಂದು ಮಿಶ್ರಾ ಮಾಹಿತಿ ನೀಡಿದ್ದಾರೆ. ಸುಮಾರು 5ವರ್ಷಗಳಲ್ಲಿ ಶ್ರೀರಾಮ ಮಂದಿರ ನಿರ್ಮಾಣ ಕಾರ್ಯ ಮುಗಿದಿದೆ. ಮಂದಿರ ನಿರ್ಮಾಣದ ಸಂಪೂರ್ಣ ಯಾನವನ್ನು ಪ್ರತಿಫಲಿಸುವ ಗ್ಯಾಲರಿಯನ್ನು ಮಂದಿರ ಸಂಕೀರ್ಣದಲ್ಲಿ ನಿರ್ಮಿಸಲಾಗುತ್ತಿದೆ. ದೇವಾಲಯದ ಭದ್ರತೆ ದೃಷ್ಟಿಯಿಂದ 4ಕಿಮೀ ಉದ್ದದ ಆವರಣಗೋಡೆಯನ್ನು ಇಂಜಿನಿಯರ್ಸ್ ಇಂಡಿಯಾ ನಿರ್ಮಿಸುತ್ತಿದೆ ಎಂದು ಮಿಶ್ರಾ ತಿಳಿಸಿದ್ದಾರೆ.

ಜೆಡಿಯು ಸೇರಿದ ಸಿಎಂ ನಿತೀಶ್ ಪುತ್ರ ನಿಶಾಂತ್

ಪಾಟ್ನಾ: ಬಿಹಾರದ ಮುಖ್ಯಮಂತ್ರಿ ನಿತೀಶ್ ಕುಮಾರ್ ಅವರ ಪುತ್ರ ನಿಶಾಂತ್ ಕುಮಾರ್ ಭಾನುವಾರ ಜೆಡಿಯು ಸೇರಿದ್ದು, ಪಕ್ಷ ಸಂಘಟನೆ ಬಲಪಡಿಸಲು ದುಡಿಯುವುದಾಗಿ ಘೋಷಿಸಿದ್ದಾರೆ. ಪಕ್ಷದ ಪ್ರಧಾನ ಕಚೇರಿಯಲ್ಲಿ ಕೇಂದ್ರ ಸಚಿವ ರಾಜೀವ್ ರಂಜನ್ ಸಿಂಗ್ ಲಾಲನ್ ಮತ್ತು ಜೆಡಿಯುನ ರಾಷ್ಟ್ರೀಯ ಕಾರ್ಯಾಧ್ಯಕ್ಷ ಸಂಜಯ್ ಝಾ ಉಪಸ್ಥಿತಿಯಲ್ಲಿ, ಇಂಜಿನಿಯರಿಂಗ್ ಪದವೀಧರ 40 ವರ್ಷದ ನಿಶಾಂತ್‌ರನ್ನು ಪಕ್ಷಕ್ಕೆ ಸೇರ್ಪಡೆ ಮಾಡಲಾಯಿತು. ನನ್ನ ತಂದೆ ರಾಜ್ಯಸಭೆಗೆ ತೆರಳಲು ತೀರ್ಮಾನಿಸಿದ್ದಾರೆ ಮತ್ತು ಇದು ಇವರ ವೈಯ್ಯಕ್ತಿಕ ನಿರ್ಧಾರ. ನಾವೆಲ್ಲರು ಅವರ ನಿರ್ಧಾರವನ್ನು ಗೌರವಿಸುತ್ತೇವೆ. ಅವರ ಮಾರ್ಗದರ್ಶನದಲ್ಲೇ ಕೆಲಸ ಮಾಡುತ್ತೇವೆ. ತಾನು ಪಕ್ಷ ಸಂಘಟನೆ ಬಲಪಡಿಸಲು ದುಡಿಯುತ್ತೇನೆಂದು ಹೇಳಿದ ನಿಶಾಂತ್, ಸುದೀರ್ಘ ಕಾಲ ಬಿಹಾರದ ಮುಖ್ಯಮಂತ್ರಿಯಾಗಿರುವ ತಂದೆ ಕಳೆದ 20ವರ್ಷಗಳಲ್ಲಿ ರಾಜ್ಯದ ಅಭಿವೃದ್ಧಿಗೆ ತುಂಬು ಕೊಡುಗೆ ನೀಡಿದ್ದಾರೆ. ರಾಜ್ಯದ ಅಭಿವೃದ್ಧಿಗೆ ಮುಖ್ಯಮಂತ್ರಿಗಳ ಕೊಡುಗೆಯನ್ನು ರಾಜ್ಯದ ಜನತೆ ಎಂದಿಗೂ ಮರೆಯರು ಎಂದು ಹೇಳಿದರು.

ಪ್ರತಿಯೋರ್ವರಿಗೂ ನನ್ನ ಕೃತಜ್ಞತೆಗಳು. ನೀವೆಲ್ಲರು ನನ್ನ ಮೇಲಿಟ್ಟಿರುವ ನಂಬುಗೆಯನ್ನು ನಾನು ಗೌರವಿಸುತ್ತೇನೆ. ನನ್ನ ತಂದೆ ಕಳೆದ 20ವರ್ಷಗಳಲ್ಲಿ ಮಾಡಿರುವ ಸಾಧನೆ ಬಗ್ಗೆ ರಾಷ್ಟ್ರ, ನಮ್ಮ ರಾಜ್ಯ ಹಾಗೂ ತಾನು ಕೂಡ ಹೆಮ್ಮೆಪಡುತ್ತೇನೆ. ಮುಖ್ಯಮಂತ್ರಿಗಳು ಗೈದ ಅಭಿವೃದ್ಧಿ ಕಾರ್ಯಗಳನ್ನು ತಾನು ಜನಮಾನಸಕ್ಕೆ ತಲುಪಿಸುವುದಾಗಿ ನಿಶಾಂತ್ ಹೇಳಿದರು.

ಪ.ಬಂಗಾಳ ಮುಖ್ಯಮಂತ್ರಿ ಮಮತಾಗೆ ಪ್ರಧಾನಿ ಮೋದಿ ತರಾಟೆ

ಪ್ರಜಾಪ್ರಭುತ್ವ ಪರಂಪರೆಗೆ ಅಪಮಾನ

ಹೊಸದಿಲ್ಲಿ: ಪ.ಬಂಗಾಳದ ಸಂಥಾಲ್ ಸಮುದಾಯದ ಅತ್ಯಂತ ಪುಣ್ಯಪ್ರದ ಹಾಗೂ ಮಹತ್ವಪೂರ್ಣ ಕಾರ್ಯಕ್ರಮವನ್ನು ಮಮತಾ ಬ್ಯಾನರ್ಜಿ ಹಾಗೂ ಆಕೆಯ ಪಕ್ಷ ಬಹಿಷ್ಕರಿಸಿದ್ದು ವಿಹಿತವಲ್ಲ. ಕಾರ್ಯಕ್ರಮದ ಅಸಮರ್ಪಕ ನಿರ್ವಹಣೆ ಮುಖೇನ ರಾಷ್ಟ್ರಪತಿ ಮತ್ತು ಪ್ರಜಾಪ್ರಭುತ್ವ ಪರಂಪರೆಯನ್ನು ಅಪಮಾನಿಸಲಾಗಿದೆ ಎಂದು ಆರೋಪಿಸಿರುವ ಪ್ರಧಾನಿ ನರೇಂದ್ರ ಮೋದಿ, ಟಿಎಂಸಿಯ ಅಧಿಕಾರದ ದುರಹಂಕಾರ ಶೀಘ್ರವೇ ನೆಲಸಮವಾಗಲಿದೆ ಎಂದು ತೀಕ್ಷ್ಣ ಎಚ್ಚರಿಕೆ ನೀಡಿದ್ದಾರೆ.

ಸಂಥಾಲ್ ಸಮುದಾಯದ ಕಾರ್ಯಕ್ರಮಕ್ಕೆ ಸಂಬಂಧಿಸಿ ಆಗಿರುವ ನ್ಯೂನತೆಗಳ ಬಗ್ಗೆ ರಾಷ್ಟ್ರಪತಿ ದ್ರೌಪದಿ ಮುರ್ಮು ತುಂಬು ಬೇಸರ ವ್ಯಕ್ತಪಡಿಸಿರುವ ಬೆನ್ನಲ್ಲೇ, ಪ್ರಧಾನಿ ಮೋದಿ ಟಿಎಂಸಿ ನಾಯಕಿ ಮಮತಾ ಬ್ಯಾನರ್ಜಿ ಅವರನ್ನು ತೀವ್ರವಾಗಿ ತರಾಟೆಗೆತ್ತಿಕೊಂಡಿದ್ದಾರೆ. ಕಾರ್ಯಕ್ರಮವನ್ನು ಸೂಕ್ತ ರೀತಿ ಆಯೋಜಿಸುವಲ್ಲಿ ಪ.ಬಂಗಾಳ ಸರಕಾರ ಪೂರ್ಣ ವಿಫಲವಾಗಿದೆ. ಅಂತಹ ಪವಿತ್ರ ಕಾರ್ಯಕ್ರಮದಿಂದ ಟಿಎಂಸಿ ದೂರ ಉಳಿದದ್ದು ಸರಿಯಲ್ಲ ಎಂದು ಪ್ರಧಾನಿ ಮೋದಿ ಟೀಕಿಸಿದ್ದಾರೆ.

ವ್ಯಕ್ತಿ ಎಷ್ಟೇ ಶಕ್ತಿಶಾಲಿಯಾಗಿದ್ದರೂ ತಾನೆಂಬ ಅಹಂಕಾರದಿಂದ ನಾಶವಾಗುತ್ತಾನೆ. ತಾನೀಗ ರಾಷ್ಟ್ರದ ರಾಜಧಾನಿಯಿಂದ ನಿಮ್ಮೆಲ್ಲರಿಗೂ ಹೇಳುವುದೇನೆಂದರೆ, ಬುಡಕಟ್ಟು ಸಮುದಾಯಕ್ಕೆ ಸೇರಿದ ರಾಷ್ಟ್ರಪತಿಗಳ ಘನತೆಗೆ ಅಪಮಾನ ಮಾಡಿದ ಟಿಎಂಸಿಯ ಕೊಳಕು ರಾಜನೀತಿ ಮತ್ತು ಅಧಿಕಾರದ ಮದವು ಶೀಘ್ರವೇ ಛಿದ್ರಛಿದ್ರವಾಗಲಿದೆ ಎಂದು ಮೋದಿ ಹೇಳಿದರು.



ಟಿಎಂಸಿಯನ್ನು ಜನತೆ ಖಂಡಿತ ಕ್ಷಮಿಸುವುದಿಲ್ಲ

ಓರ್ವ ಮಹಿಳೆ, ಬುಡಕಟ್ಟು ಸಮುದಾಯದ ಪ್ರತಿನಿಧಿ, ರಾಷ್ಟ್ರದ ರಾಷ್ಟ್ರಪತಿಯನ್ನು ಅವಮಾನಿಸಿದ ಟಿಎಂಸಿಯನ್ನು ಪ.ಬಂಗಾಳದ ಪ್ರಜ್ಞಾವಂತ ಜನತೆ ಖಂಡಿತ ಕ್ಷಮಿಸುವುದಿಲ್ಲ. ದೇಶ ಎಂದಿಗೂ ಇವರನ್ನು ಕ್ಷಮಿಸುವುದಿಲ್ಲ. ದೇಶದ ಬುಡಕಟ್ಟು ಸಮುದಾಯ ಕೂಡ ಕ್ಷಮಿಸರು ಎಂದು ಮೋದಿ ಕಿಡಿ ಕಾರಿದ್ದಾರೆ.

ಕಾಶ್ಮೀರ ಆಡಳಿತದಲ್ಲಿ ಪಾರದರ್ಶಕತೆ ಹೆಚ್ಚಳ

ಜಮ್ಮು: ಜಮ್ಮು ಮತ್ತು ಕಾಶ್ಮೀರವಿಂದು ನಿರ್ಣಾಯಕ ಘಟ್ಟದಲ್ಲಿದೆ. ಕಳೆದೈದಾರು ವರ್ಷಗಳಿಂದ ಪರಿವರ್ತನಾತ್ಮಕ ಮಾರ್ಪಾಡುಗಳಿಗೆ ಕೇಂದ್ರಾಡಳಿತ ಪ್ರದೇಶ ಸಾಕ್ಷಿಯಾಗಿದೆ. ಪರಿಣಾಮ ಆಡಳಿತ ವ್ಯವಸ್ಥೆ ಹೆಚ್ಚು ಪಾರದರ್ಶಿಯಾಗಿದೆ ಮತ್ತು ದೃಢ ಸಂಕಲ್ಪದೊಂದಿಗೆ ಜನಸೇವೆಯತ್ತ ಹೊರಳಿದೆ ಎಂದು ಲೆ.ಗವರ್ನರ್ ಮನೋಜ್ ಸಿನ್ಹಾ ಹೇಳಿದ್ದಾರೆ. ಜಮ್ಮುವಿನ ಸಿಧ್ರಾದಲ್ಲಿ ಭ್ರಷ್ಟಾಚಾರ ನಿಗ್ರಹ ಮಂಡಳಿಯ(ಎಸಿಬಿ) ಪ್ರಧಾನ ಕಚೇರಿ ಸಂಕೀರ್ಣ ಹಾಗೂ ಅವಂತಿಪೋರದಲ್ಲಿ ಎಸಿಬಿಯ ಎಪಿಕೆಎಸ್ ಶಾಖೆ ಉದ್ಘಾಟಿಸಿದ ಬಳಿಕ ನೆರೆದ ಜನಸ್ತೋಮ ಉದ್ದೇಶಿಸಿ ಸಿನ್ಹಾ ಮಾತನಾಡಿದರು. ಇವೆರಡು ಸಂಕೀರ್ಣಗಳು ಬರೇ ಉಕ್ಕು, ಗಾಜು ಮತ್ತು ಕಾಂಕ್ರೀಟ್‌ನಿಂದ ನಿರ್ಮಿತ ಕಟ್ಟಡಗಳಷ್ಟೇ ಅಲ್ಲ, ಸಾರ್ವಜನಿಕ ಬದುಕಲ್ಲಿ ಪಾರದರ್ಶಿತ್ವ ಮತ್ತು ಭ್ರಷ್ಟಾಚಾರ ಮುಕ್ತ ಕೇಂದ್ರಾಡಳಿತ ಪ್ರದೇಶದ ಸಾಕಾರ ತಮ್ಮ ಧ್ಯೇಯವೆಂದು ಘಂಟಾಘೋಷ ಸಾರುತ್ತಿವೆ ಎಂದವರು ಬಣ್ಣಿಸಿದರು. ಇಂದಿನ ಆಡಳಿತ ವ್ಯವಸ್ಥೆ ಆಯ್ದ ಕೆಲವರ ಪ್ರಯೋಜನಕ್ಕಾಗಿ ಕಾರ್ಯ ನಿರ್ವಹಿಸುತ್ತಿಲ್ಲ. ಬದಲಾಗಿ ಕೇಂದ್ರಾಡಳಿತ ಪ್ರದೇಶಾದ್ಯಂತದ ಪ್ರತಿಯೋರ್ವರ ಕಲ್ಯಾಣಕ್ಕಾಗಿ ಶ್ರಮಿಸುತ್ತಿದೆ. ಜಮ್ಮು ಕಾಶ್ಮೀರ ಸಾಮಾನ್ಯ ಪ್ರದೇಶವಾಗುಳಿಯಲ್ಲ. ಇದೀಗ ಧೈರ್ಯವಾಗಿ ಬೃಹತ್ ಕನಸು ಕಾಣುತ್ತಿದೆ. ಮುಂದೆ ಸ್ವರ್ಣ ಭವಿಷ್ಯ ನಮಗಿದೆ ಎಂಬ ವಿಶ್ವಾಸ ನಮ್ಮ ಜನರಲ್ಲಿ ಮೂಡಿದೆ. ಈ ಕನಸಿನ ಸಾಕಾರದ ಹೊಣೆ ಭ್ರಷ್ಟಾಚಾರ ನಿಗ್ರಹ ಮಂಡಳಿಯ ಅಧಿಕಾರಿಗಳು ಮತ್ತು ಸಿಬ್ಬಂದಿಗಳದ್ದು ಎಂದು ಸಿನ್ಹಾ ಹೇಳಿದರು.



ಹೋಳಿ ಸಂಭ್ರಮಕ್ಕೆ ಸಮಸ್ಯೆ: ಆರೋಪಿ ನಿವಾಸ ನೆಲಸಮ

ಹೊಸದಿಲ್ಲಿ: ದಿಲ್ಲಿಯ ಉತ್ತಮನಗರದಲ್ಲಿ ಹೋಳಿ ಸಂದರ್ಭದ ಹೊಡೆದಾಟದಲ್ಲಿ 26ವರ್ಷದ ಯುವಕನೋರ್ವ ಹತ್ಯೆಯಾದ ಪ್ರಕರಣದ ಆರೋಪಿಯೋರ್ವನಿಗೆ ಸೇರಿದ್ದೆನ್ನಲಾದ ಮನೆಯ ಅಕ್ರಮ ಭಾಗವನ್ನು ಅಧಿಕಾರಿಗಳು ಭಾನುವಾರ ಬುಲ್ಡೋಜರ್ ಬಳಸಿ ಕೆಡವಿದ್ದಾರೆ. ಯುವಕನ ಹತ್ಯೆ ಬಗ್ಗೆ ಸಿಬಿಐ ತನಿಖೆ ನಡೆಯಬೇಕು ಮತ್ತು ಹತ್ಯೆಯಲ್ಲಿ ಶಾಮೀಲಾದ ಎಲ್ಲರ ವಿರುದ್ಧ ಕಠಿಣ ಕ್ರಮಕ್ಕೆ ಹತ್ಯೆಯಾದ ಯುವಕನ ಸಂತ್ರಸ್ತ ಕುಟುಂಬ ಆಗ್ರಹಿಸಿದೆ.ಭಾನುವಾರ ಜೆಜೆ ಕಾಲನಿಗೆ ತೆರಳಿದ ಅಧಿಕಾರಿಗಳ ತಂಡ, ಆರೋಪಿ ಉಮರ್‌ದೀನ್‌ನ ತಂದೆ ನಿಜಾಮುದ್ದೀನ್‌ಗೆ ಸೇರಿದ ಮನೆಯ ನಿರ್ದಿಷ್ಟ ಭಾಗಗಳನ್ನು ಬುಲ್ಡೋಜರ್‌ಗಳ ನೆರವಿನಿಂದ ಕೆಡವಿ ಹಾಕಿತು. ಮಾ.4ರಿಂದ ಉದ್ವಿಗ್ನ ಸ್ಥಿತಿಯಲ್ಲಿರುವ ಪ್ರದೇಶದಲ್ಲಿ ಪೊಲೀಸರು ಹಾಗೂ ಛಾಯಾ ಮಿಲಿಟರಿ ಪಡೆಯ ಕಾವಲು ಹಾಕಲಾಗಿದೆ. ದಿಲ್ಲಿಯಲ್ಲಿ ಈ ತೆರ ಆರೋಪಿಗಳ ಕಟ್ಟಡ ನಾಶ ಕ್ರಮ ಈಚಿನ ವರ್ಷಗಳಲ್ಲಿ ಇದೇ ಮೊದಲೆನ್ನಲಾಗಿದೆ.

ಕೇಂದ್ರ ಬಜೆಟ್ ಅಧಿವೇಶನ ಎರಡನೇ ಭಾಗ ಇಂದು ಆರಂಭ

ಕುತೂಹಲ ಕೆರಳಿಸಿದ ಸ್ಪೀಕರ್ ಪದಚ್ಯುತಿ!

ಹೊಸದಿಲ್ಲಿ: ಸಂಸತ್ತಿನ ಬಜೆಟ್ ಅಧಿವೇಶನದ ಎರಡನೇ ಭಾಗ ಇಂದಿನಿಂದ(ಸೋಮವಾರ) ಆರಂಭವಾಗಲಿದ್ದು, ಭಾರೀ ಗದ್ದಲ ನಡೆಯುವ ಸಾಧ್ಯತೆ ಇದೆ. ಲೋಕಸಭೆಯ ಸ್ಪೀಕರ್ ಓಂ ಬಿರ್ಲಾ ಅವರ ಪದಚ್ಯುತಿ ಕೋರುವ ನಿರ್ಣಯವನ್ನು ಸದನದ ಮೊದಲ ಕಾರ್ಯಸೂಚಿಯಾಗಿ ಪಟ್ಟಿ ಮಾಡಲಾಗಿದೆ.

ಇತ್ತೀಚಿನ ಕಲಾಪಗಳ ವೇಳೆ ಸ್ಪೀಕರ್ ಪಕ್ಷಪಾತದಿಂದ ವರ್ತಿಸಿದ್ದಾರೆ ಮತ್ತು ಸದನದಲ್ಲಿ ಕಾಂಗ್ರೆಸ್ ಸದಸ್ಯರ ವಿರುದ್ಧ ಸ್ಪೀಕರ್ ನೀಡಿದ ಕೆಲವು ಹೇಳಿಕೆಗಳು ಹಾದಿ ತಪ್ಪಿಸುವಂತಿವೆ ಎಂದು ಆರೋಪಿಸಿ ವಿರೋಧ ಪಕ್ಷದ ನಾಯಕರು ಓಂ ಬಿರ್ಲಾ ವಿರುದ್ಧ ಅವಿಶ್ವಾಸ ನಿರ್ಣಯ ಸಲ್ಲಿಸಿದ್ದಾರೆ. ರಾಷ್ಟ್ರಪತಿಗಳ ಭಾಷಣದ ಮೇಲಿನ ವಂದನಾ ನಿರ್ಣಯಕ್ಕೆ ಉತ್ತರಿಸಲು ಪ್ರಧಾನಿ ನರೇಂದ್ರ ಮೋದಿ ಅವರು ಸದನಕ್ಕೆ ಹಾಜರಾಗದಂತೆ ಬಿರ್ಲಾ ಸೂಚಿಸಿದ್ದರು ಎಂಬ ಆರೋಪವನ್ನೂ ಮಾಡಲಾಗಿದೆ.



ನೋಟಿಸ್ ಸಲ್ಲಿಕೆಯಾದ ದಿನದಿಂದ ಬಿರ್ಲಾ ಸದನದ ಅಧ್ಯಕ್ಷತೆಯಿಂದ ಹಿಂದೆ ಸರಿದಿದ್ದು, ವಿಷಯ ಇತ್ಯರ್ಥವಾದ ನಂತರವಷ್ಟೇ ಮರಳುವ ನಿರೀಕ್ಷೆಯಿದೆ. ಶನಿವಾರವಷ್ಟೇ ಪ್ರಧಾನಿ ಮೋದಿ ಅವರು ಸ್ಪೀಕರ್ ಪರವಾಗಿ ಮಾತನಾಡಿದ್ದು, ಬಿರ್ಲಾ ಅವರು ಸಾಂವಿಧಾನಿಕ ಮೌಲ್ಯಗಳನ್ನು ಎತ್ತಿಹಿಡಿದಿದ್ದಾರೆ ಮತ್ತು ಎಲ್ಲಾ ಸಂಸದರನ್ನು ಒಟ್ಟಾಗಿ ಕೊಂಡೊಯ್ದಿದ್ದಾರೆ ಎಂದು ತಿಳಿಸಿದ್ದರು.

ಮಧ್ಯಪ್ರಾಚ್ಯ ಸಂಘರ್ಷ ಪ್ರತಿಧ್ವನಿ ಸಾಧ್ಯತೆ: ಪಶ್ಚಿಮ ಏಷ್ಯಾದಲ್ಲಿ ತೀವ್ರಗೊಳ್ಳುತ್ತಿರುವ ಸಂಘರ್ಷ, ವಿಶೇಷವಾಗಿ ಇರಾನ್ ಮೇಲೆ ಅಮೆರಿಕ-ಇಸ್ರೇಲ್ ನಡೆಸಿದ ದಾಳಿ ಮತ್ತು ಜಾಗತಿಕ ಕಚ್ಚಾ ತೈಲ ಪೂರೈಕೆ ಹಾಗೂ ಬೆಲೆಗಳ ಮೇಲೆ ಅದರ ಪರಿಣಾಮದ ಬಗ್ಗೆ ವಿರೋಧ ಪಕ್ಷಗಳು ಕಳವಳ ವ್ಯಕ್ತಪಡಿಸುವ ನಿರೀಕ್ಷೆಯಿದೆ. ರಷ್ಯಾದ ತೈಲವನ್ನು ಖರೀದಿಸುವುದನ್ನು ಮುಂದುವರಿಸಲು ಅಮೆರಿಕ ನೀಡಿರುವ ವಿನಾಯಿತಿಯ ಬಗ್ಗೆಯೂ ಪ್ರಶ್ನೆಗಳು ಏಳಬಹುದು.

ಪಶ್ಚಿಮ ಬಂಗಾಳದಲ್ಲಿ ಮತದಾರರ ಪಟ್ಟಿಯ ವಿಶೇಷ ಪರಿಷ್ಕರಣೆಯ ಬಳಿಕ ಸುಮಾರು 60 ಲಕ್ಷ ಮತದಾರರ ಹೆಸರುಗಳನ್ನು ಕೈಬಿಡಲಾಗಿದೆ ಎಂದು ವರದಿಯಾಗಿದೆ. ಈ ವಿಷಯವೂ ಕೋಲಾಹಲಕ್ಕೆ ಕಾರಣವಾಗುವ ಸಾಧ್ಯತೆಯಿದೆ.

ಕಾಂಗ್ರೆಸ್‌ನಿಂದ ವಿಪ್ ಜಾರಿ: ಲೋಕಸಭೆಯ ಕಾರ್ಯಸೂಚಿಯ ಪ್ರಕಾರ, ಸೋಮವಾರಕ್ಕೆ ಸ್ಪೀಕರ್ ವಿರುದ್ಧದ ನಿರ್ಣಯವೊಂದೇ ಪಟ್ಟಿಯಾಗಿರುವ ಏಕೈಕ ವಿಚಾರವಾಗಿದೆ. ಆಡಳಿತಾರೂಢ ಬಿಜೆಪಿ ಮತ್ತು ವಿರೋಧ ಪಕ್ಷವಾದ ಕಾಂಗ್ರೆಸ್ ಎರಡೂ ತಮ್ಮ ಸಂಸದರಿಗೆ ಸದನಕ್ಕೆ ಹಾಜರಾಗುವಂತೆ ವಿಪ್ ಜಾರಿಗೊಳಿಸಿವೆ. ಸರ್ಕಾರ ತನ್ನ ಸಂಖ್ಯಾಬಲದ ಆಧಾರದ ಮೇಲೆ ಈ ನಿರ್ಣಯವನ್ನು ಸುಲಭವಾಗಿ ಸೋಲಿಸುವ ನಿರೀಕ್ಷೆಯಿದೆ.

165 ಸ್ಥಾನಗಳಲ್ಲಿ 120 ಸ್ಥಾನ ಗೆದ್ದ ರಾಷ್ಟ್ರೀಯ ಸ್ವತಂತ್ರ ಪಕ್ಷ

ನೇಪಾಳ ಮುಂದಿನ ಪ್ರಧಾನಿ ಬಾಲೇನ್?

ಕಠ್ಮಂಡು: ಯುವ ರ್‍ಯಾಪರ್‌ನಿಂದ ರಾಜಕಾರಣಿಯಾದ ಬಾಲೇಂದ್ರ ಶಾ ಬಾಲೇನ್ ಅವರ ರಾಷ್ಟ್ರೀಯ ಸ್ವತಂತ್ರ ಪಕ್ಷ(ಆರ್‌ಎಸ್‌ಪಿ) ಸಾಮಾನ್ಯ ಚುನಾವಣೆಯಲ್ಲಿ ಐತಿಹಾಸಿಕ ಜಯದತ್ತ ಸಾಗುತ್ತಿದೆ. ಹಳೆಯ ಪರಂಪರಾಗತ ರಾಜಕೀಯ ಪಕ್ಷಗಳು ಸಾರ್ವತ್ರಿಕ ಚುನಾವಣೆಯಲ್ಲಿ ಭಾರೀ ಸೋಲು ಕಂಡಿವೆ. 2022ರಲ್ಲಿ ಸ್ಥಾಪಿಸಲ್ಪಟ್ಟ ಆರ್‌ಎಸ್‌ಪಿ ಸಾರ್ವತ್ರಿಕ ಚುನಾವಣೆಯಲ್ಲಿ 165 ನೇರವಾಗಿ ಆಯ್ಕೆಯಾಗುವ ಸ್ಥಾನಗಳಲ್ಲಿ 120 ಸ್ಥಾನಗಳನ್ನು ಗೆದ್ದಿದ್ದು, ಇನ್ನೂ ಆರು ಸ್ಥಾನಗಳಲ್ಲಿ ಮುನ್ನಡೆ ಸಾಧಿಸಿದೆ. ಭಾನುವಾರ ಸಂಜೆ 5.30ರ ವೇಳೆಗೆ 165 ಸ್ಥಾನಗಳಲ್ಲಿ 156 ಸ್ಥಾನಗಳ ಫಲಿತಾಂಶಗಳನ್ನು ಚುನಾವಣಾ ಆಯೋಗ (ಇಸಿ) ಘೋಷಿಸಿದೆ.



ಇನ್ನೂ ಒಂಬತ್ತು ಸ್ಥಾನಗಳ ಫಲಿತಾಂಶ ಪ್ರಕಟವಾಗಬೇಕಿದ್ದು, ಭಾನುವಾರ ತಡರಾತ್ರಿ ಅಥವಾ ಸೋಮವಾರ ಬೆಳಗ್ಗೆ ಪ್ರಕ್ರಿಯೆ ಪೂರ್ಣಗೊಳ್ಳಬಹುದು ಎಂದು ಚುನಾವಣಾ ಅಧಿಕಾರಿಗಳು ತಿಳಿಸಿದ್ದಾರೆ. ಗುರುವಾರ ಮತದಾನ ಮುಗಿದ ತಕ್ಷಣ ಮತ ಎಣಿಕೆ ಆರಂಭವಾಗಿದ್ದು, ಶನಿವಾರದಿಂದ ಫಲಿತಾಂಶ ಪ್ರಕಟಿಸಲು ಆರಂಭಿಸಲಾಗಿತ್ತು.

ಮಾಜಿ ಪ್ರಧಾನಿ ಒಲಿ ಮಣಿಸಿದ ಶಾ: ಅವುಗಳಲ್ಲಿ 35 ವರ್ಷದ ಪ್ರಧಾನಿ ಅಭ್ಯರ್ಥಿ ಬಾಲೇನ್ ಶಾ, ಝಾಪಾ-5 ಕ್ಷೇತ್ರದಲ್ಲಿ ನಾಲ್ಕು ಬಾರಿಯ ಪ್ರಧಾನಿ ಹಾಗೂ ಪ್ರಮುಖ ಪಕ್ಷ ಸಿಪಿಎನ್-ಯುಎಂಎಲ್ ಅಧ್ಯಕ್ಷ ಕೆ.ಪಿ. ಶರ್ಮಾ ಒಲಿ ಅವರನ್ನು ಸುಮಾರು 50,000 ಮತಗಳ ಭಾರೀ ಅಂತರದಿಂದ ಸೋಲಿಸಿದ್ದು ಪ್ರಮುಖ ಫಲಿತಾಂಶಗಳಲ್ಲಿ ಒಂದಾಗಿದೆ.

ಬೆಳಗಾವಿಯಲ್ಲಿ ಶಿಕ್ಷಣ ಪಡೆದಿದ್ದ ಬಾಲೇನ್: ಕಳೆದ ವರ್ಷದ ಜೆನ್ ಝಿ ಪ್ರತಿಭಟನೆಗಳ ನೇತಾರ ಹಾಗೂ ನೇಪಾಳದ ಮುಂದಿನ ಪ್ರಧಾನಿ ಬಾಲೇಂದ್ರ ಅವರಿಗೆ ಭಾರತ, ಅದರಲ್ಲೂ ಕರ್ನಾಟಕದ ನಂಟಿದೆ ಎಂಬುದು ವಿಶೇಷ. ಜೆನ್ ಝಿ ನಾಯಕ ಬಾಲೇನ್ ಬೆಳಗಾವಿಯ ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯದಲ್ಲಿ (ವಿಟಿಯು) ಎಂಟೆಕ್ ಶಿಕ್ಷಣ ಪಡೆದಿದ್ದರು. ಎರಡು ವರ್ಷ ಭಾರತದಲ್ಲಿದ್ದರು. 1990ರಲ್ಲಿ ಕಠ್ಮಂಡುವಿನ ನೆವಾರ್ ಬೌದ್ಧ ಕುಟುಂಬದಲ್ಲಿ ಜನಿಸಿದ್ದರು.

ರಾಘವೇಶ್ವರಭಾರತೀ ಸ್ವಾಮೀಜಿಯವರಿಂದ 'ಪುಟ್ಟ ಭಾರತ' ಪುಸ್ತಕಗಳ ಲೋಕಾರ್ಪಣೆ

ಪುಸ್ತಕ ಓದುವುದೇ ಲೇಖಕರಿಗೆ ಕೊಡುವ ಪ್ರೋತ್ಸಾಹ

ಬೆಳ್ತಂಗಡಿ: ಮಹಾಭಾರತದ ಮೂಲ ಕಥೆಯನ್ನು ಹೊಂದಿರುವ ಈ ಪುಸ್ತಕಗಳನ್ನು ಓದುವುದೇ ನಾವು ಲೇಖಕರಿಗೆ ಕೊಡುವ ಪ್ರೋತ್ಸಾಹವಾಗಿದೆ ಎಂದು ಶ್ರೀರಾಮಚಂದ್ರಾಪುರ ಮಠದ ಶ್ರೀ ರಾಘವೇಶ್ವರಭಾರತೀ ಸ್ವಾಮೀಜಿ ನುಡಿದರು.

ಅವರು ಗುರುವಾಯನಕೆರೆ ಸನಿಹದ ಹವ್ಯಕಭವನದಲ್ಲಿ ಶ್ರೀ ರಾಮಚಂದ್ರಭಾರತೀ ಸ್ವಾಮೀಜಿಯವರ ಆರಾಧನಾ ಮಹೋತ್ಸವದ ಸಂದರ್ಭದಲ್ಲಿ ಪುಟ್ಟ ಭಾರತ ಪುಸ್ತಕಗಳ ಲೋಕಾರ್ಪಣೆಯ ಸಂದರ್ಭದಲ್ಲಿ ಮಠದ ಶಿಷ್ಯರಿಗೆ ಕರೆ ನೀಡಿದರು.

ಒಂದು ಲಕ್ಷ ಶ್ಲೋಕಗಳನ್ನು ಹೊಂದಿರುವ ಹದಿನೆಂಟು ಪರ್ವಗಳಲ್ಲಿರುವ ವ್ಯಾಸ ಮಹಾಭಾರತವನ್ನು ಪುಟ್ಟದಾಗಿಸಿ 'ಪುಟ್ಟ ಭಾರತ'ವೆಂಬ ಹೆಸರಿನಲ್ಲಿ ವಿದ್ಯಾರ್ಥಿಗಳಿಗೆ-ಯುವಜನತೆಗಾಗಿ ಬರೆದ ಲೇಖಕ ವಿಶ್ವೇಶ್ವರ ಭಟ್ಟ ಉಂಡೆಮನೆ ಅವರ ಪ್ರಯತ್ನ ಮೆಚ್ಚುವಂತಿದೆ. ಕನ್ನಡ ಪುಟ್ಟ ಭಾರತವನ್ನು ಆಂಗ್ಲ ಭಾಷೆಗೆ ಭಾಷಾಂತರ ಮಾಡಿ (ಅನುವಾದಕಿ – ಕೀರ್ತಿಶ್ರೀ ಉಜಿರೆ) ಲೋಕಾರ್ಪಣೆ ಮಾಡಿದ ಕಾರ್ಯವು ಕಬ್ಬನ್ನು ಹಿಂಡಿ ರಸವನ್ನು ತೆಗೆದು ಕೊಟ್ಟಂತಾಗಿದೆ. ಇದರಿಂದ ಬರುವ ಮುದ್ರಣ ವೆಚ್ಚಕ್ಕೆ ಹೊರತಾದ ಆದಾಯವನ್ನು ವೇದಶಿಕ್ಷಣಕ್ಕೆ ಅರ್ಪಿಸುವ ಸೇವಾ ಕಾರ್ಯವೂ ಶ್ಲಾಘನೀಯ. ವ್ಯಾಸ ಈ ಮಾತುಗಳನ್ನು ಹೇಳಿ ಈ ಪುಸ್ತಕಗಳನ್ನು ಓದಿ ಲೇಖಕರನ್ನು ಪ್ರೋತ್ಸಾಹಿಸುವಂತೆ ನೆರೆದ ಶಿಷ್ಯಸ್ತೋಮಕ್ಕೆ ಶ್ರೀಗಳು ಕರೆನೀಡಿದರು.



ಪುಸ್ತಕದ ಪರಿಚಯವನ್ನು ದೇವಿಕಾ ಶಾಸ್ತ್ರಿ ಮಾಡಿದರು. ಬೆಳ್ತಂಗಡಿ ಸೀಮೆಯ ಮತ್ತು ಮಂಗಳೂರು ಹೋಬಳಿಯ ವಲಯ – ಮಂಡಲಗಳ ಪ್ರಮುಖರು, ನಮ್ಮಮನೆ ಹವ್ಯಕಭವನದ ಪದಾಧಿಕಾರಿಗಳು ಉಪಸ್ಥಿತರಿದ್ದರು.

ರಾಮಾಯಣ ಹಕ್ಕಿನೋಟ- A Bird's eye view of Raamaayana (ಒಂದೇ ಪುಸ್ತಕದಲ್ಲಿ ಎರಡೂ ಭಾಷೆಗಳಲ್ಲಿ)ದಲ್ಲಿ ವಾಲ್ಮೀಕಿ ರಾಮಾಯಣದ ಏಳೂ ಕಾಂಡಗಳ ಕಥೆಯಿದ್ದು ನಾವು ಕೇಳಿದ – ಓದಿದ ಇತರ ಮೌಲ್ಯವರ್ಧಿತ ರಾಮಾಯಣಗಳ ಕಥೆಗಳಿಗೂ ಮೂಲ ರಾಮಾಯಣದ ಕಥೆಗೂ ಇರುವ ವ್ಯತ್ಯಾಸವನ್ನು ಸಾಂದರ್ಭಿಕವಾಗಿ ಉಲ್ಲೇಖಿಸಲ್ಪಟ್ಟ ಕೃತಿ. ಪುಟ್ಟ ಭಾರತ (ಕನ್ನಡ), Putta Bhaarata -Mahaabhaarata in Brief (ಆಂಗ್ಲ ಭಾಷೆ) ಈ ಪುಸ್ತಕಗಳು ವ್ಯಾಸರ ಮಹಾಭಾರತದ ಮೂಲ ಕಥೆಯೊಂದಿಗೆ ನಾವು ಕೇಳಿದ – ಓದಿದ ಮಹಾಭಾರತದ ಮೌಲ್ಯವರ್ಧಿತ ಕಥೆಗಳಿಗೂ ಇರುವ ವ್ಯತ್ಯಾಸವನ್ನು ಸಾಂದರ್ಭಿಕವಾಗಿ ಉಲ್ಲೇಖಿಸಲ್ಪಟ್ಟ ಕೃತಿಗಳಾಗಿವೆ.

ಈ ಎರಡೂ ಕೃತಿಗಳ ಹಿಂದೀ ಭಾಷಾನುವಾದವು ನಡೆಯುತ್ತಿದ್ದು ಬನಾರಸಿನ ಪ್ರಕಾಶನ ಸಂಸ್ಥೆಯೊಂದು ಇವುಗಳನ್ನು ಪ್ರಕಟಿಸಲು ಮುಂದೆ ಬಂದಿದೆ. ರಾಮಾಯಣ ಹಕ್ಕಿನೋಟವು ಸಂಪೂರ್ಣವಾಗಿ ಮಾರಾಟವಾಗಿದ್ದು ಅದರಿಂದ ಬಂದ ಮುದ್ರಣಕ್ಕೆ ಹೊರತಾದ ರೂ. 1,25,000 ಆದಾಯವನ್ನು ಗೋಕರ್ಣದ ಅಶೋಕೆಯಲ್ಲಿರುವ ವಿಷ್ಣುಗುಪ್ತ ವಿಶ್ವವಿದ್ಯಾಪೀಠಮ್‌ನ ಶಿವಗುರುಕುಲಕ್ಕೆ ಅರ್ಪಿಸಿದ್ದು, ಪುಟ್ಟ ಭಾರತದಿಂದ ಬರುವ ಆದಾಯವನ್ನೂ ವೇದವ್ಯಾಸರ ತುಂಬಾ ಇಷ್ಟದ ಕ್ಷೇತ್ರವಾದ ವೇದಗಳ ಶಿಕ್ಷಣಕ್ಕಾಗಿರುವ ಶಿವಗುರುಕುಲಕ್ಕೆ ಲೇಖಕರು ಸಮರ್ಪಿಸಲಿದ್ದಾರೆ. ನಿರೀಕ್ಷಿತ ಆದಾಯದ ಆಧಾರದಲ್ಲಿ ಈಗಾಗಲೇ ರೂ. 1 ಲಕ್ಷಗಳನ್ನು ವಿಶ್ವೇಶ್ವರ ಭಟ್ಟರು ಶಿವಗುರುಕುಲಕ್ಕೆ ಸಮರ್ಪಿಸಿದ್ದಾರೆ.

ಶ್ರೀಗಳು ಲೇಖಕ ವಿಶ್ವೇಶ್ವರ ಭಟ್ಟ ಹಾಗೂ ಅನುವಾದಕಿಕೀರ್ತಿಶ್ರೀಯವರನ್ನುಮಂತ್ರಾಕ್ಷತೆ ನೀಡಿ ಹರಸಿದರು. ಉದಯಶಂಕರ ಕೋಡ್ಯಡ್ಕ ಕಾರ್ಯಕ್ರಮ ನಿರ್ವಹಿಸಿದರು.

ಪುಣ್ಯಕೋಟಿ ಗೋಶಾಲೆಗೆ ಮೇವು ವಿತರಿಸಿದ ವಿಶ್ವ ಹಿಂದೂ ಪರಿಷತ್



ಮಡಿಕೇರಿ : ಕುಶಾಲನಗರದ ಪುಣ್ಯಕೋಟಿ ಗೋಶಾಲೆಗೆ ವಿಶ್ವ ಹಿಂದೂ ಪರಿಷತ್‌ನ ಕೊಡಗು ಜಿಲ್ಲಾ ಘಟಕದ ನಿಯೋಗ ಭೇಟಿ ನೀಡಿದ್ದು, ಸುಮಾರು 60 ಗೋವುಗಳಿರುವ ಗೋಶಾಲೆಯ ಮೂಲಭೂತ ಸೌಲಭ್ಯಗಳ ಸ್ಥಿತಿಗತಿಯನ್ನು ಪರಿಶೀಲಿಸಿದ ಪ್ರಮುಖರು, ಗೋಪೂಜೆ ಮಾಡಿ ಗೋವುಗಳ ಕಲ್ಯಾಣಕ್ಕಾಗಿ ಪ್ರಾರ್ಥಿಸಿದರು. ನಂತರ ಒಂದು ಲಾರಿ ಒಣ ಹುಲ್ಲು, ಹಸಿ ಹುಲ್ಲು ಮತ್ತು ಏಳು ಚೀಲ ತೆಂಗಿನ ಹಿಂಡಿಯನ್ನು ನೀಡಿದರು.

ವಿಶ್ವ ಹಿಂದೂ ಪರಿಷತ್‌ನ ಕಾರ್ಯಾಧ್ಯಕ್ಷ ಸುರೇಶ್ ಮುತ್ತಪ್ಪ, ಪ್ರಮುಖರಾದ ಸಂಪತ್ ಕುಮಾರ್ ಮಡಿಕೇರಿ, ಪರಮೇಶ್ ಸೋಮವಾರಪೇಟೆ, ನರಸಿಂಹ ಸುಂಟಿಕೊಪ್ಪ, ಬಜರಂಗದಳದ ಪ್ರಮುಖರಾದ ವಿನಯ್, ತನ್ಮಯ್ ಸೋಮವಾರಪೇಟೆ, ಮೂರ್ನಾಡು ಘಟಕದ ಕಾರ್ಯಕರ್ತರು, ಮಾತೆಯರು ಮತ್ತಿತರರು ಹಾಜರಿದ್ದು ಗೋಶಾಲೆಯ ಅಭಿವೃದ್ಧಿ ಹಾಗೂ ಗೋವುಗಳ ರಕ್ಷಣೆಗಾಗಿ ಅಗತ್ಯ ಸಲಹೆಗಳನ್ನು ನೀಡಿದರು.

ಬೈಂದೂರಿನಲ್ಲಿ ರಂಗಶ್ರೀ-ರಂಗಹಬ್ಬ। 'ಭಂಡ ನನ್ನ ಗಂಡ' ಪ್ರದರ್ಶನ

ನಾಟಕ ಕೇವಲ ನಟನೆ ಮಾತ್ರವಲ್ಲ

ಉಪ್ಪುಂದ: ರಂಗಭೂಮಿ ರೀತಿಯ ಕಲಾಪ್ರಕಾರಗಳು ಸಮಾಜಕ್ಕೆ ಬಹುಮುಖ್ಯವುದು. ಮನುಷ್ಯ, ಸಮುದಾಯ, ಭಾಷೆ ಮುಂತಾದವುಗಳ ನಡುವಿನ ಅರ್ಥೈಸುವಿಕೆಗೆ ನಾಟಕ ಪ್ರಮುಖ ಮಾಧ್ಯಮವಾಗಿದೆ. ನಾಟಕ ಕೇವಲ ನಟನೆ ಮಾತ್ರವೇ ಆಗಿ ಉಳಿಯದೇ ನಟನೊಬ್ಬ ತನ್ನನ್ನು ತಾನು ಅರಿತುಕೊಳ್ಳುವ ಸಮಾಜವನ್ನು ಹಾಗೂ ಸುತ್ತಲಿನ ಭೌದಿಕ ಸ್ಥಿತಿಯನ್ನು ಅರಿಯುವಲ್ಲಿ ಮುಖ್ಯ ಪಾತ್ರ ವಹಿಸುತ್ತದೆ ಎಂದು ಕುಂದಾಪುರ ಕಲಕ್ಷೇತ್ರದ ಅಧ್ಯಕ್ಷ ಕಿಶೋರ್ ಕುಮಾರ್ ಹೇಳಿದರು.

ಬೈಂದೂರುಶಾರದಾವೇದಿಕೆಯಲ್ಲಿ ಶುಕ್ರವಾರ ಲಾವಣ್ಯದ ಸ್ಥಾಪಕಾಧ್ಯಕ್ಷ ದಿ. ಯು. ಉಪ್ಪುಂದ ಶ್ರೀನಿವಾಸ ಪ್ರಭು ಅವರ ಸ್ಮರಣಾರ್ಥ ಆಯೋಜನೆಯ ರಂಗಶ್ರೀ– ರಂಗಹಬ್ಬ– 2026ರ ಮೂರನೇ ದಿನದ ಕಾರ್ಯಕ್ರಮದಲ್ಲಿ ಮಾತನಾಡಿದರು.

ಅಧ್ಯಕ್ಷತೆ ವಹಿಸಿದ್ದ ಉದ್ಯಮಿ ಬಿಜೂರು ರಾಮಕೃಷ್ಣ ಶೇರುಗಾರ್ ಮಾತನಾಡಿ, ಸ್ವಕೇಂದ್ರಿತ ಸಮಾಜ ನಿರ್ಮಾಣವಾಗುತ್ತಿರುವ ಕಾಲ ಘಟ್ಟದಲ್ಲಿ, ಗ್ರಾಮೀಣ ಪ್ರದೇಶದಲ್ಲಿ ನಡೆಯುತ್ತಿರುವ ರಂಗ ಚಟುವಟಿಕೆಗಳು ಮುಖ್ಯ ಎಂದೆನಿಸಿಕೊಳ್ಳುತ್ತವೆ. ಕಲಾ ಪೋಷಕರು ಹಾಗೂ ಪ್ರೇಕ್ಷಕರು ಕಲೆ ಮತ್ತು ಕಲಾವಿದರ ಹಿಂದಿರುವ ದೊಡ್ಡಶಕ್ತಿ. ಸಾಂಸ್ಕೃತಿಕ ಅಭಿರುಚಿ, ಅಭಿಮಾನ ಹಾಗೂ ಹಿರಿಯರ ಸನ್ನಡತೆಯ ಸಹಕಾರದಿಂದ ಸತತ 49 ವರ್ಷಗಳಿಂದ ರಂಗಚಟುವಟಿಕೆಗಳ ಮೂಲಕ ಸಾಗಿಬಂದು ರಾಜ್ಯಾದ್ಯಂತ ಹೆಸರು ಮಾಡಿದ ಲಾವಣ್ಯದ ಸಾಧನೆ ವರ್ಣಾನಾತೀತ ಎಂದರು.



> **ಯುವಜನರನ್ನು ಸೆಳೆಯಬೇಕು**
> ರಂಗಭೂಮಿ ನಿರಂತರ ಬದಲಾವಣೆಗೆ ಒಳಗಾಗುತ್ತ ಬಂದಿದ್ದು, ವಿದ್ಯುನ್ಮಾನ ತಂತ್ರಜ್ಞಾನದಲ್ಲಿ ಆಗುತ್ತಿರುವ ಹೊಸ ಆವಿಷ್ಕಾರಗಳು ಇದರ ಇನ್ನಷ್ಟು ಬದಲಾವಣೆಗೆ ಕಾರಣವಾಗಿದೆ. ಹವ್ಯಾಸಿ ರಂಗಕಲಾ ತಂಡಗಳು ಅವುಗಳೊಂದಿಗೆ ಹೆಜ್ಜೆಹಾಕಬೇಕಾದ ಅನಿವಾರ್ಯತೆ ಇದೆ. ಅದು ಯುವಜನರನ್ನು ತನ್ನತ್ತ ಸೆಳೆಯುವ ಕೆಲಸ ಮಾಡುವ ಮೂಲಕ ನಿರಂತರತೆಯನ್ನು ಕಾಪಾಡಿಕೊಳ್ಳಬೇಕು
> ■ ಪೂರ್ಣಿಮಾ ಸುರೇಶ್, ರಂಗಭೂಮಿ ಕಲಾವಿದೆ

ರಾಜ್ಯಪ್ರಶಸ್ತಿ ಪುರಸ್ಕೃತ ಶಿಕ್ಷಕ ಸಿ. ಎನ್. ಬಿಲ್ಲವ ಅವರನ್ನು ಸನ್ಮಾನಿಸಲಾಯಿತು. ಮಂಗಳೂರು ಉಪವಿಭಾಗದ ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ ಶ್ರೀಧರ ಪಿ., ರಂಗಭೂಮಿ ಹಾಗೂ ಚಲನಚಿತ್ರ ಕಲಾವಿದೆ ಪೂರ್ಣಿಮಾ ಸುರೇಶ್, ಉದ್ಯಮಿ ನಾಕಟ್ಟೆ ಜಗನ್ನಾಥ ಶೆಟ್ಟಿ, ಕೊಲ್ಲೂರು ದೇವಳದ ವ್ಯವಸ್ಥಾಪನ ಸಮಿತಿ ಮಾಜಿ ಸದಸ್ಯ ಜಯಾನಂದ ಹೋಬಳಿದಾರ್, ಸಿಎ ಗಿರೀಶ ಪಡಿಯಾರ್, ಕಸಾಪ ಬೈಂದೂರು ಘಟಕದ ಅಧ್ಯಕ್ಷ ಅರುಣಕುಮಾರ್ ಶಿರೂರು ಇದ್ದರು. ಗಣಪತಿ ಎಸ್. ಸ್ವಾಗತಿಸಿ, ಹರೇಗೋಡು ಉದಯ್ ಆಚಾರ್ಯ ನಿರೂಪಿಸಿದರು. ರೋಶನ್ ಕುಮಾರ್ ವಂದಿಸಿದರು. ನಂತರ ಮಂಗಳೂರು ಶ್ರೀ ನಂದಿಕೇಶ್ವರ ನಾಟಕ ಸಂಘದ ಕಲಾವಿದರಿಂದ ಭಂಡ ನನ್ನ ಗಂಡ ನಾಟಕ ಪ್ರದರ್ಶನಗೊಂಡಿತು.

ಏ. 1: ಮಣೂರು ಫ್ರೆಂಡ್ಸ್ ಬೆಳ್ಳಿ ಹಬ್ಬದ ಸಂಭ್ರಮ

ರಜತ ಸಂಭ್ರಮ ಪೋಸ್ಟರ್ ಬಿಡುಗಡೆ



ಕೋಟ: ಇಲ್ಲಿನ ಮಣೂರು ಶ್ರೀ ಹೇರಂಬ ಮಹಾಗಣಪತಿ ಹಾಗೂ ಮಹಾಲಿಂಗೇಶ್ವರ ದೇವಸ್ಥಾನ ಇದರ ವಾರ್ಷಿಕ ರಥೋತ್ಸವದ ಹಿನ್ನಲೆಯಲ್ಲಿ ಮಣೂರು ಫ್ರೆಂಡ್ಸ್ ಮಣೂರು ಹಮ್ಮಿಕೊಂಡು ಬರುತ್ತಿರುವ ವಾರ್ಷಿಕೋತ್ಸವಕ್ಕೆ ಇದೀಗ ರಜತ ಮಹೋತ್ಸವ ಸಂಭ್ರಮ ಈ ದಿಸೆಯಲ್ಲಿ ಇದೇ ಬರುವ ಏಪ್ರಿಲ್ 1ರಂದು ಮಣೂರು ದೇಗುಲದ ವಠಾರದಲ್ಲಿ ರಜತ ಸಂಭ್ರಮ ಎಂಬ ಶೀರ್ಷಿಕೆಯಡಿ ಸಾಂಸ್ಕೃತಿಕ, ಸಂಗೀತ ಗಾಯನ, ಸಾಧಕರಿಗೆ ಸನ್ಮಾನ ಕಾರ್ಯಕ್ರಮ ಆಯೋಜಿಸಿದ್ದು ಇದರ ಪೋಸ್ಟರ್ ಅನ್ನು ಶುಕ್ರವಾರ ಕೋಟ ಅಮೃತೇಶ್ವರೀ ದೇಗುಲದಲ್ಲಿ ಗೀತಾನಂದ ಟ್ರಸ್ಟ್ ಪ್ರವರ್ತಕ ಆನಂದ್ ಸಿ. ಕುಂದರ್ ಬಿಡುಗಡೆಗೊಳಿಸಿ ಕಾರ್ಯಕ್ರಮದ ಯಶಸ್ಸಿಗೆ ಶುಭಹಾರೈಸಿದರು.

ಈ ಸಂದರ್ಭದಲ್ಲಿ ಮಣೂರು ಮಹಾಲಿಂಗೇಶ್ವರ ದೇಗುಲದ ಅಧ್ಯಕ್ಷ ಸತೀಶ್ ಹೆಚ್ ಕುಂದರ್, ಅಮೃತೇಶ್ವರೀ ದೇಗುಲದ ಟ್ರಸ್ಟಿ ಶಿವ ಪೂಜಾರಿ, ಕೋಟ ಪಂಚಾಯತ್ ಮಾಜಿ ಸದಸ್ಯ ಭುಜಂಗ ಗುರಿಕಾರ, ಬೆಣ್ಣೆಕುದ್ರು ದೇಗುಲದ ಮ್ಯಾನೇಜರ್ ಸೋಮಶೇಖರ್, ಮಣೂರು ಫ್ರೆಂಡ್ಸ್ ಗೌರವ ಸಲಹೆಗಾರ ಎಂ. ಸುಬ್ರಾಯ ಆಚಾರ್, ಮಣೂರು ಫ್ರೆಂಡ್ಸ್ ಅಧ್ಯಕ್ಷ ರಾಘವೇಂದ್ರ ಆಚಾರ್, ಗೌರವಾಧ್ಯಕ್ಷ ಸುರೇಶ್ ಆಚಾರ್, ಮಾಜಿ ಅಧ್ಯಕ್ಷರಾದ ಸುಧಾಕರ್ ಆಚಾರ್, ದಿನೇಶ್ ಆಚಾರ್ ಸಂಘದ ಪದಾಧಿಕಾರಿಗಳು ಉಪಸ್ಥಿತರಿದ್ದರು. ಸುಜಾತ ಬಾಯರಿ ಕಾರ್ಯಕ್ರಮ ನಿರೂಪಿಸಿದರು.

ಸಂಘ ಶತಾಬ್ದಿ: ಪಾಣಾಜೆ ಪುತ್ತಿಲ ಪರಿವಾರ ಸೇವಾ ಟ್ರಸ್ಟ್ ವತಿಯಿಂದ

ಮನೆ ನವೀಕರಣಗೊಳಿಸಿ ಹಸ್ತಾಂತರ

ನಿಡ್ಪಳ್ಳಿ: ಪಾಣಾಜೆ ಗ್ರಾಮದ ಕಲ್ಲಪದವು ನಿವಾಸಿ ವೀಣಾ ಬಾಬು ಅವರ ಮನೆಯ ಮೇಲ್ಛಾವಣಿಯು ಸಂಪೂರ್ಣ ಕುಸಿದಿದ್ದು, ಮನೆ ನವೀಕರಣ ಮಾಡಲು ಮನೆಯವರು ಆರ್ಥಿಕವಾಗಿ ಸಂಕಷ್ಟದಲ್ಲಿದ್ದರು. ಸಂಘ ಶತಾಬ್ದಿ ಹಿನ್ನೆಲೆಯಲ್ಲಿ ಪುತ್ತಿಲ ಪರಿವಾರ ಸೇವಾ ಟ್ರಸ್ಟ್ ಪಾಣಾಜೆ ಗ್ರಾಮ ಸಮಿತಿಯ ವತಿಯಿಂದ ಊರ ದಾನಿಗಳ ಹಾಗೂ ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ಶೌರ್ಯ ವಿಪತ್ತು ನಿರ್ವಹಣಾ ಘಟಕದ ಸಹಕಾರದಿಂದ ಸುಮಾರು ರೂ. 55,000 ವೆಚ್ಚದಲ್ಲಿ ಮನೆ ನವೀಕರಣದ ಕಾರ್ಯವನ್ನು ನಡೆಸಿ ಮಾ.8 ರಂದು ಗಣಪತಿ ಹವನದೊಂದಿಗೆ ಮನೆಯನ್ನು ಫಲಾನುಭವಿಗಳಿಗೆ ಹಸ್ತಾಂತರ ಮಾಡಲಾಯಿತು.



ಪುತ್ತಿಲ ಪರಿವಾರ ಸೇವಾ ಟ್ರಸ್ಟ್‌ನ ಸಂಚಾಲಕ ಅರುಣ್ ಕುಮಾರ್ ಪುತ್ತಿಲ ಶುಭ ಹಾರೈಸಿದರು. ಪಾಣಾಜೆ ಹಾಲು ಉತ್ಪಾದಕರ ಸಹಕಾರಿ ಸಂಘದ ಅಧ್ಯಕ್ಷ ನಾರಾಯಣ ಪ್ರಕಾಶ್ ನೆಲ್ಲಿತ್ತಿಮಾರು, ಡಾ. ಅಖಿಲೇಶ್ ಪಾಣಾಜೆ, ಟ್ರಸ್ಟ್‌ನ ಪ್ರಧಾನ ಕಾರ್ಯದರ್ಶಿ ಪ್ರೇಮ್ ರಾಜ್ ಆರ್ಲಪದವು, ಕೋಶಾಧಿಕಾರಿ ರೂಪೇಶ್ ನಾಯ್ಕ್, ನಿವೃತ್ತ ಮುಖ್ಯಶಿಕ್ಷಕಿ ಪ್ರತಿಭಾ ಓಕುಣ್ಣಾಯ, ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ಸೇವಾ ಪ್ರತಿನಿಧಿ ಜಯಶ್ರೀ ದೇವಸ್ಯ, ಯುವ ಉದ್ಯಮಿ ಹರಿಪ್ರಸಾದ್ ಕಾಸರಗೋಡು, ಗೋಪಾಲಕೃಷ್ಣ ಓಕುಣ್ಣಾಯ, ಪುತ್ತಿಲ ಪರಿವಾರ ಪಾಣಾಜೆ ಗ್ರಾಮ ಸಮಿತಿ ಅಧ್ಯಕ್ಷ ಶ್ರೀನಿವಾಸ ಕುಲಾಲ್ ಉಡ್ಡಂಗಳ, ಪ್ರಧಾನ ಕಾರ್ಯದರ್ಶಿ ಸುಖಿನ್ ರಾಜ್, ಪದಾಕಾರಿಗಳಾದ ವಸಂತ ಕುಮಾರ್ ಭರಣ್ಯ, ಪ್ರದೀಪ್ ಪಾಣಾಜೆ, ಸಂದೀಪ್ ಕೆ.,ಸುರೇಶ್ ತೂಂಬಡ್ಕ, ಹರೀಶ್ ಕುಲಾಲ್ ಆರ್ಲಪದವು, ಹರೀಶ್ ವಾಣಿಯನ್, ಗೋಪಾಲಕೃಷ್ಣ ನೆಲ್ಲಿತ್ತಿಮಾರು, ಹರಿಕೃಷ್ಣ ಒಡ್ಯ, ಮಂಜುನಾಥ ಪೂಜಾರಿ, ರವಿಚಂದ್ರ ಬಿ.ಜಿ, ಶಶಿಕಾಂತ್ ವಾಣಿಯನ್, ಕೀರ್ತಿರಾಜ್ ಉಡ್ಡಂಗಳ, ಚಂದ್ರ ಬೇರಿಕೆ, ಹರೀಶ್ ಗುರಿಕೇಲು ಹಾಗೂ ಸೀತಾ ಪರಿವಾರ ಟ್ರಸ್ಟ್‌ನ ಪದಾಧಿಕಾರಿಗಳಾದ ಪ್ರಮಿಳಾ ಸುರೇಶ್ ತೂಂಬಡ್ಕ, ಸಂಧ್ಯಾ ಸಂದೀಪ್ ಕೆ. ಉಪಸ್ಥಿತರಿದ್ದರು.

ಶ್ರೀ ಸಹಸ್ರಲಿಂಗೇಶ್ವರ ದೇವರ ಸನ್ನಿಧಿಯಲ್ಲಿ ಆಮಂತ್ರಣ ಪತ್ರ ಬಿಡುಗಡೆ

ಉಪ್ಪಿನಂಗಡಿಯಲ್ಲಿ ಏ. 5ರಂದು ನಾಗಮಂಡಲ



ಉಪ್ಪಿನಂಗಡಿ: ಪುತ್ತಿಲ ಪರಿವಾರ ಸೇವಾ ಟ್ರಸ್ಟ್ ಪುತ್ತೂರು ಹಾಗೂ ನಾಗಮಂಡಲೋತ್ಸವ ಸಮಿತಿ ಉಪ್ಪಿನಂಗಡಿ ಇದರ ಆಶ್ರಯದಲ್ಲಿ ಏ.5ರಂದು ಇಲ್ಲಿನ ಶ್ರೀ ಸಹಸ್ರಲಿಂಗೇಶ್ವರ– ಮಹಾಕಾಳಿ ಕ್ಷೇತ್ರದಲ್ಲಿ ನಡೆಯಲಿರುವ ಚತುಃ ಪವಿತ್ರ ನಾಗಮಂಡಲದ ಆಮಂತ್ರಣ ಪತ್ರಿಕೆ ಬಿಡುಗಡೆ ಕಾರ್ಯಕ್ರಮ ಶ್ರೀ ಸಹಸ್ರಲಿಂಗೇಶ್ವರ ದೇವರ ಸನ್ನಿಧಿಯಲ್ಲಿ ನಡೆಯಿತು.

ಶ್ರೀ ಸಹಸ್ರಲಿಂಗೇಶ್ವರ ದೇವರ ಸನ್ನಿಧಿಯಲ್ಲಿ ವಿಶೇಷ ಪ್ರಾರ್ಥನೆಯ ಬಳಿಕ ಟ್ರಸ್ಟ್ ಸಂಚಾಲಕ ಅರುಣ್ ಕುಮಾರ್ ಪುತ್ತಿಲ ಆಮಂತ್ರಣ ಪತ್ರಿಕೆಯನ್ನು ಬಿಡುಗಡೆಗೊಳಿಸಿದರು. ಶ್ರೀನಿಧಿ ಉಪಾಧ್ಯಾಯ ವಿಶೇಷ ಪ್ರಾರ್ಥನೆ ನಡೆಸಿದರು.

ಈ ಸಂದರ್ಭ ದೇವಾಲಯದ ವ್ಯವಸ್ಥಾಪನಾ ಸಮಿತಿಯ ಅಧ್ಯಕ್ಷ ಕೆ. ರಾಧಾಕೃಷ್ಣ ನ್ಯಾಕ್, ಸದಸ್ಯ ಕೃಷ್ಣರಾವ್ ಆರ್ತಿಲ, ಪುತ್ತಿಲ ಪರಿವಾರ ಸೇವಾ ಟ್ರಸ್ಟ್‌ನ ಅಧ್ಯಕ್ಷ ಶ್ರೀರಾಮ ಭಟ್ ಪಾತಾಳ, ನಾಗಮಂಡಲೋತ್ಸವ ಸಮಿತಿಯ ಗೌರವಾಧ್ಯಕ್ಷ ಪ್ರತಾಪ್ ಪೆರಿಯಡ್ಕ, ಕಾರ್ಯಾಧ್ಯಕ್ಷ ಹರಿಪ್ರಸಾದ್ ಶೆಟ್ಟಿ ಬೊಳ್ಳಾವು, ಅಧ್ಯಕ್ಷ ಚಂದಪ್ಪ ಮೂಲ್ಯ, ಪ್ರಧಾನ ಕಾರ್ಯದರ್ಶಿಗಳಾದ ಪ್ರಶಾಂತ್ ನೆಕ್ಕಿಲಾಡಿ, ನವೀನ್ ಕುಮಾರ್ ಕಲ್ಯಾಟೆ, ಕೋಶಾಧಿಕಾರಿ ಯತೀಶ್ ಶೆಟ್ಟಿ ಉಪ್ಪಿನಂಗಡಿ, ಸಹಸಂಚಾಲಕರಾದ ಉಮೇಶ್ ಕೋಡಿಜಾಲು, ಅನಿಲ್ ತೆಂಕಿಲ, ವಿವಿಧ ಸಮಿತಿಗಳ ಪದಾಧಿಕಾರಿಗಳಾದ ಡಾ. ಬಿ. ರಘು ಶಾಂತಿನಗರ, ವಿದ್ಯಾಧರ ಜೈನ್, ಕಂಗ್ವೆ ವಿಶ್ವನಾಥ ಶೆಟ್ಟಿ, ರಾಮಚಂದ್ರ ಮಣಿಯಾಣಿ, ಜಯಂತ ಪೊರೋಳಿ, ರಾಧಾಕೃಷ್ಣ ಭಟ್ ಬೊಳ್ಳಾವು, ಲಕ್ಷ್ಮಣ ಗೌಡ ನೆಡ್ಚಿಲ್, ಮಹೇಂದ್ರವರ್ಮ ಬಜತ್ತೂರು, ಕಿಶೋರ್ ಕೋಟೆ, ಧರ್ನಪ್ಪ ನಾಯ್ಕ, ರಮೇಶ್ ಬಂಡಾರಿ, ರಾಮಚಂದ್ರ ನೆಡ್ಚಿಲ್, ಸದಾನಂದ ಶೆಟ್ಟಿ ಕಿಂಡೋವು, ಪದ್ಮನಾಭ ನೆಡ್ಚಿಲ್, ಜನಾರ್ದನ ಹರಿನಗರ, ವಿಜಿತ್ ಕುಮಾರ್ ನೇಜಿಕಾರು, ಕೈಲಾರ್ ರಾಜಗೋಪಾಲ ಭಟ್, ರವಿ ರಾಮನಗರ, ಸುರೇಶ ನಲಿಕೆಮಜಲು, ರಾಜಗೋಪಾಲ ಹೆಗ್ಡೆ, ಗುರುರಾಜ್ ಭಟ್, ರಾಜೀವ ಶೆಟ್ಟಿ, ಪ್ರಜ್ವಲ್ ಘಾಟೆ, ಮನೀಷ್ ಕುಲಾಲ್, ಉಮೇಶ್ ಕೋಡಿಬೈಲು, ಸುಜೀರ್ ಗಣಪತಿ ನಾಯಕ್ ಮತ್ತಿತರರು ಉಪಸ್ಥಿತರಿದ್ದರು.

ಕೇರಳ ರಾಜ್ಯ ಲಾಟರಿ ಫಲಿತಾಂಶ ವಿವರ ಪ್ರಕಟ

ತಿರುವನಂತಪುರಂ: ಕೇರಳ ರಾಜ್ಯ ಲಾಟರಿಯ ಸಂಮೃದ್ಧಿ(ನಂ.SM-44) ಡ್ರಾ ಮಾರ್ಚ್ 01ರಂದು ತಿರುವನಂತಪುರಂನ ಬೇಕರಿ ಜಂಕ್ಷನ್ ಬಳಿಯ ಗೋರ್ಕಿ ಭವನದಲ್ಲಿ ನಡೆದಿದ್ದು, ಫಲಿತಾಂಶ ವಿವರ ಇಂತಿದೆ.

1st Prize Rs.1,00,00,000/- [1 Crore]
ME 265184 (VADAKARA)
Consolation Prize Rs.5,000/-
MA 265184 MB 265184 MC 265184 MD 265184
MF 265184 MG 265184 MH 265184 MJ 265184
MK 265184 ML 265184 MM 265184
2nd Prize Rs.25,00,000/- [25 Lakhs]
MJ 486062 (PAYYANUR)
3rd Prize Rs.5,00,000/- [5 Lakhs]
MH 445280 (GURUVAYOOR)

FOR THE TICKETS ENDING WITH THE FOLLOWING NUMBERS

4th Prize Rs.5,000/-
0027 0267 0714 0926 1034 1245 1405 1440 1969 2015
2221 3512 3580 4259 4703 4756 4995 5031 7502
5th Prize Rs.2,000/-
1646 4611 5729 6889 8868 9403
6th Prize Rs.1,000/-
0047 0202 0871 1239 1733 1775 2021 2107 2128 2400
2789 3175 3207 3476 4134 4191 6529 7173 7743 8244
8677 8737 8795 9157 9698
7th Prize Rs.500/-
0162 0283 0433 0474 0502 0518 0609 0651 0691 0784
0901 0913 1624 1829 2196 2357 2358 2475 2730 2750
2785 3125 3162 3262 3332 3365 3492 3694 3763 3807
4153 4181 4195 4228 4339 4493 4522 4835 5047 5157
5302 5499 5639 5678 5715 6261 6338 6722 6930 7007
7075 7372 7559 7638 7809 7964 8044 8506 8532 8533
8782 8830 8889 8926 8937 8976 9029 9087 9160 9213
9336 9362 9525 9758 9896 9998
8th Prize Rs.200/-
0389 0527 0565 0610 0619 0630 0806 0937 0992 1023
1056 1249 1383 1429 1742 1844 1894 1953 2087 2168
2198 2327 2368 2483 2553 2774 2874 2880 2932 3082
3139 3281 3404 3576 3690 3696 3705 4145 4156 4270
4405 4561 4697 4740 4749 4961 5202 5312 5435 5461
5537 5542 5554 5594 5615 5650 5828 5854 6024 6045
6223 6358 6412 6636 6728 6822 6946 7209 7367 7435
7474 7491 7546 7659 7773 7784 8121 8375 8453 8629
8684 8726 9016 9022 9178 9470 9487 9499 9568 9671
9762 9982
9th Prize Rs.100/-
0032 0149 0159 0586 0928 0982 1027 1086 1117 1130
1195 1237 1264 1271 1337 1420 1522 1717 1886 1918
2078 2114 2296 2392 2658 2702 2772 2838 2893 2927
2944 2995 3075 3131 3178 3231 3500 3519 3600 3607
3609 3611 3666 3719 3723 3913 3932 4102 4108 4135
4284 4498 4511 4541 4570 4587 4629 4661 4709 4802
4861 4903 4986 4993 5129 5249 5322 5323 5410 5485
5625 5675 5701 5859 5904 5936 6102 6125 6144 6153
6192 6232 6321 6354 6359 6413 6473 6515 6520 6650
6785 6812 6910 6939 6960 6988 7043 7111 7129 7135
7167 7205 7278 7338 7403 7460 7566 7604 7690 7704
7705 7710 7751 7856 8001 8077 8188 8201 8209 8274
8324 8382 8424 8574 8605 8626 8632 8636 8727 8779
8852 8861 9015 9018 9038 9044 9067 9107 9177 9281
9314 9356 9411 9463 9570 9589 9676 9819 9827 9944

ಕಿರುಸುದ್ದಿ

ಬೀಟೆ ನಾಟಾ ವಶ

ಸೋಮವಾರಪೇಟೆ: ಸೋಮವಾರಪೇಟೆ ವಲಯದ ಬ್ಯಾಡಗೊಡ್ಡ ಗ್ರಾಮದಲ್ಲಿ ಅಕ್ರಮವಾಗಿ ಸಂಗ್ರಹಿಸಿಟ್ಟಿದ್ದ ಬೀಟೆ ನಾಟಗಳನ್ನು ಅರಣ್ಯ ಅಧಿಕಾರಿಗಳ ತಂಡ ಮಂಗಳವಾರ ವಶಪಡಿಸಿಕೊಂಡಿದೆ. ಬ್ಯಾಡಗೊಟ್ಟ ಗ್ರಾಮದ ಬಿ.ಡಿ.ಅಣ್ಣಯ್ಯ ಮತ್ತು ವಾಹನ ಮಾಲಿಕ ಬಿ.ವಿ.ಚಂದ್ರ ಎಂಬವರ ವಿರುದ್ಧ ಮೊಕದ್ದಮೆ ದಾಖಲಾಗಿದೆ. ಅಣ್ಣಯ್ಯ ಅವರ ಸೀಗೆಹೊಸೂರು ಗ್ರಾಮದ ಜಮೀನಿನಲ್ಲಿ ಮರಗಳನ್ನು ಕಡಿದು ನಾಟಗಳನ್ನಾಗಿ ಪರಿವರ್ತಿಸಿ ವಾಹನದಲ್ಲಿ ತುಂಬಿಸಿಕೊಂಡು ಮಲ್ಲೇನಹಳ್ಳಿ ಗ್ರಾಮದ ತನ್ನ ಗೋದಾಮಿನಲ್ಲಿ ನಿಲ್ಲಿಸಿದ್ದರು. ಮಾಹಿತಿ ಪಡೆದ ಸೋಮವಾರಪೇಟೆ ಅರಣ್ಯಾಧಿಕಾರಿಗಳ ತಂಡ ದಾಳಿ ನಡೆಸಿ ಬೀಟೆ ನಾಟಾಗಳು ಮತ್ತು ವಾಹನವನ್ನು ವಶಪಡಿಸಿಕೊಂಡು ಮೊಕದ್ದಮೆ ದಾಖಲಿಸಿದೆ. ಆರೋಪಿಗಳು ತಲೆಮರೆಸಿಕೊಂಡಿದ್ದಾರೆ. ಎಸಿಎಫ್ ಗೋಪಾಲ್ ಮಾರ್ಗದರ್ಶನದಲ್ಲಿ ಆರ್‌ಎಫ್‌ಒ ಶೈಲೇಂದ್ರಕುಮಾರ್, ಡಿಆರ್‌ಎಫ್‌ಒ ಬಿ.ಎನ್.ಗುರುಪ್ರಸಾದ್, ಸಿಬ್ಬಂದಿಗಳಾದ ವರುಣ್, ಜೀವನ್, ದರ್ಶನ್, ವಿಕಾಸ್ ಕಾರ್ಯಾಚರಣೆಯಲ್ಲಿ ಭಾಗವಹಿಸಿದ್ದರು.

ಕೋಳಿ ಅಂಕಕ್ಕೆ ಪೊಲೀಸ್ ದಾಳಿ

ಸುಬ್ರಹ್ಮಣ್ಯ: ಕೋಳಿ ಅಂಕಕ್ಕೆ ಪೊಲೀಸರು ದಾಳಿ ನಡೆಸಿ ಪ್ರಕರಣ ದಾಖಲಿಸಿ ಕೊಂಡ ಘಟನೆ ಕಡಬ ತಾಲೂಕಿನ ಯೇನೆಕಲ್ಲಿನಲ್ಲಿ ಶುಕ್ರವಾರ ನಡೆದಿದೆ.

ಶುಕ್ರವಾರ ಸಂಜೆ ಕಡಬ ತಾಲೂಕಿನ ಯೇನೆಕಲ್ಲು ಗ್ರಾಮದ ಸಂಕಡ್ಕ ಎಂಬಲ್ಲಿ ಹಣವನ್ನು ಪಣವಾಗಿಟ್ಟು ಹುಂಜ ಕೋಳಿಗಳನ್ನು ಕಟ್ಟಿಜೂಜಾಟ ಆಡುತ್ತಿರುವ ಬಗ್ಗೆ ಸುಬ್ರಹ್ಮಣ್ಯ ಠಾಣಾಧಿಕಾರಿ ಆಂಜನೇಯ ರೆಡ್ಡಿ ಅವರಿಗೆ ಖಚಿತ ಮಾಹಿತಿ ಸಿಕ್ಕಿದ್ದು, ಅದರಂತೆ ಅವರು ಠಾಣಾ ಸಿಬ್ಬಂದಿಗಳೊಂದಿಗೆ, ಘಟನಾ ಸ್ಥಳಕ್ಕೆ ದಾಳಿ ಮಾಡಿದಾಗ, ಕೃತ್ಯದಲ್ಲಿ ಭಾಗಿಯಾಗಿದ್ದವರು ಪರಾರಿಯಾಗಿದ್ದು, ಸ್ಥಳವನ್ನು ಪರಿಶೀಲಿಸಿದಾಗ, ಕೋಳಿಗಳನ್ನು ಕಟ್ಟಿಜೂಜಾಟ ಆಡಿರುವ ಕುರುಹು ಕಂಡುಬಂದಿರುತ್ತದೆ ಹಾಗೂ 2 ಕೋಳಿಗಳು ಪತ್ತೆಯಾಗಿದ್ದು, ಈ ಪೈಕಿ ಒಂದು ಕೋಳಿಯ ಕಾಲಿಗೆ ಕೋಳಿ ಅಂಕಕ್ಕೆ ಬಳಸುವ ಕತ್ತಿ ಕಟ್ಟಿರುವುದು ಕಂಡುಬಂದಿದೆ. ಈ ಬಗ್ಗೆ ಸುಬ್ರಹ್ಮಣ್ಯ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಕಾರು-ಬೈಕ್ ಡಿಕ್ಕಿ: ಮಗುವಿಗೆ ಗಾಯ

ಕಾಪು: ರಾಷ್ಟ್ರೀಯ ಹೆದ್ದಾರಿ 66ರ ಉಳಿಯಾರಗೋಳಿ ದಂಡತೀರ್ಥ ಶಾಲೆಯ ಬಳಿ ಕಾರು ಮತ್ತು ಬೈಕ್ ನಡುವೆ ನಡೆದ ಅಪಘಾತದಲ್ಲಿ ಪಾದಚಾರಿ ಮಗುವಿಗೆ ಗಾಯವಾಗಿರುವ ಘಟನೆ ಶುಕ್ರವಾರ ಸಂಜೆ ಸಂಭವಿಸಿದೆ. ಮೈಸೂರಿನಿಂದ ಉಡುಪಿಗೆ ಬರುತ್ತಿದ್ದ ಕಾರಿಗೆ, ಬೈಕ್ ಸವಾರ ಡಿಕ್ಕಿ ಹೊಡೆದಿದ್ದಾನೆ. ಈ ಸಂದರ್ಭದಲ್ಲಿ ಬೈಕ್ ರಸ್ತೆಯಲ್ಲಿ ನಡೆದುಕೊಂಡು ಹೋಗುತ್ತಿದ್ದ ಮಗುವಿಗೂ ತಗುಲಿದ್ದು, ಮಗುವಿನ ಕಾಲಿಗೆ ಪೆಟ್ಟಾಗಿದೆ. ತಕ್ಷಣ ಸ್ಥಳೀಯರು ಗಾಯಾಳು ಮಗುವನ್ನು ಆಸ್ಪತ್ರೆಗೆ ದಾಖಲಿಸಿದ್ದಾರೆ. ಕಾರು ಚಾಲಕ ಆಕಾಶ್ ಜೆ.ಎಂ. ನೀಡಿದ ದೂರಿನಂತೆ ಕಾಪು ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಇಂದು ಯಕ್ಷಗಾನ

ಶ್ರೀ ಕಟೀಲು ಯಕ್ಷಗಾನ ಮೇಳ

1. ದಿ। ನಾರಾಯಣ ಶೆಟ್ಟಿ ಸ್ಮರಣಾರ್ಥ ಪತ್ನಿ ಮತ್ತು ಮಕ್ಕಳು, ಮರಕಡ, ಮರಕಡ ಮೈದಾನದಲ್ಲಿ.
2. ಸದಾಶಿವ ಭಟ್, ದೇರಾಡಿ ಮನೆ, ಶ್ರೀ ಪಂಚಲಿಂಗೇಶ್ವರ ದೇವಸ್ಥಾನ, ಹನ್ನೆರಡು ಕವಲು, ತಾಕೊಡೆ ವಯಾ ಮೂಡುಬಿದ್ರಿ.
3. ದಿನೇಶ್ ಸಾಲ್ಯಾನ್, ಉರೆಸಾಗ್ ಹೌಸ್, ಬನ್ನೂರು, ಪುತ್ತೂರು (ತಾ).
4. ದಿನೇಶ್ ಕುಂದಾಪುರ, ಒಂಭತ್ತು ದಂಡಿಗೆ, ಶ್ರೀ ಚಿಕ್ಕಮ್ಮ ದೇವಿ ದೇವಸ್ಥಾನ, ಪಡುಕೇರಿ, ಕುಂದಾಪುರ (ತಾ).
5. ಲೀಲಾ ಸಫಲಿಗ ಮತ್ತು ಫ್ಯಾಮಿಲಿ, ಮುರ ಶಾಸ್ತಾವು, ಮೂಡುಪೆರಾರ, ಮಂಗಳೂರು (ತಾ).
6. ಅರುಣ್ ಡಿ. ಶೆಟ್ಟಿ ನಡಿಗುತ್ತು, ಪಡುಪೆರಾರ, ಕತ್ತಲ್‌ಸಾರ್ ವಯಾ ಬಜಪೆ.
7. ಕಾರ್ತಿಕ್ ಶೆಟ್ಟಿ, 'ಶ್ರೀ ಕಟೀಲು ನಿಲಯ', ಗುಟ್ಟುಕೋಡು, ಕುಂದಾಪುರ (ತಾ)

ಶ್ರೀ ಧರ್ಮಸ್ಥಳ ಮೇಳ
ಕಾರಣಗಿರಿಯಲ್ಲಿ
ಶ್ರೀ ಗಣೇಶ್ ಎಂ.ಆರ್., ಶ್ರೀ ಗಿರಿದರ್ಶನ್ ಸ್ಟೋರ್

ಶ್ರೀ ಸಾಲಿಗ್ರಾಮ ಮೇಳ
ಅರೆಶಿರೂರಿನಲ್ಲಿ- ಸ್ವಪ್ನ ಮಂಟಪ

ಶ್ರೀ ಪೆರ್ಡೂರು ಮೇಳ
ಸೊರಬದ ನಿಸರಾಣಿಯಲ್ಲಿ- ಚದುರಂಗ

ಶ್ರೀ ಹನುಮಗಿರಿ ಮೇಳ
ಹರೆಗೋಡು ಕೊತ್ತಾಡಿಯಲ್ಲಿ

ಶ್ರೀ ಪಾವಂಜೆ ಮೇಳ
ಉಜಿರೆ ಜನಾರ್ದನ ದೇವಸ್ಥಾನದಲ್ಲಿ
ಶ್ರೀ ದೇವಿ ಮಹಾತ್ಮೆ



ಕಿನ್ನಿಗೋಳಿ ರಿಕ್ಷಾ ಚಾಲಕ ಮಾಲಕರ ಸಂಘದ ಆಶ್ರಯದಲ್ಲಿ ಆಟೋಫ್ರೆಂಡ್ಸ್ ಎಂಬ ಆ್ಯಂಬುಲೆನ್ಸ್ ಸೇವೆ ಆರಂಭಿಸಿದ್ದು ಅದಕ್ಕೆ ಭುವನಾಭಿರಾಮ ಉಡುಪ ಚಾಲನೆ ನೀಡಿದರು. ರಿಕ್ಷಾ ಸಂಘಟನೆಯ ಅಧ್ಯಕ್ಷ ದಾವೂದ್ ಕಲ್‌ಕರೆ , ಉದ್ಯಮಿ ಸುಧಾಕರ ಶೆಟ್ಟಿ, ಕಾರ್ಯದರ್ಶಿ ಸಂತೋಷ್ ಗುತ್ತಕಾಡು, ಅಲ್ವಿನ್ ಸೆರಾವೊ, ಸುನಿಲ್ ಕುಲಾಲ್, ಹರ್ಷಿತ್ ಕಿನ್ನಿಗೋಳಿ, ಮಹಮದ್, ಸುರೇಶ್ , ಸುನೀಲ್ ಮಾಡ ಮತ್ತಿತರರು ಉಪಸ್ಥಿತರಿದ್ದರು.

ನಕಲಿ ನಂಬರ್ ಪ್ಲೇಟ್: ಯುವಕ ಸೆರೆ

ಬೆಳ್ತಂಗಡಿ: ಪಶ್ಚಿಮ ಬಂಗಾಳದ ದಾಖಲೆಗಳಿಲ್ಲದ ಬೈಕ್ ಅನ್ನು ಖರೀದಿಸಿ ನಕಲಿ ನಂಬರ್ ಪ್ಲೇಟ್ ಅಳವಡಿಸಿ ಚಲಾಯಿಸುತ್ತಿದ್ದ ಬೈಕ್ ಹಾಗೂ ಸವಾರನನ್ನು ಬೆಳ್ತಂಗಡಿ ಸಂಚಾರಿ ಠಾಣೆಯ ಪೊಲೀಸರು ಪತ್ತೆಹಚ್ಚಿದ್ದು, ಹೆಚ್ಚಿನ ವಿಚಾರಣೆಗಾಗಿ ಬೆಳ್ತಂಗಡಿ ಪೊಲೀಸ್ ಠಾಣೆಗೆ ಹಸ್ತಾಂತರಿಸಿ ಪ್ರಕರಣ ದಾಖಲಿಸಿದ್ದಾರೆ.

ಬೆಳ್ತಂಗಡಿ ತಾಲೂಕಿನ ಕಳಿಯ ಗ್ರಾಮದ ಗೇರುಕಟ್ಟೆ ನಿವಾಸಿ ಶೇಕುಂಞ ಮಗನಾದ ನವಾಜ್ (19) ಎಂಬಾತ ಚಲಾಯಿಸಿಕೊಂಡು ಬರುತ್ತಿದ್ದ ಬೈಕ್ ಅನ್ನು ಮಾ. 5ರಂದು ಬೆಳ್ತಂಗಡಿ ನಗರದ ಸಂತೆಕಟ್ಟೆಯಲ್ಲಿ ಬೆಳ್ತಂಗಡಿ ಸಂಚಾರಿ ಸಬ್ ಇನ್ಸ್‌ಪೆಕ್ಟರ್ ಕಿಶೋರ್ ಕುಮಾರ್ ಪಿ ಮತ್ತು ಸಿಬ್ಬಂದಿ ಶಿವಾನಂದ ಎಂಬವರು ತಡೆದು ನಿಲ್ಲಿಸಿ ಪರಿಶೀಲನೆ ನಡೆಸುತ್ತಿದ್ದಾಗ ನಕಲಿ ದಾಖಲೆಗಳನ್ನು ಸೃಷ್ಟಿಸಿ ಬೈಕ್ ಉಪಯೋಗಿಸುತ್ತಿರುವುದು ಬಹಿರಂಗಗೊಂಡಿದೆ.

ಹೆಲ್ಮೆಟ್ ಧರಿಸದೆ ಗುರುವಾಯನಕೆರೆ ಕಡೆಯಿಂದ ಬಂದ ಬೈಕ್‌ನಲ್ಲಿ ಬಂದ ಯುವಕನನ್ನು ಪರಿಶೀಲಿಸಿದಾಗ ಬೈಕ್ ನಂಬರ್ ಹಾಗೂ ಆತ ನೀಡಿರುವ ದಾಖಲೆಗಳು ಹೊಂದಾಣಿಕೆಯಾಗದೆ ಇದ್ದು ಚಾಸಿಸ್ ನಂಬರ್ ಮತ್ತು ಇಂಜಿನ್ ನಂಬರ್ ಪರಿಶೀಲಿಸಿದಾಗ ಅದು ಹಾಗೂ ಆರ್‌ಸಿ ಬುಕ್‌ನಲ್ಲಿರುವ ದಾಖಲೆಗಳು ಸರಿಯಾಗಿಲ್ಲದಿರುವುದು ಕಂಡು ಬಂದಿದೆ.

ಈ ಬಗ್ಗೆ ಹೆಚ್ಚಿನ ವಿಚಾರಿಸಿದಾಗ ಬೈಕ್ ಸವಾರನ ಬೈಕ್ ಪಶ್ಚಿಮ ಬಂಗಾಳ ರಾಜ್ಯದ್ದಾಗಿದ್ದು ಬೈಕ್‌ನ ಎಫ್‌ಸಿ ಮುಗಿದಿರುವ ಕಾರಣ ನಕಲಿ ನಂಬರ್ ಪ್ಲೇಟ್ ಅಳವಡಿಸಿರುವುದಾಗಿ ಒಪ್ಪಿಕೊಂಡಿದ್ದಾನೆ. ಅದರಂತೆ ಫೇಸ್ ಬುಕ್‌ನಲ್ಲಿ ಬಂದ ಜಾಹೀರಾತನ್ನು ನೋಡಿ ಅದಕ್ಕೆ ಆನ್ ಲೈನ್‌ನಲ್ಲಿ ಹಣವನ್ನು ಪಾವತಿಸಿ ನೋದಣಿ ನಂಬರ್ ಹಾಗೂ ದಾಖಲೆಗಳನ್ನು ಖರೀದಿಸಿರುವುದಾಗಿಯೂ ಅದನ್ನು ಈ ಬೈಕ್‌ಗೆ ಅಳವಡಿಸಿರುವುದಾಗಿಯೂ ತಿಳಿಸಿದ್ದಾನೆ.

ಈ ಹಿನ್ನಲೆಯಲ್ಲಿ ಯುವಕನ್ನು ಹಾಗೂ ಬೈಕ್ ಅನ್ನು ಬೆಳ್ತಂಗಡಿ ಸಂಚಾರಿ ಪೊಲೀಸರು ಹೆಚ್ಚಿನ ವಿಚಾರಣೆಗಾಗಿ ಬೆಳ್ತಂಗಡಿ ಪೊಲೀಸ್ ಠಾಣೆಗೆ ಹಸ್ತಾಂತರಿಸಿ ಸಬ್ ಇನ್ಸ್‌ಪೆಕ್ಟರ್ ಕಿಶೋರ್ ಕುಮಾರ್ ಪಿ ನೀಡಿದ ದೂರಿನ ಮೇರೆಗೆ ಬೆಳ್ತಂಗಡಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು. ಈ ಬಗ್ಗೆ ತನಿಖೆ ನಡೆಸುತ್ತಿದ್ದಾರೆ. ಪಶ್ಚಿಮ ಬಂಗಾಳದ ಬೈಕ್ ಹೇಗೆ ಇಲ್ಲಿಗೆ ಬಂದಿದೆ ಹಾಗೂ ನಕಲಿ ನಂಬರ್ ಪ್ಲೇಟ್ ಹಾಗೂ ದಾಖಲೆ ತಯಾರಿಸುವ ವ್ಯಕ್ತಿಗಳ ಬಗ್ಗೆ ಪೊಲೀಸರು ತನಿಖೆ ನಡೆಸುತ್ತಿದ್ದಾರೆ.

ಆಳ್ವಾಸ್ ಕಾಲೇಜಿನಲ್ಲಿ 'ಡಾ. ನರಹಳ್ಳಿ ಬಾಲಸುಬ್ರಮಣ್ಯ ಮತ್ತು ಜೀವನ: ಒಂದು ಪಟ್ಟಾಂಗ - ಪ್ರೀತಿಯ ಸಖ್ಯ' ಕಾರ್ಯಕ್ರಮ

ಹೊಸ ತಲೆಮಾರಿನ ಯುವಕರಿಗೆ ಪ್ರೇರಣೆ

ಮೂಡುಬಿದಿರೆ: ಆಳ್ವಾಸ್ ಕಾಲೇಜಿನ (ಸ್ವಾಯತ್ತ) ಕನ್ನಡ ವಿಭಾಗವು ಬೆಂಗಳೂರಿನ ಅಭಿನವ ಪ್ರಕಾಶನದ ಸಹಯೋಗದಲ್ಲಿ "ಡಾ. ನರಹಳ್ಳಿ ಬಾಲಸುಬ್ರಮಣ್ಯ ಮತ್ತು ಜೀವನ: ಒಂದು ಪಟ್ಟಾಂಗ - ಪ್ರೀತಿಯ ಸಖ್ಯ" ಎಂಬ ವಿಶೇಷ ಕಾರ್ಯಕ್ರಮವನ್ನು ಶನಿವಾರ ಕುವೆಂಪು ಸಭಾಂಗಣದಲ್ಲಿ ಆಯೋಜಿಸಿತ್ತು.



ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿದ ಆಳ್ವಾಸ್ ಶಿಕ್ಷಣ ಪ್ರತಿಷ್ಠಾನದ ಅಧ್ಯಕ್ಷ ಡಾ. ಎಂ. ಮೋಹನ ಆಳ್ವ, ಡಾ. ನರಹಳ್ಳಿ ಬಾಲಸುಬ್ರಹ್ಮಣ್ಯರು ಬಹುಮುಖಿ ಚಿಂತಕರಾಗಿದ್ದು, ತಮ್ಮದೇ ಆದ ವಿಶಿಷ್ಟ ಓದುಗ ವಲಯವನ್ನು ಹೊಂದಿದವರು. ಜನಸಾಮಾನ್ಯರ ಬದುಕಿಗೆ ಹತ್ತಿರವಾದ ಸಾಮಾಜಿಕ ವಿಚಾರಗಳನ್ನು ಆಧರಿಸಿ ಕೃತಿಗಳನ್ನು ರಚಿಸಿದ್ದು, ಅದು ಅವರ ಜನಪರ ಕಾಳಜಿಗೆ ಸಾಕ್ಷಿಯಾಗಿದೆ ಎಂದರು.

'ಮಂತ್ರ ಮಾಂಗಲ್ಯ', 'ದಾಂಪತ್ಯ ಎಂಬ ವಿಸ್ಮಯ', "ಮೋಹದ ಮಾಯೆಯಲ್ಲ ಬದುಕಿನ ಜೀವಶಕ್ತಿ" ಮೊದಲಾದ ಕೃತಿಗಳು ನರಹಳ್ಳಿಯವರ ಜೀವನಪ್ರೀತಿಗೆ ದೊಡ್ಡ ನಿದರ್ಶನಗಳಾಗಿವೆ. ಅವರ ಬರಹಗಳಷ್ಟೇ ಅವರ ವ್ಯಕ್ತಿತ್ವವೂ ಉನ್ನತವಾಗಿದ್ದು, ವಿವೇಕಪೂರ್ಣ ನಡೆನುಡಿಗಳ ಮೂಲಕ ಸಾಹಿತ್ಯ ಹೇಗಿರಬೇಕು ಎಂಬುದಕ್ಕೆ ರಾಜಮಾರ್ಗವನ್ನು ತೋರಿದವರು. ಪ್ರಶಸ್ತಿಗಳ ಹಿಂದೆ ಓಡದೆ, ಅನಗತ್ಯ ಹೇಳಿಕೆಗಳ ಮೂಲಕ ಸುದ್ದಿಯಾಗದೆ, ಬರವಣಿಗೆಯನ್ನು ಧ್ಯಾನವಾಗಿಸಿಕೊಂಡ ಅಪರೂಪದ ವ್ಯಕ್ತಿತ್ವ ನರಹಳ್ಳಿಯವರದ್ದು ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಕನ್ನಡದ ಶ್ರೇಷ್ಠವಿಮರ್ಶಕರಲ್ಲಿ ಒಬ್ಬರಾದ ಅವರು ಹೊಸ ತಲೆಮಾರಿನ ಯುವಕರಿಗೆ ಪ್ರೇರಣೆ ನೀಡುತ್ತ ಬಂದವರು. ಗೋಪಾಲಕೃಷ್ಣ ಅಡಿಗರ ನಂತರ ಕನ್ನಡ ಸಾಹಿತ್ಯ ಬೆಳವಣಿಗೆಯ ಹಾದಿಯನ್ನು ತಮ್ಮ ವಿಮರ್ಶಾ ಗ್ರಂಥಗಳಲ್ಲಿ ಚಿತ್ರಿಸಿರುವುದಲ್ಲದೆ, ಕುವೆಂಪು, ಅನಧಿಕೃತ ಹಾಗೂ ಶಿವರುದ್ರಪ್ಪರ ಸಾಹಿತ್ಯವನ್ನು ಆಳವಾಗಿ ಅಧ್ಯಯನ ಮಾಡಿದವರು. ಕನ್ನಡಕ್ಕೆ ತನ್ನದೇ ಆದ ಇತಿಹಾಸ ಮತ್ತು ಪರಂಪರೆ ಇದ್ದು, ಕನ್ನಡಿಗರು ನಕಲಿ ಸಂಸ್ಕೃತಿಯವರಲ್ಲ ಎಂಬ ವಿಚಾರವನ್ನು ದೃಢವಾಗಿ ಪ್ರತಿಪಾದಿಸಿದವರು ನರಹಳ್ಳಿಯವರು. ಯಾವುದೇ ಪಂಥೀಯ ಚೌಕಟ್ಟಿಗೆ ಸೀಮಿತರಾಗದೆ, ಮಾನವೀಯತೆಯನ್ನು ಶ್ರೇಷ್ಠ ಮೌಲ್ಯವಾಗಿ ಪ್ರತಿಪಾದಿಸಿದವರು ಎಂದು ಅಭಿಪ್ರಾಯಪಟ್ಟರು

ಆಳ್ವಾಸ್ ಕಾಲೇಜಿನ ಪ್ರಾಚಾರ್ಯ ಡಾ. ಕುರಿಯನ್ ಮಾತನಾಡಿ, ಸಾಹಿತ್ಯದಲ್ಲಿ ಅಪಾರ ಶಕ್ತಿ ಇದೆ ಎಂಬುದನ್ನು ಸಮಾಜದಲ್ಲಿ ಅರಿವು ಮೂಡಿಸಿದವರು ನರಹಳ್ಳಿಯವರು. ಮ್ಲಾನತೆ ಮತ್ತು ವೈವಿಧ್ಯತೆಯ ನಡುವಿನ ಸಂದಿಗ್ಧ ಪರಿಸ್ಥಿತಿಯಲ್ಲಿ ಜಗತ್ತು ಸಾಗುತ್ತಿರುವಾಗ, ಸಾಹಿತಿಗಳು ಮತ್ತು ಸಾಹಿತ್ಯ ಸಮಾಜದಲ್ಲಿ ಮಹತ್ತರ ಬದಲಾವಣೆ ತರಬಲ್ಲ ಶಕ್ತಿಯನ್ನು ಹೊಂದಿವೆ ಎಂದು ಹೇಳಿದರು.

ಸಂವಾದದಲ್ಲಿ ಮಾತನಾಡಿದ ಡಾ. ನರಹಳ್ಳಿ ಬಾಲಸುಬ್ರಹ್ಮಣ್ಯ, ಪ್ರೀತಿ ವ್ಯಾಖ್ಯಾನಕ್ಕೆ ಸಿಗದ ವಿಸ್ಮಯಕರ ಭಾವನೆ. ಅದು ಸ್ವಾರ್ಥರಹಿತವಾಗಿದ್ದು, ಅನುಭವದ ಮೂಲಕವೇ ಅದರ ಸಾರ್ಥಕತೆಯನ್ನು ಅರಿಯಲು ಸಾಧ್ಯ. ಕುವೆಂಪು, ಬೇಂದ್ರೆ, ಪುತಿನ ಹಾಗೂ ಕೆ. ಎಸ್. ನರಸಿಂಹಸ್ವಾಮಿ ಮುಂತಾದ ಕವಿಗಳು ಪ್ರೀತಿಯನ್ನು ವಿಭಿನ್ನ ರೀತಿಯಲ್ಲಿ ಸಾಹಿತ್ಯದಲ್ಲಿ ಚಿತ್ರಿಸಿರುವುದನ್ನು ವಿವರಿಸಿದರು. ಸಾಹಿತ್ಯದಲ್ಲಿ ಎಲ್ಲರನ್ನು ಒಳಗೊಂಡುಕೊಳ್ಳುವ ಗುಣವಿದ್ದು, ಕಾಲದ ತಲ್ಲಣಗಳಿಗೆ ಪರಿಹಾರ ನೀಡುವ ಶಕ್ತಿ ಸಾಹಿತ್ಯಕ್ಕಿದೆ. ಕಲೆ ಮತ್ತು ಸಾಹಿತ್ಯವನ್ನು ಬೆಳೆಸುತ್ತಾ ವಿದ್ಯಾರ್ಥಿಗಳನ್ನು ರೂಪಿಸುವ ಅನನ್ಯ ಶೈಕ್ಷಣಿಕ ಕಲ್ಪನೆ ಡಾ. ಮೋಹನ ಆಳ್ವರದ್ದು ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

- ಡಾ. ನರಹಳ್ಳಿ ಬಾಲಸುಬ್ರಹ್ಮಣ್ಯರು ಬಹುಮುಖಿ ಚಿಂತಕರಾಗಿದ್ದು, ತಮ್ಮದೇ ಆದ ವಿಶಿಷ್ಟ ಓದುಗ ವಲಯವನ್ನು ಹೊಂದಿದವರು.
- ಜನಸಾಮಾನ್ಯರ ಬದುಕಿಗೆ ಹತ್ತಿರವಾದ ಸಾಮಾಜಿಕ ವಿಚಾರಗಳನ್ನು ಆಧರಿಸಿ ಕೃತಿಗಳನ್ನು ರಚಿಸಿದ್ದು, ಅದು ಅವರ ಜನಪರ ಕಾಳಜಿಗೆ ಸಾಕ್ಷಿ
- ಬರವಣಿಗೆಯನ್ನು ಧ್ಯಾನ ವಾಗಿಸಿಕೊಂಡ ಅಪರೂಪದ ವ್ಯಕ್ತಿತ್ವ ನರಹಳ್ಳಿಯ ವರದ್ದು

ಡಾ. ನರಹಳ್ಳಿ ಬಾಲಸುಬ್ರಹ್ಮಣ್ಯರ ಜೀವನಪ್ರೀತಿ ಮತ್ತು ವ್ಯಕ್ತಿತ್ವ ಕುರಿತು ಮೈಸೂರು ಮಹಾಜನ ಕಾಲೇಜಿನ ಕನ್ನಡ ವಿಭಾಗದ ಡಾ. ಎಚ್. ಆರ್. ತಿಮ್ಮೇಗೌಡ, ಹಾಗೂ ಅವರ ಸಾಹಿತ್ಯಪ್ರೀತಿ ಕುರಿತು ಹೊನ್ನಾವರ ಎಸ್‌ಡಿಎಮ್ ಕಾಲೇಜಿನ ಕನ್ನಡ ವಿಭಾಗದ ನಾಗರಾಜ ಹೆಗಡೆ ಅಪಗಾಲ ವಿಚಾರ ಮಂಡಿಸಿದರು.

ಆಳ್ವಾಸ್ ಪದವಿಪೂರ್ವ ಕಾಲೇಜಿನ ಕನ್ನಡ ವಿಭಾಗದ ಉಪನ್ಯಾಸಕಿ ಡಾ. ಸುಧಾರಾಣಿ ಸಂವಾದವನ್ನು ನಿರ್ವಹಿಸಿದರು. ಆಳ್ವಾಸ್ ಶಿಕ್ಷಣ ಮಹಾವಿದ್ಯಾಲಯದ ವಿದ್ಯಾರ್ಥಿಗಳು ನರಹಳ್ಳಿಯವರ ಆಯ್ದ ಪುಸ್ತಕಗಳನ್ನು ಅಧ್ಯಯನ ಮಾಡಿ ತಮ್ಮ ಅಭಿಪ್ರಾಯಗಳನ್ನು ಹಂಚಿಕೊಂಡರು.

ಆಳ್ವಾಸ್ ಕನ್ನಡ ವಿಭಾಗದ ಮುಖ್ಯಸ್ಥ ಡಾ. ಯೋಗೀಶ್ ಕೈರೋಡಿ ಸ್ವಾಗತಿಸಿ ಪ್ರಸ್ತಾವಿಕವಾಗಿ ಮಾತನಾಡಿದರು. ಬೆಂಗಳೂರಿನ ಅಭಿನವ ಪ್ರಕಾಶನದನ. ರವಿಕುಮಾರ ವಂದಿಸಿದರು. ವಿದ್ಯಾರ್ಥಿನಿಯರಾದ ಸೌಮ್ಯ ಕುಂದರ್ ಹಾಗೂ ಅನೀಶಾ ಶೆಟ್ಟಿ ಕಾರ್ಯಕ್ರಮವನ್ನು ನಿರೂಪಿಸಿದರು.

ಕಾರ್ಯಕ್ರಮದಲ್ಲಿ 'ಯಶೋಧಾ ಪ್ರಜ್ಞೆ'ಯ ಲೇಖಕಿ ರಜನಿ ನರಹಳ್ಳಿ ಹಾಗೂ ಆಡಳಿತಾಧಿಕಾರಿ ಬಾಲಕೃಷ್ಣ ಶೆಟ್ಟಿ ಉಪಸ್ಥಿತರಿದ್ದರು.

ರಾಜ್ಯಾದ್ಯಂತ ಹಿಂದೂಗಳ ಮೇಲೆ ನಡೆಯುತ್ತಿರುವ ಸರಣಿ ದಾಳಿ ಖಂಡಿಸಿ ಜಿಲ್ಲಾಧಿಕಾರಿಗೆ ಮನವಿ



ಮಂಗಳೂರು: ಇತ್ತೀಚಿನ ದಿನಗಳಲ್ಲಿ ಬಾಗಲಕೋಟೆ, ಶಿವಮೊಗ್ಗ, ಚಿತ್ರದುರ್ಗ ಹಾಗೂ ಮುರುಡೇಶ್ವರ ಸೇರಿದಂತೆ ರಾಜ್ಯದ ವಿವಿಧೆಡೆ ಹಿಂದೂಗಳ ಮೇಲೆ ನಡೆಯುತ್ತಿರುವ ಹಲ್ಲೆ, ಕಲ್ಲು ತೂರಾಟ ಮತ್ತು ಕೊಲೆಯಂತಹ ಹೇಯ ಕೃತ್ಯಗಳನ್ನು ವಿರೋಧಿಸಿ ಹಿಂದೂ ರಾಷ್ಟ್ರ ಸಮನ್ವಯ ಸಮಿತಿ ದಕ್ಷಿಣ ಕನ್ನಡ ಜಿಲ್ಲೆ ವತಿಯಿಂದ ಮಂಗಳೂರಿನ ಅಪರ ಜಿಲ್ಲಾಧಿಕಾರಿಗೆ ಶನಿವಾರ ಮನವಿ ಸಲ್ಲಿಸಲಾಯಿತು.

ಬಾಗಲಕೋಟೆಯಲ್ಲಿ ಎಸ್‌ಪಿ ಸಿದ್ದಾರ್ಥ್ ಗೋಯಲ್ ಅವರ ಮೇಲೆಯೇ ನಡೆದ ಕಲ್ಲು ತೂರಾಟ ಹಾಗೂ ಶಿವಮೊಗ್ಗದ ಬಾಲಕ ತಿಲಕ್‌ನ ಕ್ರೂರ ಹತ್ಯೆಯು ರಾಜ್ಯದ ಹದಗೆಟ್ಟ ಕಾನೂನು ಸುವ್ಯವಸ್ಥೆಗೆ ಸಾಕ್ಷಿಯಾಗಿದೆ ಎಂದು ಸಮಿತಿ ಆತಂಕ ವ್ಯಕ್ತಪಡಿಸಿದೆ.

ಈ ವ್ಯವಸ್ಥಿತ ದಾಳಿಗಳ ಬಗ್ಗೆ ಎನ್‌ಐಎ ತನಿಖೆ ನಡೆಸಬೇಕು, ತಪ್ಪಿತಸ್ಥರ ಮೇಲೆ 'ಕೋಕಾ' ಕಾಯ್ದೆ ಜಾರಿಗೊಳಿಸಬೇಕು ಮತ್ತು ಸಂವೇದನಾಶೀಲ ಪ್ರದೇಶಗಳಲ್ಲಿ ಹಿಂದೂಗಳಿಗೆ ಸಮರ್ಪಕ ಪೊಲೀಸ್ ಭದ್ರತೆ ಒದಗಿಸಬೇಕು ಎಂದು ಸಮಿತಿ ಆಗ್ರಹಿಸಿದೆ. ಸರ್ಕಾರವು ಈ ಬಗ್ಗೆ ನಿರ್ಲಕ್ಷ್ಯ ವಹಿಸಿದರೆ ಮುಂದಿನ ದಿನಗಳಲ್ಲಿ ರಾಜ್ಯಾದ್ಯಂತ ತೀವ್ರ ಹೋರಾಟ ಹಮ್ಮಿಕೊಳ್ಳಲಾಗುವುದು ಎಂದು ಸಮಿತಿ ಎಚ್ಚರಿಸಿದೆ.

- ವ್ಯವಸ್ಥಿತ ದಾಳಿಗಳ ಬಗ್ಗೆ ಎನ್ ಐಎ ತನಿಖೆ ನಡೆಸಬೇಕು
- ತಪ್ಪಿತಸ್ಥರ ಮೇಲೆ 'ಕೋಕಾ' ಕಾಯ್ದೆ ಜಾರಿಗೊಳಿಸಬೇಕು

ಈ ಸಂದರ್ಭದಲ್ಲಿ ಸಮಿತಿಯ ಜಿಲ್ಲಾ ಸಂಯೋಜಕ ದಿನಕರ ಪೂಜಾರಿ, ಹಿಂದೂ ಜನಜಾಗೃತಿ ಸಮಿತಿಯ ಪವಿತ್ರ ಕುಡ್ವ, ವಿಠಲ ನಾಯಕ್ ಯೆಯ್ಯಾಡಿ, ಭಾಸ್ಕರ್ ಸುವರ್ಣ ಕೊಳ್ನಾಡು, ಹಿಂದೂ ಸೇವಾ ಸಮಿತಿ ಅಧ್ಯಕ್ಷ ಯೋಗೀಶ್ ರೈ, ಜಿ. ಸುರೇಂದ್ರ, ಉದ್ಯಮಿ ಚಂದ್ರಕಾಂತ್, ವಕೀಲರಾದ ಈಶ್ವರ ಕೊಟ್ಟಾರಿ, ಯತೀಶ್ ಹಾಗೂ ಜಯಪ್ರಕಾಶ್ ಉಪಸ್ಥಿತರಿದ್ದರು.

ಸಾಂಸ್ಕೃತಿಕ, ತಾಂತ್ರಿಕ, ವ್ಯವಹಾರ ವಿಭಾಗಗಳಲ್ಲಿ ವಿಶೇಷ ಸ್ಪರ್ಧೆಗಳು

ಮಾ.11-14: ಬಂಟಕಲ್ಲು ಶ್ರೀಮಧ್ವ ವಾದಿರಾಜ ಕಾಲೇಜಿನಲ್ಲಿ 'ವರ್ಣೋತ್ಸವ

ಶಿರ್ವ: ಬಂಟಕಲ್ಲು ಶ್ರೀ ಮಧ್ವ ವಾದಿರಾಜ ತಾಂತ್ರಿಕ ಮಹಾವಿದ್ಯಾಲಯದ 2025-26ನೇ ಸಾಲಿನ ವಾರ್ಷಿಕ ಸಮಾರಂಭ 'ವರ್ಣೋತ್ಸವ-2026' ಮಾ.11ರಿಂದ ಮಾ.14ರ ವರೆಗೆ ಕಾಲೇಜಿನ ಆವರಣದಲ್ಲಿ ನಡೆಯಲಿದೆ.

ಇಂಜಿನಿಯರಿಂಗ್ ಹಾಗೂ ಮ್ಯಾನೇಜ್‌ಮೆಂಟ್ ವಿದ್ಯಾರ್ಥಿಗಳಿಗಾಗಿ ವಿವಿಧ ಸ್ಪರ್ಧೆಗಳನ್ನು ಆಯೋಜಿಸಲಾಗಿದ್ದು, ಮಾ.13ರಂದು ವಾರ್ಷಿಕೋತ್ಸವ ಹಾಗೂ ಮಾ.14ರಂದು ಹಳೆ ವಿದ್ಯಾರ್ಥಿಗಳ ಸಭೆಯನ್ನು ಒಳಗೊಂಡಂತೆ ನಾಲ್ಕು ದಿನಗಳ ಕಾರ್ಯಕ್ರಮಗಳು ನಡೆಯಲಿದೆ.

'ವರ್ಣೋತ್ಸವ'ವನ್ನು ಬೆಳಿಗ್ಗೆ 9.30ಕ್ಕೆ ಶ್ರೀ ಸೋದೆ ವಾದಿರಾಜ ಮಠ ಶಿಕ್ಷಣ ಪ್ರತಿಷ್ಠಾನ ಇದರ ಅಧ್ಯಕ್ಷ ಶ್ರೀ ವಿಶ್ವವಲ್ಲಭ ತೀರ್ಥ ಸ್ವಾಮೀಜಿ ಉದ್ಘಾಟಿಸಲಿದ್ದಾರೆ. ಸಂಸ್ಥೆಯ ಹಳೆ ವಿದ್ಯಾರ್ಥಿಗಳಾದ ದೀಪಕ್ ನಾಯಕ್, ಲೀಡ್ ಇಂಜಿನಿಯರ್, ಕ್ಲೀಯರ್ ಫೀಡ್, ಬೆಂಗಳೂರು ಇವರು ಮುಖ್ಯ ಅತಿಥಿಗಳಾಗಿ ಮತ್ತು ಸ್ನೇಹಲ್ ವಿ ರಾವ್, ಕ್ವಾಂಟಿಟಿ ಸರ್ವೇಯರ್ ಸೈಮನ್ಸ್ ಆ್ಯಂಡ್ ಅಸೋಸಿಯೆಟ್ಸ್, ಉಡುಪಿ ಇವರು ಗೌರವ ಅತಿಥಿಗಳಾಗಿರುವರು. ಅದೇ ದಿನ ಸಂಜೆ ಸಂಸ್ಥೆಯ ವಿದ್ಯಾರ್ಥಿಗಳಿಂದ ಸಂಗೀತ ರಸಮಂಜರಿ ನಡೆಯಲಿದೆ.

ಸಾಂಸ್ಕೃತಿಕ ಹಬ್ಬವನ್ನು ಸಾಂಸ್ಕೃತಿಕ ಕಾರ್ನಿವಾಲ್, ತಾಂತ್ರಿಕ ಕಾರ್ನಿವಾಲ್ ಮತ್ತು ವ್ಯವಹಾರ ಕಾರ್ನಿವಾಲ್ ಎಂಬ ಮೂರು ಪ್ರಮುಖ ವಿಭಾಗಗಳ ಅಡಿಯಲ್ಲಿ ರೂಪಿಸಲಾಗಿದೆ. ಮಾ.13ಕ್ಕೆ ಜರುಗುವ ವಾರ್ಷಿಕೋತ್ಸವ ಸಮಾರಂಭದಲ್ಲಿ ತೀರ್ಥಹಳ್ಳಿ ಬಾಳಗಾರು ಅಕ್ಷೋಭ್ಯ ತೀರ್ಥ ಸಂಸ್ಥಾನದ ಕಿರಿಯ ಪೀಠಾಧಿಪತಿ ಶ್ರೀ ಅಕ್ಷೋಭ್ಯ ರಾಮಪ್ರಿಯ ತೀರ್ಥ ಸ್ವಾಮೀಜಿ ಆಶೀರ್ವಚನದೊಂದಿಗೆ ಈ ಕಾರ್ಯಕ್ರಮವು ನಡೆಯಲಿದೆ. ಮುಖ್ಯ ಅತಿಥಿಗಳಾಗಿ ಡಿಸಿಎಕ್ಸ್ ಸಿಸ್ಟಮ್ ಲಿಮಿಟೆಡ್ ಬೆಂಗಳೂರು ಇದರ ಸ್ಥಾಪಕ ಅಧ್ಯಕ್ಷ ಹಾಗೂ ವ್ಯವಸ್ಥಾಪಕ ನಿರ್ದೇಶಕರಾದ ಡಾ. ಎಚ್. ಎಸ್. ರಾಘವೇಂದ್ರ ರಾವ್ ಭಾಗವಹಿಸಲಿದ್ದಾರೆ. ಮಾ.14 ರಂದು ಹಳೆ ವಿದ್ಯಾರ್ಥಿಗಳ ಸಮಾವೇಶ, ಆಟೋ ಎಕ್ಸ್ಪೋ -'ಮೋಟೋ ಮಾನಿಯಾ' ಹಾಗೂ ಪ್ರತಿಷ್ಠಿತ ಮ್ಯೂಸಿಕಲ್ ಬ್ಯಾಂಡ್ ಸಂಸ್ಥೆ 'ತರಾನಾ' ತಂಡದವರಿಂದ ಸಂಗೀತ ರಸಮಂಜರಿ ಜರಗಲಿದೆ. ಎಂದು ಕಾಲೇಜಿನ ಪ್ರಾಂಶುಪಾಲ ಡಾ.ನಾಗರಾಜ ಭಟ್ ಪ್ರಕಟನೆ ತಿಳಿಸಿದ್ದಾರೆ.

ಮಾ.12ರಂದು ಸಮಾರೋಪ

ಮಾ.12ಕ್ಕೆ ಮಧ್ಯಾಹ್ನ 3.00ಕ್ಕೆ 'ವರ್ಣೋತ್ಸವ'ದ ಸಮಾರೋಪದಲ್ಲಿ ವಿವಿಧ ಸ್ಪರ್ಧೆಯ ವಿಜೇತರಿಗೆ ಬಹುಮಾನ ವಿತರಣೆ ಹಾಗೂ ಸಂಜೆ ಸಂಸ್ಥೆಯ ವಿದ್ಯಾರ್ಥಿಗಳ ಯಕ್ಷ ಸಿಂಚನ ತಂಡದಿಂದ ಯಕ್ಷಗಾನ ನಡೆಯಲಿದೆ.

ಹನುಮಗಿರಿ ಕ್ಷೇತ್ರ ಬ್ರಹ್ಮಕಲಶೋತ್ಸವ

ರಾಘವೇಶ್ವರ ಶ್ರೀಗಳಿಗೆ ಆಮಂತ್ರಣ ಪ್ರತಿಕೆ



ಪುತ್ತೂರು: ಹನುಮಗಿರಿ ಕೋದಂಡರಾಮ, ಪಂಚಮುಖಿ ಆಂಜನೇಯ ಕ್ಷೇತ್ರದ ಬ್ರಹ್ಮಕಲಶೋತ್ಸವದ ಆಹ್ವಾನ ಪತ್ರಿಕೆಯನ್ನು ಶ್ರೀರಾಮಚಂದ್ರಾಪುರ ಮಠದ ಶ್ರೀ ರಾಘವೇಶ್ವರ ಭಾರತಿ ಮಹಾಸ್ವಾಮಿಗಳಿಗೆ ಫಲಪುಷ್ಪದೊಂದಿಗೆ ನೀಡಿ ಆಮಂತ್ರಿಸಲಾಯಿತು.

ಬ್ರಹ್ಮಕಲಶಕ್ಕೆ ಶುಭ ಹಾರೈಸಿದ ಸ್ವಾಮೀಜಿಯವರು ಎಲ್ಲಾ ಧಾರ್ಮಿಕ ಕಾರ್ಯಕ್ರಮಗಳು ಸಾಂಗವಾಗಿ ಜರಗಲಿ ಎಂದರು. ಈ ಸಂದರ್ಭದಲ್ಲಿ ಸ್ವಾಮೀಜಿಯವರು ಕ್ಷೇತ್ರಕ್ಕೆ ಬ್ರಹ್ಮಕಲಶ ಸಮಯದಲ್ಲಿ ಬಂದು ಆಶೀರ್ವದಿಸುವಂತೆ ಕೋರಲಾಯಿತು.

ಈ ಸಂದರ್ಭದಲ್ಲಿ ಹನುಮಗಿರಿ ಕ್ಷೇತ್ರದ ಟ್ರಸ್ಟಿಗಳಾದ ರಘುರಾಜ್ ಕೆ.ಎಂ, ಶಿವರಾಮ್ ಶರ್ಮ, ಬ್ರಹ್ಮಕಲಶ ಸಮಿತಿಯ ಉಪಾಧ್ಯಕ್ಷ ರವಿಕಿರಣ್ ಶೆಟ್ಟಿ ಬೆದ್ರಾಡಿ, ಪ್ರಧಾನ ಕಾರ್ಯದರ್ಶಿಗಳಾದ ಆರ್.ಸಿ. ನಾರಾಯಣ ರೆಂಜ, ನಹುಷ ಭಟ್ ಹಾಗೂ ಭಜನಾ ಸಹ ಸಂಚಾಲಕಿ ಪರಮೇಶ್ವರಿ ಭಟ್ ಬಬ್ಬಿಲಿ ಉಪಸ್ಥಿತರಿದ್ದರು.

ಜಿಲ್ಲಾ ಉಸ್ತುವಾರಿ ಸಚಿವರಿಂದ ಜನಪ್ರತಿನಿಧಿಗಳಿಗೆ ಅವಮಾನ: ಶಾಸಕ ಕಾಮತ್ ಆಕ್ರೋಶ

ಮಂಗಳೂರು: ಪಚ್ಚನಾಡಿ ಎಸ್.ಟಿ.ಪಿ ಆವರಣದಲ್ಲಿ ಮಂಗಳೂರು ನಗರದ ಒಳಚರಂಡಿ ವ್ಯವಸ್ಥೆಯ ನಿರ್ಮಾಣ ಮತ್ತು ಉನ್ನತೀಕರಣ ಕಾಮಗಾರಿಗೆ ಜಿಲ್ಲಾ ಉಸ್ತುವಾರಿ ಸಚಿವರು ಗುದ್ದಲಿ ಪೂಜೆ ನಡೆಸಿ, 'ಮಂಗಳೂರು ನಗರದ ಮೂಲಸೌಕರ್ಯಾಭಿವೃದ್ಧಿಗೆ ನಮ್ಮ ಸರ್ಕಾರ ಬದ್ಧವಾಗಿದೆ' ಎಂದು ಹೇಳಿಕೆ ನೀಡಿದ್ದಾರೆ. ಸ್ವಚ್ಛ ಭಾರತ ಮಿಷನ್ (ನಗರ) 2.0 ಮತ್ತು ರಾಷ್ಟ್ರೀಯ ಹಸಿರು ನ್ಯಾಯ ಮಂಡಳಿ ಪರಿಸರ ಪರಿಹಾರ (ಎನ್ ಜಿಟಿ) ನಿಧಿಯಡಿ, 40 ಕೋಟಿ ರೂಪಾಯಿ ವೆಚ್ಚದಲ್ಲಿ ಈ ಯೋಜನೆಯನ್ನು ಕೈಗೆತ್ತಿಕೊಳ್ಳಲಾಗಿದ್ದು ಇದು ಸಂಪೂರ್ಣ ಕೇಂದ್ರ ಸರ್ಕಾರದ ಅನುದಾನವಾಗಿದೆ. ಈ ಬಗ್ಗೆ ಸ್ಥಳೀಯ ಜನಪ್ರತಿನಿಧಿಗಳಾದ ಮಂಗಳೂರು ಉತ್ತರ ಹಾಗೂ ದಕ್ಷಿಣದ ಶಾಸಕರ ಸಹಿತ ಇಲ್ಲಿನ ಸಂಸದರಿಗೆ ಸರಿಯಾಗಿ ಮಾಹಿತಿ ನೀಡದಿರುವುದು ಮಂಗಳೂರಿಗೆ ಹಾಗೂ ಇಲ್ಲಿನ ಜನತೆಗೆ ಮಾಡುವ ಅವಮಾನವಾಗಿದೆ ಎಂದು ಶಾಸಕ ವೇದವ್ಯಾಸ ಕಾಮತ್ ಹೇಳಿದ್ದಾರೆ.



ರಾಜ್ಯ ಕಾಂಗ್ರೆಸ್ ಸರ್ಕಾರವು ಕ್ಷೇತ್ರದ ಅಭಿವೃದ್ಧಿಗೆ ಕಳೆದ ಎರಡೂ ವರ್ಷಗಳಿಂದ ನಯಾಪೈಸೆ ನೀಡದೇ ಕುಂಭಕರ್ಣ ನಿದ್ದೆಯಲ್ಲಿದೆ. ಮೊದಲು ಆ ಅನುದಾನ ಬಿಡುಗಡೆಗೊಳಿಸಿ ತನ್ನ ಬದ್ಧತೆಯನ್ನು ಪ್ರದರ್ಶಿಸಲಿ. ರಾಜ್ಯ ಸರ್ಕಾರವೇ ಹೊರಡಿಸಿದ ಆದೇಶ ದಲ್ಲಿ ಎನ್‌ಜಿಟಿ ಪರಿಸರ ಪರಿಹಾರ ನಿಧಿ ಅಡಿಯಲ್ಲಿ ಒಳಚರಂಡಿ ವ್ಯವಸ್ಥೆ ನಿರ್ಮಾಣ, ಉನ್ನತೀಕರಣ ಸಂಸ್ಕರಣ ಘಟಕಗಳ ದುರಸ್ತಿ ಇತ್ಯಾದಿ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲು ಆಡಳಿತಾತ್ಮಕ ಅನುಮೋದನೆ ನೀಡಲಾಗಿದೆ ಎಂದು ಸ್ಪಷ್ಟವಾಗಿ ನಮೂದಿಸಿ ಇದು ಕೇಂದ್ರ ಸರ್ಕಾರದ ಅನುದಾನವೆಂದು ಒಪ್ಪಿಕೊಂಡಿದೆ. ಕೇಂದ್ರ ಸರ್ಕಾರ ತನ್ನ ಬದ್ಧತೆಯನ್ನು ಪ್ರದರ್ಶಿಸಿದರೆ, ರಾಜ್ಯ ಸರ್ಕಾರ ಇಲ್ಲೂ ಸಹ ಕೇಂದ್ರದ ಅನುದಾನವನ್ನೇ ತನ್ನದು ಎಂದು ಬಿಂಬಿಸಿಕೊಳ್ಳುತ್ತಾ ಜನರ ಕಣ್ಣಿಗೆ ಮಣ್ಣೆರಚಲು ನೋಡುತ್ತಿದೆ ಎಂದು ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ಅವರು ಹೇಳಿದರು.

ಪಾಲಿಕೆ ವ್ಯಾಪ್ತಿಯ ಅತ್ತಾವರ ಕುದ್ಮುಲ್ ರಂಗರಾವ್ ಅವರ ಸಮಾಧಿ ಬಳಿ ಪ್ರವಾಸಿ ತಾಣ, ಸಮಗ್ರ ಅಭಿವೃದ್ಧಿ ಕಾಮಗಾರಿಗೆ 2022 ರಲ್ಲೇ ಬಿಜೆಪಿ ಸರ್ಕಾರದ ಅವಧಿಯಲ್ಲಿ 3 ಕೋಟಿ ಅನುದಾನವನ್ನು ಮಂಜೂರುಗೊಳಿಸಿ ಅದಕ್ಕೆ ಗುದ್ದಲಿ ಪೂಜೆಯನ್ನೂ ನಡೆಸಲಾಗಿತ್ತು. ಈ ಹಿಂದೆ ಮಹಾತ್ಮಾ ಗಾಂಧಿ ನಗರ ವಿಕಾಸ ಯೋಜನೆ -1 ರಲ್ಲಿ ಸಮಾಧಿ ಅಭಿವೃದ್ಧಿಗಾಗಿ ಈ 3 ಕೋಟಿಯನ್ನು ಸೇರಿಸಲಾಗಿತ್ತು. ಆದರೆ ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದ ಕೂಡಲೇ ಬಿಜೆಪಿ ಸರ್ಕಾರದ ಎಲ್ಲಾ ಅನುದಾನಗಳನ್ನು ತಡೆ ಹಿಡಿದು, ಎಲ್ಲಾ ಕಾಮಗಾರಿಗಳನ್ನು ನಿಲ್ಲಿಸಲಾಯಿತು. ಹಾಗಾಗಿ ಕುದ್ಮುಲ್ ರಂಗರಾವ್ ರವರ ಸಮಾಧಿಯ ಅಭಿವೃದ್ಧಿಯೂ ಸ್ಥಗಿತ ಗೊಂಡಿದೆ. ಬಜೆಟ್‌ನಲ್ಲೇ ಘೋಷಣೆಯಾದ ಯೋಜನೆಯನ್ನು ತಡೆ ಹಿಡಿದಿದ್ದು ಯಾಕೆ? ಮೊದಲು ಅದನ್ನು ಬಿಡುಗಡೆಗೊಳಿಸಿ ಎಂದು ಆಗ್ರಹಿಸಿದರು.

ಪಾಲಿಕೆ ವ್ಯಾಪ್ತಿಯ ಎಂ.ಜಿ.ರಸ್ತೆಯ ಬಲ್ಲಾಳ್ ಬಾಗ್ ಸೇತುವೆ ಅಭಿವೃದ್ಧಿಗೆ ಸ್ಮಾರ್ಟ್ ಸಿಟಿಯಿಂದ 2 ಕೋಟಿ ರೂಪಾಯಿ ಅನುದಾನವನ್ನು ಪಾಲಿಕೆಯಲ್ಲಿ ಬಿಜೆಪಿ ಆಡಳಿತವಿದ್ದಾಗ ಮಂಜೂರುಗೊಳಿಸಲಾಗಿತ್ತು. ಆದರೆ ಇಲ್ಲಿ ಸೇತುವೆಯ ಅಗತ್ಯವೇ ಇಲ್ಲವೆಂದು ಇದೇ ಕಾಂಗ್ರೆಸ್ ನಾಯಕರು ತಮ್ಮಷ್ಟಕ್ಕೆ ತಾವೇ ತೀರ್ಮಾನಿಸಿ, ಆ ಎರಡು ಕೋಟಿ ಮೊತ್ತವನ್ನು ಪಡೀಲಿನ ಡಿಸಿ ಕಚೇರಿ ಸಂಕೀರ್ಣ ಪೂರ್ಣಗೊಳಿಸಲು ವರ್ಗಾಯಿಸಿ ಇಲ್ಲಿನ ಜನತೆಗೆ ಅನ್ಯಾಯ ಮಾಡಿದರು. ಮತ್ತೆ ಇಲ್ಲಿನ ಜನರ ಒತ್ತಾಯದ ಮೇರೆಗೆ ಈ ಕಾಮಗಾರಿಯನ್ನು ಪ್ರೀಮಿಯಂ ಎಫ್‌ಎಆರ್ ಅನುದಾನದಲ್ಲಿ ಕೈಗೊಳ್ಳುವಂತೆ ಮಾಡಿದ ಮನವಿಗೆ ಜಿಲ್ಲಾಧಿಕಾರಿ ಅನುಮತಿ ನೀಡಿದ್ದಾರೆ. ಎರಡನೇ ಸಲ ಕೂಡಾ ಎರಡು ಕೋಟಿ ಮಂಜೂರುಗೊಳಿಸಿದ್ದು ಬಿಜೆಪಿಯವರೇ ಹೊರತು ಕಾಂಗ್ರೆಸ್ ಅಲ್ಲ. ಆದರೆ ಈಗ ಕಾಂಗ್ರೆಸ್ಸಿಗರು ಸ್ಥಳ ವೀಕ್ಷಣೆ ಹೆಸರಲ್ಲಿ ಫೋಟೋ ಸೆಷನ್ ನಡೆಸಿ ಹೋಗುವ ಕೆಲಸ ಮಾಡುತ್ತಿರುವುದು ಹಾಸ್ಯಾಸ್ಪದ ಎಂದು ಕಾಮತ್ ಹೇಳಿದರು.

ಪಾಲಿಕೆಯ ವ್ಯಾಪ್ತಿಯ ಜಾಹೀರಾತು ಫಲಕಗಳನ್ನು ತಮಿಳುನಾಡು ಮೂಲದವರಿಗೆ ಗುತ್ತಿಗೆ ನೀಡಲಾಗಿದೆ. ಆ ಮೂಲಕ ಸ್ಥಳೀಯರನ್ನು ಕಡೆಗಣಿಸುವ ವ್ಯವಸ್ಥಿತ ಹುನ್ನಾರ ನಡೆದಿದೆ ಎಂದು ವೇದವ್ಯಾಸ ಕಾಮತ್ ಆರೋಪಿಸಿದರು.

ಬಿಜೆಪಿ ಮುಖಂಡರಾದ ನಿತಿನ್ ಕುಮಾರ್, ರವಿಶಂಕರ ಮಿಜಾರು, ರಮೇಶ್ ಕಂಡೆಟ್ಟು, ಶಕೀಲಾ ಕಾವ, ಪೂರ್ಣಿಮಾ, ಲಲ್ಲೇಶ್ ಕುಮಾರ್, ಸುರೇಖಾ ಹೆಗ್ಡೆ ಉಪಸ್ಥಿತರಿದ್ದರು.

ಹವ್ಯಕ ಭಾಷಾ ಅಕಾಡೆಮಿ ಘೋಷಣೆ ಶ್ಲಾಘನೀಯ: ಹೆಗಡೆ

ಮಂಗಳೂರು: ಬಜೆಟ್‌ನಲ್ಲಿ ಹವ್ಯಕ ಭಾಷಾ ಅಕಾಡೆಮಿ ಸ್ಥಾಪನೆ ಘೋಷಣೆಯ ಮೂಲಕ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಈ ಸಮುದಾಯಕ್ಕೆ ವಿಶೇಷ ಮಾನ್ಯತೆ ನೀಡಿದ್ದಾರೆ. ಹಲವು ವರ್ಷಗಳ ಬೇಡಿಕೆಯನ್ನು ಸಿಎಂ ನೆರವೇರಿಸಿದ್ದಾರೆ ಎಂದು ಕೆಪಿಸಿಸಿ ರಾಜ್ಯ ವಕ್ತಾರ ಎಂ.ಜಿ.ಹೆಗಡೆ ಶ್ಲಾಘಿಸಿದ್ದಾರೆ.

ಶನಿವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಹವ್ಯಕ ಭಾಷೆಯಲ್ಲಿ ಸಂಶೋಧನೆಗಳು, ನಾಟಕಗಳು, ಪ್ರಸಂಗಗಳು ರಚನೆಯಾಗಿವೆ. ಅನೇಕ ಕಾದಂಬರಿಗಳಲ್ಲಿ ಹವ್ಯಕ ಭಾಷೆಯ ಸಂಭಾಷಣೆಗಳಿವೆ. ನೂರಾರು ವರ್ಷಗಳಿಂದ ಈ ಭಾಷೆ ಬೆಳೆದು ಬಂದಿದ್ದು, ಇಂಥ ಸಣ್ಣ ಭಾಷೆಗಳಿಗೆ ಉತ್ತೇಜನ ನೀಡುವುದರಿಂದ ಜನರನ್ನು ಸಾಮಾಜಿಕವಾಗಿ ತೊಡಗಿಕೊಳ್ಳುವಂತೆ ಮಾಡಲು ಸಾಧ್ಯವಾಗಲಿದೆ. ಭಾಷೆಯ ಅಭಿವೃದ್ಧಿಯ ನಿಟ್ಟಿನಲ್ಲಿ ಹೊಸ ಚಿಂತನೆಗಳು ಹುಟ್ಟಲಿವೆ ಎಂದು ಹೇಳಿದರು.

ಕೆಪಿಸಿಸಿ ವಕ್ತಾರ ಲಕ್ಷ್ಮೀಶ ಗಬ್ಲಡ್ಕ ಅವರು ಹವ್ಯಕ ಭಾಷಾ ಅಕಾಡೆಮಿ ಸ್ಥಾಪನೆ ಮಾಡುವ ಸಂಕಲ್ಪ ಮಾಡಿ ಸಂಬಂಧಿಸಿದ ಸಚಿವರು, ಅಧಿಕಾರಿಗಳನ್ನು ಸಂಪರ್ಕಿಸಿ, ನಿರಂತರ ಓಡಾಟ ಮಾಡಿ ಸಾಕಾರಗೊಳಿಸಿದ್ದಾರೆ. ದೇಶದ ವೈವಿಧ್ಯತೆಗೆ ಹವ್ಯಕದಂಥ ಸಣ್ಣ ಭಾಷೆಗಳೂ ತನ್ನದೇ ಕೊಡುಗೆ ನೀಡುತ್ತಿರುವುದರಿಂದ ಅಕಾಡೆಮಿ ಸ್ಥಾಪನೆ ಅತ್ಯಂತ ಅಗತ್ಯವಾಗಿತ್ತು ಎಂದರು.

ಸುದ್ದಿಗೋಷ್ಠಿಯಲ್ಲಿ ಕಾಂಗ್ರೆಸ್ ಮುಖಂಡರಾದ ಪ್ರಕಾಶ್ ಸಾಲ್ಯಾನ್, ಶುಭೋದಯ ಆಳ್ವ, ದುರ್ಗಾಪ್ರಸಾದ್, ಯೋಗೀಶ್ ನಾಯಕ್, ಚಂದ್ರಕಲಾ, ನಮಿತಾ ಡಿ.ರಾವ್ ಉಪಸ್ಥಿತರಿದ್ದರು.

ಕಿರು ಸುದ್ದಿ

ಪಿಲಿಕುಳಕ್ಕೆ ಎಸಿಎಫ್ ಆಗಿ ನೇಹಾ ಪಿ.ಕೆ ನಿಯೋಜನೆ

ಮಂಗಳೂರು: ಪಿಲಿಕುಳ ಜೈವಿಕ ಉದ್ಯಾನವನದ ನೂತನ ಎಸಿಎಫ್ ಆಗಿ ನೇಹಾ ಪಿ.ಕೆ ಅವರು ಶನಿವಾರ ಅಧಿಕಾರ ವಹಿಸಿಕೊಂಡಿದ್ದಾರೆ. ಪಿಲಿಕುಳ ಜೈವಿಕ ಉದ್ಯಾನವನದಲ್ಲಿ ಕಳೆದ ಹಲವು ವರ್ಷಗಳಿಂದ ನಡೆಯುತ್ತಿರುವ ಅವ್ಯವಸ್ಥೆಯ ಕುರಿತು ಮಾಹಿತಿ ಪಡೆದುಕೊಂಡಿರುವ ಸರ್ಕಾರ ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಯನ್ನು ನೇಮಕಗೊಳಿಸಿ ಈ ಆದೇಶ ಹೊರಡಿಸಿದೆ.

ಜುಗಾರಿ ಅಡ್ಡೆಗೆ ದಾಳಿ; 10 ಮಂದಿ ಬಂಧನ

ಬ್ರಹ್ಮಾವರ: ಹನೇಹಳ್ಳಿ ಗ್ರಾಮದ ಕೂರಾಡಿ ಮೇಲ್ಪೇಟೆ ಬಳಿಯ ಹಾಡಿ ಪ್ರದೇಶದಲ್ಲಿ ಅಕ್ರಮವಾಗಿ ಜುಗಾರಿ ಆಡುತ್ತಿದ್ದ ಅಡ್ಡೆಯ ಮೇಲೆ ಬ್ರಹ್ಮಾವರ ಪೊಲೀಸರು ದಾಳಿ ನಡೆಸಿ 10 ಮಂದಿಯನ್ನು ಬಂಧಿಸಿದ್ದಾರೆ. ಹರೀಶ್, ಗುರುರಾಜ್, ವೆಂಕಟೇಶ್ ಪೂಜಾರಿ, ಹರ್ಷ, ಸುರೇಶ್ ನಾಯ್ಕ, ರಾಜ ನಾಯ್ಕ, ಪೀಟರ್ ಡಿಮೆಲ್ಲೋ, ನಾಗೇಶ, ನಾಗರಾಜ ಮತ್ತು ರಾಜೇಶ ಎಂಬವರನ್ನು ಪೊಲೀಸರು ವಶಕ್ಕೆ ಪಡೆದಿದ್ದಾರೆ. ಬೀಟ್ ಸಿಬ್ಬಂದಿ ನೀಡಿದ ಖಚಿತ ಮಾಹಿತಿಯಂತೆ ಎಎಸ್ಐ ವಿಠ್ಠಲ್ ಎಮ್. ನೇತೃತ್ವದ ತಂಡ ರಾತ್ರಿ 11 ಗಂಟೆ ಸುಮಾರಿಗೆ ದಾಳಿ ನಡೆಸಿತು. ಸ್ಥಳದಿಂದ ಆಟಕ್ಕೆ ಬಳಸುತ್ತಿದ್ದ ಡೈಸ್ ಕಾಯಿನ್‌ಗಳು, ಪ್ಲೆಕ್ಸ್ ಶೀಟ್, 8 ಆಂಡ್ರಾಯ್ಡ್ ಮೊಬೈಲ್‌ಗಳು ಹಾಗೂ ಮೂರು ದ್ವಿಚಕ್ರ ವಾಹನಗಳು ಸೇರಿದಂತೆ ಒಟ್ಟು 1,54,100 ರೂ. ಮೌಲ್ಯದ ಸ್ವತ್ತುಗಳನ್ನು ವಶಪಡಿಸಿಕೊಳ್ಳಲಾಗಿದೆ. ಬ್ರಹ್ಮಾವರ ಪೊಲೀಸ್ ಠಾಣೆಯಲ್ಲಿ ಈ ಕುರಿತು ಪ್ರಕರಣ ದಾಖಲಾಗಿದೆ.

ದ್ವಿಚಕ್ರ ವಾಹನ ಕಳವು


ಬಂಟ್ವಾಳ : ಇಲ್ಲಿನ ನಗರ ಪೊಲೀಸ್ ಠಾಣೆಯ ಕೂಗಳತೆ ದೂರದಲ್ಲಿರುವ ಹಳೆಯ ತಾಲೂಕು ಕಚೇರಿ ಬಳಿರುವ ಖಾಲಿ ಜಾಗದಲ್ಲಿ ಪಾರ್ಕಿಂಗ್ ಮಾಡಲಾಗಿದ್ದ ಆಕ್ಟಿವಾ ಹೋಂಡಾ ಕಳವುಗೈದಿರುವ ಘಟನೆ ನಡೆದಿದೆ. ತುಂಬೆ ಗ್ರಾಮದ ದಿನೇಶ್ ಎಂಬವರಿಗೆ ಸೇರಿದ ಆಕ್ಟಿವಾ ಕಳವಾಗಿದ್ದು, ಈ ಬಗ್ಗೆ ಬಂಟ್ವಾಳ ನಗರ ಠಾಣೆಯಲ್ಲಿ ದೂರು ದಾಖಲಾಗಿದೆ. ಇವರು ಮಾ.5 ರಂದು ಆಕ್ಟಿವಾ ಹೋಂಡಾವನ್ನು ಬಿ.ಸಿ ರೋಡಿನ ಹಳೆಯ ತಾಲೂಕು ಕಚೇರಿ ಬಳಿ ಇರುವ ಖಾಲಿ ಜಾಗದಲ್ಲಿ ಲಾಕ್ ಮಾಡಿಟ್ಟು ತೆರಳಿದ್ದರು. ಸಂಜೆ ಕೆಲಸ ಮುಗಿಸಿ ಬಂದಾಗ ಸ್ಥಳದಲ್ಲಿ ಆಕ್ಟಿವಾ ಹೋಂಡಾ ಕಾಣೆಯಾಗಿತ್ತು ಎಂದು ದೂರಿನಲ್ಲಿ ತಿಳಿಸಲಾಗಿದೆ. ಈ ಬಗ್ಗೆ ಬಂಟ್ವಾಳ ನಗರ ಠಾಣಾ ಪೊಲೀಸರು ಪ್ರಕರಣ ದಾಖಲಿಸಿ ತನಿಖೆ ನಡೆಸುತ್ತಿದ್ದಾರೆ.

ಅನಾರೋಗ್ಯ: ವೃದ್ಧ ಆತ್ಮಹತ್ಯೆ

ಕುಂದಾಪುರ: ದೀರ್ಘಕಾಲದ ಅನಾರೋಗ್ಯ ಹಾಗೂ ಮಾನಸಿಕ ಖಿನ್ನತೆಯಿಂದ ಬಳಲುತ್ತಿದ್ದ ವೃದ್ಧರೊಬ್ಬರು ಕ್ರಿಮಿನಾಶಕ ಸೇವಿಸಿ ಆತ್ಮಹತ್ಯೆ ಮಾಡಿಕೊಂಡ ಘಟನೆ ಕೊರ್ಗಿ ಗ್ರಾಮದಲ್ಲಿ ನಡೆದಿದೆ. ಕೊರ್ಗಿ ಗ್ರಾಮದ ನೂಜಿ ಚಟ್ಟರಅರೆಕಲ್ಲು ನಿವಾಸಿ ವಿಠಲ ಕುಲಾಲ (68) ಮೃತಪಟ್ಟವರು. ಇವರು ಮಧುಮೇಹ ಹಾಗೂ ನಿದ್ದೆ ಬಾರದಿರುವ ಸಮಸ್ಯೆಯಿಂದ ಬಳಲುತ್ತಿದ್ದರು. ಮಣಿಪಾಲ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದರೂ ಆರೋಗ್ಯ ಚೇತರಿಸಿರಲಿಲ್ಲ. ಇದರಿಂದ ಜಿಗುಪ್ಸೆಗೊಂಡ ಅವರು ಮಾ. 7ರಂದು ರಾತ್ರಿ ಮನೆಯಲ್ಲಿ ಪೆರಡಾನ್ ಸೇವಿಸಿದ್ದಾರೆ. ಕೂಡಲೇ ಅವರನ್ನು ಮಣಿಪಾಲ ಕೆಎಂಸಿ ಆಸ್ಪತ್ರೆಗೆ ದಾಖಲಿಸಲಾಯಿತಾದರೂ, ಮಾ. 8ರಂದು ಚಿಕಿತ್ಸೆ ಫಲಿಸದೆ ಮೃತಪಟ್ಟಿದ್ದಾರೆ. ಕುಂದಾಪುರ ಗ್ರಾಮಾಂತರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ನಿಧನ ಸುದ್ದಿ

ಹಳ್ಳಾಡು ವಿಶ್ವನಾಥ ಶೆಟ್ಟಿ



ಕುಂದಾಪುರ: ತಾಲ್ಲೂಕಿನ ಶಂಕರನಾರಾಯಣ ಬೈಲೂರು ನಿವಾಸಿ, ನಿವೃತ್ತ ಶಿಕ್ಷಕ ಹಳ್ನಾಡು ವಿಶ್ವನಾಥ ಶೆಟ್ಟಿ (90) ಭಾನುವಾರ ಬೆಳಗ್ಗೆ ಹೃದಯಾಘಾತದಿಂದ ನಿಧನರಾಗಿದ್ದಾರೆ. ಮೃತರು ಪುತ್ರರಾದ ಯುವ ಮೆರಿಡಿಯನ್ ಗ್ರೂಪ್ಸ್ ಆಫ್ ಕಂಪೆನಿಯ ಪಾಲುದಾರರಾದ ಬೈಲೂರು ಉದಯ್ ಕುಮಾರ್ ಶೆಟ್ಟಿ ಹಾಗೂ ಬೈಲೂರು ವಿನಯ್ ಕುಮಾರ್ ಶೆಟ್ಟಿ ಅವರನ್ನು ಅಗಲಿದ್ದಾರೆ. ಭಾನುವಾರ ಶಂಕರನಾರಾಯಣ ಬೈಲೂರಿನ ಅವರ ಮನೆಯಲ್ಲಿ ಪಾರ್ಥಿವ ಶರೀರದ ಅಂತ್ಯ ವಿಧಿಗಳನ್ನು ನಡೆಸಲಾಯಿತು.

ಡಾ.ಸುಬ್ರಹ್ಮಣ್ಯ ರಾವ್



ಶಿರ್ವ: ಶಿರ್ವ ಸಮುದಾಯ ಆರೋಗ್ಯ ಕೇಂದ್ರದ ಆಡಳಿತ ವೈದ್ಯಾಧಿಕಾರಿ ಡಾ.ಸುಬ್ರಹ್ಮಣ್ಯ ರಾವ್ (55) ಅಲ್ಪಕಾಲದ ಅಸೌಖ್ಯದಿಂದ ಮಾ.7 ಶನಿವಾರ ರಾತ್ರಿ ನಿಧನ ಹೊಂದಿದರು. 8 ವರ್ಷಗಳಿಂದ ಶಿರ್ವ ಸಮುದಾಯ ಆರೋಗ್ಯ ಕೇಂದ್ರದಲ್ಲಿ ಸೇವೆಯಲ್ಲಿದ್ದು, ಕಳೆದ ಐದು ವರ್ಷಗಳಿಂದ ಆಡಳಿತ ವೈದ್ಯಾಧಿಕಾರಿಯಾಗಿ ಕರ್ತವ್ಯದಲ್ಲಿದ್ದರು. ಇವರು ಪತ್ನಿ, ಪುತ್ರ ಹಾಗೂ ಬಂಧುಗಳನ್ನು ಅಗಲಿದ್ದಾರೆ.



ಚೇರ್ಕಾಡಿಯ ರಾಷ್ಟ್ರೋತ್ಥಾನ ಶಾಲೆಗೆ ವಿದ್ಯಾಭಾರತಿ ಕರ್ನಾಟಕ ಪ್ರಾಂತ ಉಪಾಧ್ಯಕ್ಷ ಗುರುದಾಸ ಶೆಣೈ ಹೆಬ್ರಿ, ವಿದ್ಯಾಭಾರತಿ ಕರ್ನಾಟಕ ಉಡುಪಿ ಜಿಲ್ಲಾಧ್ಯಕ್ಷ ಪಾಂಡುರಂಗ ಪೈ ಸಿದ್ದಾಪುರ, ಕಾರ್ಯದರ್ಶಿ ಮಹೇಶ ಹೈಕಾಡಿ ಭೇಟಿ ನೀಡಿದರು. ರಾಷ್ಟ್ರೋತ್ಥಾನ ಸಂಸ್ಥೆಯ ಆಡಳಿತಾಧಿಕಾರಿ ಸುರೇಶ್ ಹೆಜಮಾಡಿ, ಪ್ರಧಾನಾಚಾರ್ಯೆ ಪೂರ್ಣಿಮಾ ಎಸ್.ಡಿ. ಕಾಲೇಜು ವಿಭಾಗದ ಪ್ರಾಂಶುಪಾಲೆ ಭಾಗ್ಯಲಕ್ಷ್ಮೀ ಉಪಸ್ಥಿತರಿದ್ದರು.

ಸಸಿಹಿತ್ಲು ಬ್ರಹ್ಮಕಲಶೋತ್ಸವದಂಗವಾಗಿ ಕಡಲ ತಡಿಯಲ್ಲಿ ಗಂಗಾರತಿ

ಹೊಸ ಭಾರತ ಎದ್ದು ನಿಂತಿದೆ: ಸೂಲಿಬೆಲೆ



ಮುಲ್ಕಿ: ಸಸಿಹಿತ್ಲು ಭಗವತಿ ಬಂದದ್ದು ಸಾಗರದಿಂದ ಎದ್ದು. ಇದರ ನೆನಪಿಗಾಗಿ ಗಂಗಾರತಿ ಎಂದು ' ಚಿಂತಕ ಚಕ್ರವರ್ತಿ ಸೂಲಿಬೆಲೆ ಹೇಳಿದರು. ಅವರು ಸಸಿಹಿತ್ಲು ಭಗವತೀ ದೇವಸ್ಥಾನದಲ್ಲಿ ಬ್ರಹ್ಮಕಲಶೋತ್ಸವದ ಅಂಗವಾಗಿ ಕಡಲ ತಡಿಯಲ್ಲಿ ನಡೆದ ಗಂಗಾರತಿಯ ಸಂದರ್ಭ ಮಾತನಾಡಿದರು.

ಹೊಸ ಭಾರತ ಎದ್ದು ನಿಂತಿದೆ. ಪರಿಸರದ ರಕ್ಷಣೆ ನಮ್ಮದಾಗಬೇಕು. ಶಾಂತಿಯ ಸದೃಢವಾದ ಬಲಿಷ್ಠವಾದ ಇವತ್ತಿನ ಯುದ್ಧದ ಸಂದರ್ಭ ಶಾಂತಿಯಿಂದ ಕೂಡಿರಲು ಸಾಧ್ಯವಾದ ನಮ್ಮ ದೇಶ ಭಾರತ ಎಂಬುದನ್ನು ಹೆಮ್ಮೆ ಪಡೋಣ. ನಮ್ಮ ಅಜ್ಜ, ಮುತ್ತಜ್ಜ ಅವರ ಅಜ್ಜ ಹೀಗೆ ಐನೂರು ವರುಷಗಳಿಂದ ಕಾಯುತ್ತಿದ್ದ ಅಯೋಧ್ಯೆ, ಕಾಶಿಯಲ್ಲಿ ದೇವಸ್ಥಾನಗಳು ಎದ್ದು ನಿಂತಂತೆ ನಮ್ಮ ದೇಶ ಎದ್ದು ನಿಂತಿದೆ. ವಿಶ್ವದ ಶ್ರೀಮಂತ ದೇಶಗಳಲ್ಲಿ ನಾಲ್ಕನೇ ಸ್ಥಾನವನ್ನು ಹೊಂದಿದೆ. ಇನ್ನಾರು ತಿಂಗಳಲ್ಲಿ ಮೂರನೇ ಸ್ಥಾನವನ್ನು ಆರ್ಥಿಕತೆಯಲ್ಲಿ ಹೊಂದಲಿರುವ ನಮ್ಮ ದೇಶದಲ್ಲಿ ಮುಸ್ಲಿಮರು ನೆಮ್ಮದಿಯಲ್ಲಿ ರಂಜಾನ್ ಆಚರಿಸುತ್ತಿದ್ದಾರೆ. ಮುಸ್ಲಿಂ ಆಡಳಿತದ ಕೊಲ್ಲಿ ರಾಷ್ಟ್ರಗಳಲ್ಲಿ ಇವತ್ತು ಬಾಂಬುಗಳ ದಾಳಿಯಾಗುತ್ತಿದೆ. ನಾವಿಂದು ನೆಮ್ಮದಿಯ ದಿನಗಳನ್ನು ಕಾಣುತ್ತಿದ್ದೇವೆ ಎಂದರೆ ನಮ್ಮ ಹಿರಿಯರ ಹೋರಾಟವಿದೆ. ಜಾತಿಗಳನ್ನೆಲ್ಲ ನಮ್ಮ ನಮ್ಮ ಮನೆಗಳ ಒಳಗೆ ಇರಲಿ. ಹೊರಗಡೆ ಬಂದಾಗ ನಾವೆಲ್ಲರೂ ಹಿಂದೂಗಳೆಂಬ ಒಗ್ಗಟ್ಟು ಇರಲಿ. ನದಿಗಳ ಸ್ವಚ್ಛತೆ ಬಗ್ಗೆ ಗಮನ ಹರಿಸೋಣ ಎಂದು ಸೂಲಿಬೆಲೆ ಹೇಳಿದರು.

ಸಮುದ್ರ ತಟದ ಹತ್ತು ವೇದಿಕೆಗಳಲ್ಲಿ ಗಂಗಾರತಿ ನಡೆಯಿತು. ಬಳಿಕ ವಂದೇ ಮಾತರಂ, ಬೋಲೋ ಭಾರತ್ ಮಾತಾ ಕೀ ಜೈ ಘೋಷಣೆ ಮೊಳಗಿತು. ಬ್ರಹ್ಮಕಲಶೋತ್ಸವ ಸಮಿತಿ ಅಧ್ಯಕ್ಷ ನಳಿನ್ ಕುಮಾರ್ ಕಟೀಲ್, ದೇವಸ್ಥಾನದ ಮೊಕ್ತೇಸರ ಚಂದ್ರಶೇಖರ ಬೆಲ್ಲಡ, ಮುಂಬೈ ಸಮಿತಿಯ ವೇದ ಪ್ರಕಾಶ್ ಶ್ರೀಯಾನ್, ನರೇಶ್ ಶೆಣೈ ಮಂಗಳೂರು ಹಾಗೂ ಸಮಿತಿಯ ಪದಾಧಿಕಾರಿಗಳು ಉಪಸ್ಥಿತರಿದ್ದರು. ರಾಜೇಂದ್ರ ಪ್ರಸಾದ್ ಎಕ್ಕಾರು ಕಾರ್ಯಕ್ರಮ ನಿರೂಪಿಸಿದರು.

ಮಾ. 20ರ ಬಳಿಕ ಕಾಮಗಾರಿಗೆ ಚಾಲನೆ | ಒಟ್ಟು 130 ಕೋಟಿ ರೂ. ವೆಚ್ಚದ ಕಾಮಗಾರಿ ಯೋಜನೆ

ಶೀಘ್ರದಲ್ಲೇ ಹಾರಂಗಿ ಹೂಳೆತ್ತುವ ಕಾರ್ಯ

ಕುಶಾಲನಗರ: ಹಾರಂಗಿ ಜಲಾಶಯದ ಹಿನ್ನೀರು ಪ್ರದೇಶದಲ್ಲಿ ಸಂಗ್ರಹವಾಗಿರುವ ಹೂಳನ್ನು ಎತ್ತುವ ಕಾಮಗಾರಿ ಶೀಘ್ರವೇ ಆರಂಭವಾಗಲಿದೆ ಎಂದು ನೀರಾವರಿ ಇಲಾಖೆಯ ಕಾರ್ಯಪಾಲಕ ಅಭಿಯಂತರ ಐ ಕೆ. ಪುಟ್ಟಸ್ವಾಮಿ ಮಾಹಿತಿ ನೀಡಿದ್ದಾರೆ.

ಹೂಳೆತ್ತುವ ಕಾಮಗಾರಿಗೆ ಅನುಮತಿ ಪಡೆದುಕೊಳ್ಳುವ ನಿಟ್ಟಿನಲ್ಲಿ ಐದಾರು ವರ್ಷಗಳಿಂದ ನಡೆದಿರುವ ನಿರಂತರ ಪ್ರಕ್ರಿಯೆ ಬಹುತೇಕ ಅಂತಿಮಗೊಂಡಿದ್ದು, ಮಾರ್ಚ್ 20ರ ಬಳಿಕ ಹೂಳೆತ್ತುವ ಕಾಮಗಾರಿಗೆ ಚಾಲನೆ ನೀಡಲಾಗುವುದು ಎಂದು ಅವರು ಸ್ಪಷ್ಟಪಡಿಸಿದ್ದಾರೆ.

ಹಾರಂಗಿ ಅಣೆಕಟ್ಟೆಯಲ್ಲಿ ಹೂಳು ತುಂಬಿದ್ದು, ನೀರು ಶೇಖರಣೆ ಸಾಮರ್ಥ್ಯ ಕುಸಿದಿರುವ ಹಿನ್ನೆಲೆಯಲ್ಲಿ ಸಣ್ಣ ಪ್ರಮಾಣದ ಮಳೆಗೇ ಅಣೆಕಟ್ಟೆ ಬಹುಬೇಗ ಭರ್ತಿಯಾಗುತ್ತಿರುವುದಾಗಿ ನಿರಂತರವಾಗಿ ಆರೋಪಗಳು ವ್ಯಕ್ತಗೊಂಡಿದ್ದವು.

ರೂ.130 ಕೋಟಿ ವೆಚ್ಚ

ಹಾರಂಗಿ ಜಲಾನಯನ ಪ್ರದೇಶದಲ್ಲಿ 2018-19ರಲ್ಲಿ ಉಂಟಾಗಿದ್ದ ಅತಿವೃಷ್ಟಿ, ಭೂಕುಸಿತದಿಂದಾಗಿ ಹಾರಂಗಿ ಹಿನ್ನೀರಿನ ವ್ಯಾಪ್ತಿಯಲ್ಲಿ ಶೇಖರಣೆಗೊಂಡಿದ್ದ ಹೂಳು ತೆರವು ಕಾಮಗಾರಿ ಯೋಜನೆ ಮುನ್ನೆಲೆಗೆ ಬಂದಿತ್ತು. 2019ರಲ್ಲಿ ಅಂದಾಜು ಪಟ್ಟಿ ಸಿದ್ಧಪಡಿಸಿ 2022-23 ರಲ್ಲಿ ಟೆಂಡರ್ ಪ್ರಕ್ರಿಯೆ ನಡೆಸಲಾಗಿತ್ತು.





2018-19ರಲ್ಲಿ ಉಂಟಾಗಿದ್ದ ಭೂಕುಸಿತ ಕಾರಣ ಹಾರಂಗಿ ಅಣೆಕಟ್ಟೆ ಹಿನ್ನೀರು ಪ್ರದೇಶವಾದ ಗರಗಂದೂರು ಸೇತುವೆ ಸುತ್ತಮುತ್ತಲಿನ ಪ್ರದೇಶಗಳಲ್ಲಿ ಬಳಿ ಭಾರೀ ಪ್ರಮಾಣದ ಮಣ್ಣು ಶೇಖರಣೆಗೊಂಡಿದೆ. 8.80 ಲಕ್ಷ ಕ್ಯೂಬಿಕ್ ಮೀಟರ್ ಪ್ರಮಾಣದ ಶಿಲ್ಟ್ ತೆರವಿಗೆ ಬೇಸಿಗೆಯಲ್ಲಿ ಕಾರ್ಯಾಚರಣೆ ನಡೆಯಲಿದೆ. ತೆರವು ಮಾಡುವ ಶಿಲ್ಟ್ ಸ್ಥಳಾಂತರಕ್ಕೆ ಬಸವನಹಳ್ಳಿ ಹಾಗೂ ಗರಗಂದೂರು ಸುತ್ತಮುತ್ತಲಿನ ಖಾಸಗಿ ಹಾಗೂ ಸರಕಾರಿ ಕ್ವಾರಿಗಳನ್ನು ಗುರುತಿಸಲಾಗಿದೆ. ಹಿನ್ನೀರಿನಿಂದ ತೆಗೆಯುವ ಶಿಲ್ಟ್ ಅನ್ನು ಕ್ವಾರಿಗಳಿಗೆ ತುಂಬಿಸಿ ವಿಲೇವಾರಿಗೊಳಿಸುವ ಯೋಜನೆ ಹೊಂದಲಾಗಿದೆ. ಇದಕ್ಕಾಗಿ ಈಗಾಗಲೇ ಮಾಲಿನ್ಯ ನಿಯಂತ್ರಣ ಮಂಡಳಿ ಅನುಮತಿ ಕೂಡಾ ಪಡೆದುಕೊಳ್ಳಲಾಗಿದೆ.

ಇದರೊಂದಿಗೆ ಲೋಕೋಪಯೋಗಿ, ಅರಣ್ಯ, ನೀರಾವರಿ, ಕಂದಾಯ ಇಲಾಖೆಗಳು ಹಾಗೂ ಗಣಿ ಮತ್ತು ಭೂವಿಜ್ಞಾನ ಇಲಾಖೆ ಒಳಗೊಂಡ ಸಮಿತಿ ಸಮಗ್ರ ಪರಿಶೀಲನೆ ನಡೆಸಿ ವರದಿಯನ್ನು ಜಿಲ್ಲಾಧಿಕಾರಿಗಳಿಗೆ ಸಲ್ಲಿಸಲಾಗಿದ್ದು, ಅಂತಿಮ ಆದೇಶಕ್ಕೆ ಎದುರು ನೋಡಲಾಗುತ್ತಿದೆ.

ಒಟ್ಟು 130 ಕೋಟಿ ಕಾಮಗಾರಿಯ ಯೋಜನೆಯಲ್ಲಿ 2018-19ರಲ್ಲಿ ಉಂಟಾದ ಭೂಕುಸಿತ ಹಿನ್ನೆಲೆಯಲ್ಲಿ ಹೂಳೆತ್ತುವುದು ಸೇರಿದಂತೆ ಗೇಬಿಯನ್ ವಾಲ್ ನಿರ್ಮಾಣ, ಸೇತುವೆ, ಕಾಂಕ್ರಿಟ್ ವಾಲ್‌ಗಳ ನಿರ್ಮಾಣ ಮತ್ತಿತರ ಯೋಜನೆಯ ಕಾಮಗಾರಿ ಕೈಗೊಳ್ಳಲಾಗಿದೆ.

ಈ ಪೈಕಿ 39 ಕೋಟಿ ರೂ. ವೆಚ್ಚದಲ್ಲಿ ಹೂಳೆತ್ತುವುದು, 55 ಕೋಟಿ ವೆಚ್ಚದಲ್ಲಿ ಗೇಬಿಯನ್ ವಾಲ್ ನಿರ್ಮಾಣ ಮಾಡುವುದು ಪ್ರಮುಖ ಕಾಮಗಾರಿಯಾಗಿದೆ.

ಪ್ರಮುಖ ಭೂಕುಸಿತ ಪ್ರದೇಶಗಳಾದ ಹಟ್ಟಿಹೊಳೆ, ನಂದಿಮೊಟ್ಟೆ, ಹಮ್ಮಿಯಾಲ ನದಿಗಳ 42 ಕಿ.ಮೀ. ವ್ಯಾಪ್ತಿಯ ಆಯ್ದ 4.5.ಕಿಮೀ ವ್ಯಾಪ್ತಿಯಲ್ಲಿ ಗೇಬಿಯನ್ ವಾಲ್ ನಿರ್ಮಾಣ ಕಾರ್ಯ ಈಗಾಗಲೇ ಪ್ರಗತಿಯಲ್ಲಿದೆ. ಕಳೆದ ಒಂದೂವರೆ ವರ್ಷದಲ್ಲಿ 2 ಕಿಮೀ ನಷ್ಟು ಗೇಬಿಯನ್ ವಾಲ್ ನಿರ್ಮಾಣ ಕಾಮಗಾರಿ ಪೂರ್ಣಗೊಳಿಸಲಾಗಿದೆ. ಭೂಕುಸಿತ ತಡೆಯಲು ಮಹಾರಾಷ್ಟ್ರ ಮಾದರಿಯ ಈ ಗೇಬಿಯನ್ ವಾಲ್ ನಿರ್ಮಾಣ ಯೋಜನೆ ಕೊಡಗಿನಲ್ಲಿ ಪ್ರಚಲಿತ ಪಡೆದುಕೊಳ್ಳುತ್ತಿದೆ.

- 8.80 ಲಕ್ಷ ಕ್ಯೂಬಿಕ್ ಮೀಟರ್ ಪ್ರಮಾಣದ ಶಿಲ್ಟ್ ತೆರವಿಗೆ ಬೇಸಿಗೆಯಲ್ಲಿ ಕಾರ್ಯಾಚರಣೆ ನಡೆಯಲಿದೆ.
- ಹಿನ್ನೀರಿನಿಂದ ತೆಗೆಯುವ ಶಿಲ್ಟ್ ಅನ್ನು ಕ್ವಾರಿಗಳಿಗೆ ತುಂಬಿಸಿ ವಿಲೇವಾರಿಗೊಳಿಸುವ ಯೋಜನೆ ಹೊಂದಲಾಗಿದೆ.
- 39 ಕೋಟಿ ರೂ. ವೆಚ್ಚದಲ್ಲಿ ಹೂಳೆತ್ತುವುದು, 55 ಕೋಟಿ ವೆಚ್ಚದಲ್ಲಿ ಗೇಬಿಯನ್ ವಾಲ್ ನಿರ್ಮಾಣ ಮಾಡುವುದು ಪ್ರಮುಖ ಕಾಮಗಾರಿಯಾಗಿದೆ.
- ಕಳೆದ ಒಂದೂವರೆ ವರ್ಷದಲ್ಲಿ 2 ಕಿಮೀ ನಷ್ಟು ಗೇಬಿಯನ್ ವಾಲ್ ನಿರ್ಮಾಣ ಕಾಮಗಾರಿ ಪೂರ್ಣಗೊಳಿಸಲಾಗಿದೆ.

ಇದರೊಂದಿಗೆ ಮುಕ್ಕೋಡ್ಲು ಗ್ರಾಮ ವ್ಯಾಪ್ತಿಯಲ್ಲಿ 10 ಕೋಟಿ ವೆಚ್ಚದಲ್ಲಿ ಕಾಂಕ್ರಿಟ್ ತಡೆಗೋಡೆ, 1.5 ಕೋಟಿ ವೆಚ್ಚದಲ್ಲಿ ಸಿಂಗಲ್ ಲೈನ್ ಸೇತುವೆ, 75 ಲಕ್ಷ ವೆಚ್ಚದಲ್ಲಿ ತೂಗುಸೇತುವೆ ಕಾಮಗಾರಿ ಒಳಗೊಂಡಿದೆ ಎಂದು ಯೋಜನೆಯ ಸವಿಸ್ತಾರವಾದ ಮಾಹಿತಿಯನ್ನು ಪುಟ್ಟಸ್ವಾಮಿ ನೀಡಿದ್ದಾರೆ.

ಪಡುಬಿದ್ರಿ ದೇವಳಕ್ಕೆ ರಿಸರ್ವ್ ಬ್ಯಾಂಕ್ ಅಧಿಕಾರಿ ಭೇಟಿ

ಶಾಲಾ ಕಟ್ಟಡ ನಿರ್ಮಾಣಕ್ಕೆ ನೆರವು

ಪಡುಬಿದ್ರಿ: ಜೀರ್ಣೋದ್ಧಾರ, ಬ್ರಹ್ಮಕಲಶೋತ್ಸವದ ಹೊಸ್ತಿಲಲ್ಲಿರುವ ಪಡುಬಿದ್ರಿ ಶ್ರೀ ಮಹಾಲಿಂಗೇಶ್ವರ ಮಹಾಗಣಪತಿದೇವಸ್ಥಾನಕ್ಕೆಭಾರತೀಯ ರಿಸರ್ವ್ ಬ್ಯಾಂಕ್ ಮಹಾ ಪ್ರಬಂಧಕಿ ಮೀನಾಕ್ಷಿ ಶೇಷಗಿರಿ ಗಡ್ ಅವರು ಭಾನುವಾರದಂದು ಭೇಟಿಯಿತ್ತರು. ದೇಗುಲದ ಬಳಿಯಲ್ಲಿದ್ದು ಈಗ ಕೆಡವಲಾದ ಶಾಲಾ ಕಟ್ಟಡ ಮರು ನಿರ್ಮಿಸಲು ಸಿಎಸ್‌ಆರ್ ನಿಧಿಯ ಹೊಂದಾಣಿಕೆಯ ಭರವಸೆ ನೀಡಿದರು.



ದೇಗುಲದ ಪರಿಸರ ಪುನರುತ್ಥಾನ ಕಾರ್ಯಗಳನ್ನು ವೀಕ್ಷಿಸಿ ಮೀನಾಕ್ಷಿ ಶೇಷಗಿರಿ ಗಡ್ ಅವರು ಸಂತಸ ವ್ಯಕ್ತಪಡಿಸಿದರು. ಈ ಸಂದರ್ಭದಲ್ಲಿ ಶ್ರೀ ದೇಗುಲದ ಆನುವಂಶಿಕ ಮೊಕ್ತೇಸರ, ನಿವೃತ್ತ ನೌಕಾದಳದ ಅಧಿಕಾರಿ ಪೇಟೆಮನೆ ಭವಾನಿಶಂಕರ ಹೆಗ್ಡೆ ಅವರು ದೇಗುಲದ ಪುನರ್ ನಿರ್ಮಾಣ ಕಾರ್ಯದಲ್ಲಿ ಅದಮಾರು ಮಠ ಶಿಕ್ಷಣ ಸಂಸ್ಥೆಯ ಕಟ್ಟಡವನ್ನು ಸಂಸ್ಥೆಯ ಪೂರ್ವಾನುಮತಿಯೊಂದಿಗೆ ಕೆಡವಲಾಗಿದೆ. ಈ ಮಾತುಕತೆಯ ಅನುಸಾರವಾಗಿ ನೂತನ ಕಟ್ಟಡವನ್ನು ದೇಗುಲದ ಮೂಲಕ ನಿರ್ಮಾಣವಮಾಡಿಕೊಡಬೇಕಾಗಿದ್ದು ರಾಷ್ಟ್ರೀಕೃತ ಬ್ಯಾಂಕ್‌ನ ಸಾಮಾಜಿಕ ಜವಾಬ್ದಾರಿಯ ಸಿಎಸ್‌ಆರ್ ನಿಧಿಯ ಬಿಡುಗಡೆಗಾಗಿ ಮನವಿಯನ್ನು ಮಾಡಿದರು.

- ಕೆಡವಲಾದ ಶಾಲಾ ಕಟ್ಟಡ ಮರು ನಿರ್ಮಿಸಲು ಸಿಎಸ್‌ಆರ್ ನಿಧಿಯ ಹೊಂದಾಣಿಕೆಯ ಭರವಸೆ
- ದೇಗುಲದ ಪರಿಸರ ಪುನರುತ್ಥಾನ ಕಾರ್ಯಗಳನ್ನು ವೀಕ್ಷಿಸಿ ಮೀನಾಕ್ಷಿ ಶೇಷಗಿರಿ ಗಡ್ ಅವರು ಸಂತಸ
- ರಾಷ್ಟ್ರೀಕೃತ ಬ್ಯಾಂಕ್‌ನ ಸಾಮಾಜಿಕ ಜವಾಬ್ದಾರಿಯ ಸಿಎಸ್‌ಆರ್ ನಿಧಿಯ ಬಿಡುಗಡೆಗಾಗಿ ಮನವಿ

ಅದಕ್ಕೆ ಸ್ಪಂದಿಸಿದ ಮೀನಾಕ್ಷಿ ಎಸ್. ಗಡ್ ಅವರು ಈ ಕುರಿತಾಗಿ ತಾನು ಗಮನಹರಿಸುವುದಾಗಿ ಭರವಸೆಯಿತ್ತರು. ಈ ಸಂದರ್ಭದಲ್ಲಿ ವಿಷ್ಣುಮೂರ್ತಿ ಆಚಾರ್ಯ ಪಾದೆಬೆಟ್ಟು, ರಮಾಕಾಂತ ರಾವ್, ಅನಿಲ್ ಕುಮಾರ್ ಶೆಟ್ಟಿ, ಮುರಳೀನಾಥ್ ಶೆಟ್ಟಿ ಮತ್ತಿತರರಿದ್ದರು. ಮೀನಾಕ್ಷಿ ಅವರು ಶ್ರೀ ದೇವರ ದರ್ಶನಗೈದ ಬಳಿಕ ಅವರಿಗೆ ಅರ್ಚಕ ಎಚ್. ಪದ್ಮನಾಭ ಭಟ್ ಅವರು ಶ್ರೀ ದೇವರ ಪ್ರಸಾದವನ್ನಿತ್ತು ಶ್ರೀ ಕ್ಷೇತ್ರದ ಬಗೆಗೆ ವಿವರಿಸಿದರು.

ಕುಕ್ಕೆ ಶ್ರೀದೇವಳದಲ್ಲಿ ಬಾಲಿವುಡ್ ನಟ ಅರ್ಜುನ್ ಕಪೂರ್ ಸರ್ಪಸಂಸ್ಕಾರ ಸೇವೆ

ಸುಬ್ರಹ್ಮಣ್ಯ: ನಾಗಾರಾಧನೆಯ ಮಣ್ಣು ತಾಣ ದಕ್ಷಿಣ ಕನ್ನಡ ಜಿಲ್ಲೆಯ ಕಡಬ ತಾಲೂಕಿನ ಕುಕ್ಕೆ ಸುಬ್ರಹ್ಮಣ್ಯದ ಮಹತೋಭಾರ ಕುಕ್ಕೆ ಶ್ರೀ ಸುಬ್ರಹ್ಮಣ್ಯ ದೇವಸ್ಥಾನದಲ್ಲಿ ಭಾನುವಾರ ಬಾಲಿವುಡ್‌ನ ನಾಯಕ ನಟ, ಕಪೂರ್ ಮನೆತನದ ಕುಡಿ ಹಾಗೂ ಬೋನಿ ಕಪೂರ್‌ರ ಪುತ್ರ ಅರ್ಜುನ್ ಕಪೂರ್ ಸರ್ಪಸಂಸ್ಕಾರ ಸೇವೆ ಆರಂಭಿಸಿದರು.

ಆರಂಭದಲ್ಲಿ ಶ್ರೀ ದೇವಳಕ್ಕೆ ತೆರಳಿದ ಅವರು ದೇವರ ದರುಶನ ಪಡೆದು ಪ್ರಸಾದ ಸ್ವೀಕರಿಸಿದರು.

ಅಧ್ಯಕ್ಷರ ಭೇಟಿ

ಶ್ರೀ ದೇವರ ದರುಶನದ ಬಳಿಕ ಅರ್ಜುನ್ ಕಪೂರ್ ಅವರು ದೇವಳದ ಆಡಳಿ ಕಚೇರಿಗೆ ತೆರಳಿ ಅಲ್ಲಿ ದೇವಳದ ವ್ಯವಸ್ಥಾಪನಾಸಮಿತಿಅಧ್ಯಕ್ಷಹರೀಶ್ ಎಸ್. ಇಂಜಾಡಿ ಅವರನ್ನು ಭೇಟಿಯಾದರು. ಹರೀಶ್ ಇಂಜಾಡಿಯವರು ಶ್ರೀ ಕ್ಷೇತ್ರದ ಮಹಾತ್ಮೆ ಮತ್ತು ಬೇಡಿ ಬಂದ ಭಕ್ತರಿಗೆ ಕುಕ್ಕೆ ಸುಬ್ರಹ್ಮಣ್ಯ ನೀಡಿದ ವರ ಪ್ರಸಾದ ಮತ್ತು ಮಹಿಮೆಯನ್ನು ವಿವರಿಸಿದರು. ಈ ಸಂದರ್ಭ ದೇವಳದ ಶಿಷ್ಟಾಚಾರಾಧಿಕಾರಿ ಜಯರಾಮ ರಾವ್, ಪ್ರಮುಖರಾದ ಮಹೇಶ್, ಮನ್ಮಥ ಮತ್ತಿತರರು ಉಪಸ್ಥಿತರಿದ್ದರು.

ಪ್ರಥಮ ದಿನದ ವಿಧಿ ವಿಧಾನಗಳ ಬಳಿಕ ಅವರು ದೇವಳದಲ್ಲಿ ಭೋಜನ ಪ್ರಸಾದ ಮತ್ತು ಸಂಜೆ ಉಪಹಾರ ಸ್ವೀಕರಿಸಿದರು.



ಇಂದು ನಾಗಪ್ರತಿಷ್ಠೆ

ಸೋಮವಾರ ಮುಂಜಾನೆ ಸರ್ಪಸಂಸ್ಕಾರ ಯಾಗ ಶಾಲೆಯಲ್ಲಿ ಎರಡನೇ ದಿನದ ವೈದಿಕ ವಿಧಿವಿಧಾನಗಳಲ್ಲಿ ಅವರು ಭಾಗವಹಿಸಲಿದ್ದಾರೆ. ಆರಂಭದಲ್ಲಿ ಬ್ರಹ್ಮಚಾರಿ ಆರಾಧನೆ ಮತ್ತು ಗೋಪೂಜೆ ನೆರವೇರಿಸಲಿದ್ದಾರೆ. ಬಳಿಕ ಕುಕ್ಕೆ ಶ್ರೀ ಸುಬ್ರಹ್ಮಣ್ಯ ದೇವಸ್ಥಾನದಲ್ಲಿ ಮಧ್ಯಾಹ್ನದ ಮಹಾಪೂಜೆಯ ಬಳಿಕ ನಾಗಪ್ರತಿಷ್ಠಾ ಸೇವೆಯಲ್ಲಿ ಪಾಲ್ಗೊಂಡು ಪ್ರಸಾದ ಸ್ವೀಕರಿಸಲಿದ್ದಾರೆ.

- ಹರೀಶ್ ಇಂಜಾಡಿಯವರು ಶ್ರೀ ಕ್ಷೇತ್ರದ ಮಹಾತ್ಮೆ ಮತ್ತು ಬೇಡಿ ಬಂದ ಭಕ್ತರಿಗೆ ಕುಕ್ಕೆ ಸುಬ್ರಹ್ಮಣ್ಯ ನೀಡಿದ ವರ ಪ್ರಸಾದ ಮತ್ತು ಮಹಿಮೆಯನ್ನು ವಿವರಿಸಿದರು.

ರಸ್ತೆ ಅಗೆದು ರಾಷ್ಟ್ರೀಯ ಹೆದ್ದಾರಿ ಇಲಾಖೆಯ ನಿರಂತರ ಅವಾಂತರ

ಸಾಣೂರು ಸಾರ್ವಜನಿಕರ ಸಂಕಷ್ಟ!

ಕಾರ್ಕಳ: ರಾಷ್ಟ್ರೀಯ ಹೆದ್ದಾರಿ 169ಯ ರಸ್ತೆ ಕಾಮಗಾರಿ ಹೆದ್ದಾರಿ ಇಲಾಖೆಯ ನಿಧಾನಗತಿ ಮತ್ತು ಬೇಜವಾಬ್ದಾರಿಯ ನಡವಳಿಕೆಗೆ ನಾಗರೀಕರಲ್ಲಿ ತೀವ್ರ ಆಕ್ರೋಶ ಮಡುಗಟ್ಟಿದೆ. ತಾಲೂಕಿನ ಸಾಣೂರು ಮುರತಂಗಡಿ ಸರ್ವಿಸ್ ರಸ್ತೆ ಬ್ಯಾಂಕ್ ಆಫ್ ಬರೋಡ ಶಾಖೆಯ ಎದುರು ಅಗೆದ ರಸ್ತೆಯನ್ನು ಮುಚ್ಚಿಲ್ಲ.



ಕಳೆದ 20 ದಿನಗಳಿಂದ ಮುರತ್ತಂಗಡಿ ಸರ್ವಿಸ್ ರಸ್ತೆಯ ಮಧ್ಯಭಾಗದಲ್ಲಿ ರಸ್ತೆಯನ್ನು ಅಗೆದು ಅಡಿಭಾಗದಲ್ಲಿರುವ ಕುಡಿಯುವ ನೀರಿನ ಎಚ್‌ಡಿ ಪೈಪ್‌ಲನ್ ದುರಸ್ತಿಗೊಳಿಸಲು ಜೆಸಿಬಿಯಿಂದ ಅಗೆಯಲಾಗಿದ್ದು, ಪೈಪ್‌ಲೈನ್ ಸರಿಪಡಿಸಿದರೂ... ಇನ್ನೂ ಕೂಡ ಅಗೆದಿರುವ ಮಣ್ಣನ್ನು ಮುಚ್ಚದೆ ಸರ್ವಿಸ್ ರಸ್ತೆಯಲ್ಲಿ ವಾಹನಗಳಿಗೆ ಓಡಾಡಲು ಮತ್ತು ಜನರಿಗೆ ಸಂಚರಿಸಲು ತೀವ್ರ ತೊಂದರೆ ಉಂಟಾಗಿದೆ.

ಖಾಸಗಿ ಜಾಗಕ್ಕೆ ಹೋಗುವ ರಸ್ತೆಯ ಎದುರಿನಲ್ಲಿಯೇ ಅಗೆದಿರುವುದರಿಂದ ಮನೆಗೆ ವಾಹನ ಹೋಗಲು ಮತ್ತು ಸಂಚಾರಕ್ಕೆ ತೀವ್ರ ತಡೆ ಉಂಟಾಗಿದೆ. ಈ ಬಗ್ಗೆ ಸಂಸ್ಥೆಯ ಮ್ಯಾನೇಜರ್‌ರಲ್ಲಿ ತಿಳಿಸಿದರು ಕೂಡ ಈವರೆಗೆ ಯಾವುದೇ ಪ್ರಯೋಜನವಾಗಿಲ್ಲ.

ತೀವ್ರ ಪ್ರತಿಭಟನೆಗೆ ಸಿದ್ಧತೆ!

ಸ್ಥಳೀಯ ನಾಗರಿಕರು ರಸ್ತೆಗಿಳಿದು ತೀವ್ರ ಪ್ರತಿಭಟನೆ ಮಾಡುವ ಮೊದಲು ಅಗೆದಿರುವ ರಸ್ತೆಯ ಭಾಗವನ್ನು ಸರಿಪಡಿಸಿ ಸುಮಾರು 800 ಮೀಟರ್ ಉದ್ದದ ಸರ್ವಿಸ್ ರಸ್ತೆಗೆ ಕೇವಲ ಜಲ್ಲಿ ಮಾತ್ರ ಹಾಕಿ 2 ತಿಂಗಳುಗಳು ಕಳೆದಿವೆ ಇನ್ನೂ ಡಾಮರಿಕರಣ ಮಾಡಿಲ್ಲ. ಕೂಡಲೇ ಡಾಮರೀಕರಣ ಮಾಡಬೇಕೆಂದು ಒತ್ತಾಯಿಸಿದ್ದಾರೆ.

ಅಗೆದಿರುವ ರಸ್ತೆಯ ಭಾಗಕ್ಕೆ ಮಣ್ಣು ತುಂಬಿ ಸರಿಪಡಿಸಿ ಕೂಡಲೇ ಡಾಮರೀಕರಣ ಮಾಡಿ ರಾಷ್ಟ್ರೀಯ ಹೆದ್ದಾರಿ ಸರ್ವಿಸ್ ರಸ್ತೆಯ ಮೇಲೆ ವಾಹನ ಮತ್ತು ಜನ ಸಂಚಾರಕ್ಕೆ ಅನುವು ಮಾಡಿಕೊಡಬೇಕೆಂದು ರಾಷ್ಟ್ರೀಯ ಹೆದ್ದಾರಿ ಹೋರಾಟ ಸಮಿತಿಯ ಪ್ರಮುಖರಾದ ಸಾಣೂರು ನರಸಿಂಹ ಕಾಮತ್ ಆಗ್ರಹಿಸಿದ್ದಾರೆ.

ಪುತ್ತೂರು ಮಹತೋಭಾರ ಶ್ರೀ ಮಹಾಲಿಂಗೇಶ್ವರ ದೇವಸ್ಥಾನ

ಜಾತ್ರೆಯ ಆಮಂತ್ರಣ ಪತ್ರಿಕೆ ಬಿಡುಗಡೆ

ಪುತ್ತೂರು: ಇತಿಹಾಸ ಪ್ರಸಿದ್ಧ ಪುತ್ತೂರು ಮಹತೋಭಾರ ಶ್ರೀ ಮಹಾಲಿಂಗೇಶ್ವರ ದೇವರ ವಾರ್ಷಿಕಜಾತ್ರೆಯಆಮಂತ್ರಣಪತ್ರಿಕೆಯನ್ನುರವಿವಾರ ದೇವಾಲಯದಲ್ಲಿ ಬಿಡುಗಡೆಗೊಳಿಸಲಾಯಿತು.

ವಾರ್ಷಿಕ ಜಾತ್ರೆಯು ಏ.10ರಿಂದ ಆರಂಭಗೊಂಡು ಏ.17 ರಂದು ಮಹಾರಥೋತ್ಸವ ನಡೆಯಲಿದೆ. ಶ್ರೀ ದೇವರ ನಡೆಯಲ್ಲಿ ಜಾತ್ರೆಯ ಯಶಸ್ಸಿಗಾಗಿ ಪ್ರಾರ್ಥನೆ ಸಲ್ಲಿಸಲಾಯಿತು.

ಆಮಂತ್ರಣ ಪತ್ರಿಕೆ ಬಿಡುಗಡೆಗೊಳಿಸಿದ ಶಾಸಕ ಅಶೋಕ್ ರೈ ಮಾತನಾಡಿ, ಮಹಾಲಿಂಗೇಶ್ವರ ದೇವರ ಜಾತ್ರೆಯನ್ನು ಈ ಬಾರಿಯೂ ಅತ್ಯಂತ ಅದ್ದೂರಿಯಿಂದ, ಯಶಸ್ವಿಯಾಗಿ ನಡೆಸಲು ಭಕ್ತಕೋಟಿಯ ಸಹಕಾರ ಬೇಕು ಎಂದರು. ಮುಂದಿನ ದಿನಗಳಲ್ಲಿ ದೇವರಿಗೆ ಬಂಗಾರದ ಕವಚದಿಂದ ಶೃಂಗಾರ ಮಾಡಬೇಕೆಂಬ ಕನಸಿದೆ. ಅದಕ್ಕೂ ಸರ್ವ ಭಕ್ತರ ಸಹಕಾರ ನೀಡಬೇಕು ಎಂದು ವಿನಂತಿಸಿದರು.



- ವಾರ್ಷಿಕ ಜಾತ್ರೆಯು ಏ.10ರಿಂದ ಆರಂಭಗೊಂಡು ಏ.17 ರಂದು ಮಹಾರಥೋತ್ಸವ ನಡೆಯಲಿದೆ.
- ಶ್ರೀ ದೇವರ ನಡೆಯಲ್ಲಿ ಜಾತ್ರೆಯ ಯಶಸ್ಸಿಗಾಗಿ ಪ್ರಾರ್ಥನೆ ಸಲ್ಲಿಸಲಾಯಿತು.

ದೇವಳದ ವ್ಯವಸ್ಥಾಪನಾ ಸಮಿತಿ ಅಧ್ಯಕ್ಷ ಪಂಜಿಗುಡ್ಡೆ ಈಶ್ವರ ಭಟ್, ಸದಸ್ಯರಾದ ಕೃಷ್ಣವೇಣಿ, ಮಹಾಬಲ ರೈ ವಳತ್ತಡ್ಕ, ಈಶ್ವರ ಬೆಡೇಕರ್, ಸುಭಾಷ್ ರೈ ಬೆಳ್ಳಿಪ್ಪಾಡಿ, ನಳಿನಿ ಪಿ. ಶೆಟ್ಟಿ, ವಿನಯ ಸುವರ್ಣ, ಪ್ರಧಾನ ಅರ್ಚಕ ವೇ. ಮೂ. ವಸಂತ ಕೆದಿಲಾಯ, ಕಾರ್ಯನಿರ್ವಹಣಾಧಿಕಾರಿ ಕೆ.ವಿ. ಶ್ರೀನಿವಾಸ್, ವ್ಯವಸ್ಥಾಪಕ ಹರೀಶ್ ಮೊದಲಾದವರಿದ್ದರು.

ಸಂಜು, ಬೂಮ್ರಾ ಆಟಕ್ಕೆ ನ್ಯೂಜಿಲೆಂಡ್ ತತ್ತರ | ಟ್ರೋಫಿ ಉಳಿಸಿಕೊಂಡ ಭಾರತ

ಟಿ20- ವಿಶ್ವ ಸಮರ ಗೆದ್ದ ಭಾರತ

ಅಹಮದಾಬಾದ್: ಭಾರತಾದ್ಯಂತ ವಂದೇ ಮಾತರಂ ಹಾಡು ಮೊಳಗಿತು. ಮೈದಾನದಲ್ಲಿ ಭಾರತ ಜಯಘೋಷದ ಮೆರುಗು ಮೂಡಿತ್ತು. ಭಾರತದ ಪ್ರತಿಯೊಂದು ಬೀದಿಯಲ್ಲಿ ಅಭಿಮಾನಿಗಳು ಕುಣಿದು ಕುಪ್ಪಳಿಸತೊಡಗಿದ್ದರು. ತಿರಂಗಾದೊಂದಿಗೆ ಮೆರೆದಾಡತೊಡಗಿದ್ದರು. ವಿಶ್ವಕಪ್ ಫೈನಲ್ ಪಂದ್ಯದಲ್ಲಿ ಭಾರತ ನ್ಯೂಜಿಲೆಂಡ್ ತಂಡವನ್ನು ಸೋಲಿಸಿದ ನಂತರ ದೇಶಾದ್ಯಂತ ಸಂಭ್ರಮ ಮುಗಿಲು ಮುಟ್ಟಿತ್ತು. ಇತಿಹಾಸ ದಾಖಲಾಯಿತು. ಭಾರತ ಮತ್ತೊಮ್ಮೆ ಸಾರ್ವಭೌಮತ್ವ ಸಾಬೀತು ಪಡೆಸಿತು.

ಭಾರತ ಅಭಿಮಾನಿಗಳನ್ನು ನಿಶ್ಯಬ್ದವಾಗಿಸುತ್ತೇನೆ ಎಂದಿದ್ದ ತಂಡ ತಾನೇ ನಿಬ್ಬೆರಗಾಗಿ ನಿಂತ ದಿನದಂದು ಸೂರ್ಯ ಪಡೆ 96 ರನ್‌ಗಳಿಂದ ಗೆದ್ದಿದೆ. ಇತಿಹಾಸ ಬರೆದಿದೆ. ಭಾನುವಾರದಂದು ಮೊದಲು ಬ್ಯಾಟಿಂಗ್‌ಗಿಳಿದ ಭಾರತ ಬರೋಬ್ಬರಿ 5 ವಿಕೆಟ್ ನಷ್ಟಕ್ಕೆ 255 ರನ್ ಬಾರಿಸಿತು. ಗುರಿ ಬೆನ್ನತ್ತಿದ ನ್ಯೂಜಿಲೆಂಡ್ 19 ಓವರ್‌ಗಳಲ್ಲಿ 159ಗೆ ಆಲೌಟ್ ಮಾಡಿ ಗೆದ್ದಿತು. ಸಂಜು ಸ್ಯಾಮ್ಸನ್ ದೊಡ್ಡ ದಾಖಲೆಗಳನ್ನೇ ಮಾಡುತ್ತಾ ಇತಿಹಾಸ ಪುಟಗಳಲ್ಲಿ ಸೇರಿದರು. ಫೈನಲ್ ಗೆಲ್ಲಿಸಿದವರಾದರು. ಇಶಾನ್ ಕಿಶನ್ ಮತ್ತು ಅಭಿಷೇಕ್ ಶರ್ಮ ಕೂಡ ಅಷ್ಟೇ ಪರಿಣಾಮಕಾರಿ ಆಟವಾಡಿದರು. ಬೂಮ್ರಾ ಮತ್ತೊಮ್ಮೆ ತನಗ್ಯಾರೂ ಸರಿಸಾಟಿ ಇಲ್ಲ ಎಂಬುದನ್ನು ಸಾಬೀತು ಪಡಿಸಿದರು.

ಭಾರತ ಐತಿಹಾಸಿಕ ಮೊತ್ತ: ಪಂದ್ಯದಲ್ಲಿ ಮೊದಲು ಬ್ಯಾಟಿಂಗ್‌ಗಿಳಿದ ಭಾರತ ದೊಡ್ಡ ಸ್ಕೋರ್ ನಿರ್ಮಿಸಿತು. ಸಂಜು ಸ್ಯಾಮ್ಸನ್ ಮೊದಲಿನಿಂದಲೂ ಸ್ಫೋಟಕ ಬ್ಯಾಟಿಂಗ್ ಮಾಡಿದರು. ಅವರಿಗೆ ಅಭಿಷೇಕ್ ಮತ್ತು ಇಶಾನ್ ಕಿಶನ್ ಕೂಡ ಸಾಥ್ ನೀಡಿದರು. ಸ್ಯಾಮ್ಸನ್ 46 ಬಾಲ್‌ಗಳಲ್ಲಿ 5 ಬೌಂಡರಿ 8 ಸಿಕ್ಸರ್‌ಗಳೊಂದಿಗೆ ಬರೋಬ್ಬರಿ 89 ರನ್ ಚಚ್ಚಿದರು. ಅಭಿಷೇಕ್ ಶರ್ಮ 52, ಇಶಾನ್ ಕಿಶನ್ 54 ರನ್ ಗಳಿಸಿದರು. ಕೊನೆಯ ಓವರ್‌ನಲ್ಲಿ ಸ್ಫೋಟಕ ಬ್ಯಾಟಿಂಗ್ ಮಾಡಿದ ಶಿವಂ ದುಬೆ 26 ರನ್ ಬಾರಿಸಿ ಸ್ಕೋರ್ ಹಿಗ್ಗಿಸಿದರು.

ದಾಖಲೆ ಬರೆದ ಭಾರತ: ಆರೇ ಓವರ್‌ಗಳಲ್ಲಿ ಬರೋಬ್ಬರಿ 92 ರನ್ ಬಾರಿಸಿದ ಭಾರತ ವಿಶ್ವಕಪ್‌ನ ಪವರ್‌ಪ್ಲೇನಲ್ಲಿ ಅತಿ ಹೆಚ್ಚು ರನ್ ಬಾರಿಸಿದ ದಾಖಲೆ ಮಾಡಿತು. 20 ಓವರ್‌ನಲ್ಲಿ ಬರೋಬ್ಬರಿ 255 ರನ್ ಬಾರಿಸಿ ಫೈನಲ್ ಅಥವಾ ಪ್ಲೇಆಫ್‌ನಲ್ಲಿ ಅತಿ ಹೆಚ್ಚು ರನ್ ಬಾರಿಸಿದ ತಂಡ ಎನಿಸಿಕೊಂಡಿತು.

ದಿಗ್ಗಜರ ಸಾಲಿನಲ್ಲಿ ಸೂರ್ಯ

ಭಾರತ ತಂಡಕ್ಕೆ ವಿಶ್ವಕಪ್ ಗೆಲ್ಲಿಸಿಕೊಟ್ಟ ನಾಯಕರ ಪಟ್ಟಿಯಲ್ಲಿ ಸೂರ್ಯಕುಮಾರ್ ಯಾದವ್ ಸೇರಿಕೊಂಡರು. ಧೋನಿ, ಕಪಿಲ್ ಹಾಗೂ ರೋಹಿತ್ ಶರ್ಮ ನಂತರ ಈ ದಾಖಲೆ ಮಾಡಿದ ನಾಯಕ ಎನಿಸಿಕೊಂಡಿದ್ದಾರೆ.





ಭಾರತ ಗೆದ್ದಿರುವ ಐಸಿಸಿ ಟ್ರೋಫಿಗಳು

ವರ್ಷ	ಟ್ರೋಫಿ	ನಾಯಕ
1983	ಏಕದಿನ ವಿಶ್ವಕಪ್	ಕಪಿಲ್ ದೇವ್
2002 (ಫೈನಲ್ ರದ್ದು)	ಚಾಂಪಿಯನ್ಸ್ ಟ್ರೋಫಿ	ಸೌರವ್ ಗಂಗೂಲಿ
2007	ಟಿ20 ವಿಶ್ವಕಪ್	ಎಮ್.ಎಸ್. ಧೋನಿ
2011	ಏಕದಿನ ವಿಶ್ವಕಪ್	ಎಮ್.ಎಸ್. ಧೋನಿ
2013	ಚಾಂಪಿಯನ್ಸ್ ಟ್ರೋಫಿ	ಎಮ್.ಎಸ್. ಧೋನಿ
2024	ಟಿ20 ವಿಶ್ವಕಪ್	ರೋಹಿತ್ ಶರ್ಮ
2025	ಚಾಂಪಿಯನ್ಸ್ ಟ್ರೋಫಿ	ರೋಹಿತ್ ಶರ್ಮ
2026	ಟಿ20 ವಿಶ್ವಕಪ್	ಸೂರ್ಯಕುಮಾರ್ ಯಾದವ್

ಶರಣಾದ ನ್ಯೂಜಿಲೆಂಡ್; 96 ರನ್ನಿಂದ ಗೆದ್ದ ಭಾರತ

ಎಲ್ಲಾ ವಿಭಾಗಗಳಲ್ಲೂ ವಿಶ್ವಶ್ರೇಷ್ಠ ಪ್ರದರ್ಶನ ನೀಡಿದ ಭಾರತ ತಂಡ ಪ್ರಾಬಲ್ಯ ಮೆರೆದಿದ್ದು, ಸತತ 2ನೇ ಬಾರಿಗೆ ವಿಶ್ವಕಪ್ ಗೆದ್ದಿತು. ಟಾಸ್ ಗೆದ್ದು ಭಾರತವನ್ನು ಬ್ಯಾಟಿಂಗ್‌ಗಿಳಿಸಿದ ನ್ಯೂಜಿಲೆಂಡ್ ನಾಯಕ ಮಿಚೆಲ್ ಸ್ಯಾಂಟ್ನರ್ ಅವರಿಗೆ ಬಹುಶಃ 256 ರನ್ ಬೃಹತ್ ಸವಾಲಿನ ನಿರೀಕ್ಷೆ ಇರಲಿಲ್ಲವೇನೋ ಅನಿಸುತ್ತದೆ. ಟಿ20 ಪಂದ್ಯವೊಂದರಲ್ಲಿ 256 ರನ್ ದೊಡ್ಡ ಸವಾಲು, ಅದರಲ್ಲೂ ಇದು ವಿಶ್ವಕಪ್ ಫೈನಲ್ ಬೇರೆ. ಸೂರ್ಯ ಪಡೆ ನೀಡಿದ ಬೃಹತ್ ಸವಾಲು ಬೆನ್ನತ್ತಲು ಆರಂಭಿಸಿದ ನ್ಯೂಜಿಲೆಂಡ್‌ಗೆ ನಿರೀಕ್ಷಿತ ಆರಂಭಿಕ ಜತೆಯಾಟ ಸಿಗಲಿಲ್ಲ. ಪವರ್ ಪ್ಲೇ ಓವರ್‌ಗಳಲ್ಲಿ 50 ರನ್ ಗಡಿದಾಟಿದ್ದರೂ 3 ಪ್ರಮುಖ ದಾಂಡಿಗರ ವಿಕೆಟ್ ಕಳೆದುಕೊಂಡ ನ್ಯೂಜಿಲೆಂಡ್ ಕೊನೆಯಲ್ಲಿ ಪರದಾಡಿತು. ಜಸ್‌ಪ್ರೀತ್ ಬೂಮ್ರಾ ಎಂದಿನಂತೆ ಇಕಾನಮಿಕಲ್ ಬೌಲಿಂಗ್ ಪ್ರದರ್ಶನ ನೀಡಿದ್ದು, ತಮ್ಮ 4 ಓವರ್ ಸ್ಪೆಲ್‌ನಲ್ಲಿ 15 ರನ್ ನೀಡಿ 4 ವಿಕೆಟ್ ಕಿತ್ತರು. ಆದರೆ ಲೆಗ್‌ಸ್ಪಿನ್ನರ್ ಅಕ್ಷರ್ ಪಟೇಲ್ ಮ್ಯಾಚ್‌ವಿನ್ನಿಂಗ್ ಪ್ರದರ್ಶನ ನೀಡಿ 3 ಪ್ರಮುಖ ವಿಕೆಟ್ ಕಿತ್ತು ಕಿವೀಸ್ ಬ್ಯಾಟಿಂಗ್ ಕ್ರಮಾಂಕದ ಬೆನ್ನೆಲುಬು ಮುರಿದರು. ಕೊನೆಯ ವಿಕೆಟ್ ಅಭಿಷೇಕ್ ಶರ್ಮಾ ಪಾಲಾಯಿತು. ಸೀಫರ್ಟ್ (52) ಅರ್ಧಶತಕ ಮತ್ತು ನಾಯಕ ಸ್ಯಾಂಟ್ನರ್ (43) ಏಕಾಂಗಿ ಹೋರಾಟ ಯಾವುದೇ ರೀತಿ ನೆರವಾಗಲಿಲ್ಲ. 19 ಓವರ್‌ಗಳಲ್ಲಿ 159 ರನ್‌ಗಳಿಗೆ ಆಲೌಟಾದ ಕಿವೀಸ್ 96 ರನ್‌ಗಳಿಂದ ಸೋಲೊಪ್ಪಿ, ರನ್ನರ್‌ಅಪ್ ಪ್ರಶಸ್ತಿಗೆ ತೃಪ್ತಿಪಟ್ಟುಕೊಂಡಿತು.

ಸ್ಕೋರ್ ಬೋರ್ಡ್

ಭಾರತ 255/5(20)

ಸಂಜು ಸಿ ಸಬ್ (ಮೆಕ್‌ಕೊಂಚಿ) ಬಿ ನೀಶಮ್	89
ಅಭಿಷೇಕ್ ಸಿ ಸೀಫರ್ಟ್ ಬಿ ರವೀಂದ್ರ	52
ಕಿಶನ್ ಸಿ ಚ್ಯಾಪ್ಮನ್ ಬಿ ನೀಶಮ್	54
ಪಾಂಡ್ಯ ಸಿ ಸ್ಯಾಂಟ್ನರ್ ಬಿ ಹೆನ್ರಿ	18
ಸೂರ್ಯ ಸಿ ರವೀಂದ್ರ ಬಿ ನೀಶಮ್	0
ತಿಲಕ್ ಔಟಾಗದೆ	8
ದುಬೆ ಔಟಾಗದೆ	26
ಇತರೆ	8

ಬೌಲಿಂಗ್ ವಿವರ

ಮ್ಯಾಟ್ ಹೆನ್ರಿ	4-0-49-1
ಗ್ಲೆನ್ ಫಿಲಿಪ್ಸ್	1-0-5-0
ಜೇಕಬ್ ಡಫಿ	3-0-42-0
ಲೋಕಿ ಫರ್ಗುಸನ್	2-0-48-0
ಮಿಚೆಲ್ ಸ್ಯಾಂಟ್ನರ್	4-0-33-0
ರಚಿನ್ ರವೀಂದ್ರ	2-0-32-1
ಜೇಮ್ಸ್ ನೀಶಮ್	4-0-46-3

ನ್ಯೂಜಿಲೆಂಡ್ 159/10(19)

ಸೀಫರ್ಟ್ ಸಿ ಕಿಶನ್ ಬಿ ವರುಣ್	52
ಅಲೆನ್ ಸಿ ತಿಲಕ್ ಬಿ ಪಟೇಲ್	9
ರವೀಂದ್ರ ಸಿ ಕಿಶನ್ ಬಿ ಬೂಮ್ರಾ	1
ಫಿಲಿಪ್ಸ್ ಬಿ ಪಟೇಲ್	5
ಚ್ಯಾಪ್ಮನ್ ಬಿ ಪಾಂಡ್ಯ	3
ಡ್ಯಾ.ಮಿಚೆಲ್ ಸಿ ಕಿಶನ್ ಬಿ ಪಟೇಲ್	17
ಸ್ಯಾಂಟ್ನರ್ ಬಿ ಬೂಮ್ರಾ	43
ನೀಶಮ್ ಬಿ ಬೂಮ್ರಾ	8
ಹೆನ್ರಿ ಬಿ ಬೂಮ್ರಾ	0
ಫರ್ಗುಸನ್ ಔಟಾಗದೆ	6
ಡಫಿ ಸಿ ತಿಲಕ್ ಬಿ ಅಭಿಷೇಕ್	3
ಇತರೆ	12

ಬೌಲಿಂಗ್ ವಿವರ

ಅರ್ಷದೀಪ್ ಸಿಂಗ್	4-0-32-0
ಹಾರ್ದಿಕ್ ಪಾಂಡ್ಯ	4-0-36-1
ಅಕ್ಷರ್ ಪಟೇಲ್	3-0-27-3
ಜಸ್‌ಪ್ರೀತ್ ಬೂಮ್ರಾ	4-0-15-4
ವರುಣ್ ಚಕ್ರವರ್ತಿ	3-0-39-1
ಅಭಿಷೇಕ್ ಶರ್ಮಾ	1-0-5-1

ಪಂದ್ಯಶ್ರೇಷ್ಠ: ಜಸ್‌ಪ್ರೀತ್ ಬೂಮ್ರಾ
ಸರಣಿಶ್ರೇಷ್ಠ: ಸಂಜು ಸ್ಯಾಮ್ಸನ್

ವರ್ಷ	ಆತಿಥ್ಯ	ವಿಜೇತ ದೇಶ
2007	ದಕ್ಷಿಣ ಆಫ್ರಿಕಾ	ಭಾರತ
2009	ಇಂಗ್ಲೆಂಡ್	ಪಾಕಿಸ್ತಾನ್
2010	ವೆಸ್ಟ್ ಇಂಡೀಸ್	ಇಂಗ್ಲೆಂಡ್
2012	ಶ್ರೀಲಂಕಾ	ವೆಸ್ಟ್ ಇಂಡೀಸ್
2014	ಬಾಂಗ್ಲಾದೇಶ್	ಶ್ರೀಲಂಕಾ
2016	ಭಾರತ	ವೆಸ್ಟ್ ಇಂಡೀಸ್
2021	ಯುಎಇ/ ಓಮನ್	ಆಸ್ಟ್ರೇಲಿಯಾ
2022	ಆಸ್ಟ್ರೇಲಿಯಾ	ಇಂಗ್ಲೆಂಡ್
2024	ಯುನೈಟೆಡ್ ಸ್ಟೇಟ್ಸ್ ವೆಸ್ಟ್ ಇಂಡೀಸ್	ಭಾರತ
2026	ಭಾರತ	ಭಾರತ

ಫೈನಲ್‌ಗೇರಿಸಿದ ಸಂಜು

ಆಡಿದ್ದು ಐದೇ ಪಂದ್ಯ. ಆದರೆ ಮೊದಮೊದಲಿಗೆ ಲಯಕ್ಕಾಗಿ ಪರದಾಡಿದ್ದ ಸಂಜು ಸ್ಯಾಮ್ಸನ್ ನಮೀಬಿಯಾ ವಿರುದ್ಧ ಮಾತ್ರ ಕಣಕ್ಕಿಳಿದು ಮುಂದೆ ವಾಟರ್ ಬಾಯಿ ಆಗಿದ್ದರು. ಬೆಂಚ್ ಕಾಯ್ದಿದ್ದರು. ರಿಂಕು ಸಿಂಗ್ ಬದಲಿ ಆಟಗಾರರಾಗಿ ಜಿಂಬಾಬ್ವೆ ವಿರುದ್ಧ ಪಂದ್ಯಕ್ಕೆ ಮತ್ತೆ ಬಂದಿದ್ದ ಅವರು ಚಮತ್ಕಾರ ಮಾಡಿಬಿಟ್ಟಿದ್ದರು. 15 ಬಾಲ್‌ಗಳಲ್ಲಿ 28 ರನ್ ಬಾರಿಸಿ ಭದ್ರ ಅಡಿಪಾಯ ಹಾಕಿದರು.



ವಿಂಡೀಸ್ ವಿರುದ್ಧ ಗೆಲ್ಲಲೇಬೇಕಾದ ಪಂದ್ಯದಲ್ಲಿ 50 ಬಾಲ್‌ಗಳಲ್ಲಿ ಔಟಾಗದೆ 97 ರನ್‌ಗಳಿಸಿ ಗೆಲುವಿಗೆ ಕಾರಣರಾದರು. ಅಷ್ಟಕ್ಕೆ ನಿಲ್ಲದೆ ಸೆಮಿಫೈನಲ್‌ನಲ್ಲಿ 89 ರನ್ ಗಳಿಸಿ ಫೈನಲ್‌ಗೇರಿಸಿದ ಆಟಗಾರ ಎನಿಸಿದರು.

ಪರಿಣಾಮಕಾರಿ ಬೂಮ್ರಾ



ಪ್ರತಿ ಬಾರಿಯಂತೆ ಈ ಬಾರಿ ಕೂಡ ಜಸ್‌ಪ್ರೀತ್ ಬೂಮ್ರಾ ಗೆಲುವಿನ ರೂವಾರಿ ಎನಿಸಿಕೊಂಡರು. ಹೆಚ್ಚಿನ ವಿಕೆಟ್ ಪಡೆದು ಟೂರ್ನಿಯ ಬೆಸ್ಟ್ ಬೌಲರ್ ಎನಿಸಿಕೊಳ್ಳದಿದ್ದರೂ ಅವರು ತಮ್ಮ ತಾಳ್ಮೆ, ಅನುಭವ ಮತ್ತು ಪರಾಕ್ರಮದೊಂದಿಗೆ ಮತ್ತೊಮ್ಮೆ ಭಾರತ ಪಾಲಿನ ಹೀರೋ ಎನಿಸಿಕೊಂಡಿದ್ದಾರೆ. ಮೊದಲನೇ ಪಂದ್ಯದಿಂದಲೂ ಈ ಪ್ರದರ್ಶನ ಕಂಡುಬಂದಿತು. ಕೂಟದಲ್ಲಿ ಒಟ್ಟು 14 ವಿಕೆಟ್ ಪಡೆದರು.

ಟ್ರೋಫಿ ತಂದು ಕೊಟ್ಟವರು ಯಾರು?

ಇಶಾನ್ ಕಿಶನ್ ಕ್ಲಾಸ್



ಕಳೆದ ವರ್ಷವಷ್ಟೇ ಭಾರತ ತಂಡದಿಂದಲೂ, ಬಿಸಿಸಿಐ ಒಪ್ಪಂದದಿಂದಲೂ ಹೊರಬಿದ್ದಿದ್ದ ಕಿಶನ್ ನ್ಯೂಜಿಲೆಂಡ್ ಸರಣಿಗೆ ಆಯ್ಕೆಯಾಗಿದ್ದರು. ಅಲ್ಲಿ ತಮ್ಮ ಅತ್ಯುತ್ತಮ ಪ್ರದರ್ಶನ ನೀಡಿ ವಿಶ್ವಕಪ್‌ನಲ್ಲಿ ಸ್ಥಾನ ಪಡೆದರು. ಕೂಟದುದ್ದಕ್ಕೂ ಭಾರತದ ಗೆಲುವಿನ ರೂವಾರಿ ಎನಿಸಿಕೊಂಡಿರುವ ಅವರು, ದೊಡ್ಡ ದೊಡ್ಡ ಇನ್ನಿಂಗ್ಸ್ ಕಟ್ಟಿದ್ದಾರೆ. ಪ್ರಮುಖವಾಗಿ ಪಾಕಿಸ್ತಾನ ವಿರುದ್ಧದ ಪಂದ್ಯದಲ್ಲಿ ಗೆಲುವಿನ ಇನ್ನಿಂಗ್ಸ್ ಆಡಿದ್ದರು. ಫೈನಲ್‌ನಲ್ಲೂ ಅಬ್ಬರಿಸಿ ಭಾರತದ ಗೆಲುವಿನ ರೂವಾರಿಯಾಗಿದ್ದಾರೆ.

ಶಿವಂ ದುಬೆಯ ಚಿಕ್ಕ ಇನ್ನಿಂಗ್ಸ್ ದೊಡ್ಡ ಇಂಪ್ಯಾಕ್ಟ್

ಪ್ರತಿ ಪಂದ್ಯದಲ್ಲೂ ಶಿವಂ ದುಬೆ ಸಣ್ಣ ಇನ್ನಿಂಗ್ಸ್‌ಗಳಲ್ಲಿ ದೊಡ್ಡ ಇಂಪ್ಯಾಕ್ಟ್‌ಗಳನ್ನು ನೀಡುತ್ತಾ ಬಂದಿದ್ದಾರೆ. 25-35 ರನ್‌ಗಳ ಪರಿಣಾಮಕಾರಿ ಆಟ ಆಡುವ ಅವರು ದೊಡ್ಡ ದೊಡ್ಡ ಇನ್ನಿಂಗ್ಸ್ ಕೂಡ ಆಡಿದ್ದಾರೆ. ಬೇಕಾದಾಗ ವಿಕೆಟ್‌ಗಳನ್ನೂ ಕಿತ್ತಿ ದೊಡ್ಡ ಆಟಗಾರ ಎನಿಸಿಕೊಂಡಿದ್ದಾರೆ. 7 ಇನ್ನಿಂಗ್ಸ್‌ಗಳಲ್ಲಿ ಬ್ಯಾಟಿಂಗ್ ಮಾಡಿರುವ ದುಬೆ 209 ರನ್ ಬಾರಿಸಿದ್ದಾರೆ. ನೆದರ್ಲೆಂಡ್ಸ್ ಹಾಗೂ ದ.ಆಫ್ರಿಕಾ ವಿರುದ್ಧದ ಸೆಮಿಫೈನಲ್ ಪಂದ್ಯದಲ್ಲಿ ಪ್ರಮುಖ ಇನ್ನಿಂಗ್ಸ್‌ಗಳನ್ನು ಕಟ್ಟಿದ್ದಾರೆ.

ತಿಲಕ್ ವರ್ಮಾ



ಸ್ಟ್ರೈಕ್‌ರೇಟ್‌ನಿಂದಾಗಿ ಆರಂಭದಲ್ಲಿ ಭಾರೀ ಟೀಕೆ ಎದುರಿಸಿದ್ದ ಭಾರತದ ಮಧ್ಯಮ ಕ್ರಮಾಂಕದ ಬ್ಯಾಟರ್ ತಿಲಕ್ ವರ್ಮಾ ಕೂಡ ಚಿಕ್ಕ ಇನ್ನಿಂಗ್ಸ್‌ಗಳ ಮೂಲಕ ದೊಡ್ಡ ಇನ್ನಿಂಗ್ಸ್‌ಗಳನ್ನು ಕಟ್ಟಿದ್ದಾರೆ. ಗೆಲುವಿನಲ್ಲಿ ಮಿಂಚಿದ್ದಾರೆ. ಸೂರ್ಯಕುಮಾರ್ ಯಾದವ್ ಕೂಡ ಇದೇ ರೀತಿ ಪರಿಣಾಮಕಾರಿ ಆಟವಾಡಿದ್ದಾರೆ. ಪಾಕಿಸ್ತಾನ, ನೆದರ್ಲೆಂಡ್ಸ್, ಪ್ರಮುಖವಾಗಿ ವಿಂಡೀಸ್ ಹಾಗೂ ದ.ಆಫ್ರಿಕಾ ವಿರುದ್ಧ ಮಿಂಚಿದ್ದಾರೆ ತಿಲಕ್. ಇದರೊಂದಿಗೆ ಗೆಲುವಿನ ರೂವಾರಿ ಎನಿಸಿದ್ದಾರೆ.

ವಿಶ್ವಕಪ್, ಅದರಲ್ಲೂ ಟಿ20 ವಿಶ್ವಕಪ್‌ನಲ್ಲಿ ಬ್ಯಾಟರ್‌ಗಳದ್ದೇ ದರ್ಬಾರ್ ಇರುತ್ತದೆ. ಪಂದ್ಯಗಳಲ್ಲಿ ಫೀಲ್ಡಿಂಗ್, ಬ್ಯಾಟಿಂಗ್ ಮತ್ತು ಬೌಲಿಂಗ್ ಮೂರು ವಿಭಾಗದ ಆಟಗಾರರೂ ಅಷ್ಟೇ ಮಹತ್ವದ ಪಾತ್ರ ವಹಿಸುತ್ತಾರೆಯಾದರೂ ಮೈದಾನಕ್ಕೆ ಬರುವ ಅಭಿಮಾನಿಗಳು ಬ್ಯಾಟರ್‌ಗಳ ಸಿಕ್ಸರ್‌ಗಳನ್ನು ನೋಡಲೆಂದೆ ಬಂದಿರುತ್ತಾರೆ ಎನ್ನಬಹುದು. ಬ್ಯಾಟಿಗರಿಗೆ ಸಿಗುವ ಸ್ಥಾನ, ಗೌರವ ಮತ್ತು ಬೆಂಬಲದ ಅಳತೆಗೆ ಸರಿಸಾಟಿ ಆಕೃತಿಯೇ ಇಲ್ಲ. ಟಿ20 ಕ್ರಿಕೆಟ್ ಬ್ಯಾಟರ್‌ಗಳ ಆಟವೇ ಹೌದು.! ಹಾಗಿದ್ದರೆ ಈ ಬಾರಿಯ ವಿಶ್ವಕಪ್‌ನ ಬೆಸ್ಟ್ ಬ್ಯಾಟರ್ಸ್ ಯಾರು?

ದಂಡಿಸಿ ಮೆರೆದಾಡಿದ ದಾಂಡಿಗರು


ಸಹಿಬ್‌ಝಾದಾ ಫರ್ಹಾನ್(ಪಾಕಿಸ್ತಾನ)



ಲೀಗ್ ಹಂತದ ಪಂದ್ಯಗಳಲ್ಲೇ ಹೀನಾಯ ಹಿನ್ನಡೆ ಅನುಭವಿಸಿ ಅಳುತ್ತಾ, ಬೀಳುತ್ತಾ ಸೂಪರ್-8ಕ್ಕೆ ಲಗ್ಗೆ ಹಾಕಿದ್ದ ಪಾಕಿಸ್ತಾನ ಕೂಟದಿಂದ ಹೊರಬಿತ್ತು. ಆದರೆ ತಂಡದ ಆರಂಭಿಕ ಬ್ಯಾಟರ್ ಫರ್ಹಾನ್ ದಾಖಲೆಗಳನ್ನು ಮಾಡಿದ್ದಾರೆ. ಎರಡು ದೊಡ್ಡ ಶತಕಗಳನ್ನು ಬಾರಿಸಿದ ಅವರು, ಸದ್ಯ 383 ರನ್ ಬಾರಿಸಿ ಟಿ20 ವಿಶ್ವಕಪ್‌ನಲ್ಲಿ ಬ್ಯಾಟರ್ ಒಬ್ಬ ಗಳಿಸಿದ ಹೆಚ್ಚು ರನ್ ಎಂಬ ದಾಖಲೆ ಹೊಂದಿದ್ದಾರೆ. 7 ಪಂದ್ಯದಲ್ಲಿ ಎರಡು ಶತಕ ಬಾರಿಸಿದ್ದು ಗಮನಾರ್ಹ.

ಇಶಾನ್ ಕಿಶನ್(ಭಾರತ)

ತಮ್ಮ ಆಕ್ರಮಣಕಾರಿ ಆಟದಿಂದಲೇ ವಿಶ್ವದ ದೊಡ್ಡ ದೊಡ್ಡ ಬೌಲರ್‌ಗಳನ್ನು ಬೆದರಿಸಿರುವ ಇಶಾನ್ ಕಿಶನ್ ಈ ಬಾರಿಯ ಬೆಸ್ಟ್ ಬ್ಯಾಟರ್ ಎನಿಸಿಕೊಂಡಿದ್ದಾರೆ. ಪಾಕಿಸ್ತಾನ ವಿರುದ್ಧ ಇವರು ನೀಡಿದ ಕಾಣಿಕೆ ಮರೆಯುವ ಹಾಗಿಲ್ಲ. ತಮ್ಮ ಆಕ್ರಮಣಕಾರಿ ಮನಸ್ಥಿತಿಯಿಂದಲೇ ಅವರು ದೊಡ್ಡ ಬ್ಯಾಟರ್ ಆಗಿದ್ದಾರೆ. ಮುಂದಿನ ದಿನಗಳಲ್ಲಿ ಇನ್ನಷ್ಟು ದಾಖಲೆಗಳನ್ನು ಮಾಡುವ ಮುನ್ಸೂಚನೆ ಕೂಡ ನೀಡಿದ್ದಾರೆ. ಒಟ್ಟು 9 ಇನ್ನಿಂಗ್ಸ್‌ಗಳಲ್ಲಿ ಅವರು 317 ರನ್ ಬಾರಿಸಿದ್ದಾರೆ.



ಟಿಮ್ ಸೈಫರ್ಟ್(ನ್ಯೂಜಿಲೆಂಡ್)

ನ್ಯೂಜಿಲೆಂಡ್ ತಂಡದ ಟಿಮ್ ಸೈಫರ್ಟ್ ಈ ಬಾರಿಯ ಬೆಸ್ಟ್ ಬ್ಯಾಟರ್ ಎನಿಸಿಕೊಂಡಿದ್ದಾರೆ. ಮೊದಲನೇ ಪಂದ್ಯದಿಂದಲೂ ನ್ಯೂಜಿಲೆಂಡ್ ಸ್ಫೋಟಕ ಆರಂಭ ನೀಡುತ್ತಿರುವ ಅವರು, ಸ್ಫೋಟಕ ಬ್ಯಾಟಿಂಗ್‌ಗೆ ಖ್ಯಾತರಾಗಿದ್ದಾರೆ. ಒಟ್ಟು 8 ಇನ್ನಿಂಗ್ಸ್‌ಗಳಲ್ಲಿ ಬ್ಯಾಟ್ ಬೀಸಿರುವ ಅವರು, 326 ರನ್ ಬಾರಿಸಿದ್ದಾರೆ.



ಸಂಜು ಸ್ಯಾಮ್ಸನ್

ಆಡಿರುವ 5 ಪಂದ್ಯಗಳಲ್ಲಿ ಭರ್ಜರಿ ಬ್ಯಾಟಿಂಗ್‌ನೊಂದಿಗೆ ದಾಖಲೆ ಮಾಡಿರುವ ಸಂಜು ಸ್ಯಾಮ್ಸನ್ ವಿಶ್ವಕಪ್‌ನ ಟಾಪ್ ಬ್ಯಾಟರ್ ಅನಿಸಿಕೊಂಡರು. ಕಳೆದ ಮೂರು ಪಂದ್ಯಗಳಲ್ಲಿ 97★, 89, 89 ರನ್ ಗಳಿಸಿರುವ ಅವರು, 321 ರನ್ ಗಳಿಸಿ ದಾಖಲೆ ಮಾಡಿದ್ದಾರೆ. ಟಿಮ್ ಸೀಫರ್ಟ್ ಕೂಡ 321 ರನ್ ಗಳಿಸಿ ಎರಡನೇ ಸ್ಥಾನ ದಲ್ಲಿದ್ದಾರೆ.



ಟಾಪ್ 5 ವೈಯಕ್ತಿಕ ಇನ್ನಿಂಗ್ಸ್

ಆಟಗಾರ	ತಂಡ	ಎದುರಾಳಿ	ಸ್ಕೋರ್
ಯುವರಾಜ್ ಸಾಮ್ರಾ	ಕೆನಡಾ	ನ್ಯೂಜಿಲೆಂಡ್	110
ನಿಸ್ಸಂಕಾ	ಶ್ರೀಲಂಕಾ	ಆಸ್ಟ್ರೇಲಿಯಾ	100★
ಫರ್ಹಾನ್	ಪಾಕಿಸ್ತಾನ	ನಮೀಬಿಯಾ	100★
ಫಿನ್ ಆಲೆನ್	ಕಿವೀಸ್	ದ.ಆಫ್ರಿಕಾ	100★
ಸಂಜು	ಭಾರತ	ಇಂಗ್ಲೆಂಡ್	97★

ಚೋಕರ್ಸ್ ಆಗೇ ಉಳಿದ ನ್ಯೂಜಿಲೆಂಡ್

ಟೆಸ್ಟ್ ಚಾಂಪಿಯನ್‌ಶಿಪ್ ಹಾಗೂ ಒಂದು ಚಾಂಪಿಯನ್ಸ್ ಟ್ರೋಫಿ ಗೆದ್ದರೂ ನ್ಯೂಜಿಲೆಂಡ್ ವಿಶ್ವಕಪ್‌ನಲ್ಲಿ ಚೋಕರ್ಸ್ ಪಟ್ಟ ಕಟ್ಟಿಕೊಂಡಿದೆ. ಅದು ಕಳಚಲಾಗದೆ ಮತ್ತೊಂದು ಬಾರಿ ಸೋತು ಹೊರ ನಡೆದಿದೆ. 2019ರ ಏಕದಿನ ವಿಶ್ವಕಪ್ ಫೈನಲ್‌ಗೇರಿದ್ದರೂ ತಂಡಕ್ಕೆ ದುರಾದೃಷ್ಟವಶಾತ್ ಸೋಲು ಎದುರಾಗಿತ್ತು. 2025ರಲ್ಲಿ ಫೈನಲ್‌ಗೇರಿದ್ದ ತಂಡ ಭಾರತದೊಂದಿಗೆ ಸೋಲು ಕಂಡಿತ್ತು. ಈಗ ಮೂರನೇ ಬಾರಿ ಫೈನಲ್‌ನಲ್ಲಿ ಸೋತಿದೆ. ಚೋಕರ್ಸ್ ಎಂಬ ಪಟ್ಟ ತನ್ನಲ್ಲೇ ಉಳಿಸಿಕೊಂಡಿದೆ.

ಬ್ಲೆಸ್ಸಿಂಗ್ ಮುಝರ್‌ಬಾನಿ(ಜಿಂಬಾಬ್ವೆ)



ಬ್ಯಾಟರ್‌ಗಳ ಪಾಲಿಗೆ ದುಸ್ವಪ್ನವಾಗಿ ಕಾಡಿರುವ ಜಿಂಬಾಬ್ವೆ ತಂಡದ ವೇಗಿ ಬ್ಲೆಸ್ಸಿಂಗ್ ಈ ಬಾರಿಗೆ ಬೆಸ್ಟ್ ಬೌಲರ್ ಎನ್ನುವುದರಲ್ಲಿ ಸಂಶಯವೇ ಇಲ್ಲ. ಮೊದಲನೇ ಪಂದ್ಯದಿಂದಲೂ ಅವರು ಮ್ಯಾಚ್ ವಿನ್ನರ್ ಅನ್ನಿಸಿಕೊಂಡಿದ್ದಾರೆ. ದೊಡ್ಡ ದೊಡ್ಡ ವಿಕೆಟ್‌ಗಳನ್ನು ಪಡೆದುಕೊಂಡಿದ್ದಾರೆ. ನಿರ್ಣಾಯಕ ಪ್ರದರ್ಶನ ನೀಡಿದ್ದಾರೆ. 6 ಪಂದ್ಯಗಳನ್ನಾಡಿರುವ ಅವರು, 23.5 ಓವರ್ ಬೌಲಿಂಗ್ ಮಾಡಿ 188 ರನ್ ನೀಡಿದ್ದು, 7.89 ಎಕನಾಮಿಯೊಂದಿಗೆ 13 ವಿಕೆಟ್ ಕಿತ್ತಿದ್ದಾರೆ.



ಶ್ಯಾಡ್ಲಿ ವ್ಯಾನ್ ಶಾಲ್ಕವಿಕ್ (ಅಮೆರಿಕ)

ಬೌಲಿಂಗ್ ಮಾಡಿ ದೊಡ್ಡ ಪರಿಣಾಮ ಮೂಡಿಸಿದ ಮೊದಲನೇ ಆಟಗಾರ ಅಮೆರಿಕದ ಶ್ಯಾಡ್ಲಿ.! ಭಾರತದೊಂದಿಗೆ ನಡೆದಿದ್ದ ಮೊದಲ ಪಂದ್ಯದಿಂದಲೂ ಅದೇ ಬೆಸ್ಟ್ ಪ್ರದರ್ಶನ ನೀಡಿದ್ದಾರೆ. ಆಡಿರುವ ನಾಲ್ಕೇ ಪಂದ್ಯಗಳಲ್ಲಿ ತೆಗೆದಿದ್ದು ಬರೋಬ್ಬರಿ 13 ವಿಕೆಟ್.! ಇದೇ ಆವೇಗ ಮತ್ತು ಪರಿಣಾಮ ಅವರನ್ನು ಈ ಬಾರಿ ನಂಬರ್ 1 ಬೌಲರ್ ಅನ್ನಾಗಿ ಮಾಡಿದೆ. 14.5 ಓವರ್ ಮಾತ್ರ ಮಾಡಿರುವ ಅವರು, 101 ರನ್ ನೀಡಿ 6.81 ಎಕನಾಮಿ ಹೊಂದಿದ್ದು ಇನ್ನೂ ವಿಶೇಷ.

ಬೆವರಿಳಿಸಿದ ಬೌಲರ್ಸ್



ಬ್ಯಾಟರ್‌ಗಳು ಪಂದ್ಯ ಗೆಲ್ಲಿಸಿದರೆ ಬೌಲರ್‌ಗಳು ಕೂಟಗಳನ್ನೇ ಗೆಲ್ಲಿಸುತ್ತಾರೆ ಎಂಬ ಮಾತಿದೆ. ಪ್ರತಿ ಪಂದ್ಯದಲ್ಲಿ ಪಂದ್ಯದ ವೇಗ ಮತ್ತು ಪಂದ್ಯದ ಫಲಿತಾಂಶ ಅವಲಂಬನೆ ಬೌಲರ್‌ಗಳ ಮೇಲಿರುತ್ತೆ. ಬೌಲರ್‌ಗಳು ಸಾಥ್ ನೀಡಲಿಲ್ಲವೆಂದರೆ ಬ್ಯಾಟರ್‌ಗಳು ಬಾರಿಸಿದ ದೊಡ್ಡ ದೊಡ್ಡ ಸ್ಕೋರ್‌ಗಳು ಕೂಡ ವ್ಯರ್ಥವಾಗಿಬಿಡುತ್ತದೆ. ಬೌಲರ್‌ಗಳು ಮಾಡುವ ಒಂದೊಂದು ಓವರ್ ಪಂದ್ಯದ ತಿರುವನ್ನೇ ಬದಲಾಯಿಸುತ್ತದೆ. ಪಂದ್ಯದ ಫಲಿತಾಂಶಗಳನ್ನೇ ಬದಲಾಯಿಸುತ್ತದೆ. ಟೂರ್ನಿಯ ಕುತೂಹಲವನ್ನೇ ಬದಲಾಯಿಸುತ್ತದೆ. ಹಾಗಿದ್ದರೆ ಈ ಬಾರಿಯ ಬೆಸ್ಟ್ ಬೌಲರ್ಸ್ ಯಾರು?



ಲುಂಗಿ ಎನ್‌ಗಿಡಿ(ಆಫ್ರಿಕಾ)

ಸ್ಲೋವರ್ ಮೂಲಕ ಈ ಬಾರಿ ಗಮನ ಸೆಳೆದ ಬೌಲರ್ ಎಂದರೆ ಅವರು ಲುಂಗಿ ಎನ್‌ಗಿಡಿ. ಭಾರತ ಸೇರಿದಂತೆ ಪ್ರಮುಖ ತಂಡಗಳೆದುರು ಕರಾರುವಾಕ್ ಬೌಲಿಂಗ್‌ನೊಂದಿಗೆ ಬ್ಯಾಟರ್‌ಗಳ ಹೆಡೆಮುರಿ ಕಟ್ಟಿದ್ದಾರೆ. ದೊಡ್ಡ ದೊಡ್ಡ ವಿಕೆಟ್‌ಗಳನ್ನು ತಂದುಕೊಟ್ಟಿದ್ದಾರೆ. ಪಂದ್ಯದ ಗತಿಯನ್ನು, ಸ್ಥಿತಿಯನ್ನು ಬದಲಿಸಿದ್ದಾರೆ. ಒಟ್ಟು 26 ಓವರ್‌ಗಳನ್ನು ಮಾಡಿರುವ ಅವರು, 187 ರನ್ ನೀಡಿದ್ದು 12 ವಿಕೆಟ್ ಕಿತ್ತಿದ್ದಾರೆ.



ಜಸ್‌ಪ್ರೀತ್ ಬೂಮ್ರಾ

ಮೊದಲ ಪಂದ್ಯದಿಂದಲೂ ನಿರ್ಣಾಯಕ ಆಟವಾಡುತ್ತಿರುವ ಜಸ್‌ಪ್ರೀತ್ ಬೂಮ್ರಾ ಅವರು ಈ ಬಾರಿಯ ಬೆಸ್ಟ್ ಬೌಲರ್ ಎನಿಸಿದರು. ಭಾನುವಾರದ ಪಂದ್ಯಕ್ಕೂ ಮುನ್ನ ಬೂಮ್ರಾ 10 ವಿಕೆಟ್ ಮಾತ್ರ ಪಡೆದಿದ್ದರು. ಫೈನಲ್ ಪಂದ್ಯದಲ್ಲಿ 4 ವಿಕೆಟ್ ಕಿತ್ತ ಅವರು 14 ವಿಕೆಟ್ ಕಿತ್ತು ಮೊದಲ ಸ್ಥಾನಕ್ಕೇರಿದರು.



ವರುಣ್‌ಚಕ್ರವರ್ತಿ (ಭಾರತ)

ಭಾರತ ಪರ ಅಲ್ಪ ದುಬಾರಿಯಾದರೂ ವರುಣ್ ತಮ್ಮ ಮಾಸ್ಟರ್ ಕ್ಲಾಸ್ ಆಟ ಮುಂದುವರಿಸಿದ್ದಾರೆ. ದೊಡ್ಡ ದೊಡ್ಡ ಇನ್ನಿಂಗ್ಸ್‌ಗಳ ಮೂಲಕ ಈ ಬಾರಿಯ ಗೆಲುವಿನ ರೂವಾರಿಯೂ, ಬೆಸ್ಟ್ ಬೌಲರ್ ಆಗಿಯೂ ಹೊರ ಹೊಮ್ಮಿದ್ದಾರೆ. ತಮ್ಮ ಸ್ಪಿನ್ ಮೂಲಕ ವಿನ್ ನೀಡುವ ಅವರು ಒಟ್ಟು 14 ವಿಕೆಟ್ ಪಡೆದರು.

ನೆನಪಿನಲ್ಲಿ ಉಳಿಯುವ ಪಂದ್ಯ

ಇಂಗ್ಲೆಂಡ್-ನೇಪಾಳ ಪಂದ್ಯ


ವಿಶ್ವಕಪ್‌ನ 5ನೇ ಪಂದ್ಯದಲ್ಲಿ ಇಂಗ್ಲೆಂಡ್‌ಗೆ ಠಕ್ಕರ್ ನೀಡಿದ ನೇಪಾಳ ನೆನಪಿನಲ್ಲೇ ಉಳಿಯುವ ಪಂದ್ಯವಾಡಿತು. ಲೀಗ್ ಹಂತದಲ್ಲಿ 185 ರನ್ ಗುರಿ ಬೆನ್ನತ್ತುವಾಗ 180 ರನ್‌ಗಳಿ ಕೇವಲ ನಾಲ್ಕು ರನ್‌ನಿಂದ ಸೋತಿತ್ತು. ಕ್ರಿಕೆಟ್ ಕಂಡುಹಿಡಿದ ತಂಡವನ್ನೇ ಸೋಲಿಸುವ ಹಂತಕ್ಕೆ ಬಂದಿದ್ದ ನೇಪಾಳ ಕೊನೆಯ ಬಾಲ್‌ನಲ್ಲಿ ಸೋತಿತು. ತಂಡದ ಲೋಕೇಶ್ 39 ರನ್ ಗಳಿಸಿ ಗಮನ ಸೆಳೆದಿದ್ದರು.

2 ಸೂಪರ್ ಓವರ್

ದ.ಆಫ್ರಿಕಾ ಹಾಗೂ ಅಫ್ಘಾನಿಸ್ತಾನ ಎದುರಾಗಿದ್ದವು. ಮೊದಲು ಬ್ಯಾಟಿಂಗ್ ಮಾಡಿದ್ದ ಆಫ್ರಿಕಾ 187 ರನ್‌ಗಳಿಸಿತ್ತು. ಗುರ್ಬಾಜ್ ಅವರ ಬ್ಯಾಟಿಂಗ್‌ನೊಂದಿಗೆ ಆಫ್ಘನ್ ಕೂಡ ಅಷ್ಟೇ ರನ್ ಬಾರಿಸಿತು. ಪರಿಣಾಮ ಸೂಪರ್ ಓವರ್ ಮೊರೆ ಹೋಗಲಾಯಿತು. ಅಲ್ಲಿಯೂ ಟೈ ಆಯಿತು. ಮತ್ತೊಂದು ಸೂಪರ್ ಓವರ್ ಆಡಿಸಲಾಯಿತು. ಅದರಲ್ಲಿ ದ.ಆಫ್ರಿಕಾ 4 ರನ್‌ಗಳ ಗೆಲುವು ಸಾಧಿಸಿತು.

ಪದಬಂಧ

ರಾಜಾ ಸಂಗಮೇಶ ಹಿರೇಮಠ



5918

ಎಡದಿಂದ ಬಲಕ್ಕೆ
1.ಬಯಸು-ಅಪೇಕ್ಷೆಪಡು (4)
3.ಜನ್ನ ನಡುವೆ ಇರುವ ದೊರೆಗಳ ಗುಂಪು (4)
5.ಈತ ಹರೆಯದವನು (3)
6.ಮಾರಿಯ ನಡುವೆ ಇಂಚಿನಿಂದ ಕೂಡಿದ್ದು ತಿರುಗಿದೆ (3)
8.ಅಚ್ಚ ಬಿಳಿಯ ಬಣ್ಣ ನೋಡಿ ಉಂಟಾದ ಬೆರಗು (3)
10.ಎಚ್ಚರಿಕೆಯಿಲ್ಲಿ ತಿರುಗಿದೆ (2)
12.ಪ್ರಮಾಣ ಎಂಬರ್ಥದ ಮರ್ಯಾದೆ (2)
14. ಲಕ್ಷ್ಯವಹಿಸು (3)
15.ಕೆಳಮುಖವಾಗಿ ಹೋಗುವುದು-ದುರ್ಗತಿ (4)
16.ಮರ-ಕಲ್ಲನ್ನು ತೂತು ಕೊರೆವ ಹುಳು (4)

ಮೇಲಿನಿಂದ ಕೆಳಕ್ಕೆ
1.ಡಾ.ರಾಜ್-ಬಿ.ಸರೋಜಾದೇವಿ ಅಭಿನಯದ ಚಿತ್ರ (5)
2.ಉತ್ತಮವಾಗಿ ಕಾಪಾಡಿದ್ದು (4)
3.ಭಾರತದ ಪವಿತ್ರ ಮಹಾಕಾವ್ಯಗಳಲ್ಲೊಂದು (4)
4.ಮೇರುಪರ್ವತ-ಚಿನ್ನದ ಬೆಟ್ಟವಿದು (5)
7.ಹೂವು ಸೇರಿಸಿ ಕಟ್ಟಿದ ಹಾರ (3)
8.ಇಂದ್ರನ ಅಂಶದಿಂದ ಜನಿಸಿದ ಪಾಂಡವ (4)
9.ಪರ್ವತರಾಜನ ಮಗಳು ತಲೆಕೆಳಗಾಗಿದ್ದಾಳೆ (3)
11. ಎಲ್ಲಮ್ಮ ದೇವತೆಯ ಭಕ್ತೆ (3)
12. ಈತ ಮನುವಿನ ಸಂತತಿಯವನು (3)
13. ರತ್ನಖಚಿತವಾದ ಶಿರೋಭೂಷಣ (3)

5917 ಉತ್ತರ

ಎಡದಿಂದ ಬಲಕ್ಕೆ:
1.ವಿವರಿಸು 3.ಉಪನ್ಯಾಸ
5.ಪ್ರತಾಪ 6.ಪರಾಜಿತ
8.ಹನುಮಂತ
10.ಅತಿರೇಕ 12.ಸುಸಜ್ಜಿತ
14.ಪಗಾರಾ 15.ಜರಿಪೇಟ
16.ಪರಿಪೂರ್ಣ

ಮೇಲಿನಿಂದ ಕೆಳಕ್ಕೆ:
1.ವಿಶ್ವರೂಪ 2.ಸುಪ್ರಭಾತ
3.ಉಪಗ್ರಹ
4.ಸಹಮತ 7.ರಾಮಸತಿ
9.ಮಂದಹಾಸ 10.ಅಗ್ರಜ
11.ಕಪಟ 12.ಪರಾತ
13.ಸುವರ್ಣ

ಕಿರುಸುದ್ದಿ

ಚಾರ್ಮಾಡಿ ಗ್ರಾಮದಲ್ಲಿ ಕಾಡಾನೆಗಳ ಹಿಂಡು ದಾಳಿ

ಬೆಳ್ತಂಗಡಿ: ಚಾರ್ಮಾಡಿ ಗ್ರಾಮದ ಕೋಡಿಮನೆ ಪರಿಸರದಲ್ಲಿ ಕಾಡಾನೆಗಳ ಹಿಂಡು ತೋಟಗಳಿಗೆ ದಾಳಿ ಮಾಡಿ ಕೃಷಿಹಾನಿ ಉಂಟು ಮಾಡಿದ ಘಟನೆ ಶನಿವಾರ ತಡರಾತ್ರಿ ನಡೆದಿದೆ. ಇಲ್ಲಿನ ಆಜೇಶ್, ವೀಣಾ ಎ.ಎಸ್.,ಅವ್ವಮ್ಮ ಮೊದಲಾದವರ ಕೃಷಿ ತೋಟಗಳಿಗೆ ಲಗ್ಗೆ ಇಟ್ಟ ಕಾಡಾನೆಗಳು 20ಕ್ಕಿಂತ ಅಧಿಕ ಅಡಿಕೆ ಮರ ಹಾಗೂ ಎರಡು ತೆಂಗಿನ ಮರ ಅಲ್ಲದೆ ಇತರ ಮರಗಳಿಗೂ ಹಾನಿ ನಡೆಸಿವೆ. ಆನೆಗಳು ಸಂಚಾರ ನಡೆಸಿದ ತೋಟಗಳಲ್ಲಿ ಅಡಿಕೆ ಗಿಡಗಳಿಗೂ ಹಾನಿ ಉಂಟಾಗಿದೆ. ಸುಬ್ರಹ್ಮಣ್ಯ ಎಂಬವರ ಮನೆ ಅಂಗಳಕ್ಕೆ ಕಾಡಾನೆಗಳ ಹಿಂಡು ಬಂದಿದ್ದು ಒಂದು ಮರಿಯಾನೆ ಸಹಿತ ನಾಲ್ಕು ಆನೆಗಳು ಮನೆ ಪ್ರದೇಶದಲ್ಲಿ ಸುತ್ತಾಡಿದ ದೃಶ್ಯಾವಳಿ ಸಿಸಿಟಿವಿಯಲ್ಲಿ ಸೆರೆ ಯಾಗಿದೆ. ತೋಟಗಳಲ್ಲಿ ಮಾತ್ರ ಸಂಚಾರ ನಡೆಸುತ್ತಿದ್ದ ಕಾಡಾನೆಗಳು ಇದೀಗ ಮನೆಗಳ ತನಕ ಬರುತ್ತಿರುವುದು ಹೆಚ್ಚಿನ ಆತಂಕಕ್ಕೆ ಕಾರಣವಾಗಿದೆ.

ಎಂಡಿಎಂಎ ಸಹಿತ ಯುವಕ ಸೆರೆ

ಬದಿಯಡ್ಕ: 3.01 ಗ್ರಾಂ ಎಂಡಿಎಂಎ ಹಾಗೂ 16,700 ರೂ. ಸಹಿತ ಯುವಕನನ್ನು ಬದಿಯಡ್ಕ ಪೊಲೀಸರು ಬಂಧಿಸಿದ್ದಾರೆ. ಚೆಂಗಳ ರಹ್ಮತ್ ನಗರದ ಮನಿಯಡ್ಕಂ ನಿವಾಸಿ ಸಿ.ಝೆಡ್.ನುಹ್‌ಮ (25) ಎಂಬಾತನನ್ನು ಬದಿಯಡ್ಕ ಪೊಲೀಸ್ ಇನ್‌ಸ್ಪೆಕ್ಟರ್ ಅನೂಪ್ ನೇತೃತ್ವದ ತಂಡ ಕನ್ನೆಪ್ಪಾಡಿಯಿಂದ ಬಂಧಿಸಿದೆ. ಈತ ಪೊಲೀಸರು ಪಟ್ರೋಲಿಂಗ್ ನಡೆಸುತ್ತಿದ್ದ ವೇಳೆ ಪೊಲೀಸರನ್ನು ಕಂಡು ಓಡಿ ಪರಾರಿಯಾಗಲು ಯತ್ನಿಸಿದನು. ಇದರಿಂದ ಸಂಶಯಗೊಂಡ ಪೊಲೀಸರು ಆತನನ್ನು ಬೆನ್ನಟ್ಟಿ ಸೆರೆ ಹಿಡಿದು ತಪಾಸಣೆ ನಡೆಸಿದಾಗ ಎಂಡಿಎಂಎ ಹಾಗೂ ಮಾದಕವಸ್ತು ಮಾರಾಟಗೈದು ಲಭಿಸಿದ ಹಣ ಪತ್ತೆಯಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಬೈಕ್‌ಗೆ ಕಾರು ಡಿಕ್ಕಿ: ಸವಾರ ಸಾವು

ಉಪ್ಪಿನಂಗಡಿ: ಇಲ್ಲಿಗೆ ಸಮೀಪದ 34 ನೇ ನೆಕ್ಕಿಲಾಡಿ ಬೊಳ್ಳಾರ್ ಎಂಬಲ್ಲಿ ಬೈಕೊಂದಕ್ಕೆ ಕಾರು ಡಿಕ್ಕಿ ಹೊಡೆದು ಬೈಕ್ ಸವಾರ ಪದ್ಮುಂಜ ಸಹಕಾರಿ ಸಂಘದ ಹಿರಿಯ ಗುಮಾಸ್ತ ಚಿದಾನಂದ ಗೌಡ (56) ಎಂಬವರು ಸಾವನ್ನಪ್ಪಿದ ಘಟನೆ ಭಾನುವಾರ ಸಂಭವಿಸಿದೆ. ಬಂದಾರು ಗ್ರಾಮದ ಕುರಾಯ ನಿವಾಸಿಯಾಗಿರುವ ಚಿದಾನಂದ ಗೌಡರು ಕಾರ್ಯನಿಮಿತ್ತ ಬೈಕ್‌ನಲ್ಲಿ ಸಂಚರಿಸುತ್ತಿದ್ದಾಗ ಬೊಳ್ಳಾರ್ ಎಂಬಲ್ಲಿ ಕಾರೊಂದು ಡಿಕ್ಕಿ ಹೊಡೆಯಿತು. ಪರಿಣಾಮ ಗಂಭೀರವಾಗಿ ಗಾಯಗೊಂಡ ಅವರನ್ನು ಮಂಗಳೂರಿನ ಖಾಸಗಿ ಆಸ್ಪತ್ರೆಗೆ ದಾಖಲಿಸಲಾಯಿತಾದರೂ, ಅಲ್ಲಿ ಅವರು ಚಿಕಿತ್ಸೆಗೆ ಸ್ಪಂದಿಸದೆ ಸಾವನ್ನಪ್ಪಿದ್ದಾರೆ.



ಉತ್ತಮ ಜನಸ್ನೇಹಿ, ಪರೋಪಕಾರಿ ಗುಣದೊಂದಿಗೆ ಜನಾನುರಾಗಿ ವ್ಯಕ್ತಿತ್ವದ ಮೃತರು ತಾಯಿ, ಪತ್ನಿ, ಪುತ್ರಿ, ಪುತ್ರರನ್ನು ಅಗಲಿದ್ದಾರೆ. ಪುತ್ತೂರು ಸಂಚಾರಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲುಗೊಂಡಿದೆ.

ಕೆರೆಗೆ ಬಿದ್ದು ಮಹಿಳೆ ಸಾವು

ಗಂಗೊಳ್ಳಿ: ದೇವರ ಪೂಜೆ ಹಾಗೂ ಮಧ್ಯಾಹ್ನದ ಊಟಕ್ಕೆ ಬಾಳೆ ಎಲೆ ತರಲು ಅಡಿಕೆ ತೋಟಕ್ಕೆ ಹೋಗಿದ್ದ ತ್ರಾಸಿ ಗ್ರಾಮದ ಶೆಟ್ರಹಿತ್ಲು ನಿವಾಸಿ ಸೀತಾ ಮೊಗವೀರ (67) ಎಂಬವರು ತೋಟದಲ್ಲಿರುವ ಸಣ್ಣ ಕೆರೆಗೆ ಆಯತಪ್ಪಿ ಕಾಲು ಜಾರಿ ಕೆರೆಯ ನೀರಿಗೆ ಬಿದ್ದು ಮುಳುಗಿ ಮೃತಪಟ್ಟಿದ್ದಾರೆ.ಮನೆಯಲ್ಲಿ ಯಾರೊಂದಿಗೂ ಮಾತನಾಡದೇ, ಊಟ –ತಿಂಡಿಯನ್ನು ಸರಿಯಾಗಿ ಮಾಡದೇ ಮಾನಸಿಕ ತೊಳಲಾಟದಲ್ಲಿದ್ದ ಸೀತಾ ಮೊಗವೀರ ದೇವರ ಪೂಜೆ ಹಾಗೂ ಮದ್ಯಾಹ್ನದ ಊಟಕ್ಕೆ ಬಾಳೆ ಎಲೆ ತರಲು ಅಡಿಕೆ ತೋಟಕ್ಕೆ ಹೋಗಿದ್ದರು. ಗಂಗೊಳ್ಳಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಮನೆಯಿಂದ 14.67 ಲಕ್ಷ ರೂ. ಮೌಲ್ಯದ ಸೊತ್ತು ಕಳವು

ಉಡುಪಿ: ಬಾರಕೂರಿನ ಹೇರಾಡಿ ನಿವಾಸಿ ಮಂಜುನಾಥ ರಾವ್ ಅವರ ಮನೆಯಲ್ಲಿ ಕಳ್ಳರು ಬರೋಬ್ಬರಿ 14,67,000 ರೂ. ಮೌಲ್ಯದ ಚಿನ್ನಾಭರಣ ಹಾಗೂ ನಗದನ್ನು ಕಳವು ಮಾಡಿದ್ದಾರೆ. ಮಾ. 6ರಂದು ರಾತ್ರಿ ಮಂಜುನಾಥ್ ದಂಪತಿ ಮನೆಗೆ ಬೀಗ ಹಾಕಿ ನಾಗಮಂಡಲ ಕಾರ್ಯಕ್ರಮಕ್ಕೆ ಹೋಗಿದ್ದಾಗ ಈ ಘಟನೆ ನಡೆದಿದೆ. ಕಳ್ಳರು ಮನೆಯ ಮುಂಭಾಗದ ಬಾಗಿಲು ಒಡೆದು ಒಳನುಗ್ಗಿ, ಬೆಡ್‌ರೂಮ್ ಕಪಾಟಿನಲ್ಲಿದ್ದ 92 ಗ್ರಾಂ ಚಿನ್ನಾಭರಣ, ಬೆಳ್ಳಿಯ ಸಾಮಗ್ರಿ ಹಾಗೂ 49,000 ರೂ. ನಗದನ್ನು ಲೂಟಿ ಮಾಡಿದ್ದಾರೆ. ಬ್ರಹ್ಮಾವರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಕೋರ್ಟ್‌ನಲ್ಲಿ ಸಾಕ್ಷಿ ಹೇಳಿದ್ದಕ್ಕೆ ದಂಪತಿಯ ಕೊಲೆ ಯತ್ನ

ಉಡುಪಿ: ತನ್ನ ವಿರುದ್ಧ ನ್ಯಾಯಾಲಯದಲ್ಲಿ ಸಾಕ್ಷಿ ನುಡಿದ ದ್ವೇಷಕ್ಕಾಗಿ ದಂಪತಿಯನ್ನು ಅಡ್ಡಗಟ್ಟಿ ತಲ್ವಾರ್‌ನಿಂದ ಕೊಲೆ ಮಾಡಲು ಯತ್ನಿಸಿದ ಘಟನೆ ನೀರೆ ಗ್ರಾಮದಲ್ಲಿ ನಡೆದಿದೆ. ನೀರೆ ಗ್ರಾಮದ ಫಾಸ್ಟ್ ಫುಡ್ ಅಂಗಡಿ ಮಾಲೀಕಿ ಪುಷ್ಪಲತಾ ಮತ್ತು ಅವರ ಪತಿ ರಾಜೇಂದ್ರ ಎಂಬವರ ಮೇಲೆ ಹಳೆ ದ್ವೇಷದ ಹಿನ್ನೆಲೆಯಲ್ಲಿ ಗಣೇಶ ಪೂಜಾರಿ ಎಂಬಾತ ದಾಳಿ ಮಾಡಿದ್ದಾನೆ. ದಾಳಿಯಿಂದ ದಂಪತಿ ಅಪಾಯದಿಂದ ಪಾರಾಗಿದ್ದು, ಕಾರ್ಕಳ ನಗರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಶಿಕ್ಷಣ ಕಾಶಿ ಮಂಗಳಗಂಗೋತ್ರಿ ಕ್ಯಾಂಪಸ್‌ನಲ್ಲಿ ಬಾನಾಡಿಗಳ ಅರಸಿ ಹೊರಟ ವಿದ್ಯಾರ್ಥಿಗಳು

ವಿವಿಯಲ್ಲಿ 102 ಪ್ರಭೇದಗಳ ಪಕ್ಷಿಗಳು!

ಮಂಗಳೂರು: ಕೊಣಾಜೆಯ ಮಂಗಳಗಂಗೋತ್ರಿಯ ಮಂಗಳೂರು ವಿಶ್ವವಿದ್ಯಾನಿಲಯದ ಕ್ಯಾಂಪಸ್ಸಿನಲ್ಲಿ ಪಕ್ಷಿಗಳ ಹುಡುಕಾಟ ತಂಡಕ್ಕೆ ಬರೋಬ್ಬರಿ 102 ಪಕ್ಷಿ ಪ್ರಭೇದಗಳು ಕಾಣಸಿಕ್ಕಿವೆ.


ಪಕ್ಷಿಗಳ ಹುಡುಕಾಟದ ವೇಳೆ ಈ ಹಿಂದೆ ಕಾಣ ಸಿಗುತ್ತಿದ್ದ ಹಲವು ಪಕ್ಷಿಗಳು ಕ್ಯಾಂಪಸ್‌ನಿಂದ ದೂರವಾದ ಅಂಶವೂ ಬೆಳಕಿಗೆ ಬಂದಿವೆ. ಮಂಗಳೂರು ವಿಶ್ವವಿದ್ಯಾನಿಲಯದ ಪ್ರಾಣಿ ವಿಜ್ಞಾನ ವಿಭಾಗದ ಮುಖ್ಯಸ್ಥ ಪ್ರೊ.ಎಂ.ಎಸ್. ಮುಸ್ತಾಕ್, ಸಂಯೋಜಕ ಪ್ರೊ.ದೀಪಕ್ ನಾಯಕ್ ನೇತೃತ್ವದಲ್ಲಿ 20 ಮಂದಿಯ ತಂಡ ಮಂಗಳೂರು ವಿವಿ ಕ್ಯಾಂಪಸ್ ಸುತ್ತಿ ಪಕ್ಷಿಗಳ ಅಧ್ಯಯನ ನಡೆಸಿದೆ. ಕ್ಯಾಮೆರಾ ಹಿಡಿದು ಬಿರು ಬಿಸಿಲ ನಡುವೆಯೂ ಪಕ್ಷಿಗಳ ಹುಡುಕಾಟ ನಡೆಸಿದ ತಂಡಕ್ಕೆ ಹಲವು ಪಕ್ಷಿ ಪ್ರಬೇಧಗಳು ಕಂಡುಬಂದಿವೆ. ಕ್ಯಾಮೆರಾ ಕಣ್ಣಿಗೆ ಸಿಕ್ಕ ಹಲವು ಪಕ್ಷಿಗಳು ಅಪರೂಪದ್ದೂ ಆಗಿವೆ.

ಕ್ಯಾಮೆರಾ ಕಣ್ಣಿಗೆ ಸಿಕ್ಕ ಪಕ್ಷಿಗಳು

ನಾಲ್ಕು ದಿನಗಳ ಕಾಲ ಪಕ್ಷಿಗಳಿಗಾಗಿ ಕ್ಯಾಂಪಸ್ ಸುತ್ತಿದ ವಿದ್ಯಾರ್ಥಿಗಳ ತಂಡಕ್ಕೆ ಹಲವು ಪಕ್ಷಿಗಳು ಕಾಣಸಿಕ್ಕಿವೆ. ಅವುಗಳಲ್ಲಿ ಮುಖ್ಯವಾದವುಗಳೆಂದರೆ ಇಂಡಿಯನ್ ಗೋಲ್ಡನ್ ಒರಿಯೋಲ್, ಆಶಿ ಡ್ರೊಂಗೊ, ಕಪ್ಪು ತಲೆಯ ಐಬಿಸ್, ಇಂಡಿಯನ್ ಪಿಟ್ಟಾ, ಪರ್ಪಲ್ ಸನ್ ಬರ್ಡ್, ಏಷಿಯನ್ ಗ್ರೀನ್ ಬಿ ಈಟರ್, ಕೆಂಪು ಮೀಸೆಯ ಬುಲ್‌ಬುಲ್,ರಾತ್ರಿ ಕಂಡು ಬರುವ ಶ್ರೀಲಂಕನ್ ಫ್ರಾಗ್‌ಮೌತ್, ಗೋಲ್ಡನ್ ಒರಿಯೋಲ್, ಕಪ್ಪು ಡ್ರೊಂಗೊ, ಬ್ರೌನ್ ವ್ಯಾಗ್ ಟೇಲ್‌ನಂತಹ ವಲಸೆ ಹಕ್ಕಿಗಳು, ಪಶ್ಚಿಮ ಘಟ್ಟದಲ್ಲಿ ಕಾಣಸಿಗುವ ಫ್ಲೇಮ್ ಥ್ರೊಟೆಡ್ ಬುಲ್‌ಬುಲ್ ಮುಂತಾದ ಪ್ರಭೇದಗಳ ಪಕ್ಷಿಗಳು ಪತ್ತೆಯಾಗಿವೆ.











ದೂರವಾಗಿವೆ ಮೈನಾ ಹಕ್ಕಿಗಳು

ಪಕ್ಷಿಗಳ ಹುಡುಕಾಟಕ್ಕಿಳಿದ ತಂಡಕ್ಕೆ ಹಲವು ಪಕ್ಷಿಗಳು ಕ್ಯಾಂಪಸ್‌ನಿಂದ ದೂರವಾಗಿರುವುದೂ ಗಮನಕ್ಕೆ ಬಂದಿದೆ. ಇದರಲ್ಲಿ ಮುಖ್ಯವಾಗಿ ಈ ಹಿಂದೆ ಹೆಚ್ಚಾಗಿ ಕಾಣಸಿಗುತ್ತಿದ್ದ ಮೈನಾ ಹಕ್ಕಿಗಳು ಕಾಣಸಿಕ್ಕಿಲ್ಲ. ನಗರೀಕರಣದ ಪ್ರಭಾವ ಪಕ್ಷಿಗಳ ಮೇಲೂ ತಟ್ಟಿದ್ದು, ಹಲವು ಪಕ್ಷಿಗಳು ಗುಳೇ ಹೋಗಿರುವ ಸಾಧ್ಯತೆ ಇದೆ. ಎಲ್ಲೆಡೆ ಹೆಚ್ಚುತ್ತಿರುವ ಕಟ್ಟಡಗಳು, ಕಾಡು ನಾಶ ಇವೆಲ್ಲವೂ ಪರಿಣಾಮ ಬೀರಿರುವುದನ್ನು ಅಲ್ಲಗಳೆಯುವಂತಿಲ್ಲ ಎನ್ನುತ್ತಾರೆ ಪಕ್ಷಿ ವೀಕ್ಷಕರು.

ಮಂಗಳೂರು ವಿಶ್ವವಿದ್ಯಾನಿಲಯದ ಕ್ಯಾಂಪಸ್‌ನಲ್ಲಿ ಪ್ರತಿ ವರ್ಷ ಪಕ್ಷಿಗಳ ಸಮೀಕ್ಷೆ ನಡೆಸಲಾಗುತ್ತದೆ. ಇದರ ದಾಖಲೀಕರಣವೂ ನಡೆಯುತ್ತದೆ. ಈ ಬಾರಿ ಕೂಡ ಕೌಂಟ್ ಬರ್ಡ್ ಕೌಂಟ್ ಇಂಡಿಯಾವು ಗ್ರೇಟ್ ಬ್ಯಾಕ್ ಯಾರ್ಡ್ ಬರ್ಡ್ ಕೌಂಟ್ ಭಾಗವಾಗಿ ವಿವಿಯ ಪ್ರಾಣಿವಿಜ್ಞಾನ ವಿಭಾಗದ ಸಹಯೋಗದಲ್ಲಿ ವಿವಿ ಕ್ಯಾಂಪಸ್‌ನಲ್ಲಿ ಪಕ್ಷಿ ಸಮೀಕ್ಷೆ ಆಯೋಜಿಸಿತ್ತು.

> ನಾಲ್ಕು ದಿನಗಳ ಕಾಲ ಸತತವಾಗಿ ಪಕ್ಷಿ ಸಮೀಕ್ಷೆ ನಡೆದಿದ್ದು, ಈ ಅವಧಿಯಲ್ಲಿ 102 ಪಕ್ಷಿ ಪ್ರಭೇದಗಳು ಪತ್ತೆಯಾಗಿವೆ. ವಿದ್ಯಾರ್ಥಿಗಳು ಸೇರಿದಂತೆ ಸುಮಾರು 20 ಮಂದಿ ತಂಡದಲ್ಲಿದ್ದೆವು. ಕ್ಯಾಂಪಸ್‌ನಿಂದ ಒಂದು ಕಿ.ಮೀ ಸುತ್ತಮುತ್ತಲಿನ ಪ್ರದೇಶದಲ್ಲೂ ಸಮೀಕ್ಷೆ ನಡೆಸಿದ್ದೇವೆ.
> ■ **ಪ್ರೊ.ದೀಪಕ್ ನಾಯಕ್**, ಪಕ್ಷಿ ಸಮೀಕ್ಷೆಯ ಸಂಯೋಜಕ

ಯಾವ ವರ್ಷ ಎಷ್ಟು ಪಕ್ಷಿಗಳು ಪತ್ತೆ?

ವರ್ಷ	ಪಕ್ಷಿಗಳು ಪ್ರಭೇದ	ವರ್ಷ	ಪಕ್ಷಿಗಳು ಪ್ರಭೇದ
2016	077	2021	108
2017	095	2022	103
2018	110	2024	114
2019	107	2025	104
2020	103		

ಸಸಿಹಿತ್ಲು ಗಂಗಾರತಿ



ಸಸಿಹಿತ್ಲು ಭಗವತೀ ದೇವಸ್ಥಾನದಲ್ಲಿ ಬ್ರಹ್ಮಕಲಶೋತ್ಸವದ ಅಂಗವಾಗಿ ಸಮುದ್ರ ತಟದ ಹತ್ತು ವೇದಿಕೆಗಳಲ್ಲಿ ಗಂಗಾರತಿ ನಡೆಯಿತು. ಸಹಸ್ರಾರು ಮಂದಿ ಗಂಗಾರತಿಯನ್ನು ಕಣ್ತುಂಬಿಕೊಂಡರು.

ನವ ಮಂಗಳೂರಿಗೆ ಬಂತು 'ಎಂಎಸ್ ಸಿರೆನಾ' ಕ್ರೂಸ್!

ಮಂಗಳೂರು: ಇಲ್ಲಿನ ನವ ಮಂಗಳೂರು ಬಂದರಿಗೆ ಮತ್ತೊಂದು ವಿಲಾಸಿ ಪ್ರವಾಸಿ ಹಡಗು ಆಗಮಿಸಿದೆ.

619 ಮಂದಿ ಪ್ರಯಾಣಿಕರು ಹಾಗೂ 390 ಸಿಬ್ಬಂದಿಗಳನ್ನೊಳಗೊಂಡು ಒಟ್ಟು ಸಾವಿರ ಮಂದಿಯನ್ನು ಹೊತ್ತು ಬಂದ 'ಎಂಎಸ್ ಸಿರೆನಾ' ಹಡಗು ಪ್ರಸಕ್ತ ಕ್ರೂಸ್ ಋತುವಿನ ಮೂರನೇ ವಿಲಾಸಿ ಹಡಗು ಆಗಿದೆ.



ಎಲ್ಲಿಂದ ಬಂತು?

ಎಂಎಸ್ ಸಿರೆನಾಹಡಗು ಕೇರಳದ ಕೊಚ್ಚಿಯಿಂದ ಮಂಗಳೂರಿಗೆ ಆಗಮಿಸಿದೆ. ನವ ಮಂಗಳೂರು ಬಂದರು ತಲುಪುತ್ತಿದ್ದಂತೆ ವಿದೇಶಿಯರಿಗೆ ಸಾಂಪ್ರದಾಯಿಕ ಶೈಲಿಯ ಸ್ವಾಗತ ದೊರೆಯಿತು. ತಿಲಕವಿಟ್ಟು ಆರತಿ ಬೆಳಗಿ ಬರಮಾಡಿಕೊಳ್ಳಲಾಯಿತು. ಈ ಹಡಗು ಮಾರ್ಷಲ್ ದ್ವೀಪಗಳ ಧ್ವಜದಡಿ ನೌಕಾಯಾನ ಮಾಡುವ ಈ ನಾರ್ವೇಜಿಯನ್ ಕ್ರೂಸ್, ಕೊಲಂಬೊ– ಕೊಚ್ಚಿ–ಮಂಗಳೂರು– ಗೋವಾ–ಮುಂಬೈನ್ನು ಒಳಗೊಂಡ ಅಂತಾರಾಷ್ಟ್ರೀಯ ಪ್ರಯಾಣದ ಭಾಗವಾಗಿ ಮಂಗಳೂರಿಗೆ ಬಂದಿತ್ತು.

ಈ ಪ್ರವಾಸಿಗರು ನಗರದ ಗೋಕರ್ಣನಾಥೇಶ್ವರ ದೇವಸ್ಥಾನ, ಐತಿಹಾಸಿಕ ಸೈಂಟ್ ಅಲೋಶಿಯಸ್ ಚಾಪೆಲ್, ಸಾವಿರ ಕಂಬದ ಬಸದಿ, ಸ್ಥಳೀಯ ಮಾರುಕಟ್ಟೆಗಳು ಸೇರಿದಂತೆ ಮಂಗಳೂರು ಸುತ್ತಮುತ್ತಲಿನ ಹಲವು ಪ್ರಮುಖ ಪ್ರವಾಸಿ ತಾಣಗಳನ್ನು ಸಂದರ್ಶಿಸಿದರು. ಬಳಿಕ ಮೊರ್ಮುಗಾವೊ ಬಂದರಿಗೆ ಸಂಜೆ ವೇಳೆಗೆ ಹೊರಟರು.



ಕೇರಳದಲ್ಲಿ ಮೊದಲ ರೈಲ್ವೆ ಕೋಚ್ ರೆಸ್ಟೋರೆಂಟ್ ಏಪ್ರಿಲ್‌ನಲ್ಲಿ ಆರಂಭ

ಕಾಸರಗೋಡು: ಕೇರಳದಲ್ಲಿ ಮೊದಲ ಬಾರಿಗೆ ರೈಲು ಬೋಗಿಗಳ ಒಳಗೆ ಅತ್ಯುತ್ತಮವಾದ ಹೊಟೇಲ್ ವ್ಯವಸ್ಥೆ ಬರುತ್ತಿದೆ. ರಾಜ್ಯದ ನಾಲ್ವರು ಉದ್ಯಮಿಗಳು ಸೇರಿ ಈ ವ್ಯವಸ್ಥೆಯನ್ನು ಪಯ್ಯನ್ನೂರಿನಲ್ಲಿ ಆರಂಭಿಸುತ್ತಿದ್ದಾರೆ. ಹರಿಕೃಷ್ಣನ್, ಸತೀಶನ್ ಪಯ್ಯನ್ನೂರು, ಸಾಜಿದ್ ಹಾಗೂ ಜಸ್ಲ ಉದ್ಯಮಿಗಳಾಗಿದ್ದಾರೆ.

ಉತ್ತಮ ಗುಣಮಟ್ಟದ ಹಾಗೂ ರುಚಿಕರವಾದ ಆಹಾರ ಲಭ್ಯಗೊಳಿಸಲು ಪ್ರಯಾಣಿಕರಿಂದ ಈ ಒತ್ತಾಸೆ ಬಂದಿರುವುದಾಗಿ ಅವರು ಹೇಳುತ್ತಾರೆ. ಇದನ್ನು ಉದ್ಯಮವನ್ನಾಗಿ ಆರಂಭಿಸಲು ರೈಲ್ವೇಗೆ ಯೋಜನೆಯನ್ನು ಸಲ್ಲಿಸಲಾಗಿತ್ತು. ಕೊಯಂಬತ್ತೂರಿನಲ್ಲಿರುವ ರೈಲು ಕೋಚ್ ರೆಸ್ಟೋರೆಂಟ್‌ನ್ನು ಸಂದರ್ಶಿಸಿದ್ದಾರೆ.



ಪಯ್ಯನ್ನೂರು ರೈಲು ನಿಲ್ದಾಣದ ಮುಂಭಾಗದಲ್ಲಿ ಪ್ರತ್ಯೇಕವಾದ ಹಳಿಯಲ್ಲಿ ರೈಲು ಕೋಚ್ ಸಜ್ಜುಗೊಳಿಸಿ ಅದರೊಳಗೆ ಡೈನಿಂಗ್ ವ್ಯವಸ್ಥೆ ಮಾಡಲಾಗುತ್ತಿದೆ. ಕೋಚ್‌ನ ಇಕ್ಕೆಲಗಳಲ್ಲಿ ಪ್ಲಾಟ್ ಫಾರ್ಮ್ ವ್ಯವಸ್ಥೆಗೊಳಿಸಲಾಗುವುದು. ಇದರ ಮೂಲಕ ಹೊಟೇಲ್‌ಗೆ ಹತ್ತಬಹುದಾಗಿದೆ. ಪ್ಲಾಟ್ ಫಾರ್ಮ್‌ನಲ್ಲಿ ಕುಳಿತು ತಿನ್ನಬಹುದಾಗಿದೆ. ಆಹಾರ ಬುಕ್ ಮಾಡಿ ಆಹಾರ ಕೊಂಡೊಯ್ಯಲು ವ್ಯವಸ್ಥೆ ಇದೆ. ಸಮಿಪದಲ್ಲಿ ಕೌಂಟರ್ ವ್ಯವಸ್ಥೆಯೂ ಇರುವುದು.

ಏಪ್ರಿಲ್‌ನಲ್ಲಿ ಕೋಚ್ ರೆಸ್ಟೋರೆಂಟ್ ಆರಂಭಗೊಳ್ಳಲಿದೆ. ಈ ರೆಸ್ಟೋರೆಂಟ್ 24 ಗಂಟೆಗಳ ಕಾಲ ಕಾರ್ಯಾಚರಿಸುವುದಾಗಿದೆ. ಐದು ವರ್ಷಗಳ ನಿರ್ವಹಣೆಗೆ ರೈಲ್ವೇ ಗುತ್ತಿಗೆ ನೀಡಿದೆ. ಕೋಚ್‌ಗೆ ವಾರ್ಷಿಕ ಬಾಡಿಗೆ ಪಾವತಿಸಬೇಕಾಗಿದೆ. ಈ ಯೋಜನೆಗೆ 40 ಲಕ್ಷ ರೂ. ಖರ್ಚಾಗಲಿದೆ. ಇಂಟಗ್ರಲ್ ಕೋಚ್ ಫ್ಯಾಕ್ಟರಿ ನಿರ್ಮಿಸಿದ ಹಳೆ ಎ.ಸಿ.ಕೋಚ್‌ನ್ನು ರೆಸ್ಟೋರೆಂಟ್‌ಗೆ ಉಪಯೋಗಿಸಲಾಗಿದೆ.

ಎತ್ತುಗಳ ಅಕ್ರಮ ಸಾಗಾಟ: ಬಾಲಕ ಸೇರಿ ಇಬ್ಬರು ವಶಕ್ಕೆ

ಉಡುಪಿ: ಹೊಸಂಗಡಿ ಚೆಕ್‌ಪೋಸ್ಟ್ ಬಳಿ ಅಕ್ರಮವಾಗಿ ಎತ್ತುಗಳನ್ನು ವಧೆಗಾಗಿ ಸಾಗಿಸುತ್ತಿದ್ದ ವಾಹನವನ್ನು ಅಮಾಸೆಬೈಲು ಪೊಲೀಸರು ಬೆನ್ನಟ್ಟಿ ಹಿಡಿಯುವಲ್ಲಿ ಯಶಸ್ವಿಯಾಗಿದ್ದಾರೆ.

ಹುಲಿಕಲ್ ಘಾಟಿ ಕಡೆಯಿಂದ ಬರುತ್ತಿದ್ದ ಟಾಟಾ ಇಂಟ್ರಾ ವಾಹನವನ್ನು ತಡೆದಾಗ, ಅದರಲ್ಲಿ ಯಾವುದೇ ಮೇವು ನೀಡದೆ ಮೂರು ಎತ್ತುಗಳನ್ನು ಹಿಂಸಾತ್ಮಕವಾಗಿ ಕಟ್ಟಿ ಹಾಕಿರುವುದು ಕಂಡುಬಂದಿದೆ.

ಸುಮಾರು 90,000 ರೂ. ಮೌಲ್ಯದ ಎತ್ತುಗಳು ಹಾಗೂ 4 ಲಕ್ಷ ರೂ. ಮೌಲ್ಯದ ವಾಹನವನ್ನು ವಶಪಡಿಸಿಕೊಳ್ಳಲಾಗಿದ್ದು, ಓರ್ವ ಬಾಲಕ ಸೇರಿದಂತೆ ಇಬ್ಬರನ್ನು ವಶಕ್ಕೆ ಪಡೆಯಲಾಗಿದೆ.

ಲಾರಿ-ಸ್ಕೂಟರ್ ಅಪಘಾತ; ಚಾಲಕನಿಗೆ ಗಾಯ

ಪರ್ಕಳದ ನವಮಿ ಸರ್ವಿಸ್ ಸ್ಟೇಷನ್ ಬಳಿ ಲಾರಿ ಮತ್ತು ಸ್ಕೂಟರ್ ನಡುವೆ ನಡೆದ ಅಪಘಾತದಲ್ಲಿ ಸ್ಕೂಟರ್ ಸವಾರ ನವೀನ್ ಕುಲಾಲ್ (66) ಎಂಬವರು ಗಾಯಗೊಂಡಿದ್ದಾರೆ. ವಾದಿರಾಜ ಆಚಾರ್ಯ ಎಂಬವರು ಚಲಾಯಿಸುತ್ತಿದ್ದ ಲಾರಿ ಅತಿ ವೇಗವಾಗಿ ಬಂದು ಸ್ಕೂಟರ್‌ಗೆ ಡಿಕ್ಕಿ ಹೊಡೆದಿದೆ. ಅಪಘಾತದಿಂದ ಸವಾರನ ತಲೆ ಮತ್ತು ಮುಖಕ್ಕೆ ಪೆಟ್ಟಾಗಿದ್ದು, ಮಣಿಪಾಲ ಠಾಣೆಯಲ್ಲಿ ದೂರು ದಾಖಲಾಗಿದೆ.

ಬೆಳ್ತಂಗಡಿ ತಾಲೂಕಿನ ನಾವೂರು ಗ್ರಾಮದಲ್ಲೊಂದು ದುರ್ಬಲ ಸೇತುವೆಯ ಮುಗಿಯದ ಕತೆ । ಮತ್ತೆ ಮತದಾನ ಬಹಿಷ್ಕಾರದ ಸಿದ್ಧತೆಯಲ್ಲಿ ಗ್ರಾಮಸ್ಥರು

ಸಂಪೂರ್ಣ ಕುಸಿಯುವ ಮೊದಲು ಹೊಸ ಸೇತುವೆ ನಿರ್ಮಾಣವಾಗುವುದೇ...?

ಬೆಳ್ತಂಗಡಿ: ಕಳೆದ ಲೋಕಸಭಾ ಚುನಾವಣೆಯ ಸಂದರ್ಭದಲ್ಲಿ ರಸ್ತೆ, ಸೇತುವೆ ನಿರ್ಮಾಣಕ್ಕೆ ಒತ್ತಾಯಿಸಿ ಚುನಾವಣಾ ಬಹಿಷ್ಕಾರ ಹಾಕಿದಾಗ ಮತದಾರರ ಕೈಕಾಲು ಹಿಡಿದ ಅಧಿಕಾರಿಗಳು ಮತ್ತೆ ಆ ಕಡೆ ತಲೆ ಎತ್ತಿ ನೋಡಿಲ್ಲ. ರಸ್ತೆ , ಸೇತುವೆ ನಿರ್ಮಾಣದ ಕನಸು ಇನ್ನೂ ಕನಸಾಗಿಯೇ ಇದೆ. ಇದೀಗ ಮತ್ತೊಮ್ಮೆ ಚುನಾವಣಾ ಬಹಿಷ್ಕಾರದ ಕೂಗು ಕೇಳಿಬರುತ್ತಿದೆ.

ಇದು ಬೆಳ್ತಂಗಡಿ ತಾಲೂಕಿನ ನಾವೂರು ಗ್ರಾಮದ ಕೈಕಂಬ–ಅತ್ಯಡ್ಕ–ಬಳ್ಳಿತೋಟ–ಬೋಜಾರ ರಸ್ತೆ-ಸೇತುವೆಯ ಮುಗಿಯದ ಕಥೆ. ನಾವೂರು ಗ್ರಾಮದ ಕೈಕಂಬದಿಂದ ನಡ ಗ್ರಾಮದ ಬೋಜಾರ ಮೂಲಕ ಮುಡಾಯಿಬೆಟ್ಟು ಪ್ರದೇಶವನ್ನು ಸಂಪರ್ಕಿಸುವ ಈ ರಸ್ತೆ ಅಂದಾಜು 4 ಕಿಮೀ ದೂರವಿದೆ. ಈ ರಸ್ತೆ ಡಾಮರು ಕಾಣದೆ ಸರಿಸುಮಾರು 30 ವರ್ಷಗಳೇ ಕಳೆದಿದೆ. ಇದೀಗ ಡಾಮರೀಕರಣದ ಅವಶೇಷಗಳು ಮಾತ್ರ ಡಾಮರು ರಸ್ತೆ ಎಂಬುದಕ್ಕೆ ಸಾಕ್ಷಿಯಾಗಿ ಕಾಣಸಿಗುತ್ತವೆ. ಜಲ್ಲಿಕಲ್ಲುಗಳು ರಸ್ತೆಯನ್ನು ಬಿಟ್ಟು ಬದಿಗೆ ಸರಿದಿದೆ. ಅಂತೂ ಸದ್ಯ ರಸ್ತೆಯ ಅಸ್ಥಿಪಂಜರ ಮಾತ್ರವಿದೆ.





ಸೇತುವೆ ಕುಸಿಯುವ ಹಂತದಲ್ಲಿ

ಈ ರಸ್ತೆಯ ಸಂಪರ್ಕಕ್ಕಾಗಿ ಕೈಕಂಬ ಎಂಬಲ್ಲಿರುವ ಸೇತುವೆ ಇಂದೋ , ನಾಳೆಯೋ ಕುಸಿದರೆ ಯಾವುದೇ ಆಶ್ಚರ್ಯವಿಲ್ಲ. ಸೇತುವೆಯ ಅಡಿಭಾಗದಲ್ಲಿ ಸಿಮೆಂಟ್ ಇಲ್ಲದೆ ಕಬ್ಬಿಣಗಳು ಕಾಣುತ್ತದೆ, ಅಡಿಪಾಯವೂ ಅಪಾಯಕಾರಿಯಾಗಿದೆ. 2019 ರ ಭೀಕರ ಪ್ರಕೃತಿ ವಿಕೋಪದ ಸಂದರ್ಭದಲ್ಲಿ ಸೇತುವೆಯ ನಡುವಿನ ತಡೆಗೋಡೆ ಕೊಚ್ಚಿ ಹೋಗಿ ಜೀವ ಬಲಿಗಾಗಿ ಕಾಯುತ್ತಿದೆ. ಪಂಚಾಯತ್ ರಾಜ್ ಇಂಜಿನಿಯರಿಂಗ್ ಉಪ ವಿಭಾಗದ ಅಧಿಕಾರಿಗಳ ಆದೇಶದ ಹಿನ್ನೆಲೆಯಲ್ಲಿ ಅಪಾಯಕಾರಿ ಸೇತುವೆಯಲ್ಲಿ ಘನ ವಾಹನಗಳ ಸಂಚಾರ ನಿಷೇಧಿಸಿ ಸ್ಥಳೀಯ ನಾವೂರು ಗ್ರಾಮ ಪಂಚಾಯತ್ ಬ್ಯಾನರ್ ಅಳವಡಿಸಿದೆ. ಆದರೂ ಅಪಾಯಕಾರಿ ಸೇತುವೆಯ ಬಗ್ಗೆ ಇನ್ನೂ ಗಮನ ಹರಿಸದಿರುವುದು ಜನರ ಜೀವ ಬಲಿಗಾಗಿ ಅಧಿಕಾರಿಗಳು ಕಾಯುತ್ತಿದ್ದರೆಯೇ ಎಂಬ ಅನುಮಾನವನ್ನು ಸಾರ್ವಜನಿಕರು ವ್ಯಕ್ತಪಡಿಸುತ್ತಿದ್ದಾರೆ. ಜನರ ದಿನನಿತ್ಯದ ಬದುಕಿನಲ್ಲಿ ಬಹುಮುಖ್ಯವಾಗಿರುವ ಈ ಏಕೈಕ ಸೇತುವೆ ಮತ್ತು ರಸ್ತೆಯನ್ನು ದಿನನಿತ್ಯ 300 ಕ್ಕೂ ಹೆಚ್ಚು ವಿದ್ಯಾರ್ಥಿಗಳು, ಜನರು ಉಪಯೋಗಿಸುತ್ತಿದ್ದಾರೆ. ಪ್ರಸ್ತುತ ಈ ರಸ್ತೆ ಜನ, ವಾಹನ ಸಂಚಾರಕ್ಕೆ ಅಯೋಗ್ಯವಾಗಿದ್ದು, ಕನಿಷ್ಠ ಪಕ್ಷ ಸೇತುವೆ ಕುಸಿಯುವ ಮುನ್ನ ಹೊಸ ಸೇತುವೆ ನಿರ್ಮಾಣ ಕಾರ್ಯ ನಡೆಯುವುದೇ ಎಂದು ಕಾದುನೋಡಬೇಕಾಗಿದೆ.

ಮತ್ತೊಮ್ಮೆ ಚುನಾವಣಾ ಬಹಿಷ್ಕಾರದ ಕೂಗು... ಕೇಳುವ ಮುನ್ನ...

ಕಳೆದ ಲೋಕಸಭಾ ಚುನಾವಣೆಯ ಸಂದರ್ಭದಲ್ಲಿ ಈ ಭಾಗದ ಜನರು ಸಾಮೂಹಿಕ ಚುನಾವಣಾ ಬಹಿಷ್ಕಾರ ಹಾಕಿ ಬ್ಯಾನರ್ ಅಳವಡಿಸಿ ಈ ಮೂಲಕ ಆಳುವ ವರ್ಗಕ್ಕೆ ಬಿಸಿ ಮುಟ್ಟಿಸಿದ್ದರು. ಆ ಸಂದರ್ಭದಲ್ಲಿ ಸ್ಥಳೀಯ ಗ್ರಾ.ಪಂ., ತಾ. ಪಂ., ಪಂಚಾಯತ್ ರಾಜ್ ಇಂಜಿನಿಯರಿಂಗ್ ಉಪ ವಿಭಾಗದ ಅಧಿಕಾರಿಗಳು ಸೇರಿದಂತೆ ಚುನಾವಣಾಧಿಕಾರಿಗಳು ಆಗಮಿಸಿ, ರಾಜಕಾರಣಿಗಳಂತೆ ಭರವಸೆ ನೀಡಿ ವಾಪಸ್ ಹೋದವರು ಮತ್ತೆ ಆ ಕಡೆಗೆ ಗಮನ ಹರಿಸಿಲ್ಲ. ಇದೀಗ ಮತ್ತೆ ಗ್ರಾಮ , ತಾಲೂಕು, ಜಿ.ಪಂ. ಚುನಾವಣೆಗಳು ಸಾಲು ಸಾಲಾಗಿ ಬರಲಿದ್ದು , ಚುನಾವಣಾ ಬಹಿಷ್ಕಾರಕ್ಕೆ ಈಗಾಗಲೇ ತಯಾರಿ ನಡೆಸಲಾಗಿದೆ . ಅದಕ್ಕಿಂತಲೂ ಮೊದಲು ಅಧಿಕಾರಿಗಳು ಎಚ್ಚೆತ್ತುಕೊಳ್ಳದಿದ್ದರೆ ಮತ್ತೊಮ್ಮೆ ಮಂಗಳಾರತಿ ಗ್ಯಾರಂಟಿ ಎನ್ನಲಾಗುತ್ತಿದೆ.

Hosadigantha Kannada Daily Printed & Published by P.S.Prakash on behalf of Jnanabharathi Prakashana Limited. published at : 2nd Floor, Micasa, Near KSRTC Bus stand, Bejai, Mangaluru - 575 004, Phone : 2497091 to 2497093. Fax : 2497098. RNI:29813/78, Printed at Digantha Mudrana Ltd., D/No.5-184-185, Industrial Estate, Yeyyadi, Mangaluru - 575 008. . Editor: P.S.Prakash, Group Editor: Vinayak S. Bhat, Resident Editor : Prakash Ilanthila.

ಇಂದಿನ ಹವಾಮಾನ
ದಕ್ಷಿಣ ಕನ್ನಡ 35° 24° | ಉಡುಪಿ 32° 25°

ಹೊಸ ದಿಗಂತ
ರಾಷ್ಟ್ರ ಜಾಗೃತಿಯ ದೈನಿಕ
ಸಂಗಮ
ದಕ್ಷಿಣ ಕನ್ನಡ | ಉಡುಪಿ | ಕೊಡಗು | ಕಾಸರಗೋಡು

ಸೋಮವಾರ 09, ಮಾರ್ಚ್ 2026 | e-mail diganthamlr@gmail.com | Website www.hosadigantha.com | e-paper epaper.hosadigantha.com | MANGALURU



ಪುಟ 5
ಇಂದು ಮುನಿಪುರ ಶ್ರೀ ದೇವಳದಲ್ಲಿ ಬ್ರಹ್ಮಕಲಶದ ಸಂಭ್ರಮ



ಪುಟ 6
ಪಡುಬಿದ್ರಿ ಶ್ರೀ ದೇವಳದಲ್ಲಿ ನೂತನ ಧ್ವಜಸ್ತಂಭ ಸ್ಥಾಪನೆ


ಸುದ್ದಿ ಅಪ್ಡೇಟ್‌ಗಾಗಿ Google lensನಲ್ಲಿ ಈ QR ಕೋಡ್ ಸ್ಕ್ಯಾನ್ ಮಾಡಿ, whatsApp ಗ್ರೂಪ್ ಇಂದೇ ಸೇರಿ!

ಮುನಿಪುರ ಶ್ರೀ ಗೋಪಾಲಕೃಷ್ಣ ದೇವಸ್ಥಾನ ಮುನಿಯೂರು

ಅಂಚೆ: ಕುಂಬ್ಡಾಜೆ – 671551, ಕಾಸರಗೋಡು ತಾಲೂಕು ಮತ್ತು ಜಿಲ್ಲೆ, ಕೇರಳ



ಇಂದು ಬ್ರಹ್ಮಕಲಶಾಭಿಷೇಕ



ಕೇರಳ ರಾಜ್ಯದ ಕಾಸರಗೋಡು ಜಿಲ್ಲೆ ಕುಂಬ್ಡಾಜೆ ಗ್ರಾಮದ ಮುನಿಯೂರು ಎಂಬಲ್ಲಿರುವ ಶ್ರೀ ಗೋಪಾಲಕೃಷ್ಣ ದೇವಸ್ಥಾನವು ಸುಮಾರು 2000 ವರ್ಷಗಳಿಂದಲೂ ಹಿಂದಿನ ಇತಿಹಾಸವನ್ನು ಹೊಂದಿದೆ. ಸ್ಥಳ ಪುರಾಣದಂತೆ ಹಿಂದೆ ಕೆಲವು ಮುನಿಗಳು ನೇರೆಪ್ಪಾಡಿ ನದಿ ಸಂಗಮದ ತಟದಲ್ಲಿ ಆಶ್ರಮವಾಸಿಗಳಾಗಿ. ತಪಸ್ಸನ್ನಾಚರಿಸುತ್ತಿದ್ದರು. ತಾವು ಸಾಕುತ್ತಿದ್ದ ಗೋವಿನ ಸಹಾಯದಿಂದ ಈಗಿನ ಮುನಿಪುರದ ಬೆಳ್ಳೂರು ಶ್ರೀ ಶಿವಾಲಯದ ಇರವನ್ನು ಕಂಡುಕೊಂಡರು. ಪರಶುರಾಮನು ತನ್ನ ಕೊಡಲಿಯನ್ನು ಎಸೆದು ಸಮುದ್ರರಾಜನಿಂದ ಪಡೆದುಕೊಂಡ ಭೂಮಿಯ ರಕ್ಷಣೆಗಾಗಿ ಪರಶುರಾಮನಿಂದಲೇ ಪ್ರತಿಷ್ಠಾಪಿಸಲ್ಪಟ್ಟ 108 ಶಿವಾಲಯಗಳಲ್ಲಿ ಈ ಕ್ಷೇತ್ರವು ಕೂಡಾ ಒಂದು ಎಂಬುದನ್ನು ತಿಳಿದುಕೊಂಡರು. ಶಿವನನ್ನು ಪ್ರತಿಷ್ಠಾಪಿಸಿ ನೇರೆಪ್ಪಾಡಿ ಸಂಗಮ, ಮಡಿವಾಳ ಸಂಗಮ ಸ್ಥಳದಿಂದ ತೀರ್ಥ ತಂದು ಅಭಿಷೇಕ ಮಾಡಿ ಪೂಜೆ ಪುರಸ್ಕಾರ ನೆರವೇರಿಸುತ್ತಿದ್ದರು. ಕಾಲಕ್ರಮೇಣ ಒಂದು ವೈಷ್ಣವಾಲಯದ ಅಗತ್ಯವನ್ನು ಮನಗಂಡು ಶಿವನಲ್ಲಿ ಪ್ರಾರ್ಥಿಸಿ ಶ್ರೀ ದೇವರ ಆದೇಶದಂತೆ ಆರ್ಯಾವರ್ತ ಪ್ರದೇಶವಾದ ಉತ್ತರಭಾರತದ ಗಂಗಾ ಯಮುನ ಸಂಗಮದಲ್ಲಿ ಮಿಂದು ಪ್ರಾರ್ಥಿಸಿದಾಗ ಈ ವಿಗ್ರಹವು ಕೈಗೆ ಬಂತು. ಎಷ್ಟೋ ಕಾಲಗಳಿಂದ ಆಕ್ರೂರಾದಿ ಕೃಷ್ಣ ಭಕ್ತರಿಂದ ಪೂಜಿಸಲ್ಪಟ್ಟು ಕೊನೆಗೆ ಜಲಾಧಿವಾಸ ಮಾಡಿದ ಪವಿತ್ರ ವಿಗ್ರಹವು ಇದಾಗಿದ್ದು ಅಪಾರ ಚೈತನ್ಯವನ್ನು ಹೊಂದಿರುತ್ತದೆ.

ಅದನ್ನು ತಂದು ಪ್ರತಿಷ್ಠಾಪನೆಗೆ ಯೋಗ್ಯ ಸ್ಥಳ ಸೂಚಿಸುವಂತೆ ಶಿವನಲ್ಲಿ ಅರಿಕೆ ಮಾಡುವಾಗಹರನ ಆಭರಣವಾದ ಸರ್ಪವು ಗೋಚರಿಸಿತು. ಅದನ್ನೇ ಅನುಸರಿಸಿ ಹೋದಾಗ ಪ್ರಕೃತ ಗರ್ಭಗೃಹ ದೇವಳವಿರುವ ಸ್ಥಳದಲ್ಲಿ ಅದು ಕಾಣದಾಯಿತು. ಪ್ರಕೃತಿ ರಮಣೀಯವಾದ ಸ್ಥಳದಲ್ಲಿ ಸುಂದರ ಗೋಪಾಲಕೃಷ್ಣ ಕ್ಷೇತ್ರ ನಿರ್ಮಾಣವಾಯಿತು. ಸದ್ರಿ ನಾಗ ಸಂತತಿಯು ದೇವಳದ ಬಡಗು ಭಾಗದಲ್ಲಿ ಸ್ಥಿರವಾಗಿ ನೆಲೆ ನಿಂತಿರುವುದು ಕಂಡು ಬಂದಿರುತ್ತದೆ. ಶ್ರೀ ಗೋಪಾಲಕೃಷ್ಣನು ಅಪೂರ್ವ ವೃತ್ತಾಕಾರದ ಗರ್ಭಗೃಹದೊಳಗೆ ಶೋಭಿಸುತ್ತಿದ್ದಾನೆ. ಕಾಲ ಕ್ರಮೇಣ ಲೌಕಿಕರ ಸಂಪರ್ಕವೂ ಈ ಕ್ಷೇತ್ರದೊಂದಿಗೆ ಆರಂಭವಾಯಿತು. ಪರಿಣಾಮವಾಗಿ ಕ್ಷೇತ್ರಗಳು ದೇವಾಲಯಗಳಾಗಿ ರೂಪಿಸಲ್ಪಟ್ಟವು. ಮುನಿಗಳು ಕ್ಷೇತ್ರ ಸಂಪರ್ಕದಿಂದ ದೂರವಾದರು. ಸುಮಾರು 1300 ವರ್ಷಗಳ ಕಾಲ ಋಷಿ ಮುನಿಗಳ ವಂಶಜರು ಪೂಜೆ ಪುರಸ್ಕಾರ ನಡೆಸಿಕೊಂಡು ಬಂದಿರುವುದರಿಂದ ಈ ಸ್ಥಳಕ್ಕೆ 'ಮುನಿಯೂರು'' ಎಂಬ ಹೆಸರು ಬಂದಿರುತ್ತದೆ. ಈ ಮುನಿಯೂರಿನ ಇನ್ನೊಂದು ವೈಶಿಷ್ಟ್ಯವೆಂದರೆ ಹಚ್ಚ ಹಸಿರಾಗಿರುವ ಈ ಬಯಲಿನ ದಕ್ಷಿಣ ಭಾಗದಲ್ಲಿ ಶ್ರೀ ಸದಾಶಿವನಾಗಿ ಹರನೂ ಹೃದಯ ಭಾಗದಲ್ಲಿ ಹರಿಹರ ಸುತನಾದ ಶ್ರೀ ಶಾಸ್ತಾರನೂ ವಾಮಭಾಗದಲ್ಲಿ ಶ್ರೀ ಗೋಪಾಲಕೃಷ್ಣನಾಗಿ ಹರಿಯೂ ನೆಲೆಯಾಗಿದ್ದು ಒಂದೇ ಪ್ರದೇಶದಲ್ಲಿ ಮೂರು ದೇವಾಲಯಗಳನ್ನೂ ಹಲವಾರು ದೈವ, ದೇವತೆ, ನಾಗ ಮೊದಲಾದ ಸಾನ್ನಿಧ್ಯಗಳನ್ನು ಹೊಂದಿರುವ ಪುಣ್ಯ ಭೂಮಿಯಾಗಿದೆ.

ಬಳಿಕ ಈ ಪ್ರದೇಶದಲ್ಲಿ ವಾಸವಾಗಿದ್ದ ಉತ್ತಮ ಬ್ರಾಹ್ಮಣ ವರ್ಗದವರು ಈ ದೇವಳಗಳ ಆಡಳಿತೆಯನ್ನು ವಹಿಸಿಕೊಂಡರು. ಈ ಸಮಯದಲ್ಲಿ ಎರಡೂ ದೇವಸ್ಥಾನಗಳಲ್ಲಿ ಉತ್ಸವಾದಿಗಳು ಬಹಳ ವೈಭವದಿಂದ ನಡೆಯುತ್ತಿದ್ದುವು. ಉತ್ಸವದ ಕಾಲಘಟ್ಟದಲ್ಲಿ ಶಿವನ ಉತ್ಸವ ಮೂರ್ತಿಯನ್ನು ಗೋಪಾಲಕೃಷ್ಣ ದೇವಾಲಯಕ್ಕೂ, ಗೋಪಾಲಕೃಷ್ಣನ ಮೂರ್ತಿಯನ್ನು ಶಿವ ದೇವಸ್ಥಾನಕ್ಕೂ ಕೊಂಡುಹೋಗುವ ಸಂಪ್ರದಾಯವಿತ್ತು. ಎರಡೂ ಕ್ಷೇತ್ರಗಳ ಉತ್ಸವದ ಬಳಿಕ ಅವಭೃತ ಸ್ನಾನ ಕಂಡೆತ್ತೋಡಿಯ "ದೇವರ ಕಳಯ'' ಎಂಬಲ್ಲಿ ನಡೆಯುತ್ತಿತ್ತು.

ಮಧ್ವ ಸಿದ್ಧಾಂತ ಸ್ಥಾಪಕರಾದ ಉಡುಪಿಯ ಶ್ರೀ ಮಧ್ವಾಚಾರ್ಯರು ಅವರ ಕಾಲಘಟ್ಟದಲ್ಲಿ (ಕ್ರಿ.ಶ 1238–1317)ಈ ಕ್ಷೇತ್ರದಲ್ಲಿ ತಂಗಿರುತ್ತಾರೆಂಬುದು ಮಧ್ವ ಚರಿತ್ರೆಯಲ್ಲಿ ಉಲ್ಲೇಖಿಸಿರುತ್ತದೆ.

ಸುಮಾರು 400 ವರ್ಷಗಳ ಹಿಂದೆ ಸಂಪತ್ತಿಗಾಗಿ ದುಷ್ಕರ್ಮಿಗಳ ದಾಳಿಗೆ ತುತ್ತಾಗಿ ಈ ದೇವಳ ಹಾನಿಗೊಂಡಿತು. ಆ ಬಳಿಕೆ ಆಡಳಿತ ವರ್ಗ ನಿಸ್ಸಂತತಿಯಾಗಿ ಅರ್ಚಕ ವರ್ಗದವರಿಗೇ ಆಡಳಿತೆಯನ್ನು ವಹಿಸಿಕೊಡಲಾಯಿತು. ಶ್ರೀ ಸದಾಶಿವ ದೇವಳದ ಜೀರ್ಣೋದ್ಧಾರ ಕಾರ್ಯ 1919ರಲ್ಲಿ ನಡೆಸಲ್ಪಟ್ಟಿತು. ಶ್ರೀ ಗೋಪಾಲಕೃಷ್ಣ ದೇವಳದ ಅಭಿವೃದ್ಧಿ ಕಾರ್ಯಗಳು 1944ರಲ್ಲಿ ಒಂದು ಹಂತಕ್ಕೆ ತಲುಪಿ 'ಗರ್ಭಗೃಹ'' ನಮಸ್ಕಾರ ಮಂಟಪ, ಮೂಡು ಗೋಪುರ ನಿರ್ಮಾಣ ದುರಸ್ತಿ ಕಾರ್ಯಗಳ ಬಳಕ ಸ್ಥಗಿತಗೊಂಡಿತು.

ಪ್ರಕೃತ ಈ ಕ್ಷೇತ್ರವು ಜೀರ್ಣಾವಸ್ಥೆಯಲ್ಲಿದ್ದು ಅಷ್ಟಮಂಗಲ ಪ್ರಶ್ನೆ ಚಿಂತನೆ ಪ್ರಕಾರ ಪರಿಹಾರ ಕಾರ್ಯಗಳನ್ನು ನಡೆಸಿದ್ದಾಗಿದೆ. ಇದೀಗ **09-03-2022ರಂದು** ಜಗದ್ಗುರು ಶಂಕರಾಚಾರ್ಯ ತೋಟಕಾಚಾರ್ಯ ಪರಂಪರೆಯ ಯತಿವರ್ಯರಾದ ಶ್ರೀ ಎಡನೀರು ಮಠಾಧೀಶರಾದ **ಶ್ರೀ ಶ್ರೀ ಶ್ರೀ ಸಚ್ಚಿದಾನಂದ ಭಾರತೀ ಶ್ರೀಪಾದಂಗಳವರ** ಉಪಸ್ಥಿತಿಯಲ್ಲಿ ಊರ ಪರವೂರ ಮಹನೀಯರುಗಳನ್ನು ಸೇರಿಸಿ ಒಂದು ಜೀರ್ಣೋದ್ಧಾರ ಸಮಿತಿಯನ್ನು ರಚಿಸಿದ್ದಾಗಿದೆ.

ಕ್ಷೇತ್ರದ ಪುನರುದ್ಧಾರಣಾ ಕಾರ್ಯದಲ್ಲಿ ಆಸ್ತಿಕರೂ, ಧರ್ಮಾಭಿಮಾನಿಗಳೂ, ಭಗವದ್ಭಕ್ತರೂ ಆದ ತಾವೆಲ್ಲರೂ ತುಂಬು ಹೃದಯದಿಂದ ಉದಾರ ಧನಸಹಾಯವನ್ನಿತ್ತು ಭಗವಂತನ ಕೃಪೆಗೆ ಪಾತ್ರರಾಗಬೇಕಾಗಿ ಅಪೇಕ್ಷೆ. **ಮಾರ್ಚ್ 6ರಂದು ಪುನರ್‌ಪ್ರತಿಷ್ಠೆ ನಡೆದಿದ್ದು, ಇಂದು ಶ್ರೀ ಗೋಪಾಲಕೃಷ್ಣ ದೇವರಿಗೆ 1008 ಬ್ರಹ್ಮಕಲಶಾಭಿಷೇಕ ನಡೆಯಲಿದೆ.**



ಬ್ರಹ್ಮ ಕಲಶೋತ್ಸವ

ಕೇರಳ ರಾಜ್ಯದ ಕಾಸರಗೋಡು ಜಿಲ್ಲೆಯ ಕುಂಬ್ಡಾಜೆ ಗ್ರಾಮದ ಮುನಿಯೂರಿನ ಮುನಿಪುರ ಶ್ರೀ ಗೋಪಾಲಕೃಷ್ಣದೇವಾಲಯವು ಅತ್ಯಂತ ಪ್ರಾಚೀನ ದೇವಸ್ಥಾನವಾಗಿದ್ದು ಕಣ್ವಮುನಿಗಳಿಂದ ಪ್ರತಿಷ್ಠಾಪಿತವಾದುದೆಂದೇ ಪ್ರತೀತಿ.

ಶಿಥಿಲಾವಸ್ಥೆಯಲ್ಲಿದ್ದ ಈ ದೇವಾಲಯದ ಜೀರ್ಣೋದ್ಧಾರ ಕಾರ್ಯಗಳು ಪೂರ್ತಿಗೊಂಡಿವೆ. ಪ್ರಕೃತ ಜಗದ್ಗುರು ಶ್ರೀ ಶಂಕರಾಚಾರ್ಯ ಮಹಾಸಂಸ್ಥಾನ, ಎಡನೀರು ಮಠಾಧೀಶರಾದ ಪರಮಪೂಜ್ಯ ಶ್ರೀ ಶ್ರೀ ಸಚ್ಚಿದಾನಂದ ಭಾರತೀ ಶ್ರೀಪಾದಂಗಳವರ ದಿವ್ಯ ಉಪಸ್ಥಿತಿಯಲ್ಲಿ, ಶ್ರೀ ಕ್ಷೇತ್ರದ ತಂತ್ರಿಗಳಾದ ಬ್ರಹ್ಮಶ್ರೀ ವಾಸುದೇವ ತಂತ್ರಿ ಕುಂಟಾರು ಇವರ ಮಾರ್ಗದರ್ಶನದಲ್ಲಿ, ಬ್ರಹ್ಮಶ್ರೀ ರವೀಶ ತಂತ್ರಿ ಕುಂಟಾರು ಇವರ ನೇತೃತ್ವದಲ್ಲಿ

ನವೀಕರಣ ಪುನಃಪ್ರತಿಷ್ಠಾ ಅಷ್ಟಬಂಧ ಬ್ರಹ್ಮಕಲಶೋತ್ಸವ

ಸ್ವಸ್ತಿ। ಶ್ರೀ ವಿಶ್ವಾವಸು ನಾಮ ಸಂವತ್ಸರದ ಕುಂಭಮಾಸ 17ರಿಂದ 25ರ ತನಕ ದಿನಾಂಕ 01-03-2026 ರವಿವಾರ ಮೊದಲ್ಗೊಂಡು 09-03-2026 ಸೋಮವಾರದ ತನಕ ವಿಜೃಂಭಣೆಯಿಂದ ನಡೆಯಲಿದೆ. ಆ ಪ್ರಯುಕ್ತ ಜರಗಲಿರುವ ವೈದಿಕ, ಧಾರ್ಮಿಕ, ಹಾಗೂ ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ಭಗವದ್ಭಕ್ತರಾದ ತಾವೆಲ್ಲರೂ ಭಾಗಿಗಳಾಗಿ ಶ್ರೀ ದೇವರ ಪೂರ್ಣಾನುಗ್ರಹಕ್ಕೆ ಪಾತ್ರರಾಗಿ, ಶ್ರೀದೇವರ ಪ್ರಸಾದವನ್ನು ಸ್ವೀಕರಿಸಿ ಕೃತಾರ್ಥರಾಗಬೇಕಾಗಿ ವಿನಂತಿ.

ಕಾರ್ಯಕ್ರಮಗಳು

09-03-2026 ಸೋಮವಾರ

ವೈದಿಕ ಕಾರ್ಯಕ್ರಮಗಳು, ಪೂರ್ವಾಹ್ನ 5 ರಿಂದ ಗಣಪತಿಹೋಮ, ಕವಾಟೋದ್ಘಾಟನೆ, ಶಾಂತಿ ಪ್ರಾಯಶ್ಚಿತ್ತ ಮತ್ತು ತತ್ವಹೋಮಗಳ ಕಲಶಾಭಿಷೇಕ

1008 ಬ್ರಹ್ಮಕಲಶಾಭಿಷೇಕ

ಅವಭೃತ ಪ್ರೋಕ್ಷಣೆ, ಮಹಾಪೂಜೆ, ಮಂಗಲ ಮಂತ್ರಾಕ್ಷತೆ

ಸಾಯಂಕಾಲ 7ರಿಂದ ಶ್ರೀ ದೇವರ ಉತ್ಸವ ಬಲಿ, ಬಟ್ಟಲು ಕಾಣಿಕೆ

ರಾತ್ರಿಪೂಜೆ, ಪ್ರಸಾದ ವಿತರಣೆ.

ಸಾಂಸ್ಕೃತಿಕ ಕಾರ್ಯಕ್ರಮಗಳು: ಮಧ್ಯಾಹ್ನ 1ರಿಂದ 2– ಭಕ್ತಿ ಭಾವ ಗಾನ ಯಾನ – ಶ್ರೀ ರಾಘವೇಂದ್ರ ಕಿಗ್ಗ ಶೃಂಗೇರಿ ಇವರಿಂದ.ಅಪರಾಹ್ನ 2–30ರಿಂದ : ಯಕ್ಷಗಾನ ತಾಳಮದ್ದಳೆ – ಶ್ರೀ ಗೋಪಾಲಕೃಷ್ಣ ಕಲಾ ಸಂಘ, ದೇಲಂಪಾಡಿ, ಬನಾರಿ

❖ ಸಂಯೋಜನೆ : ರಾದೇಶ, ಕಿದೂರು ❖ ಚಿತ್ರ: ಹರ್ಷ ಕುಮಾರ್ ಕೀರಿಕ್ಕಾಡು

ಮುನಿಪುರ ಶ್ರೀ ಗೋಪಾಲಕೃಷ್ಣ ದೇವರ ಚರಣಾರವಿಂದಗಳಿಗೆ ಭಕ್ತಿಪೂರ್ವಕ ಪ್ರಣಾಮಗಳು ಹಾಗೂ ಬ್ರಹ್ಮಕಲಶಾಭಿಷೇಕಕ್ಕೆ ಶುಭ ಕೋರುವ



ಬ್ರಹ್ಮಶ್ರೀ ವೇದಮೂರ್ತಿ ಶ್ರೀ ರವೀಶ್ ತಂತ್ರಿ ಕುಂಟಾರು
ತಂತ್ರಿವರ್ಯರು
ಶ್ರೀ ಗೋಪಾಲಕೃಷ್ಣ ಕ್ಷೇತ್ರ
ಮುನಿಯೂರು



ಶ್ರೀ ಗೋಪಾಲಕೃಷ್ಣ ನಡುವಂತಿಲ್ಲಾಯ
ಅನುವಂಶಿಕ ಮೊಕ್ತೇಸರರು
ಶ್ರೀ ಗೋಪಾಲಕೃಷ್ಣ ದೇವಸ್ಥಾನ
ಮುನಿಯೂರು



ಶ್ರೀ ಹರಿನಾರಾಯಣ ನಡುವಂತಿಲ್ಲಾಯ
ಆಡಳಿತ ಮೊಕ್ತೇಸರರು
ಶ್ರೀ ಗೋಪಾಲಕೃಷ್ಣ ದೇವಸ್ಥಾನ
ಮುನಿಯೂರು



ಶ್ರೀ ಕೀರಿಕ್ಕಾಡು ಅಜ್ಜಿಮೂಲೆ ಕೃಷ್ಣ ಭಟ್
ಶ್ರೀಮತಿ ಶಶಿಕಲಾ
ಅಧ್ಯಕ್ಷರು,
ಶ್ರೀ ಕ್ಷೇತ್ರ ಸೇವಾ ಸಮಿತಿ
ಮುನಿಪುರ, ಮುನಿಯೂರು



ಡಾ.ರಮಾನಂದ ಬನಾರಿ
ಗೌರವ ಸಲಹೆಗಾರರು
ಜೀರ್ಣೋದ್ಧಾರ ಸಮಿತಿ,
ಮುನಿಯೂರು




ಶ್ರೀ ಶಂಕರನಾರಾಯಣ ಮಯ್ಯ
ಅಧ್ಯಕ್ಷರು,
ಜೀರ್ಣೋದ್ಧಾರ ಸಮಿತಿ ಹಾಗೂ
ಬ್ರಹ್ಮ ಕಲಶೋತ್ಸವ ಸಮಿತಿ
ಮುನಿಯೂರು



ಡಾ. ವೇಣುಗೋಪಾಲ ಕಳೆಯತ್ತೋಡಿ
ಕಾರ್ಯಾಧ್ಯಕ್ಷರು,
ಬ್ರಹ್ಮ ಕಲಶೋತ್ಸವ ಸಮಿತಿ
ಮುನಿಯೂರು



ಶ್ರೀ ಹರಿನಾರಾಯಣ ಶಿರಂತಡ್ಕ
ಪ್ರಧಾನ ಕಾರ್ಯದರ್ಶಿ
ಬ್ರಹ್ಮಕಲಶೋತ್ಸವ ಸಮಿತಿ
ಮುನಿಯೂರು



ವೇದಮೂರ್ತಿ ಕುಮಾರ ಸುಬ್ರಹ್ಮಣ್ಯ
ಮತ್ತು ಮನೆಯವರು,
ಮುನಿಯೂರು



ಶ್ರೀ ಗಣಪತಿ ಭಟ್
ಶ್ರೀಮತಿ ವೀಣಾ
ಕೀರಿಕ್ಕಾಡು
ವೈದಿಕ ಸಮಿತಿ,
ಅಧ್ಯಕ್ಷರು, ಪ್ರಸಾದ ಸಮಿತಿ
ಬ್ರಹ್ಮಕಲಶೋತ್ಸವ ಸಮಿತಿ,
ಶ್ರೀ ಗೋಪಾಲಕೃಷ್ಣ ದೇವಸ್ಥಾನ,
ಮುನಿಯೂರು



ಡಾ. ಶ್ರೀ ಪುರುಷೋತ್ತಮ ಶರ್ಮ ಮತ್ತು ಶ್ರೀಮತಿ ಸುಮ ಪಾರ್ವತಿ ಮಹಿಮಾ (ಮಗಳು) ನಂದ್ರೋಡು. ಉತ್ತಮ ಕ್ಲಿನಿಕ್, ನೀರ್ಚಾಲು



ಮುನಿಯೂರು ಶ್ರೀಧರ ನಡುವಂತಿಲ್ಲಾಯ



ಡಾ. ಕವಿತಾ ಶೆಟ್ಟಿ ಕಂಡೆತ್ತೋಡಿ
ಅಧ್ಯಕ್ಷರು,
ಮಾತೃ ಸಮಿತಿ
ಬ್ರಹ್ಮಕಲಶೋತ್ಸವ ಸಮಿತಿ
ಮುನಿಯೂರು



ಶ್ರೀ ಶಂಕರ ಕೇಕುಣ್ಣಾಯ
ಉಪಾಧ್ಯಕ್ಷರು,
ಜೀರ್ಣೋದ್ಧಾರ ಸಮಿತಿ
ಮುನಿಯೂರು



ಮುನಿಯೂರು ಶ್ರೀಕೃಷ್ಣ ನಡುವಂತಿಲ್ಲಾಯ



ಮುನಿಯೂರು ಮಧುಸೂದನ ನಡುವಂತಿಲ್ಲಾಯ



ಮುನಿಯೂರು ರವಿಕುಮಾರ್ ನಡುವಂತಿಲ್ಲಾಯ



ಪ್ರೊ. ಎ. ಶ್ರೀನಾಥ್ ಕಾಸರಗೋಡು
ಅಧ್ಯಕ್ಷರು, ಸ್ವಾಗತ ಸಮಿತಿ
ಬ್ರಹ್ಮಕಲಶೋತ್ಸವ ಸಮಿತಿ
ಮುನಿಯೂರು



ಸುರೇಶ್ ಶೆಟ್ಟಿ ಮತ್ತು ಬಾಲಕೃಷ್ಣ ಶೆಟ್ಟಿ ಉಜಿರ್ತೋಡಿ
ಅಧ್ಯಕ್ಷರು, ಉಗ್ರಾಣ ಸಮಿತಿ
ಸಹಸಂಚಾಲಕರು, ಉಗ್ರಾಣ ಸಮಿತಿ
ಬ್ರಹ್ಮಕಲಶೋತ್ಸವ ಸಮಿತಿ,
ಮುನಿಯೂರು



ಶ್ರೀ ವೈ. ಶ್ಯಾಮ್ ಭಟ್ ಬೆಂಗಳೂರು
ಮೊಕ್ತೇಸರರು,
ಶ್ರೀ ಸದಾಶಿವ ದೇವಸ್ಥಾನ ಏತ್ತಡ್ಕ

ಸುತ್ತ ಮುತ್ತ



ಮಹತೋಭಾರ ಕುಕ್ಕೆ ಶ್ರೀ ಸುಬ್ರಹ್ಮಣ್ಯ ದೇವಸ್ಥಾನಕ್ಕೆ ರವಿವಾರ ಚಲನಚಿತ್ರ ನಟ ಶೋಭರಾಜ್ ಭೇಟಿ ನೀಡಿದರು. ಶ್ರೀ ದೇವರ ದರುಶನ ಪಡೆದ ಅವರು ಮಹಾಪ್ರಸಾದ ಸ್ವೀಕರಿಸಿದರು. ಈ ಸಂದರ್ಭ ದೇವಳದ ಎಇಒ ಎಸ್.ಜೆ.ವೈ.ರಾಜ್, ಶಿಷ್ಟಾಚಾರಾಧಿಕಾರಿ ಜಯರಾಮ ರಾವ್ ಉಪಸ್ಥಿತರಿದ್ದರು.

ಜೆಡಿಎಸ್ ಪಕ್ಷಕ್ಕೆ ಹಲವು ಮಂದಿ ಸೇರ್ಪಡೆ

ಮಂಗಳೂರು: ತುಳುನಾಡ ರಕ್ಷಣಾ ವೇದಿಕೆ ಅಧ್ಯಕ್ಷ ಯೋಗೀಶ್ ಶೆಟ್ಟಿ ಜೆಪ್ಪು ಸೇರಿದಂತೆ ಶಶಿರಾಜ್ ಶೆಟ್ಟಿ ಕೊಳಂಬೆ, ಧರ್ಮೇಂದ್ರ ಅವರು ಜೆಡಿಎಸ್ ಪಕ್ಷಕ್ಕೆ ಸೇರ್ಪಡೆಗೊಂಡಿದ್ದಾರೆ ಎಂದು ಜೆಡಿಎಸ್ ಮುಖಂಡ ಎಂ.ಬಿ.ಸದಾಶಿವ ಸುಳ್ಯ ತಿಳಿಸಿದರು.
ಜೆಡಿಎಸ್ ಪಕ್ಷವನ್ನು ಪ್ರಬಲ ಸಂಘಟನೆಯಾಗಿ ಬೆಳೆಸುವ ಉದ್ದೇಶದಿಂದ ಮೂವರು ನಾಯಕರು ಪಕ್ಷಕ್ಕೆ ಸೇರಿಕೊಂಡಿದ್ದಾರೆ. ಮುಂದಿನ ದಿನಗಳಲ್ಲಿ ಇನ್ನಷ್ಟು ಯುವಕರು ಪಕ್ಷಕ್ಕೆ ಬರಲು ಮುಂದಾಗಿದ್ದಾರೆ. ಸದ್ಯದಲ್ಲೇ ದ.ಕ. ಜಿಲ್ಲೆಯಲ್ಲಿ ಬೃಹತ್ ಸಮಾವೇಶವನ್ನು ಆಯೋಜಿಸುತ್ತೇವೆ. ಮಾಜಿ ಪ್ರಧಾನಿ ಎಚ್.ಡಿ. ದೇವೇಗೌಡ, ಕೇಂದ್ರ ಸಚಿವ ಎಚ್.ಡಿ. ಕುಮಾರಸ್ವಾಮಿ ಅವರು ಭಾಗವಹಿಸಲಿದ್ದಾರೆ ಎಂದು ಶನಿವಾರ ಸುದ್ದಿಗೋಷ್ಠಿಯಲ್ಲಿ ಅವರು ತಿಳಿಸಿದರು.
ಕಾಂಗ್ರೆಸ್ ಪಕ್ಷ ಕರಾವಳಿಗೆ ಅನ್ಯಾಯ ಮಾಡುತ್ತಿದೆ. ಬಜೆಟ್‌ನಲ್ಲಿ ಇಲ್ಲಿನ ಜನರ ನಿರೀಕ್ಷೆಗಳು ಹುಸಿಯಾಗಿದೆ. ಮೀನುಗಾರಿಕೆ, ಪ್ರವಾಸೋದ್ಯಮ, ಅಡಿಕೆ, ರಬ್ಬರ್ ಬೆಳೆಗಾರರನ್ನು ಕಡೆಗಣಿಸಲಾಗಿದೆ. ಎಲೆಚುಕ್ಕಿ ರೋಗ, ಹಳದಿ ರೋಗದಿಂದ ಅಡಿಕೆ ಬೆಳೆಗಾರರು ಸಮಸ್ಯೆ ಎದುರಿಸುತ್ತಿದ್ದು, ಬೆಂಬಲ ಬೆಲೆಯನ್ನು ಘೋಷಣೆ ಮಾಡಿಲ್ಲ ಎಂದು ಹೇಳಿದರು.
ಸುದ್ದಿಗೋಷ್ಠಿಯಲ್ಲಿ ಜೆಡಿಎಸ್ ಪಕ್ಷದ ಮುಖಂಡ ಜಾಕೆ ಮಾಧವ ಗೌಡ, ಪಕ್ಷಕ್ಕೆ ಸೇರ್ಪಡೆಯಾದ ನಾಯಕರು ಉಪಸ್ಥಿತರಿದ್ದರು.

ನಿಡ್ಲೆ ಒಕ್ಕೂಟದ ತ್ರೈಮಾಸಿಕ ಸಭೆ

ನಿಡ್ಲೆ: ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಬೆಟ್ಟಂಪಾಡಿ ವಲಯದ ನಿಡ್ಲೆ ಒಕ್ಕೂಟದ ತ್ರೈಮಾಸಿಕ ಸಭೆ ಶನಿವಾರ ಶ್ರೀ ಶಾಂತದುರ್ಗಾ ದೇವಸ್ಥಾನದ ಅನುಗ್ರಹ ಸಭಾ ಭವನದಲ್ಲಿ ಒಕ್ಕೂಟದ ಅಧ್ಯಕ್ಷ ರಾಧಾಕೃಷ್ಣ ಪಾಟಾಳಿ ಅವರ ಅಧ್ಯಕ್ಷತೆಯಲ್ಲಿ ನಡೆಯಿತು. ಸಿ.ಎಸ್.ಸಿ. ಕೇಂದ್ರದ ನೋಡೆಲ್ ಅಧಿಕಾರಿ ಜೀವನ್ ಮಾತನಾಡಿ, ಸಿ.ಎಸ್.ಸಿ ಕೇಂದ್ರದಲ್ಲಿ ಇರುವ ಸೇವೆಗಳ ಬಗ್ಗೆ ಮಾಹಿತಿ ನೀಡಿದರು. ಸಂಪೂರ್ಣ ಸುರಕ್ಷೆ, ಆಯುಷ್ಮಾನ್ ಕಾರ್ಡ್, ರಾಷ್ಟ್ರೀಯ ಪಿಂಚಣಿ ಯೋಜನೆ, ವಾಹನ ಇನ್ಶೂರೆನ್ಸ್, ಪಾನ್ ಕಾರ್ಡ್ ಮೊದಲಾದ ಸೇವೆಗಳು ಕಡಿಮೆ ಖರ್ಚಿನಲ್ಲಿ ಕೇಂದ್ರದಲ್ಲಿ ಲಭ್ಯವಿದೆ. ಇದರ ಪ್ರಯೋಜನ ಪಡೆದುಕೊಳ್ಳುವಂತೆ ತಿಳಿಸಿದರು.
ಬೆಟ್ಟಂಪಾಡಿ ಸಿ.ಎಸ್.ಸಿ ಕೇಂದ್ರದ ವಿ.ಎಲ್.ಇ ಕುಸುಮಾ, ಸೇವಾ ಪ್ರತಿನಿಧಿ ಶಾಲಿನಿ ಕೆ. ವೇದಿಕೆಯಲ್ಲಿ ಉಪಸ್ಥಿತರಿದ್ದರು. ಸುಗುಣ ಸ್ವಾಗತಿಸಿದರು. ಜವಾಬ್ದಾರಿ ತಂಡಗಳಾದ ಬೆಳಕು ತಂಡದ ವರದಿ ಸುಗುಣ, ಶ್ರೀಕೃಷ್ಣ ತಂಡದ ವರದಿ ರಾಮಚಂದ್ರ ಮಣಿಯಾಣಿ ವಾಚಿಸಿದರು. ಒಕ್ಕೂಟದ ಜತೆ ಕಾರ್ಯದರ್ಶಿ ಹೇಮಾ ಒಕ್ಕೂಟದ ವರದಿ ವಾಚಿಸಿದರು. ಗಂಗಾಧರ ಸಿ.ಎಚ್. ವಂದಿಸಿದರು. ದಾಖಲಾತಿ ಸಮಿತಿ ಸದಸ್ಯರು, ಒಕ್ಕೂಟದ ಸದಸ್ಯರು ಪಾಲ್ಗೊಂಡರು.

ಪ್ರಮುಖ ನಿರ್ಣಯ

ಎ.5 ರಂದು ಒಕ್ಕೂಟ ಸಭೆ ನಡೆಸುವುದು. ಸಭೆಯಲ್ಲಿ ಒಕ್ಕೂಟದ ನೂತನ ಪದಾಧಿಕಾರಿಗಳನ್ನು ಆಯ್ಕೆ ಮಾಡಿ ನೂತನ ಒಕ್ಕೂಟ ರಚಿಸುವುದು. ಒಕ್ಕೂಟದ ಸದಸ್ಯರಿಗೆ ಕ್ರೀಡೋತ್ಸವ ನಡೆಸುವುದು. ಸಾಮೂಹಿಕ ಶ್ರೀ ಸತ್ಯನಾರಾಯಣ ಪೂಜೆ ಮತ್ತು ಒಕ್ಕೂಟದ ಪದಗ್ರಹಣ ಮೇ ತಿಂಗಳಲ್ಲಿ ನಡೆಸುವುದು.

ಕಲ್ಲಟ್ಟ ಶಾಲೆಯಲ್ಲಿ ಸ್ವಚ್ಛತಾ ಜಾಗೃತಿ-ಭೂವಿ ಚಿತ್ರ ಪ್ರದರ್ಶನ

ಕೊಣಾಜೆ: ಸರಕಾರಿ ಪ್ರೌಢ ಶಾಲೆ ಕಲ್ಕಟ್ಟ ಇದರ ಕೆ. ಪಿ ಪೂರ್ಣ ಚಂದ್ರ ತೇಜಸ್ವಿ ಪರಿಸರ ಸಂಘ ದ ವಿದ್ಯಾರ್ಥಿಗಳಿಗೆ ಸ್ವಚ್ಛತ ಜಾಗೃತಿ ಹಾಗೂ ಭುವಿ ಚಿತ್ರ ಪ್ರದರ್ಶನ ಜಾಗೃತಿ ಕಾರ್ಯಕ್ರಮ ಬುಧವಾರ ನಡೆಯಿತು.
ಈ ಸಂದರ್ಭದಲ್ಲಿ ಸಂಪನ್ಮೂಲ ವ್ಯಕ್ತಿಗಳಾಗಿ ಜಿಲ್ಲಾ ಸ್ವಚ್ಛತಾ ರಾಯಭಾರಿ ಶೀನ ಶೆಟ್ಟಿ, ಜನ ಶಿಕ್ಷಣ ಟ್ರಸ್ಟ್ ನಿರ್ದೇಶಕರಾದ ಕೃಷ್ಣ ಮೂಲ್ಯ ಅವರು ಒಣ ಕಸ, ಹಸಿ ಕಸ, ಅಪಾಯಕಾರಿ ಕಸ ವಿಂಗಡಣೆ ಮನೆ ಮಟ್ಟದಲ್ಲಿ ನಿರ್ವಹಿಸಲು ಆಗಬಹುದಾದ ಕಸ ನಿರ್ವಹಣೆ ಸುಲಭ ಉಪಾಯ, ಪ್ಲಾಸ್ಟಿಕ್ ಫ್ರೀ ಸ್ಕೂಲ್ ಕ್ಯಾಂಪಸ್ ಹಾಗೂ ಆರೋಗ್ಯಕರ ಬದುಕಿಗೆ ಸರಳ ಸೂತ್ರ ದ ಬಗ್ಗೆ ಮಾಹಿತಿ ನೀಡಿ ಸಂವಾದ ನಡೆಸಿದರು.
ಈ ಸಂದರ್ಭದಲ್ಲಿ ಇಕೊ ಕ್ಲಬ್ ಸಂಯೋಜಕರಾದ ನಮಿತಾ ರಾಣಿ ಸ್ವಾಗತಿಸಿ, ಮುಖ್ಯೋಪಾಧ್ಯಯರಾದ ಮೊಹಮ್ಮದ್ ಇಕ್ಬಾಲ್ ವಂದಿಸಿದರು. ಜನ ಶಿಕ್ಷಣ ಟ್ರಸ್ಟ್ ಸಂಯೋಜಕರು ಚೇತನ್, ಶಾಲಾ ಶಿಕ್ಷಕರಾದ ವೆಂಕಟೇಶ್ ರಾವ್, ಲೀಲಾವತಿ, ಗಿರೀಶ್ ಮತ್ತು ಮಂಜುಳಾ ಸಹಕರಿಸಿದರು.

ಸಸಿಹಿತ್ಲು ಶ್ರೀ ಭಗವತೀ ದೇವಿಗೆ ವಿಜೃಂಭಣೆಯ ಬ್ರಹ್ಮಕಲಶ





ಮೂಲ್ಕಿ: ಸಸಿಹಿತ್ಲು ಶ್ರೀ ಭಗವತೀ ದೇವಸ್ಥಾನದಲ್ಲಿ ಭಾನುವಾರ ಸಪರಿವಾರ ಶ್ರೀ ಭಗವತೀ ಅಮ್ಮನವರಿಗೆ ಬ್ರಹ್ಮಕಲಶೋತ್ಸವವು ವಿದ್ವಾನ್ ವೇದಮೂರ್ತಿ ಶ್ರೀ ಕೃಷ್ಣಮೂರ್ತಿ ಭಟ್ ಹೊಯ್ಗೆಗುಡ್ಡೆ ಹಾಗೂ ಶ್ರೀ ಶ್ರೀಪತಿ ಭಟ್ ಹೊಯ್ಗೆಗುಡ್ಡೆ ನೇತೃತ್ವದಲ್ಲಿ ವೇದಮೂರ್ತಿ ಶ್ರೀ ವೆಂಕಟೇಶ ತಂತ್ರಿ ಎಡಪದವು ಅವರ ಮಾರ್ಗದರ್ಶನದಲ್ಲಿ ನಡೆಯಿತು
ಭಾನುವಾರ ಬೆಳಿಗ್ಗೆ 7ರಿಂದ ಚಂಡಿಕಾ ಯಾಗ, ಬೆಳಿಗ್ಗೆ 11.15ರ ವೃಷಭ ಲಗ್ನ ಮುಹೂರ್ತದಲ್ಲಿ ಬ್ರಹ್ಮಕಲಶಾಭಿಷೇಕ, ಮಹಾ ಪೂಜೆ, ಪಲ್ಲ ಪೂಜೆ, ಮಧ್ಯಾಹ್ನ ಮಹಾ ಅನ್ನಸಂತರ್ಪಣೆ ನಡೆಯಿತು.
ಈ ಸಂದರ್ಭ ಕ್ಷೇತ್ರದ ಅರ್ಚಕ ಹಾಗೂ ಆನುವಂಶಿಕ ಮೊಕ್ತೇಸರ ಶ್ರೀನಿವಾಸ ಯಾನೆ ಅಪ್ಪು ಪೂಜಾರಿ, ಸಂಸದ ಕೋಟ ಶ್ರೀನಿವಾಸ ಪೂಜಾರಿ, ಶಾಸಕ ಉಮಾನಾಥ ಕೋಟ್ಯಾನ್, ಉದ್ಯಮಿ ಕನ್ಯಾನ ಸದಾಶಿವ ಶೆಟ್ಟಿ, ಉದ್ಯಮಿ ಧನಂಜಯ ಶೆಟ್ಟಿ ಸಸಿಹಿತ್ಲು, ಕೃಷ್ಣಶೆಟ್ಟಿ ಎಕ್ಕಾರು ಮುಂಬೈ, ಸುದರ್ಶನ್ ಮೂಡಬಿದ್ರೆ, ದೇವದಾಸ ಶೆಟ್ಟಿ ಬಂಟ್ವಾಳ, ಸಿಬಿ ಕರ್ಕೇರ, ಬ್ರಹ್ಮಕಲಶೋತ್ಸವ ಸಮಿತಿಯ ಗೌರವಾಧ್ಯಕ್ಷ ರೋಹಿದಾಸ್ ಬಂಗೇರ ಮುಂಬೈ, ಅಧ್ಯಕ್ಷ ನಳಿನ್ ಕುಮಾರ್ ಕಟೀಲ್, ಕ್ಷೇತ್ರದ ಆಡಳಿತ ಮೊಕ್ತೇಸರ ಚಂದ್ರಶೇಖರ್ ಬೆಲ್ಚಡ, ಬ್ರಹ್ಮಕಲಶೋತ್ಸವಸಮಿತಿಯ ಕಾರ್ಯಾಧ್ಯಕ್ಷ ವಾಮನ್ ಇಡ್ಯಾ, ಮುಂಬೈ ಸಮಿತಿ ಅಧ್ಯಕ್ಷ ವೇದಪ್ರಕಾಶ್ ಎಂ. ಶ್ರೀಯಾನ್, ಉಪಾಧ್ಯಕ್ಷ ವಿಶ್ವನಾಥ ಬೆಳ್ಚಡ, ಪದಾಧಿಕಾರಿಗಳಾದ ಚಂದ್ರಶೇಖರ ನಾಣಿಲ್, ಮುರ ಸದಾಶಿವ ಶೆಟ್ಟಿ, ರಮೇಶ್ ಬಂಗೇರ, ರಾಜೇಂದ್ರ ಪ್ರಸಾದ್ ಎಕ್ಕಾರು, ಶಿವಣ್ಣ ಅಂಚನ್ ಕಾಪು, ಈಶ್ವರ ಕಟೀಲು, ಸುರೇಶ್ ಬಂಗೇರ ತೋಕೂರು, ಗುರುರಾಜ್ ಮಲ್ಲಿಗೆಯಂಗಡಿ, ಶೆಡ್ಡೆ ಮಂಜುನಾಥ ಭಂಡಾರಿ, ಕಸ್ತೂರಿ ಪಂಜ, ವಿನೋದ್ ಸಾಲ್ಯಾನ್ ಬೆಳ್ಳಾಯರು, ಇದ್ದರು.

ಸಾಂಸ್ಕೃತಿಕ ಕಾರ್ಯಕ್ರಮ

ಮಧ್ಯಾಹ್ನ 3ರಿಂದ ಚಿತ್ರಾಕ್ಷೀ ಅಜಿತ್ ಬಳಗದವರಿಂದ ಗಂಗೆಗೆ ನೃತ್ಯ ನಮನ, ಸಂಜೆ ಸಮುದ್ರ ತೀರದಲ್ಲಿ ಯುವ ಬ್ರಿಗೇಡ್ ಸ್ಥಾಪಕಾಧ್ಯಕ್ಷ ಚಕ್ರವರ್ತಿ ಸೂಲಿಬೆಲೆ ಅವರಿಂದ ಗಂಗೆಗೆ ನುಡಿ ನಮನ ಹಾಗೂ ಅದ್ದೂರಿ ವೈಭವದ ಗಂಗಾರತಿ ನಡೆಯಿತು.
ಸಂಜೆ ಧಾರ್ಮಿಕ ಕಾರ್ಯಕ್ರಮ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮಗಳ ಅಂಗವಾಗಿ ನೃತ್ಯ ವೈಭವ ಹಾಗೂ ಗಂಗಾ ಗಾಯನ ಕಾರ್ಯಕ್ರಮ ನೆರವೇರಿತು.

ಉಚಿತ ಬಸ್ ಸೇವೆ

ಸಸಿಹಿತ್ಲು ಶ್ರೀ ಭಗವತೀ ಅಮ್ಮನವರ ಬ್ರಹ್ಮಕಲಶೋತ್ಸವದ ದಿನದಂದು ಪಡು ಪಣಂಬೂರು, ಹಳೆಯಂಗಡಿ, ಪಾವಂಜೆ ಪರಿಸರದ ಭಕ್ತಾದಿಗಳಿಗೆ ಸಸಿಹಿತ್ಲು ಶ್ರೀ ಭಗವತಿ ದೇವಸ್ಥಾನಕ್ಕೆ ಉಚಿತ ಬಸ್ ಸೇವೆ ನಡೆಯಿತು.
ಹಳೆಯಂಗಡಿಯ ಸಂಪ್ರೀತಿ ಟ್ರಾವೆಲ್ಸ್ ಹಾಗೂ ಪೂಜಾ ಟ್ರಾವೆಲ್ಸ್ ವತಿಯಿಂದ ಸುಮಾರು 35 ಬಾರಿ ಪಡು ಪಣಂಬೂರು, ಹಳೆಯಂಗಡಿ, ಪಾವಂಜೆ ಪರಿಸರದ ಭಕ್ತಾದಿಗಳಿಗೆ ಉಚಿತ ಪ್ರಯಾಣ ಕಲ್ಪಿಸಲಾಗಿತ್ತು ಎಂದು ಸಂಪ್ರೀತಿ ಟ್ರಾವೆಲ್ಸ್ ಹಾಗೂ ಪೂಜಾ ಟ್ರಾವೆಲ್ಸ್‌ನ ತೇಜಪಾಲ್ ಹಾಗೂ ಜಯಕೃಷ್ಣ ಕೋಟ್ಯಾನ್ ಮಾಧ್ಯಮದಕ್ಕೆ ತಿಳಿಸಿದ್ದಾರೆ

ಭಗವತೀ ಅಮ್ಮನ ಉತ್ಸವದಿಂದಾಗಿ ನಮ್ಮ ಉದ್ಧಾರ



ಮುಲ್ಕಿ: ಭಕ್ತರ ಉದ್ಧಾರಕ್ಕಾಗಿ ಭಗವತೀ ಅಮ್ಮ ಕೇರಳದಿಂದ ಸಸಿಹಿತ್ಲುಗೆ ಬಂದು ನೆಲೆಸಿದ್ದಾರೆ. ಅಂತಹ ಭಗವತೀ ಅಮ್ಮನ ಉತ್ಸವದಿಂದಾಗಿ ನಮ್ಮ ಉದ್ಧಾರ ಸಾಧ್ಯ ಎಂದು ಗುರುಪುರ ವಜ್ರದೇಹಿ ಮಠದ ರಾಜಶೇಖಾರನಂದ ಸ್ವಾಮೀಜಿ ಹೇಳಿದರು.
ಅವರು ಸಸಿಹಿತ್ಲು ಶ್ರೀ ಭಗವತೀ ದೇವಸ್ಥಾನದ ಬ್ರಹ್ಮಕಲಶೋತ್ಸದ 4ನೇ ದಿನದ ಧಾರ್ಮಿಕ ಸಭೆಯಲ್ಲಿ ಆಶೀರ್ವಾಚನ ನೀಡಿದರು. ದಾನಿಗಳನ್ನು ಗೌರವಿಸಲಾಯಿತು. ಮುಂಬೈ ಸಮಿತಿ ಅಧ್ಯಕ್ಷ ವೇದಪ್ರಕಾಶ್ ಶ್ರೀಯಾನ್, ಮುಂಬೈ ಮೊಗವೀರ ವ್ಯವಸ್ಥಾಪನ ಮಂಡಳಿದ ಅಧ್ಯಕ್ಷ ಗಣೇಶ್ ಕಾಂಚನ್, ಮುಂಬೈ ಮೊಗವೀರ ಮಹಾಜನ ಸೇವಾ ಸಂಘದ ಸಂತೋಷ್ ಪುತ್ರನ್, ಶ್ರೀ ಸಾರಂತಾಯ ಗರೊಡಿ ಬ್ರಹ್ಮಕಲಶೋತ್ಸವ ಸಮಿತಿಯ ಅಧ್ಯಕ್ಷ ಸಿ.ಬಿ.ಕರ್ಕೇರ, ಅಖಿಲ ಭಾರತ ಬಿಲ್ಲವ ಮಹಾ ಮಂಡಲದ ಅಧ್ಯಕ್ಷೆರ ಸೂರ್ಯಕಾಂತ್ ಜೆ ಸುವರ್ಣ, ದೇವಾಡಿಗ ಮಹಾಮಂಡಲದ ಅಧ್ಯಕ್ಷೆರ್ ಧರ್ಮಪಾಲ್ ಯು ದೇವಾಡಿಗ, ನಿವೃತ್ತ ಆರ್‌ಬಿಐ ಅಧಿಕಾರಿ ಚಂದ್ರಕಾಂತ ಎಸ್ ಪುತ್ರನ್, ಮುಂಬೈ ಬಿಲ್ಲವರ ಅಸೋಸಿಯೇಷನ್‌ದ ಗೌರವಾಧ್ಯಕ್ಷ ಎಲ್.ವಿ. ಅಮೀನ್, ರವೀಂದ್ರನಾಥ್ ಎಲ್ ಕರ್ಕೇರ,ಉದ್ಯಮಿ ಜಯ ಸಾಲ್ಯಾನ್, ಮೊಗವೀರ ವ್ಯವಸ್ಥಾಪಕ ಮಂಡಳಿ ಮುಂಬೈ ಅಜಿತ್ ಸುವರ್ಣ, ಆಡಳಿತ ಸಮಿತಿ ಅಧ್ಯಕ್ಷ ವಾಮನ್ ಇಡ್ಯಾ, ಚಂದ್ರಶೇಖರ ಸಾಲ್ಯಾನ್, ಸುನೀಲ್ ಆಳ್ವ, ವಿನಯಾನಂದ ಜೋಗಿ, ಜಗನ್ನಾಥ ಕೋಟ್ಯಾನ್, ಅರವಿಂದ ಸಾಲ್ಯಾನ್, ಶೋಭೇಂದ್ರ ಸಸಿಹಿತ್ಲು, ವಿಕೆ ಯಾದವ್ ಎಸ್.ಆರ್. ಪ್ರದೀಪ್ ಇದ್ದರು.

ಉಜಿರೆ ಬ್ರಹ್ಮಕಲಶೋತ್ಸವ ಧಾರ್ಮಿಕ ಸಭೆ | ಧರ್ಮಪಾಲನಾಥ ಶ್ರೀ ಆಶೀರ್ವಚನ

ದೇವರ ಇಚ್ಛೆಯಂತೆ ಎಲ್ಲ ಕಾರ್ಯವೂ ಘಟಿಸುತ್ತದೆ



ಬೆಳ್ತಂಗಡಿ: ಯಾವಾಗ ಏನು ನಡೆಯಬೇಕು, ಅದು ಭಗವಂತನ ಇಚ್ಛೆಯಂತೆ ನಡೆದೆ ನಡೆಯುತ್ತದೆ. ಇದು ಯಾರಿಗೂ ಹೊರತಲ್ಲ, ಜೀವನದಲ್ಲಿ ಹೆಚ್ಚು ಚಿಂತಿಸದೆ, ದೇವರನ್ನು ನೆನೆಯುವ ಮೂಲಕ ಮುಂದುವರಿಯಬೇಕು ಎಂದು ಶ್ರೀ ಆದಿಚುಂಚನಗಿರಿ ಮಹಾಸಂಸ್ಥಾನ ಮಂಗಳೂರು ಶಾಖಾ ಮಠದ ಶ್ರೀ ಧರ್ಮಪಾಲನಾಥ ಸ್ವಾಮೀಜಿ ಹೇಳಿದರು.
ಅವರು ಶನಿವಾರ ಉಜಿರೆ ಶ್ರೀ ಜನಾರ್ದನ ದೇವಸ್ಥಾನದ ಬ್ರಹ್ಮಕಲಶೋತ್ಸವದ ಅಂಗವಾಗಿ ಸುದರ್ಶನ ಸಭಾಭವನದಲ್ಲಿ ಜರಗಿದ ಸಭೆಯಲ್ಲಿ ಆಶೀರ್ವಚನ ನೀಡಿದರು
ಅಧ್ಯಕ್ಷತೆ ವಹಿಸಿದ್ದ ಬ್ರಹ್ಮ ಕಲಶೋತ್ಸವ ಸಮಿತಿ ಅಧ್ಯಕ್ಷ ಪ್ರತಾಪ್ ಸಿಂಹ ನಾಯಕ್ ಮಾತನಾಡಿ, ಸನಾತನ ಪರಂಪರೆಯಲ್ಲಿ ಸಾಧುಗಳಿಗೆ ಅತಿ ದೊಡ್ಡ ಸ್ಥಾನಮಾನ ಇದೆ.ಆಧ್ಯಾತ್ಮಿಕ ಪರಂಪರೆಯಲ್ಲಿ ದೇವರು ಬೇರೆ, ಬೇರೆ ರೀತಿಗಳಲ್ಲಿ ಸೂಚನೆ ನೀಡುತ್ತಾನೆ. ನಮ್ಮ ಕೆಲಸಕ್ಕೆ ಸಾರ್ಥಕತೆಯನ್ನು ದೇವರು ನೀಡುತ್ತಾನೆ. ನಾನಲ್ಲನನ್ನದಲ್ಲ ಎಂಬ ಭಾವನೆ ಮೂಲಕ ಕರ್ತವ್ಯ ಪೂರೈಸಬೇಕು ಎಂದರು.
ಆರಿಕೋಡಿ ಚಾಮುಂಡಿ ಕ್ಷೇತ್ರದ ಧರ್ಮದರ್ಶಿ ಹರೀಶ್ ಆರಿಕೋಡಿ ಮಾತನಾಡಿದರು. ಶಾಸಕ ಹರೀಶ್ ಪೂಂಜ, ಉಜಿರೆ ಎಸ್‌ಡಿಎಂ ಶಿಕ್ಷಣ ಸಂಸ್ಥೆಗಳ ಐಟಿ ವಿಭಾಗದ ಸಿಇಒ ಪೂರನ್ ವರ್ಮ, ವಕೀಲ ಬಿ.ಕೆ. ಧನಂಜಯ ರಾವ್, ಉಜಿರೆಕಾಲಭೈರವೇಶ್ವರ ಒಕ್ಕಲಿಗರ ಸಹಕಾರ ಸಂಘದ ಅಧ್ಯಕ್ಷ ರಂಜನ್ ಜಿ. ಗೌಡ, ಬೆಳ್ತಂಗಡಿ ಭಾರತೀಯ ಜೈನ್ ಮಿಲನ್ ಅಧ್ಯಕ್ಷ ಡಾ. ನವೀನ್‌ಕುಮಾರ್ ಜೈನ್, ಉಜಿರೆ ಮಹಿಳಾ ವಿವಿಧೋದ್ದೇಶ ಸಹಕಾರ ಸಂಘದ ಅಧ್ಯಕ್ಷೆ ಶಶಿಕಲಾ ದೇವಪ್ಪ ಗೌಡ, ರಾಜ್ಯ ಕಾರ್ಯನಿರತ ಪತ್ರಕರ್ತರ ಸಂಘದ ಅಧ್ಯಕ್ಷ ಶಿವಾನಂದ ತಗಡೂರು, ಬ್ರಹ್ಮ ಕಲಶೋತ್ಸವದ ಸಮಿತಿಯ ಕಾರ್ಯಾಧ್ಯಕ್ಷ ಶಶಿಧರ ಶೆಟ್ಟಿ ಬರೋಡ ಉಪಸ್ಥಿತರಿದ್ದರು.
ರಾಜಗೋಪುರ ನಿರ್ಮಾಣ ಸಮಿತಿಯ ಕಾರ್ಯದರ್ಶಿ ರವೀಂದ್ರ ಶೆಟ್ಟಿ ಸುರಭಿ ಸ್ವಾಗತಿಸಿದರು.ಉಪನ್ಯಾಸಕ ದೀಕ್ಷಿತ್ ರೈ ನಿರೂಪಿಸಿದರು. ಬ್ರಹ್ಮಕಲಶೋತ್ಸವ ಸಮಿತಿ ಕಾರ್ಯದರ್ಶಿ ಶಿವಪ್ರಸಾದ್ ಸುರ್ಯ ವಂದಿಸಿದರು.
ಜಗಡೊಡೆಯ ಜನಾರ್ದನ ಮತ್ತು ನಂದಾದೀಪ ಧ್ವನಿ ಸುರುಳಿಯನ್ನು ಸ್ವಾಮೀಜಿ ಬಿಡುಗಡೆಗೊಳಿಸಿದರು.

ಇಂದಿನ ಕಾರ್ಯಕ್ರಮ

ಬೆಳಿಗ್ಗೆ 6 ಗಂಟೆಯಿಂದ ವೈದಿಕ ವಿಧಿ ವಿಧಾನಗಳು, ಅಂಕುರ ಪೂಜೆ, ಬ್ರಹ್ಮ ಕಲಶ ಮಂಡಲ ರಚನೆ, ರುದ್ರ ಯಾಗ ಹಾಗೂ ಇನ್ನಿತರ ಕಾರ್ಯಕ್ರಮಗಳು ಜರಗಲಿವೆ.
ಸಂಜೆ 4:30ಕ್ಕೆ ನಡೆಯುವ ಸಭೆಯಲ್ಲಿ ಶ್ರೀರಾಮ ಕ್ಷೇತ್ರದ ಶ್ರೀ ಬ್ರಹ್ಮಾನಂದ ಸರಸ್ವತಿ ಮಹಾರಾಜ್ ಆಶೀರ್ವಚನ ನೀಡುವರು. ಕಾರ್ಯಾಧ್ಯಕ್ಷ ಶಶಿಧರ ಶೆಟ್ಟಿ ಬರೋಡ ಅಧ್ಯಕ್ಷತೆ ವಹಿಸುವರು. ಅಧ್ಯಕ್ಷ ಕೆ. ಪ್ರತಾಪ ಸಿಂಹ ನಾಯಕ್, ಎಸ್‌ಡಿಎಂ ಶಿಕ್ಷಣ ಸಂಸಂಸ್ಥೆಗಳ ಉಪಾಧ್ಯಕ್ಷ ಸುರೇಂದ್ರ ಕುಮಾರ್, ಶಾಸಕರಾದ ವಿ.ಸುನೀಲ್ ಕುಮಾರ್, ಗುರುರಾಜ ಗಂಟಿಹೊಳೆ, ಕುಕ್ಕೆ ಶ್ರೀ ಸುಬ್ರಹ್ಮಣ್ಯ ದೇವಸ್ಥಾನದ ವ್ಯವಸ್ಥಾಪನಾ ಸಮಿತಿ ಅಧ್ಯಕ್ಷ ಹರೀಶ್ ಇಂಜಾಡಿ, ಕಾಲಭೈರವ ಒಕ್ಕಲಿಗರ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿಯ ಅಧ್ಯಕ್ಷ ರಂಜನ್ ಗೌಡ, ರಬ್ಬರ್ ಸೊಸೈಟಿ ಉಪಾಧ್ಯಕ್ಷ ಅನಂತ ಭಟ್ ಮಚ್ಚಿಮಲೆ, ಸೋನಿಯಾ ವರ್ಮ, ಬಳ್ಳಮಂಜ ದೇವಸ್ಥಾನದ ಆಡಳಿತ ಮೊಕ್ತೇಸರ ಹರ್ಷ ಸಂಪಿಗೆತ್ತಾಯ, ಕಸಾಪ ಜಿಲ್ಲಾಧ್ಯಕ್ಷ ಡಾ. ಎಂ.ಪಿ. ಶ್ರೀನಾಥ್, ಸೇವಾಭಾರತಿ ಅಧ್ಯಕ್ಷೆ ಸ್ವರ್ಣ ಗೌರಿ,ಕೂಟ ಮಹಾ ಜಗತ್ತು ತಾಲೂಕು ಅಧ್ಯಕ್ಷ ವಾಸುದೇವ ಸೋಮಯಾಜಿ, ಬೆಳ್ತಂಗಡಿ ಲಯನ್ಸ್ ಕ್ಲಬ್ ಅಧ್ಯಕ್ಷ ಮುರಳಿ ಬಲಿಪ ಸಹಿತ ಇತರ ಗಣ್ಯರು ಭಾಗವಹಿಸುವರು.

ದೇರಳಕಟ್ಟೆ | ನರವಿಜ್ಞಾನ ರೋಗನಿರೋಧಕ ಕಾರ್ಯಾಗಾರದಲ್ಲಿ ಡಾ.ಆಶಾ ವಿಶ್ವಾಸ

ಉತ್ತಮ ಚಿಕಿತ್ಸಾ ವಿಧಾನ ಅಭಿವೃದ್ಧಿಗೆ ಜಾಗತಿಕ ಪ್ರಯತ್ನ



ಉಳ್ಳಾಲ: ನರವಿಜ್ಞಾನ ಕ್ಷೇತ್ರದಲ್ಲಿ ಹೊಸ ತಲೆಮಾರಿನ ಸಂಶೋಧನೆಗಳು ನಡೆಯುತ್ತಿದ್ದು, ಜಾಗತಿಕ ಮಟ್ಟದಲ್ಲಿ ಅನುವಾದಾತ್ಮಕ ಸಂಶೋಧನೆಗಳ ಮೂಲಕ ಉತ್ತಮ ಚಿಕಿತ್ಸಾ ವಿಧಾನಗಳನ್ನು ಅಭಿವೃದ್ಧಿಪಡಿಸಲು ಪ್ರಯತ್ನಗಳು ನಡೆಯುತ್ತಿವೆ.ನರವಿಜ್ಞಾನ ಸಂಬಂಧಿತ ರೋಗಗಳನ್ನು ಗುರುತಿಸುವುದು ಹಾಗೂ ಚಿಕಿತ್ಸೆಯಲ್ಲಿ ಇತ್ತೀಚಿನ ವರ್ಷಗಳಲ್ಲಿ ಮಹತ್ತರ ಮತ್ತು ರೂಪಾಂತರಕಾರಿ ಬದಲಾವಣೆಗಳು ಕಂಡುಬಂದಿವೆ.ಈ ಕ್ಷೇತ್ರದಲ್ಲಿ ವೈದ್ಯರು,ಸಂಶೋಧಕರು ಹಾಗೂ ವಿದ್ಯಾರ್ಥಿಗಳು ಹೆಚ್ಚಿನ ಸಿದ್ಧತೆಯೊಂದಿಗೆ ಮುಂದಿನ ದಿನಗಳಲ್ಲಿ ಕೆಲಸ ಮಾಡಬೇಕೆಂದು ಕೇರಳದ ಕೊಚ್ಚಿಯ ಆಸ್ಟರ್ ಮೆಡಿಸಿಟಿಯ ಪಾರ್ಕಿನ್ಸನ್ಸ್ ಆಂಡ್ ಮೂವ್ ಮೆಂಟ್ ಡಿಸಾರ್ಡರ್ಸ್ ಕೇಂದ್ರದ ನಿರ್ದೇಶಕರಾದ ಡಾ.ಆಶಾ ಕಿಶೋರ್ ಕರೆ ಕೊಟ್ಟರು.
ನಿಟ್ಟೆ ವಿವಿಗೆ ಸೇರಿದ ಕೆ.ಎಸ್.ಹೆಗ್ಡೆ ವೈದ್ಯಕೀಯ ಮಹಾವಿದ್ಯಾಲಯದ ಉನ್ನತ ನರವಿಜ್ಞಾನ ಸಂಶೋಧನಾ ಕೇಂದ್ರದ ವತಿಯಿಂದ ದೇರಳಕಟ್ಟೆಯ ಎ.ಬಿ ಶೆಟ್ಟಿ ದಂತ ಮಹಾವಿದ್ಯಾಲಯದ ಆವಿಷ್ಕಾರ್ ಸಭಾಂಗಣದಲ್ಲಿ ಆಯೋಜಿಸಲಾದ ಅಂತರಾಷ್ಟ್ರೀಯ ನರವಿಜ್ಞಾನ ರೋಗನಿರೋಧಕ ಕಾರ್ಯಾಗಾರವನ್ನು ಉದ್ಘಾಟಿಸಿ ಅವರು ಮಾತನಾಡಿದರು.
ಭಾರತದಲ್ಲಿ ಮಲ್ಟಿಪಲ್ ಸ್ಕ್ಲೆರೋಸಿಸ್ ಸೇರಿದಂತೆ ಕೆಲವು ನರವಿಜ್ಞಾನ ರೋಗಗಳು ಇಂದಿನ ದಿನಗಳಲ್ಲಿ ಯುವಕರಲ್ಲಿಯೂ ಕಂಡುಬರುತ್ತಿವೆ. ಎಲ್ಲಾ ವಯೋಮಾನದವರಲ್ಲೂ ಈ ರೋಗಗಳ ಪರಿಣಾಮ ಕಾಣಿಸುತ್ತಿದ್ದು,ಜನ್ಯ ಕಾರಣಗಳು ಸಹಿತ ಬೇರೆ ಕಾರಣಗಳನ್ನು ಗಮನದಲ್ಲಿಟ್ಟುಕೊಂಡು ರೋಗದ ಸ್ವರೂಪವನ್ನು ಬದಲಿಸುವ ಚಿಕಿತ್ಸೆಯ ಕುರಿತು ಸಂಶೋಧನೆಗಳು ನಿರಂತರವಾಗಿದೆ. ನರವಿಜ್ಞಾನ ರೋಗಗಳನ್ನು ಗುರುತಿಸಲು ಈಗ ಕ್ಲಿನಿಕಲ್ ಪರೀಕ್ಷೆಗಳ ಜೊತೆಗೆ ಸಿ.ಟಿ. ಸ್ಕ್ಯಾನ್, ಬಯೋಗ್ರಾಂ ಸೇರಿದಂತೆ ಹಲವು ಆಧುನಿಕ ವಿಧಾನಗಳನ್ನು ಬಳಸಲಾಗುತ್ತಿದೆ. ಕೇವಲ ಸ್ಟಿರಾಯ್ಡ್ ಚಿಕಿತ್ಸೆಗಿಂತ ಮುಂದಾಗಿ ಹಲವು ಹೊಸ ಚಿಕಿತ್ಸೆ ವಿಧಾನಗಳು ಅಭಿವೃದ್ಧಿಯಾಗಿವೆ. ಇಂತಹ ರೋಗಗಳಿಗೆ ದೀರ್ಘಾವಧಿಯ ಚಿಕಿತ್ಸೆ ಮತ್ತು ನಿರಂತರ ವೈದ್ಯಕೀಯ ಮೇಲ್ವಿಚಾರಣೆ ಅಗತ್ಯ. ಚಿಕಿತ್ಸೆಯ ವೇಳೆ ಬರುವ ಅಡ್ಡ ಪರಿಣಾಮಗಳನ್ನು ಗಮನದಲ್ಲಿಟ್ಟುಕೊಂಡು ಚಿಕಿತ್ಸೆನೀಡುವುದು ಪ್ರಮುಖ ಸವಾಲಾಗಿದೆಯೆಂದರು.
ಅಧ್ಯಕ್ಷತೆಯನ್ನು ವಹಿಸಿದ್ದ ನಿಟ್ಟೆ ವಿವಿ ಉಪಕುಲಪತಿ ಪ್ರೊ.ಡಾ.ಎಂ.ಎಸ್. ಮೂಡಿತ್ತಾಯ ಮಾತನಾಡಿ, ನಿಟ್ಟೆ ವಿ.ವಿಯಲ್ಲಿಸಂಶೋಧನಾವ್ಯವಸ್ಥೆಸಾಮಾನ್ಯ ಶಿಕ್ಷಣ ಪದ್ಧತಿಯಿಂದ ಭಿನ್ನವಾಗಿದ್ದು ಸಂಶೋಧನೆ ಮತ್ತು ವಿಸ್ತರಣಾ ಸೇವೆಗಳು ಸಮಾಜದ ಅಭಿವೃದ್ಧಿಗೆ ಮಹತ್ತರ ಕೊಡುಗೆ ನೀಡುತ್ತವೆ. ಮುಂದಿನ ವರ್ಷ ನಿಟ್ಟೆ ವಿವಿಯಲ್ಲಿ ಪರಿಣಾಮಕಾರಿ ಶೈಕ್ಷಣಿಕ ಕಾರ್ಯಕ್ರಮ ಹಮ್ಮಿಕೊಳ್ಳುವ ಯೋಜನೆಯಿದ್ದು ಇದರಿಂದ ಸಂಶೋಧನೆ, ವೈದ್ಯಕೀಯ ಕ್ಷೇತ್ರದಲ್ಲಿ ಇನ್ನಷ್ಟು ಪ್ರಗತಿ ಸಾಧಿಸಲು ಸಾಧ್ಯವಾಗಲಿದೆ ಎಂದರು.
ಕುಲಸಚಿವರಾದ ಡಾ.ಹರ್ಷ ಹಾಲಹಳ್ಳಿ,ಕರ್ನಾಟಕ ಮೆಡಿಕಲ್ ಕೌನ್ಸಿಲ್ ಪರಿವೀಕ್ಷಕ ಇಮ್ತಿಯಾದ್ ಮೊಹಮ್ಮದ್ ಇಸ್ಮಾಯಿಲ್ ಉಪಸ್ಥಿತರಿದ್ದರು.
ಕೆ.ಎಸ್.ಹೆಗ್ಡೆ ವೈದ್ಯಕೀಯ ಮಹಾ ವಿದ್ಯಾಲಯದ ಉನ್ನತ ನರವಿಜ್ಞಾನ ಸಂಶೋಧನಾ ಕೇಂದ್ರದ ನಿರ್ದೇಶಕಿ ಡಾ.ಲೇಖಾ ಪಂಡಿತ್ ಸ್ವಾಗತಿಸಿದರು. ಡಾ.ಅಲೆಕ್ಸಾಂಡರ್ ಲೋಬೋ ಮತ್ತು ಡಾ. ಸುಹಾನ್ ಕಾರ್ಯಕ್ರಮ ನಿರೂಪಿಸಿದರು. ಡಾ. ಸಂದೀಪ್ ರೈ ವಂದಿಸಿದರು.

ಸುಳ್ಯ: ಟೈಲರ್ಸ್ ಡೇ ಆಚರಣೆ, ನೇತ್ರ ತಪಾಸಣೆ, ಕನ್ನಡಕ ವಿತರಣೆ ರಕ್ತದಾನ ಶಿಬಿರ



ಸುಳ್ಯ: ಕರ್ನಾಟಕ ಸ್ಟೇಟ್ ಟೈಲರ್ಸ್ ಎಸೋಸಿಯೇಶನ್, ಸುಳ್ಯ ಕ್ಷೇತ್ರ ಸಮಿತಿ ಮತ್ತು ಸಮಿತಿಯ ಆರು ವಲಯಗಳ ವತಿಯಿಂದ ಸುಳ್ಯದ ಶಿವಕೃಪಾ ಕಲಾ ಮಂದಿರದಲ್ಲಿ ನಡೆದ ಟೈಲರ್ಸ್ ಡೇ ಆಚರಣೆ, ಯೇನೆಪೋಯ ಮೆಡಿಕಲ್ ಕಾಲೇಜು ಹಾಗೂ ಆಸ್ಪತ್ರೆ ಸಹಯೋಗದೊಂದಿಗೆ ಉಚಿತ್ರ ನೇತ್ರ ತಪಾಸಣೆ ಮತ್ತು ಕನ್ನಡಕ ವಿತರಣೆ, ಬೃಹತ್ ರಕ್ತದಾನ ಶಿಬಿರ ನಡೆಯಿತು.
ಸುಳ್ಯ ಶಾಸಕಿ ಭಾಗೀರಥಿ ಮುರುಳ್ಯ ಭಾಗವಹಿಸಿ, ಸುಳ್ಯ ಕ್ಷೇತ್ರದ ಆರು ವಲಯಕ್ಕೆ ತಲಾ ಒಂದೊಂದು ಹೊಲಿಗೆ ಯಂತ್ರವನ್ನು ಫಲಾನುಭವಿಗಳಿಗೆ ಹಸ್ತಾಂತರಿಸಿದರು. ಉದ್ಯಮಿ ಪಿ.ಬಿ.ಸುಧಾಕರ ರೈ ಅವರು ಕಾರ್ಯಕ್ರಮಉದ್ಘಾಟಿಸಿಮಾತನಾಡಿದರು. ಸುಳ್ಯ ಕೆಎಸ್‌ಟಿಎ ಅಧ್ಯಕ್ಷ ರವೀಂದ್ರ ಡಿ. ಅಧ್ಯಕ್ಷತೆ ವಹಿಸಿದ್ದರು. ರಾಜ್ಯ ಪ್ರಧಾನ ಕಾರ್ಯದರ್ಶಿ ವಿಜಯ್ ಕೆ.ಎಂ., ಜಿಲ್ಲಾಧ್ಯಕ್ಷ ಜಯಂತ್ ಉರ್ಲಾಂಡಿ, ಜಿಲ್ಲಾ ಉಪಾಧ್ಯಕ್ಷ ಕೆ.ಲಿಗೋಧರ ಆಚಾರ್ಯ, ಸುಳ್ಯ ಪ್ರಧಾನ ಕಾರ್ಯದರ್ಶಿ ವಿಜಯಕುಮಾರ್ ರೈ, ಕೋಶಾಧಿಕಾರಿ ರಮೇಶ್ ತೊಡಿಕಾನ, ಕನ್ನಡಕ ಪ್ರಾಯೋಜಕರಾದ ದೃಷ್ಟಿ ಚಾರಿಟೇಬಲ್‌ಟ್ರಸ್ಟ್ ಅಧ್ಯಕ್ಷ ಬಾಲಕೃಷ್ಣ ಭಟ್ ಕೊಡೆಂಕಿರಿ, ಕೊಡಗು ಜಿಲಾ ಅಧ್ಯಕ್ಷ ಶೇಖ್ ಅಹಮ್ಮದ್, ಯೇನೆಪೋಯ ಸಂಸ್ಥೆಯ ಅಬ್ದುಲ್ ರಝಾಕ್ ಇದ್ದರು.
ವಿಜಯಕುಮಾರ್ ರೈ ಸ್ವಾಗತಿಸಿ, ಕುಸುಮಾಧರ ರೈ ಬೂಡು ನಿರ್ವಹಿಸಿದರು.

ಶಿಮಂತೂರು: ವಿಜೃಂಭಣೆಯ ಪಲ್ಲಕ್ಕಿ ಉತ್ಸವ, ಮಹಾ ರಥೋತ್ಸವ



ಮುಲ್ಕಿ: ಶಿಮಂತೂರು ಶ್ರೀ ಆದಿ ಜನಾರ್ಧನ ದೇವಸ್ಥಾನದಲ್ಲಿ ವರ್ಷಾವಧಿ ಜಾತ್ರೆ ಮಹೋತ್ಸವದ ಪ್ರಯುಕ್ತ ಶನಿವಾರ ರಾತ್ರಿ ಪಲ್ಲಕ್ಕಿ ಉತ್ಸವ ಮಹಾರಥೋತ್ಸವ ವಿಜೃಂಭಣೆಯಿಂದ ನಡೆಯಿತು
ಕ್ಷೇತ್ರದ ತಂತ್ರಿ ಶಿಬರೂರು ವೇದವ್ಯಾಸ ತಂತ್ರಿ, ಅರ್ಚಕ ಪುರುಷೋತ್ತಮ ಭಟ್ ನೇತೃತ್ವದಲ್ಲಿ ಧಾರ್ಮಿಕ ಕಾರ್ಯ ನಡೆದು ರಾತ್ರಿ ಶ್ರೀ ದೇವರ ಪಲ್ಲಕ್ಕಿ ಉತ್ಸವ, ಕಟ್ಟೆ ಪೂಜೆ ಸವಾರಿ, ಮಹಾ ರಥೋತ್ಸವ, ಸಿಡು ಮದ್ದು ಪ್ರದರ್ಶನ, ತೂಟೆದಾರ, ಜಲಕದ ಬಲಿ, ಧ್ವಜಾವರೋಹಣ ನಡೆಯಿತು. ನಾಗೇಶ್ ಬಪ್ಪನಾಡು ಅವರಿಂದ ನಾಗಸ್ವರ ವಾದನ ನಡೆಯಿತು. ಆಡಳಿತ ಮೊಕ್ತೇಸರ ಉದಯಕುಮಾರ್ ಶೆಟ್ಟಿ, ಮಾಜಿ ಮೊಕ್ತೇಸರ ಚಂದ್ರಹಾಸ ಶೆಟ್ಟಿ, ಬಾಬಾ ರಂಜನ್ ಶೆಟ್ಟಿ ಮಜಲಗುತ್ತು, ಜಯಕರ ಶೆಟ್ಟಿ ಮುಂಬೈ, ಸತೀಶ್ ಶೆಟ್ಟಿ, ಶ್ರೀಕಾಂತ್ ಶೆಟ್ಟಿ ಕೆಂಚನಕೆರೆ, ಶಂಕರ್ ಮಾಸ್ಟರ್, ವಿಶ್ವನಾಥ ಶೆಟ್ಟಿ, ಉದಯಕುಮಾರ್ ಶೆಟ್ಟಿ ಆದಿಧನ್, ಮೋಹನ್ ಕೋಟ್ಯಾನ್ ಶಿಮಂತೂರು ಮತ್ತಿತರರು ಇದ್ದರು.

ಹಳೇಗೇಟು ನಾವೂರು: ರಾಸುಗಳ ಜಂತುಹುಳ ನಿವಾರಣಾ ಮಾಹಿತಿ



ಬಂಟ್ವಾಳ: ರಾಸುಗಳ ಜಂತುಹುಳ ನಿವಾರಣಾ ಮಾಹಿತಿ ಕಾರ್ಯಕ್ರಮ ತಾಲೂಕಿನ ಹಳೇಗೇಟು ನಾವೂರು ಹಾಲು ಉತ್ಪಾದಕರ ಸಹಕಾರಿ ಸಂಘದಲ್ಲಿ ನಡೆಯಿತು.
ಕೆಎಂಎಫ್ ನಿರ್ದೇಶಕ ನಂದರಾಮ್ ರೈ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿ, ದಕ್ಷಿಣ ಕನ್ನಡ ಹಾಲು ಉತ್ಪಾದಕರ ಒಕ್ಕೂಟ ಹೈನುಗಾರಿಕೆಗೆ ಉತ್ತಮ ಪ್ರೋತ್ಸಾಹ ನೀಡುತ್ತಿದ್ದು, ರಾಜ್ಯದಲ್ಲಿ ಅತಿ ಹೆಚ್ಚು ದರದಲ್ಲಿ ರೈತರಿಂದ ಹಾಲು ಖರೀದಿಸಲಾಗುತ್ತಿದೆ. ರೈತರನ್ನು ಸ್ವಾವಲಂಬಿಗಳನ್ನಾಗಿಸುವುದು ದಕ್ಷಿಣ ಕನ್ನಡ ಹಾಲು ಉತ್ಪಾದಕರ ಒಕ್ಕೂಟದ ಧ್ಯೇಯವಾಗಿದೆ ಎಂದರು.
ಸಂಪನ್ಮೂಲ ವ್ಯಕ್ತಿಯಾಗಿದ್ದ ಕೆಎಂಎಫ್ ಪಶುವೈದ್ಯಾಧಿಕಾರಿ ಪೂಜಾ ಅವರು ಮಾತನಾಡಿ,ಆರೋಗ್ಯವಾದ ದನಗಳ ಸಾಕಾಣಿಕೆ ಮಾಡಲು ಜಂತುಹುಳ ನಿರ್ವಹಣೆ ತುಂಬಾ ಪ್ರಮುಖವಾಗಿದೆ ಎಂದರು. ನಾವೂರು ಹಾಲು ಉತ್ಪಾದಕರ ಸಂಘದ ಅಧ್ಯಕ್ಷ ಸದಾನಂದ ಹಳೆಗೇಟು ಸಭಾಧ್ಯಕ್ಷತೆ ವಹಿಸಿದ್ದರು. ವಿಸ್ತರಣಾಧಿಕಾರಿ ಪ್ರಫುಲ್ಲ ಇದ್ದರು. ಕಾರ್ಯದರ್ಶಿ ಉಷಾ ಕಾರ್ಯಕ್ರಮ ನಿರೂಪಿಸಿದರು.

ವೈಭವದೊಂದಿಗೆ ಇರುವೈಲು ಶ್ರೀದುರ್ಗಾಪರಮೇಶ್ವರೀ ದೇವರ ಜಾತ್ರೆ ಸಂಪನ್ನ



ಕೈಕಂಬ: ಮೂಡಬಿದಿರೆ ತಾಲೂಕಿನ ಪುರಾಣ ಪ್ರಸಿದ್ಧ ಇರುವೈಲು ಶ್ರೀದುರ್ಗಾಪರಮೇಶ್ವರೀ ದೇವಸ್ಥಾನದ ಒಂಬತ್ತು ದಿನಗಳ ವಾರ್ಷಿಕ ಜಾತ್ರೆ ಭಾನುವಾರ ಮುಂಜಾನೆ ಶ್ರೀದೇವರ ಮತ್ತು ಮಾಡ್ಲಾಯಿ ದೈವದ ಭೇಟಿಯಾಗುವುದರೊಂದಿಗೆ ಸಂಪನ್ನಗೊಂಡಿತು.
ಒಂಬತ್ತು ದಿನಗಳಲ್ಲಿ ಸಾವಿರಾರು ಭಕ್ತರು ಶ್ರೀ ದುರ್ಗಾಪರಮೇಶ್ವರಿ ದೇವಿಯ ವೈಭವವವನ್ನು ಕಂಡು, ಅನ್ನಪ್ರಸಾದ ಸ್ವೀಕರಿಸಿ ಪುನೀತರಾದರು.

ಕುಂಟ ಮುಹೂರ್ತ ಮೂಲಕ ಆರಂಭ

ಬ್ರಹ್ಮಶ್ರೀ ಶಿಬರೂರು ಗೋಪಾಲಕೃಷ್ಣ ತಂತ್ರಿಗಳ ನೇತೃತ್ವದಲ್ಲಿ ಶನಿವಾರ ಬೆಳಿಗ್ಗೆ ಕುಂಟ ಮುಹೂರ್ತ ನಡೆಯುವ ಮೂಲಕ ಪ್ರಾರಂಭವಾದ ಶ್ರೀದೇವಿಯ ವಾರ್ಷಿಕ ಜಾತ್ರಾ ಮಹೋತ್ಸವದಲ್ಲಿ ಕಳೆದ ಸೋಮವಾರ ಧ್ವಜಾರೋಹಣ, ಶ್ರೀ ದುರ್ಗಾಪರಮೇಶ್ವರಿ ದಶಾವತಾರ ಯಕ್ಷಗಾನ ಮಂಡಳಿ ಇರುವೈಲು ಇವರಿಂದ ಯಕ್ಷಗಾನ ಬಯಲಾಟ, ನವಕಲಶಾಭಿಷೇಕ, ಪ್ರಧಾನ ಹೋಮ, ಸತ್ಯನಾರಾಯಣ ಪೂಜೆ, ಶ್ರೀದೇವಿಯ ಆದಿಸ್ಥಳದಲ್ಲಿ ಕಟ್ಟೆ ಪೂಜೆ, ಕೆರೆ ದೀಪೋತ್ಸವ, ಕಲಶ ಪ್ರಧಾನ ಹೋಮ, ಧಾರ್ಮಿಕ ಸಭೆ, ಭೇರಿ ತಾಡನೆ, ನಡುಬಲಿ ಉತ್ಸವ, ಚಂದ್ರಮಂಡಲ ಸೇವೆ, ಬಾಕಿಮಾರು ದೀಪೋತ್ಸವ ಹಾಗೂ ಕಟ್ಟೆ ಪೂಜೆ, ಮಹಾರಥೋತ್ಸವ, ರಾತ್ರಿ ರಥೋತ್ಸವ, ಶಯನೋತ್ಸವ, ಕವಾಟ ಬಂಧನ, ಸುಡುಮದ್ದು ಪ್ರದರ್ಶನ, ಕವಾಟ ಉದ್ಘಾಟನೆ, ಪಲ್ಲಪೂಜೆ, ತುಲಾಭಾರ ಸೇವೆ, ಚೂರ್ಣೋತ್ಸವ, ಚಂದ್ರಮಂಡಲ ಸೇವೆ, ಬ್ರಹ್ಮ ತಂಬಿಲ, ಉತ್ಸವ, ಕಟ್ಟೆ ಪೂಜೆ, ಓಕುಳಿ, ಅವಭೃತದ ಬಳಿಕ ಒಂದು ಸಾವಿರ ಅಡಿಕೆ ಹಾಲೆಗಳಿಂದ ನಿರ್ಮಿಸಿದ ಬೃಹತ್ ಅಣಿಯಿಂದ ಶೋಭಿತ ಮಾಡ್ಲಾಯಿ ದೈವ ಮತ್ತು ದೇವರ ಭೇಟಿಯ ಬಳಿಕ ಭಾನುವಾರ ಮುಂಜಾನೆ ಧ್ವಜಾವರೋಹಣ ನಡೆದು ಮಾಡ್ಲಾಯಿ ದೈವದ ನೇಮ ಮತ್ತು ಭಾನುವಾರ ರಾತ್ರಿ 8ರಿಂದ ಹೊಸಮರಾಯ ದೈವದ ನೇಮದೊಂದಿಗೆ ಜಾತ್ರೆ ಸಂಪನ್ನಗೊಂಡಿತು.

ಸಾಂಸ್ಕೃತಿಕ ಕಾರ್ಯಕ್ರಮ

ಸಾಂಸ್ಕೃತಿಕ ಕಾರ್ಯಕ್ರಮದ ಅಂಗವಾಗಿ ಯಕ್ಷಗಾನ ತಾಳಮದ್ದಳೆ, ಸ್ಥಳೀಯ ಸಂಘ–ಸಂಸ್ಥೆಗಳಿಂದ ನಾಟಕ ಮತ್ತು ಉದ್ಯಮಿಯೊಬ್ಬರ ಪ್ರಾಯೋಜಕತ್ವದಲ್ಲಿ ನೃತ್ಯ ವೈವಿಧ್ಯ ಮತ್ತು ಮ್ಯೂಸಿಕಲ್ ನೈಟ್ ನಡೆಯಿತು.
ಈ ಸಂದರ್ಭ ದೇವಸ್ಥಾನದ ಅರ್ಚಕ ಐ.ರಾಘವೇಂದ್ರ ಭಟ್, ವ್ಯವಸ್ಥಾಪನಾ ಸಮಿತಿಯ ಅಧ್ಯಕ್ಷೆ ಶ್ರೀಮತಿ ಸುಜಾತ ಜೆ. ಶೆಟ್ಟಿ ಕಿಟ್ಟುಬಿಟ್ಟು, ಸಮಿತಿ ಸದಸ್ಯರಾದ ಪೂವಪ್ಪ ಸಾಲ್ಯಾನ್, ತಂಗಿಲ, ಶುಭಕರ ಕಾಜವ, ಕುವೆಸ್ಥಳ ಬಾಳಿಕೆ, ಪದ್ಮನಾಭ ಪೂಜಾರಿ ಕನಡ್ರಕೋಡಿ, ದೀಪಾ ದಿನೇಶ್ ಬಟಾರ, ಮೋಹನ್ ನಾಯಕ್ ಪಂಜ, ಪ್ರದೀಪ್ ಶೆಟ್ಟಿ ಕುತ್ಯಾಡಿ, ಶಿವಾನಂದ ನಾಯ್ಕ ಕೊಡಂಗೆ ಮತ್ತು ಗುತ್ತು ಬಾಳಿಕೆ ಮನೆತನದವರು, ದೇವಸ್ಥಾನದ ಅರ್ಚಕ ವೃಂದ, ಸಿಬ್ಬಂದಿ ವರ್ಗ ಹಾಗೂ ಪುಚ್ಚಮೊಗರು, ಹೊಸಬೆಟ್ಟು ತೋಡಾರು, ತೆಂಕ ಮಿಜಾರು, ಬಡಗ ಮಿಜಾರು, ಎಡಪದವು, ಬಡಗಎಡಪದವು, ಕಿಲೆಂಜಾರು, ಕರ್ವೆ, ಗ್ರಾಮಗಳ ಭಕ್ತರು ಪಾಲ್ಗೊಂಡಿದ್ದರು.

ಸುತ್ತಮುತ್ತ

ಇಂದು ರೆಡ್‌ಕ್ರಾಸ್‌ನಿಂದ ಮಹಿಳೆಯರಿಗೆ ಕ್ಯಾನ್ಸರ್ ತಪಾಸಣಾ ಶಿಬಿರ

ಮಡಿಕೇರಿ: ಭಾರತೀಯ ರೆಡ್ ಕ್ರಾಸ್ ಸಂಸ್ಥೆಯ ಕೊಡಗು ಜಿಲ್ಲಾ ಘಟಕದಿಂದ ಮಾ.9ರಂದು ಮಹಿಳಾ ದಿನಾಚರಣೆ ಹಿನ್ನಲೆಯಲ್ಲಿ ಮಹಿಳೆಯರಿಗಾಗಿ ಕ್ಯಾನ್ಸರ್ ತಪಾಸಣಾ ಶಿಬಿರ ನಡೆಯಲಿದೆ. ಅಲ್ಲದೆ ವೈವಿಧ್ಯಮಯ ಕಾರ್ಯ ಕ್ರಮಗಳೊಂದಿಗೆ ಮಹಿಳಾ ದಿನಾಚರಣೆ ಸಂಭ್ರಮಾಚರಣೆ ಜರುಗಲಿದೆ ಎಂದು ರೆಡ್ ಕ್ರಾಸ್ ಜಿಲ್ಲಾ ಸಭಾಪತಿ ಬಿ.ಕೆ. ರವೀಂದ್ರ ರೈ ಮಾಹಿತಿ ನೀಡಿದ್ದಾರೆ. ನಗರದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾಹಿತಿ ನೀಡಿದ ಅವರು, ಮಾ.9ರಂದು ಬೆಳಿಗ್ಗೆ 10 ಗಂಟೆಗೆ ಮಡಿಕೇರಿಯ ರೆಡ್ ಬ್ರಿಕ್ಸ್ ಇನ್‌ನ ಸತ್ಕಾರ್ ಸಭಾಂಗಣದಲ್ಲಿ ಕ್ಯಾನ್ಸರ್ ತಪಾಸಣಾ ಶಿಬಿರ ಮತ್ತು ಮಹಿಳಾ ದಿನಾಚರಣೆಯನ್ನು ರೆಡ್ ಕ್ರಾಸ್ ಜಿಲ್ಲಾಧ್ಯಕ್ಷರಾಗಿರುವ ಜಿಲ್ಲಾಧಿಕಾರಿ ಎಸ್. ಜೆ. ಸೋಮಶೇಖರ್ ಅಧ್ಯಕ್ಷತೆಯಲ್ಲಿ ಮಡಿಕೇರಿ ನಗರಸಭಾ ಅಧ್ಯಕ್ಷೆ ಕಲಾವತಿ ಉದ್ಘಾಟಿಸಲಿದ್ದಾರೆ. ಅಪರ ಜಿಲ್ಲಾಧಿಕಾರಿ ಆರ್.ಐಶ್ವರ್ಯ ಆಶಯ ಭಾಷಣ ಮಾಡಲಿದ್ದಾರೆ. ಕೊಡಗು ಪೊಲೀಸ್ ವರಿಷ್ಠಾಧಿಕಾರಿ ಬಿಂದುಮಣಿ, ವಿಧಾನಪರಿಷತ್ ಮಾಜಿ ಸದಸ್ಯೆ ಶಾಂತೆಯಂಡ ವೀಣಾ ಅಚ್ಚಯ್ಯ, ರಾಷ್ಟ್ರಪ್ರಶಸ್ತಿ ಪಡೆದ ಕೊಟ್ಟುಕ್ಕೊತ್ತೀರ ಯಶೋದಾ ಪ್ರಕಾಶ್, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಉಪ ನಿರ್ದೇಶಕ ಪ್ರಸನ್ನ ಕುಮಾರ್ ಅತಿಥಿಯಾಗಿರುವರು. ಮಡಿಕೇರಿ ತಾಲೂಕಿನ ಅಂಗನವಾಡಿಗಳ 15 ಕಾರ್ಯಕರ್ತೆಯರು, ಸಹಾಯಕಿಯರಿಗೆ ಈ ಸಂದರ್ಭ ಸನ್ಮಾನದ ಮೂಲಕ ಗೌರವಿಸಲಾಗುತ್ತದೆ ಎಂದು ರವೀಂದ್ರ ರೈ ವಿವರಿಸಿದರು. ಬಳಿಕ ಮಹಿಳಾ ವಿವಿಧ ವಿಚಾರ ಗೋಷ್ಠಿಗಳು ನಡೆಯಲಿವೆ ಎಂದು ಬಗ್ಗೆ ರೆಡ್ ಕ್ರಾಸ್ ಜಿಲ್ಲಾ ಉಪಾಧ್ಯಕ್ಷ ಅನಿಲ್ ಎಚ್.ಟಿ. ತಿಳಿಸಿದರು. ರೆಡ್‌ಕ್ರಾಸ್ ಜಿಲ್ಲಾ ಖಜಾಂಚಿ ಪ್ರಸಾದ್ ಗೌಡ , ರೆಡ್ ಕ್ರಾಸ್ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಎಂ.ಧನಂಜಯ್ ಮಾತನಾಡಿದರು. ರೆಡ್ ಕ್ರಾಸ್ ನಿರ್ದೇಶಕ ಕೆ.ಟಿ.ಉತ್ತಯ್ಯ ಗೋಷ್ಠಿಯಲ್ಲಿದ್ದರು.

ಕೊಣಾಲು ಸರಕಾರಿ ಪ್ರೌಢಶಾಲೆ: ಟ್ಯೂಷನ್ ಕ್ಲಾಸ್ ಸಮಾರೋಪ

ಕಡಬ: ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಕಡಬ ತಾಲೂಕು ಜ್ಞಾನವಿಕಾಸ ಮಹಿಳಾ ಕಾರ್ಯಕ್ರಮದಡಿ ಕೊಣಾಲು ಸರಕಾರಿ ಪ್ರೌಢಶಾಲೆಯಲ್ಲಿ 10ನೇ ತರಗತಿ ವಿದ್ಯಾರ್ಥಿಗಳಿಗೆ ಕಳೆದ ಮೂರು ತಿಂಗಳಿನಿಂದ ನಡೆಸಲಾಗುತ್ತಿದ್ದ ಉಚಿತ ಟ್ಯೂಷನ್ ಕ್ಲಾಸ್‌ನ ಸಮಾರೋಪ ಸಮಾರಂಭ ನಡೆಯಿತು. ಅಧ್ಯಕ್ಷತೆ ವಹಿಸಿದ್ದ ಶಾಲಾ ಮುಖ್ಯ ಶಿಕ್ಷಕ ಶಶಿಧರ್ ಶೆಟ್ಟಿ ಮಾತನಾಡಿ, ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ಮೂಲಕ ನೀಡಲಾಗುತ್ತಿರುವ ಟ್ಯೂಷನ್ ಕ್ಲಾಸ್ ನಮ್ಮ ಶಾಲೆಯ ವಿದ್ಯಾರ್ಥಿಗಳಿಗೆ ಅತ್ಯಂತ ಪ್ರಯೋಜನಕಾರಿಯಾಗಿದೆ. ಇಂತಹ ಕಾರ್ಯಕ್ರಮಗಳ ಮೂಲಕ ಗ್ರಾಮೀಣ ಪ್ರದೇಶದ ಮಕ್ಕಳ ಕಲಿಕೆಗೆ ಉತ್ತೇಜನ ನೀಡುವುದರ ಜೊತೆಗೆ ಸರಕಾರಿ ಶಾಲೆಗಳ ಅಭಿವೃದ್ಧಿಗೂ ಸಹಕಾರಿಯಾಗುತ್ತಿದೆ ಎಂದು ಶ್ಲಾಘಿಸಿದರು. ಸಂಪನ್ಮೂಲ ವ್ಯಕ್ತಿಯಾಗಿ ಭಾಗವಹಿಸಿದ್ದ ನೆಲ್ಯಾಡಿ ಜೆಸಿಐಯ ಪೂರ್ವಾಧ್ಯಕ್ಷೆ ಸುಚಿತ್ರ ಬಂಟ್ರಿಯಾಲ್ ಅವರು ಎಸ್ಸೆಸ್ಸೆಲ್ಸಿ ಪರೀಕ್ಷಾ ತಯಾರಿ, ವಿದ್ಯಾರ್ಥಿಗಳಿಗೆ ಪೋಷಕರ ಪ್ರೋತ್ಸಾಹದ ಮಹತ್ವ ಹಾಗೂ ಮಕ್ಕಳ ಮತ್ತು ಪೋಷಕರ ನಿರೀಕ್ಷೆಗಳ ಕುರಿತು ವಿವರಿಸಿದರು. ಸಾಧನೆ ಗುರಿ ತಲುಪಲು ವಿದ್ಯಾರ್ಥಿಗಳು , ಪೋಷಕರ ನಡುವೆ ಪರಸ್ಪರ ಸಹಕಾರ ಅಗತ್ಯವಿದೆ ಎಂದರು. 10ನೇ ತರಗತಿಯ ವಿದ್ಯಾರ್ಥಿನಿ ದೀಕ್ಷಾ ಉಚಿತ ಟ್ಯೂಷನ್ ಕ್ಲಾಸ್ ಮೂಲಕ ಲಭಿಸಿದ ಸೌಲಭ್ಯಗಳ ಬಗ್ಗೆ ತನ್ನ ಅನಿಸಿಕೆ ಹಂಚಿಕೊಂಡರು. ಜ್ಞಾನವಿಕಾಸ ಸಮನ್ವಯಾಧಿಕಾರಿ ಚೇತನ ಶುಭ ಹಾರೈಸಿದರು. ಶಾಲಾ ಶಿಕ್ಷಕಿ ರಮಣಿ, ಒಕ್ಕೂಟದ ಅಧ್ಯಕ್ಷ ಲಿತಿನ್, ಎಸ್‌ಡಿಎಂಸಿ ಅಧ್ಯಕ್ಷ ಕಮಲಾಕ್ಷ, ಟ್ಯೂಷನ್ ಶಿಕ್ಷಕಿ ಸಂಧ್ಯಾ ಉಪಸ್ಥಿತರಿದ್ದರು. ಶಾಲಾ ಸಹ ಶಿಕ್ಷಕ ಬಾಲಕೃಷ್ಣ ಸ್ವಾಗತಿಸಿ, ಶಿಕ್ಷಕಿ ನೀರಜಾ ವಂದಿಸಿದರು. ಶಿಕ್ಷಕ ಶಾಂತಾರಾಮ ನಿರ್ವಹಿಸಿದರು. ಸೇವಾ ಪ್ರತಿನಿಧಿ ಪ್ರತಿಮಾ ಕಾರ್ಯಕ್ರಮ ಸಂಘಟಿಸಿದ್ದರು.

ಶಿಕ್ಷಕ-ರಕ್ಷಕ ಸಭೆ

ಕುಂದಾಪುರ : ಕುಂದಾಪುರದ ಯುಬಿಎಂಸಿ ಆಂಗ್ಲ ಮಾಧ್ಯಮ ಶಾಲೆಯಲ್ಲಿ ಶಿಕ್ಷಕ-ರಕ್ಷಕ ಸಭೆ ನಡೆಯಿತು. ಶಾಲಾ ಸಂಚಾಲಕಿ ಐರಿನ್ ಸಾಲಿನ್ಸ್ ಅಧ್ಯಕ್ಷತೆ ವಹಿಸಿದ್ದರು. ಸಂಪನ್ಮೂಲ ವ್ಯಕ್ತಿಗಳಾಗಿದ್ದ ಸಿಎಸ್‌ಐ ಕೃಪಾ ಚರ್ಚ್‌ನ ಧರ್ಮಗುರು ರೆವೆರೆಂಡ್ ಇಮಾನುಯಲ್ ಜಯಕರ ಮಾತನಾಡಿ, ಮಕ್ಕಳಿಗೆ ಶಿಕ್ಷಣದೊಂದಿಗೆ ಮಾನವೀಯ ಮೌಲ್ಯಗಳನ್ನು ಕಲಿಸುವುದು ಶಿಕ್ಷಕರು ಮತ್ತು ರಕ್ಷಕರ ಆದ್ಯ ಕರ್ತವ್ಯ ಎಂದು ಹೇಳಿದರು. ಸಿಎಸ್‌ಐ ಕೃಪಾ ನರ್ಸರಿ ಶಾಲಾ ಮುಖ್ಯೋಪಾಧ್ಯಾಯಿನಿ ಸವಿತಾ, ಶಾಲಾ ಅಭಿವೃದ್ಧಿ ಸಮಿತಿ ಸದಸ್ಯರಾದ ಪ್ರಶಾಂತ್ ಕುಮಾರ್, ಮುಸ್ತಾಬೆನ್, ಕುಂದಾಪುರ ಸರಕಾರಿ ಪ.ಪೂ. ಕಾಲೇಜಿನ ಪ್ರಾಧ್ಯಾಪಕರುಗಳಾದ ಸತ್ಯಾನಂದ ಸಾಲಿನ್ಸ್, ಶಂಕರ್ ನಾರಾಯಣ್ ಮಿತ್ಯಂತಾಯ ಉಪಸ್ಥಿತರಿದ್ದರು.

ಮಹಿಳಾ ದಿನಾಚರಣೆ | ನಿವೃತ್ತಿ ಹೊಂದಿದ ಅಂಗನವಾಡಿ ಕಾರ್ಯಕರ್ತೆಯರು, ಸಹಾಯಕಿಯರಿಗೆ ಗೌರವ

ಮಹಿಳೆಯರಿಗೆ ಶಕ್ತಿ ತುಂಬುವ ಕೆಲಸ: ಶಾಸಕ ಅಶೋಕ್ ರೈ



ಪುತ್ತೂರು: ವ್ಯಕ್ತಿಗೆ, ಸಮಾಜಕ್ಕೆ ಜೀವ ಕೊಡುವ ಶಕ್ತಿ ಇರುವುದು ಮಹಿಳೆಗೆ. ಬಡವರು, ಮಹಿಳೆಯರು ಆರ್ಥಿಕ ಶಕ್ತಿ ತುಂಬಿದಾಗ ದೇಶ, ರಾಜ್ಯವೂ ಅಭಿವೃದ್ಧಿ ಪಥದಲ್ಲಿ ಸಾಗಲು ಸಾಧ್ಯ ಎನ್ನುವ ಕಾರಣಕ್ಕೆ ಮಹಿಳಾ ಕೇಂದ್ರಿತ ಯೋಜನೆಗಳನ್ನು ಜಾರಿಗೊಳಿಸಲಾಗುತ್ತಿದೆ ಎಂದು ಪುತ್ತೂರು ಶಾಸಕ ಅಶೋಕ್ ರೈ ಹೇಳಿದ್ದಾರೆ.

ದ.ಕ. ಜಿ.ಪಂ., ತಾ.ಪಂ. ಪುತ್ತೂರು, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ, ಪಂಚ ಗ್ಯಾರಂಟಿಗಳ ಅನುಷ್ಠಾನ ಸಮಿತಿ, ಸ್ತ್ರೀ ಶಕ್ತಿ ಬ್ಲಾಕ್ ಸೊಸೈಟಿ, ಅಂಗನವಾಡಿ ಕಾರ್ಯಕರ್ತೆಯರು, ಸಹಾಯಕಿ ಯರ ಸಂಘಗಳ ಸಹಯೋಗದಲ್ಲಿ ಭಾನುವಾರ ಪುರಭವನದಲ್ಲಿ ಆಯೋಜಿಸಲಾದ ಮಹಿಳಾ ದಿನಾಚರಣೆ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಅತಿಥಿಯಾಗಿದ್ದ ತಾಲೂಕು ಗ್ಯಾರಂಟಿ ಅನುಷ್ಠಾನ ಸಮಿತಿ ಅಧ್ಯಕ್ಷ ಉಮಾನಾಥ ಶೆಟ್ಟಿ ಪೆರ್ನೆ ಮಾತನಾಡಿ, ಗೃಹಲಕ್ಷ್ಮೀ ಯೋಜನೆ ಪುತ್ತೂರು ಕ್ಷೇತ್ರದ 72 ಸಾವಿರ ಮನೆಗಳಿಗೆ ತಲುಪಿದೆ. ಅನ್ನಭಾಗ್ಯ ಯೋಜನೆಯಲ್ಲಿ 38,397 ಮಂದಿ ಫಲಾನುಭವಿಗಳು, ಶಕ್ತಿ ಯೋಜನೆಯಲ್ಲಿ 4.50 ಕೋಟಿಯ ಉಚಿತ ಪ್ರಯಾಣ ಮಾಡಿದ್ದಾರೆ. ಮುಖ್ಯವಾಗಿ ಮಹಿಳೆಯರಿಗೆ ಶಕ್ತಿ ತುಂಬುವ ಕೆಲಸ ವನ್ನು ಕರ್ನಾಟಕ ಸರಕಾರ ಮಾಡಿದ ಎಂದರು.

ಅಧ್ಯಕ್ಷತೆ ವಹಿಸಿದ ತಾ.ಪಂ. ಕಾರ್ಯನಿರ್ವಹಣಾಧಿಕಾರಿ ನವೀನ್ ಭಂಡಾರಿ ಮಾತನಾಡಿ, ಸಮಾಜದಲ್ಲಿ ಮಹತ್ವದ ಜವಾಬ್ದಾರಿ ನಿಭಾಯಿಸುವ ಪಂಚಾಯತ್ ರಾಜ್ ವ್ಯವಸ್ಥೆಯಲ್ಲಿ 50 ಶೇ. ಮೀಸಲಾತಿಯನ್ನು ನೀಡಲಾಗಿದೆ. ಆದರೆ ವಿಧಾನಸಭೆಯಲ್ಲಿ 1956 ರಲ್ಲಿ 13 ಮಂದಿ ಮಹಿಳಾ ಪ್ರತಿನಿಗಳಿದ್ದರೆ ಈಗ 10 ಮಂದಿ ಮಾತ್ರ ಇದ್ದಾರೆ. ಮಹಿಳೆಯರು ಎಲ್ಲಾ ರೀತಿಯ ಅವಕಾಶಗಳನ್ನು ಬಳಸಿಕೊಳ್ಳಬೇಕು ಎಂದರು.

ಸಂಪನ್ಮೂಲ ವ್ಯಕ್ತಿಯಾಗಿದ್ದ ನ್ಯಾಯವಾದಿ ರಾಜೇಶ್ವರಿ ಅವರು ಮಹಿಳಾ ಸಬಲೀಕರಣದ ಕುರಿತು ಮಾತನಾಡಿದರು. ಈ ಸಂದರ್ಭ ನಿವೃತ್ತಿ ಹೊಂದಿದ ಅಂಗನವಾಡಿ ಕಾರ್ಯಕರ್ತೆಯರು, ಸಹಾಯಕಿ ಯರನ್ನು ಗೌರವಿಸಲಾಯಿತು. ಸ್ತ್ರೀಶಕ್ತಿ ಬ್ಲಾಕ್ ಸೊಸೈಟಿ ಜಿಲ್ಲಾಧ್ಯಕ್ಷೆ ಶಕುಂತಳಾ, ತಾಲೂಕು ಅಧ್ಯಕ್ಷೆ ಕಮಲಾ, ಸಹಾಯಕ ಶಿಶು ಅಭಿವೃದ್ಧಿ ಯೋಜನಾಧಿಕಾರಿ ಉಪಸ್ಥಿತರಿದ್ದರು. ತಾಲೂಕು ಶಿಶು ಅಭಿವೃದ್ಧಿ ಯೋಜನಾಧಿಕಾರಿ ಹರೀಶ್ ಸ್ವಾಗತಿಸಿ, ಸುಜಾತ ನಿರೂಪಿಸಿದರು.

ಸುಳ್ಯದಲ್ಲಿ ವಿಶ್ವ ಮಹಿಳಾ ದಿನಾಚರಣೆ



ಸುಳ್ಯ: ಮಹಿಳೆ ತನ್ನ ಐಡೆಂಟಿಟಿ ಹೊಂದುವ ಮೂಲಕ ಸಮಾಜದಲ್ಲಿ ಮಹಿಳೆಯು ಅಬಲೆಯಲ್ಲ ಸಬಲೆಯಾಗಿದ್ದಾಳೆ ಎಂದು ತೋರಿಸಿಕೊಳ್ಳಬೇಕು ಎಂದು ಸುಳ್ಯ ಶಿಶು ಅಭಿವೃದ್ಧಿ ಯೋಜನಾಧಿಕಾರಿ ಶೈಲಾಜ ಬಿ. ಹೇಳಿದ್ದಾರೆ.

ಅವರು ಸುಳ್ಯ ತಾಲೂಕು ಮಹಿಳಾ ಮಂಡಲಗಳ ಒಕ್ಕೂಟ ಸುಳ್ಯ ವತಿಯಿಂದ ವಿಶ್ವ ಮಹಿಳಾ ದಿನಾಚರಣೆ ಕಾರ್ಯಕ್ರಮವನ್ನು ಸುಳ್ಯ ಲಯನ್ಸ್ ಕ್ಲಬ್ ಸಭಾಂಗಣದಲ್ಲಿ ಉದ್ಘಾಟಿಸಿ ಮಾತನಾಡಿದರು.

ಸುಳ್ಯ ತಾಲೂಕು ಆಸ್ಪತ್ರೆ ಸ್ತ್ರೀ ರೋಗ ಮತ್ತು ಪ್ರಸೂತಿ ತಜ್ಞೆ ಡಾ.ಶಾಲಿನಿ ವಿ.ಎಲ್. ಮಾತನಾಡಿ, ಸುಳ್ಯದಲ್ಲಿ ಇಂದಿಗೂ ಶಾಲೆಯಿಂದ ಹೊರಗುಳಿದ ಅಪ್ರಾಪ್ತೆಯರು ಗರ್ಭಾವತಿಯಾಗಿ ಆಸ್ಪತ್ರೆಗೆ ಬರುತ್ತಿದ್ದು , ಇಂತಹ ಪ್ರಕರಣವನ್ನು ಕಡಿವಾಣ ಹಾಕಲು ಮಹಿಳಾ ಮಂಡಳಗಳು ಕಾರ್ಯಪ್ರವೃತ್ತರಾಗಬೇಕು ಎಂದರು.

ಅಧ್ಯಕ್ಷತೆಯನ್ನು ತಾಲೂಕು ಮಹಿಳಾ ಮಂಡಲದ ಒಕ್ಕೂಟದ ಅಧ್ಯಕ್ಷೆ ಪುಷ್ಪ ಡಿ. ಪ್ರಸಾದ್ ಕಾನತ್ತೂರು ವಹಿಸಿದ್ದರು. ವೇದಿಕೆಯಲ್ಲಿ ಹರಿಣಿ ಸದಾಶಿವ, ಹೇಮ ವೇಣುಗೋಪಾಲ್, ಚಂದ್ರಾಕ್ಷಿ ಜೆ. ರೈ ಉಪಸ್ಥಿತರಿದ್ದರು. ಎಂ. ವಿ. ಗಿರಿಜಾ ಪ್ರಾರ್ಥಿಸಿದರು. ಚಂದ್ರಾಕ್ಷಿ ಜೆ. ರೈ ಪ್ರಸ್ತಾವನೆಗೈದು, ಸ್ವಾಗತಿಸಿ, ಹೇಮಾ ವೇಣುಗೋಪಾಲ ವಂದಿಸಿದರು. ಚಿತ್ರಲೇಖಾ ಮಡಪ್ಪಾಡಿ ಕಾರ್ಯಕ್ರಮ ನಿರೂಪಿಸಿದರು.

ಪ್ರತಿಯೊಬ್ಬರಲ್ಲೂ ಧಾರ್ಮಿಕ ಪ್ರಜ್ಞೆ ಮೂಡಬೇಕು: ಡಾ.ಹರಿಕೃಷ್ಣ ಪುನರೂರು



ಮಂಗಳೂರು: ಭಾರತೀಯ ಸನಾತನ ಸಂಸ್ಕೃತಿ ಉಳಿಯಬೇಕಾದರೆ ಪ್ರತಿಯೊಬ್ಬರಲ್ಲಿ ಧಾರ್ಮಿಕ ಪ್ರಜ್ಞೆ ಮೂಡಬೇಕು. ಮನೆ ಮಂದಿ ಮಕ್ಕಳಿಗೆ ಉತ್ತಮ ಸಂಸ್ಕಾರ ಕಲಿಸಿಕೊಡಬೇಕು ಎಂದು ಕನ್ನಡ ಸಾಹಿತ್ಯ ಪರಿಷತ್ ಮಾಜಿ ಅಧ್ಯಕ್ಷ ಧರ್ಮದರ್ಶಿ ಡಾ.ಹರಿಕೃಷ್ಣ ಪುನರೂರು ಹೇಳಿದರು.

ಯಕ್ಷ ಸ್ನೇಹ ಕಲಾಪ್ರತಿಷ್ಠಾನ ಕೊಂಚಾಡಿ ಇದರ ವತಿಯಿಂದ ವಿಶ್ವ ಮಹಿಳಾ ದಿನಾಚರಣೆಯ ಪ್ರಯುಕ್ತ ಆಯೋಜಿಸಿದ ಮಹಿಳಾ ಯಕ್ಷಗಾನ ತಾಳಮದ್ದಳೆ ಅಷ್ಟಾಹ ಸಂಭ್ರಮದ ಚತುರ್ಥ ದಿನದ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಉದ್ಯಮಿ ಮಹಾಬಲ ಕೊಟ್ಟಾರಿ ಅಧ್ಯಕ್ಷತೆ ವಹಿಸಿದ್ದರು. ವೇದಿಕೆಯಲ್ಲಿ ಪ್ರಮುಖರಾದ ಚಂಚಲ ತೇಜೋಮಯ, ಹರಿನಾರಾಯಣ ಬೈಪಡಿತ್ತಾಯ, ದೇವೇಂದ್ರ ಶೆಟ್ಟಿಗಾರ, ಕಿರಣ ಮಹೇಶ ದೇವಾಡಿಗೆ, ತಲಪಾಡಿ ಯಕ್ಷ ಸಿಂಧೂರ ಮಹಿಳಾ ಯಕ್ಷಗಾನ ಕೂಟದ ಸಂಚಾಲಕಿ ರಾಧಾ ಹೊಳ್ಳ ಯಕ್ಷ ಸ್ನೇಹ ಕಲಾಪ್ರತಿಷ್ಠಾನದ ಗೌರವಾಧ್ಯಕ್ಷ ಮಧುಸೂದನ ಅಲೆವೂರಾಯ, ಅಧ್ಯಕ್ಷೆ ಗೀತಾಲಕ್ಷ್ಮೀಶ, ಪ್ರತಿಷ್ಠಾನದ ಪದಾಧಿಕಾರಿ ಗಳಾದ ಮೋಹಿನಿ ಗೋಪಾಲ, ಅವನೀಶ ಭಟ್, ಶಿವಪ್ರಸಾದ್ ಕೊಕ್ಕಡ, ಹರೀಶ ಪಾಟಾಳಿ, ಅರುಣ್ ಕುಮಾರ್, ಗಣೇಶ ಬಿ.ಜಿ., ಯೋಗೀಶ ದೇವಾಡಿಗ, ಸೀಮಾ ಅರುಣ್, ಪ್ರಜ್ಞಾ ವಸಂತ, ಅನುರಾಧ ಯೋಗೀಶ, ಆಧ್ಯಾ, ಲಕ್ಷ್ಯಾ, ಕೃತಿ, ಹೃತ್ವಿ ಲಕ್ಷಾ, ವೃಷಭೇಂದ್ರ ಮತ್ತಿತರರಿದ್ದರು.

ಹೆತ್ತವರ ಪ್ರೋತ್ಸಾಹ ಅಗತ್ಯ

ಧಾರ್ಮಿಕ ಮತ್ತು ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ಮಕ್ಕಳು ತಮ್ಮನ್ನು ತೊಡಗಿಸಿಕೊಳ್ಳುವಂತೆ ಹೆತ್ತವರು ಪ್ರೋತ್ಸಾಹ ಮಾಡಬೇಕು.

● ಡಾ.ಹರಿಕೃಷ್ಣ ಪುನರೂರು

ಪಟ್ಲ ಫೌಂಡೇಷನ್ ಟ್ರಸ್ಟ್ ಪಳ್ಳಿ ಘಟಕದ ವಾರ್ಷಿಕೋತ್ಸವ, ಸಾಧಕರಿಗೆ ಸನ್ಮಾನ



ಮಂಗಳೂರು: ಯಕ್ಷಧ್ರುವ ಪಟ್ಲ ಫೌಂಡೇಷನ್ ಟ್ರಸ್ಟ್ ಪಳ್ಳಿ ನಿಂಜೂರು ಘಟಕದ 7ನೇ ವಾರ್ಷಿಕೋತ್ಸವ ಹಾಗೂ ಯಕ್ಷ ಮಿತ್ರರು ಪಳ್ಳಿ ನಿಂಜೂರು ಇದರ 9ನೇ ವರ್ಷದ ವಾರ್ಷಿಕೋತ್ಸವ ಶನಿವಾರ ಟ್ರಸ್ಟ್‌ನ ಸ್ಥಾಪಕಾಧ್ಯಕ್ಷ ಯಕ್ಷಧ್ರುವ ಪಟ್ಲ ಸತೀಶ್ ಶೆಟ್ಟಿ ಇವರ ಅಧ್ಯಕ್ಷತೆಯಲ್ಲಿ ಪಳ್ಳಿ ರಾಮಕೃಷ್ಣ ಸಭಾಭವನದ ಬಳಿ ನಡೆಯಿತು.

ಅತಿಥಿಗಳಾಗಿ ಪಳ್ಳಿ ಗ್ರಾ.ಪಂ. ಅಧ್ಯಕ್ಷೆ ಉಷಾ ಯು. ಅಂಚನ್, ಪಟ್ಲ ಫೌಂಡೇಷನ್ ಗೋವಾ ಘಟಕದ ಅಧ್ಯಕ್ಷ ಗಣೇಶ್ ಶೆಟ್ಟಿ ಇರ್ವತ್ತೂರು, ಜಗದೀಶ್ ಶೆಟ್ಟಿ ಪಳ್ಳಿ ದೊಡ್ಡಮನೆ, ಸಾಯಿನಾಥ ಶೆಟ್ಟಿ, ಚಂದ್ರಶೇಖರ ಶೆಟ್ಟಿ, ನವೀನ್ ಶೆಟ್ಟಿ, ಅರುಣ್ ಕುಮಾರ್ ನಿಟ್ಟೆ, ಸುಮಿತ್ ಶೆಟ್ಟಿ ಕೌಡೂರು, ರತ್ನಾಕರ ಅಮೀನ್, ಪಳ್ಳಿ ಘಟಕದ ಗೌರವಾಧ್ಯಕ್ಷ ಭರತ್ ಹೆಗ್ಡೆ ಪಳ್ಳಿ, ಅಧ್ಯಕ್ಷ ಸುನೀಲ್ ಬಿ ಶೆಟ್ಟಿ ಮತ್ತು ಘಟಕದ ಸರ್ವ ಪದಾಧಿಕಾರಿಗಳು ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು.

ಈ ಸಂದರ್ಭ ಸರಕಾರಿ ಹಿ.ಪ್ರಾ.ಶಾಲೆ ಪಳ್ಳಿ ಇದರ ಮುಖ್ಯ ಶಿಕ್ಷಕಿ ನಾಗರತ್ನ ಎಂ.ಆರ್. , ಶ್ರೀರಾಮ ಯಕ್ಷಗಾನ ಕಲಾಭಿಮಾನಿ ಬಳಗದ ಅಧ್ಯಕ್ಷ ರತ್ನಾಕರ ಅಮೀನ್, ಕಲಾವಿದರ ಮಹಾಲಿಂಗನಾಯ್ಕ ನಿರ್ಚಾಲು, ದೈವನರ್ತಕರಾದ ಉಗ್ಗಪ್ಪ ಪರವ ಕೆರ್ವಾಶೆ, ರಂಗಭೂಮಿ ಕಲಾವಿದ ಪ್ರಜ್ವಲ್ ಭಂಡಾರಿ ಕೌಡೂರು, ಸಚಿನ್ ಆಚಾರ್ಯ ಕೌಡೂರು ಅವರನ್ನು ಗೌರವಧನದೊಂದಿಗೆ ಸನ್ಮಾನಿಸಲಾಯಿತು.

ಯಕ್ಷಚಂದ್ರಿಕೆ ಶಶಿಕಾಂತ್ ಶೆಟ್ಟಿ ಕಾರ್ಕಳ ಇವರ ಪರ ಪತ್ನಿ ದೇವಿಕಾ, ಕಲಾವಿದರ ದಿನೇಶ್ ಬಂಗೇರ, ಶಿವ ಇವರು ಸಹಾಯ ಧನ ಸ್ವೀಕರಿಸಿದರು. ಶರತ್ ಕಿನ್ನಿಗೋಳಿ ನಿರೂಪಿಸಿದರು.

ಬಳಿಕ ಸರಕಾರಿ ಹಿರಿಯ ಪ್ರಾಥಮಿಕ ಶಾಲೆ ಪಳ್ಳಿ ಇಲ್ಲಿನ ಯಕ್ಷಧ್ರುವ ಯಕ್ಷ ಶಿಕ್ಷಣದ ವಿದ್ಯಾರ್ಥಿಗಳಿಂದ ಶ್ಯಮಂತಕ ರತ್ನ ಹಾಗೂ ಪಾವಂಜೆ ಮೇಳದವರಿಂದ 'ಗಜೇಂದ್ರ ಮೋಕ್ಷ - ಕಂಸ ವಧೆ- ಅಗ್ರಪೂಜೆ' ಯಕ್ಷಗಾನ ಬಯಲಾಟ ಜರುಗಿತು.

ನಾಗರಿಕರ ಪ್ರತಿಕ್ರಿಯೆ: ವಿವಿಧ ಉದ್ಯೋಗ ಸಮಸ್ಯೆಗಳ ಚರ್ಚೆ



ಕಾಞಂಗಾಡು: ನಾಗರಿಕರ ಪ್ರತಿಕ್ರಿಯೆ ಕಾರ್ಯಕ್ರಮದ ಅಂಗವಾಗಿ ಸಾರ್ವಜನಿಕ ಚರ್ಚೆ ಶನಿವಾರ ಕಾಞಂಗಾಡು ವ್ಯಾಪಾರ ಭವನದಲ್ಲಿ ನಡೆಯಿತು. ಕೇರಳ ಅಂಗಡಿ ಮತ್ತು ಇತರ ಸಂಸ್ಥೆ ಕಾರ್ಮಿಕರ ಕಲ್ಯಾಣ ಮಂಡಳಿ ಜಿಲ್ಲಾ ಸಲಹಾ ಮಂಡಳಿ ಸದಸ್ಯ ಬಿಜು ಚುಳ್ಳಿಕರ ಕಾರ್ಯಕ್ರಮ ಉದ್ಘಾಟಿಸಿದರು. ಜಿಲ್ಲಾ ಕಾರ್ಯನಿರ್ವಾಹಕ ಅಧಿಕಾರಿ ವಿ.ಅಬ್ದುಲ್ ಸಲಾಮ್ ಕಾರ್ಯಕ್ರಮ ವಿವರಣೆ ಮತ್ತು ಚಟುವಟಿಕೆ ವರದಿ ಮಂಡಿಸಿದರು. ವಿವಿಧ ಉದ್ಯೋಗ ಕ್ಷೇತ್ರಗಳಲ್ಲಿನ ವಿವಿಧ ಉದ್ಯೋಗ ಸಮಸ್ಯೆಗಳ ಕುರಿತು ಚರ್ಚಿಸಲಾಯಿತು.

ಹೋಟೆಲ್ ಮತ್ತು ರೆಸ್ಟೋರೆಂಟ್ ಸಂಘ, ಮಾಧ್ಯಮ ವಿಭಾಗ ಮತ್ತು ಛಾಯಾಗ್ರಾಹಕರ ಸಂಘದ ಪ್ರತಿನಿಧಿಗಳು ವಿವಿಧ ಸಲಹೆಗಳನ್ನು ನೀಡಿದರು. ಸಲಹಾ ಮಂಡಳಿ ಸದಸ್ಯರಾದ ಟಿ.ಕೆ.ನಾರಾಯಣನ್, ಹರೀಶ್ ಪಾಲಕುನ್ನು ಮುನೀರ್ ಮತ್ತು ಜಿಲ್ಲಾ ಸಲಹಾ ಮಂಡಳಿ ಸದಸ್ಯ ಕೃಷ್ಣವರ್ಮ ರಾಜ ಮತ್ತಿತರರು ಮಾತನಾಡಿದರು.

ನಮ್ಮ ಆಚರಣೆಗಳಲ್ಲಿ ಇಂದು ಪ್ರತಿಷ್ಠೆ, ಆಡಂಬರ ಹೆಚ್ಚುತ್ತಿದೆ: ಡಾ.ಅರುಣ್



ಕೈಕಂಬ: ಫಲ್ಗುಣಿ ಯುವಕ ಮಂಡಲ ಇರುವೈಲು ಇದರ 38ನೇ ವಾರ್ಷಿಕೋತ್ಸವ ಇರುವೈಲು ಶ್ರೀ ದುರ್ಗಾಪರಮೇಶ್ವರಿ ದೇವಸ್ಥಾನದ ಜಾತ್ರಾ ಮಹೋತ್ಸವದ ಶನಿವಾರ ನಡೆಯಿತು.

ಧಾರ್ಮಿಕ ಉಪನ್ಯಾಸ ನೀಡಿದ ಮಂಗಳೂರಿನ ರಾಷ್ಟ್ರೋತ್ಥಾನ ವಿದ್ಯಾ ಕೇಂದ್ರದ ವಿಭಾಗ ಮುಖ್ಯಸ್ಥ ಡಾ. ಅರುಣ್ ಉಳ್ಳಾಲ್, ಹಿಂದೂ ಧರ್ಮದ ಪಾರಂಪರಿಕ ಆಚರಣೆ ಗಳಲ್ಲಿ ಬದಲಾವಣೆ ನೆಪದಲ್ಲಿ ಅನಗತ್ಯ ಪರಿಪಾಠಗಳ ಅನುಸರಿಸಲಾಗುತ್ತಿದೆ.ಮದುವೆ, ಹುಟ್ಟು ಹಬ್ಬ ಮತ್ತಿತರ ಕಾರ್ಯಕ್ರಮಗಳಲ್ಲಿ ತೋರಿಕೆಯ ಆಡಂಬರ ಮತ್ತು ಪ್ರತಿಷ್ಠೆಗಾಗಿ ಆಚರಿಸಲಾಗುತ್ತಿದೆ. ಇಂತಹ ಸ್ಥಿತಿಯಲ್ಲಿ ನಮ್ಮ ಮಕ್ಕಳು ಜನಮಾನಸಕ್ಕೆ ಹತ್ತಿರವಾಗಲು ಸಂಘ- ಸಂಸ್ಥೆಗಳಲ್ಲಿ ಸಕ್ರಿಯ ತೊಡಗಿಸಿ ಕೊಂಡರೆ ಜನರೊಂದಿಗೆ ಬೆರೆತು ಬದುಕಲು ಸಾಧ್ಯ ಎಂದರು.

ಕುಪ್ಪೆಪದವು ಕಿಲೆಂಜಾರು ಸರಕಾರಿ ಹಿ.ಪ್ರಾ. ಶಾಲೆಯ ಮುಖ್ಯ ಶಿಕ್ಷಕಿ ಜಯಲಕ್ಷ್ಮೀ ಅಧ್ಯಕ್ಷತೆ ವಹಿಸಿದ್ದರು. ಅತ್ಯಧಿಕ ಅಂಕ ಗಳಿಸಿದ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ , ಯುವಕ ಮಂಡಲ ಹಮ್ಮಿಕೊಂಡಿದ್ದ ಕ್ರೀಡಾಕೂಟದಲ್ಲೂ ವಿಜೇತರಿಗೆ ಬಹುಮಾನ ವಿತರಿಸಿದರು.

ಉದ್ಯಮಿ ವೆಂಕಟೇಶ್ ಪೂಜಾರಿ ಗುಜರಾತ್, ಯುವಕ ಮಂಡಲ ಅಧ್ಯಕ್ಷ ಪ್ರಭಾಕರ ಆಚಾರ್ಯ ವೇದಿಕೆಯಲ್ಲಿದ್ದರು. ಏಕನಾಥ ದೇವಾಡಿಗ ಪ್ರಾರ್ಥಿಸಿ, ಪ್ರಶಾಂತ್ ಗಾಣಿಗ ವರದಿ ವಾಚಿಸಿ, ಮನೋಹರ್ ನಾಯ್ಕ್, ಸುದೇಶ್ ಪೂಜಾರಿ ಸಮ್ಮಾನ ಪತ್ರ ಓದಿದರು. ಧನಂಜಯ ಶೆಟ್ಟಿ ಬರ್ಕೆ ಸ್ವಾಗತಿಸಿ, ವಿಶ್ವನಾಥ ದೇವಾಡಿಗ ಕಾರ್ಯಕ್ರಮ ನಿರೂಪಿಸಿ, ಬಾಲಕೃಷ್ಣ ಕಲ್ಲಾಡಿ ವಂದಿಸಿದರು.

ಬಳಿಕ ವಿಧಾತ್ರಿ ಕಲಾವಿದೆರ್ ಕುಡ್ಲ ಇವರಿಂದ ವಿಜಯಕುಮಾರ್ ಕೊಡಿಯಾಲ್‌ಬೈಲ್ ನಿರ್ದೇಶನದ ಜೈ ಹನುಮಾನ್ ನಾಟಕ ಪ್ರದರ್ಶನವಾಯಿತು.

ಸನ್ಮಾನಿತರು

ಇರುವೈಲು ಅಂಚೆ ಕಚೇರಿ ನಿವೃತ್ತ ಶಾಖಾ ಅಂಚೆ ಪಾಲಕಿ ಅನುರಾಧ ಭಟ್, ಶ್ರೀ ದುರ್ಗಾಪರಮೇಶ್ವರಿ ದೇವಳದಲ್ಲಿ ಸೇವೆ ಸಲ್ಲಿಸುತ್ತಿರುವ ಶೇಖರ (ಮಂಗುರ) ಮತ್ತು ಜಂಪ್ ರೋಪ್ ಸ್ಪರ್ಧೆಯಲ್ಲಿ ರಾಷ್ಟ್ರಮಟ್ಟಕ್ಕೆ ಆಯ್ಕೆಯಾಗಿರುವ ಕುಮಾರಿ ಮೋಹಿನಿ ನಾಯ್ಕ್ ಅವರನ್ನು ಸನ್ಮಾನಿಸಲಾಯಿತು.

ಶ್ರೀದೇವಿ ಮಹಿಳಾ ಮಂಡಲದ 23ನೇ ವಾರ್ಷಿಕೋತ್ಸವ ಸಂಭ್ರಮ, ಪುಸ್ತಕ ವಿತರಣೆ



ಕಿನ್ನಿಗೋಳಿ: ಟಿ.ವಿಯಲ್ಲಿ ಬರುವ ಧಾರಾವಾಹಿಗಳಲ್ಲಿ ಜಾಹೀರಾತಿನಲ್ಲಿ ಕೇವಲ ಮಹಿಳೆಯರನ್ನೇ ಟಾರ್ಗೆಟ್ ಮಾಡಲಾಗುತ್ತಿದೆ ಕೆಟ್ಟದಾಗಿ ಬಿಂಬಿಸುವುದು ಒಂದಷ್ಟೂ ಗೌರವ ನೀಡುತ್ತಿಲ್ಲ ಮಹಿಳೆಯ ಮೇಲಿನ ಶೋಷಣೆ ಮುಕ್ತ ಸಮಾಜ ನಿರ್ಮಾಣ ವಾಗಬೇಕು ಎಂದು ಮಂಗಳೂರು ಜೈ ತುಳುನಾಡ್ ಸಂಘಟನೆಯ ಮಾಜಿ ಅಧ್ಯಕ್ಷ ಉದಯ ಪೂಂಜಾ ಹೇಳಿದರು.

ಅವರು ಕಿನ್ನಿಗೋಳಿ ಸಮೀಪದ ಎಸ್. ಕೋಡಿ ಪದ್ಮಾವತಿ ಲಾನ್ ಸಭಾಭವನದಲ್ಲಿ ಎಸ್. ಕೋಡಿ ತೋಕೂರು ಕಂಬಳಬೆಟ್ಟು ಶ್ರೀದೇವಿ ಮಹಿಳಾ ಮಂಡಲದ 23 ನೇ ವಾರ್ಷಿಕೋತ್ಸವದ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ಮೂಡುಬಿದಿರೆ ಆಳ್ವಾಸ್ ಹೋಮಿಯೋಪಥಿಕ್ ಮೆಡಿಕಲ್ ಕಾಲೇಜಿನ ಪ್ರೊಫೆಸರ್ ಡಾ. ವಸುಮತಿ ಕೋಡಿಕಲ್ ಮಹಿಳೆಯರ ಆರೋಗ್ಯ ಕಾಳಜಿಯ ಬಗ್ಗೆ ಮಾಹಿತಿ ನೀಡಿದರು. ಹಿತ ಉಮೇಶ್ ಮಹಿಳಾ ದಿನಾಚರಣೆಯ ಬಗ್ಗೆ ಮಾತನಾಡಿದರು. ದೇವಕಿ ಕೃಷ್ಣಪ್ಪ ಕಾವೂರು ಉದ್ಘಾಟಿಸಿದರು. ಕಿನ್ನಿಗೋಳಿ ಪಟ್ಟಣ ಪಂಚಾಯತ್ ಸದಸ್ಯ ಗೋಪಾಲಕೃಷ್ಣ ಪುನರೂರು, ಕಾರ್ಯದರ್ಶಿ ಶೋಭಾ , ಸ್ವರ್ಣಲತಾ ಕುಂದರ್, ಕೋಶಾಧಿಕಾರಿ ವಿಮಲ ಬಂಗೇರ, ಕೀಡಾ ಕಾರ್ಯದರ್ಶಿ ಉದಯ ಶೆಟ್ಟಿ, ಆಶಾ ಹರೀಶ್ ಅಮೀನ್ ಉಪಸ್ಥಿತರಿದ್ದರು. 100 ವಿದ್ಯಾರ್ಥಿಗಳಿಗೆ ಉಚಿತ ಪುಸ್ತಕ ವಿತರಣೆ ಮಾಡಲಾಯಿತು.

ಮಹಿಳಾ ಮಂಡಲದ ಅಧ್ಯಕ್ಷೆ ವಿಲಾಸಿನಿ ಎನ್ ಮೆಂಡನ್ ವಂದಿಸಿದರು. ವಿಮಲ ಬಂಗೇರ ವರದಿ ವಾಚಿಸಿದರು. ಶಶಿಕಲಾ ಸಾಲ್ಯಾನ್ ಸ್ವಾಗತಿಸಿದರು. ರಜನಿ ಕುಲಾಲ್ ಕಾರ್ಯಕ್ರಮ ನಿರೂಪಿಸಿದರು.

ವಿದ್ಯಾರ್ಥಿಗಳ ಸರ್ವತೋಮುಖ ಬೆಳವಣಿಗೆಗೆ ಎನ್ನೆಸ್ಸೆಸ್ ಶಿಬಿರ ಪೂರಕ: ಸುಕುಮಾರ ಶೆಟ್ಟಿ



ಕುಂದಾಪುರ: ಎನ್ನೆಸ್ಸೆಸ್ ವಾರ್ಷಿಕ ವಿಶೇಷ ಶಿಬಿರವು ವಿದ್ಯಾರ್ಥಿಗಳ ಸರ್ವತೋಮುಖ ಬೆಳವಣಿಗೆಗೆ ಪೂರಕ. ಶಿಬಿರದಲ್ಲಿ ನಡೆಯುವ ಶೈಕ್ಷಣಿಕ ಕಾರ್ಯಕ್ರಮ, ಸಾಂಸ್ಕೃತಿಕ ಕಾರ್ಯಕ್ರಮ ಮತ್ತು ಇನ್ನಿತರ ಚಟುವಟಿಕೆಗಳಲ್ಲಿ ಸ್ವಯಂಸೇವಕರು ಸಕ್ರೀಯವಾಗಿ ತೊಡಗಿಸಿಕೊಂಡಾಗ ಭವಿಷ್ಯದಲ್ಲಿ ಉತ್ತಮ ಪ್ರಜೆಗಳಾಗಲು ಸಾಧ್ಯ ಎಂದು ಕುಂದಾಪುರ ಎಜುಕೇಶನ್ ಸೊಸೈಟಿಯ ಅಧ್ಯಕ್ಷ ಬಿ.ಎಂ. ಸುಕುಮಾರ ಶೆಟ್ಟಿ ಹೇಳಿದ್ದಾರೆ.

ಅವರು ಯಡಾಡಿ-ಮತ್ಯಾಡಿಯಲ್ಲಿ ನಡೆದ ಕುಂದಾಪುರದ ಡಾ. ಬಿ. ಬಿ. ಹೆಗ್ಡೆ ಪ್ರಥಮ ದರ್ಜೆ ಕಾಲೇಜಿನ ರಾಷ್ಟ್ರೀಯ ಸೇವಾ ಯೋಜನಾ ಘಟಕದ ವಾರ್ಷಿಕ ವಿಶೇಷ ಶಿಬಿರದ ಸಮಾರೋಪದಲ್ಲಿ ಸಮಾರೋಪ ಮಾತುಗಳನ್ನಾಡಿದರು.

ಕಾಲೇಜಿನ ಪ್ರಾಶುಪಾಲ ಪ್ರೊ. ಡಾ. ಕೆ.ಉಮೇಶ ಶೆಟ್ಟಿ ಅಧ್ಯಕ್ಷತೆ ವಹಿಸಿದ್ದರು. ಕುಂದಾಪುರ ಎಜುಕೇಶನ್ ಸೊಸೈಟಿ ಕಾರ್ಯದರ್ಶಿ ಸೀತಾರಾಮ ನಕ್ಕತ್ತಾಯ ಶುಭ ಹಾರೈಸಿದರು. ನಿವೃತ್ತ ಪ್ರಾಂಶುಪಾಲ ಪ್ರೊ.ಎಂ.ಬಾಲಕೃಷ್ಣ ಶೆಟ್ಟಿ ಮೊಳಹಳ್ಳಿ, ಕಾಲೇಜಿನ ಆಡಳಿತ ಮಂಡಳಿಯ ಸದಸ್ಯ ಹುಂತ್ರಿಕೆ ಸುಧಾಕರ ಶೆಟ್ಟಿ, ಪ್ರಥಮ ದರ್ಜೆ ಗುತ್ತಿಗೆದಾರ ರಜತ್ ಹೆಗ್ಡೆ ಮೊಳಹಳ್ಳಿ ಗ್ರಾಮ ಪಂಚಾಯತ್ ಅಧ್ಯಕ್ಷ ಚಂದ್ರಶೇಖರ ಶೆಟ್ಟಿ ದ್ಯಾವಲಬೆಟ್ಟು, ಯಡಾಡಿ-ಮತ್ಯಾಡಿ ಸರಕಾರಿ ಹಿರಿಯ ಪ್ರಾಥಮಿಕ ಶಾಲೆಯ ಎಸ್. ಡಿ.ಎಂ.ಸಿ. ಸದಸ್ಯ ಮಂಜುನಾಥ ಮತ್ಯಾಡಿ ಮೊದಲಾದವರು ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು.

ಶಿಬಿರಾಧಿಕಾರಿಗಳಾದ ರಾಜೇಶ ಶೆಟ್ಟಿ ವಕ್ವಾಡಿ ಸ್ವಾಗತಿಸಿ, ಪೂಜಾ ಕುಂದರ್ ವಂದಿಸಿದರು. ವಾಣಿಜ್ಯ ವಿಭಾಗದ ಸಹಾಯಕ ಪ್ರಾಧ್ಯಾಪಕಿ ಪ್ರಥ್ವಿಶ್ರೀ ಜಿ.ಶೆಟ್ಟಿ ಕಾರ್ಯಕ್ರಮ ನಿರೂಪಿಸಿದರು.

ಮೂಡುಪಡುಕೋಡಿ: ಆರೋಗ್ಯ- ಕ್ಷೇಮ ಕೇಂದ್ರಕ್ಕೆ ಶಿಲಾನ್ಯಾಸ

ಬಂಟ್ವಾಳ: ಬಂಟ್ವಾಳ ವಿಧಾನ ಸಭಾ ಕ್ಷೇತ್ರದ 11 ಕಡೆ ಒಟ್ಟು 14.3 ಕೋ.ರೂ. ವೆಚ್ಚದಲ್ಲಿ ಕೇಂದ್ರ ಸರ್ಕಾರದ ಆಯುಷ್ಮಾನ್ ಆರೋಗ್ಯ ಕ್ಷೇಮ ಯೋಜನೆಯಲ್ಲಿ ನಿರ್ಮಾಣಗೊಳ್ಳಲಿರುವ ಆರೋಗ್ಯ ಮತ್ತು ಕ್ಷೇಮ ಕೇಂದ್ರಕ್ಕೆ ಇರ್ವತ್ತೂರು ಗ್ರಾಮ ಪಂಚಾಯತ್ ವ್ಯಾಪ್ತಿಯ ಮೂಡುಪಡುಕೋಡಿ ಗ್ರಾಮದ ಅರ್ಕೆದೊಟ್ಟು ಎಂಬಲ್ಲಿ ಶಿಲಾನ್ಯಾಸ ಕಾರ್ಯಕ್ರಮ ಶನಿವಾರ ನಡೆಯಿತು.

ದ.ಕ.ಸಂಸದ ಕ್ಯಾ.ಬ್ರಿಜೇಶ್ ಚೌಟ ಅವರು ಶಿಲಾನ್ಯಾಸ ನೆರವೇರಿಸಿ ಮಾತನಾಡಿ, ಕೇಂದ್ರ ಸರ್ಕಾರದ ಆಯುಷ್ಮಾನ್ ಆರೋಗ್ಯ ಕ್ಷೇಮ ಯೋಜನೆಯಡಿ ದ.ಕ. ಜಿಲ್ಲೆಯಲ್ಲಿ 124 ಆರೋಗ್ಯ ಕೇಂದ್ರ ಕಟ್ಟಡ ಮಂಜೂರಾಗಿದ್ದು, 22 ಕ್ಷೇಮ ಕೇಂದ್ರಗಳು ಬಂಟ್ವಾಳ ವಿಧಾನಸಭಾ ಕ್ಷೇತ್ರದಲ್ಲಿ ನಿರ್ಮಾಣಗೊಳ್ಳಲಿದ್ದು 14.3 ಕೋಟಿ ರೂ. ಅನುದಾನ ಮಂಜೂರಾಗಿದೆ. ಪ್ರತಿ ಕಟ್ಟಡಕ್ಕೆ 65 ಲಕ್ಷ ರೂ. ಅನುಮೋದನೆ ನೀಡಲಾಗುತ್ತಿದೆ. ಪ್ರಸ್ತುತ ತಾಲೂಕಿನಲ್ಲಿ ನಿರ್ಮಾಣವಾಗಲಿರುವ 11 ಕ್ಷೇಮ ಕೇಂದ್ರಗಳಿಗೆ ಶಿಲಾನ್ಯಾಸ ನೆರವೇರಿಸಲಾಗಿದೆ. ಇದು ಶೀಘ್ರ ಆರಂಭಗೊಂಡು ಜನತೆ ಸದುಪಯೋಗ ಪಡಿಸುವಂತಾಗಲಿ ಎಂದು ಹೇಳಿದರು.



ನಿರ್ದೇಶನ ನೀಡಲಾಗಿದೆ

ಆಯುಷ್ಮಾನ್ ಆರೋಗ್ಯ ಕೇಂದ್ರಗಳನ್ನು ಜನವಸತಿ ಪ್ರದೇಶದಲ್ಲಿ, ಬಡವರು ಹೆಚ್ಚು ವಾಸವಿರುವ ಸ್ಥಳ ಗುರುತಿಸಿ ಕೇಂದ್ರ ಸರಕಾರ ಮಾನದಂಡ ಹೊರಡಿಸಿದೆ. ತ್ವರಿತ ಕಾಮಗಾರಿ ಪೂರ್ಣಗೊಳಿಸಿ ಸಾರ್ವಜನಿಕ ಸೇವೆಗೆ ಲಭ್ಯವಾಗುವಂತೆ ಇಲಾಖಾ ಅಧಿಕಾರಿಗಳಿಗೆ ನಿರ್ದೇಶನ ನೀಡಲಾಗಿದೆ.

● ಕ್ಯಾ.ಬ್ರಿಜೇಶ್ ಚೌಟ, ಸಂಸದ

ಬಂಟ್ವಾಳ ಶಾಸಕ ರಾಜೇಶ್ ನ್ಯಾಕ್ ಉಳಿಪ್ಪಾಡಿಗುತ್ತು ಮಾತನಾಡಿ, ತಾಲೂಕು ಆರೋಗ್ಯ ಕೇಂದ್ರ ಸಹಿತ ಅಭಿವೃದ್ಧಿ ಪಡಿಸಿದ ಆರೋಗ್ಯ ಕೇಂದ್ರಗಳಲ್ಲಿ ವೈದ್ಯರ ಸೇರಿದಂತೆ ಇತರ ಸಿಬ್ಬಂದಿಗಳ ಕೊರತೆ ನೀಗಿಸಲು ರಾಜ್ಯ ಸರಕಾರವನ್ನು ಒತ್ತಾಯಿಸಲಾಗಿದೆ. ಜನತೆ ಆರೋಗ್ಯ ಹಿತದೃಷ್ಟಿಯಿಂದ ಎಲ್ಲರೂ ಒಟ್ಟಾಗಿ ಅಭಿವೃದ್ಧಿ ಕಾರ್ಯ ನಿರ್ವಹಿಸಬೇಕಾಗಿದೆ ಎಂದರು.

ಇರ್ವತ್ತೂರು ಗ್ರಾ.ಪಂ. ನಿಕಟಪೂರ್ವ ಅಧ್ಯಕ್ಷೆ ಮಾಲತಿ ಮೂಡಾಯಿಮಠ, ಬಂಟ್ವಾಳ ಬಿಜೆಪಿ ಮಂಡಲ ಅಧ್ಯಕ್ಷ ಚೆನ್ನಪ್ಪ ಕೋಟ್ಯಾನ್,ರಾಜ್ಯ ಬಾಲವಿಕಾಸ ಮಾಜಿ ಅಧ್ಯಕ್ಷೆ ಸುಲೋಚನಾ ಜಿ.ಕೆ.ಭಟ್, ಗ್ರಾ.ಪಂ. ನಿಕಟಪೂರ್ವ ಸದಸ್ಯರಾದ ಎಂ.ಪಿ. ಶೇಖರ್, ಸುಧೀಂದ್ರ ಶೆಟ್ಟಿ ಪ್ರಶಾಂತ್ ಜೈನ್, ಹರಿಣಾಕ್ಷಿ ವಸಂತ್, ಪುಂಜಾಲಕಟ್ಟೆ ಪ್ರಾ.ಆ.ಕೇಂದ್ರ ವೈದ್ಯಾಧಿಕಾರಿ ಡಾ. ರಿತೇಶ್ ಶೆಟ್ಟಿ ಆರೋಗ್ಯ ಕ್ಷೇಮ ನಿಧಿ ಅಭಿತಯಂತರ ಗುರುಪ್ರಸಾದ್ , ಗುತ್ತಿಗೆದಾರ ಪ್ರವೀಣ್, ಸಿಎಚ್‌ಒ ಸಿದ್ದನಗೌಡ ಪಾಟೀಲ್, ಪಂಚಾಯತ್ ಕಾರ್ಯದರ್ಶಿ ನಾರಾಯಣ ನಾಯ್ಕ, ಪ್ರಮುಖರಾದ ದಿನೇಶ್ ಅಮ್ಟೂರು, ಸುದರ್ಶನ ಬಜ, ದಿನೇಶ್ ದಂಬೆದಾರ್, ಶಂಕರ್ ಶೆಟ್ಟಿ ಬೆದ್ರಮಾರ್ ಮೊದಲಾದವರು ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು.

ತಾಲೂಕು ಆರೋಗ್ಯಾಧಿಕಾರಿ ಡಾ. ಅಶೋಕ ರೈ ಸ್ವಾಗತಿಸಿದರು. ಗ್ರಾ.ಪಂ. ನಿಕಟಪೂರ್ವ ಸದಸ್ಯ ದಯಾನಂದ ಎರ್ಮೆನಾಡು ನಿರೂಪಿಸಿದರು.

'ಅಮ್ಮ ಟೀಚರ್' ಯೋಜನೆ ಜಿಲ್ಲಾಮಟ್ಟದ ಉದ್ಘಾಟನೆ

ಕಾಸರಗೋಡು: ಕುಟುಂಬಶ್ರೀ ಕಾಸರಗೋಡು ಜಿಲ್ಲಾ ಮಿಷನ್ ಜಿ.ಪಂ.ನ ಸಹಯೋಗದೊಂದಿಗೆ ಜಾರಿಗೆ ತಂದಿರುವ 'ಅಮ್ಮ ಟೀಚರ್' ಯೋಜನೆಯ ಜಿಲ್ಲಾಮಟ್ಟದ ಉದ್ಘಾಟನೆ ನೀಲೇಶ್ವರ ನಗರಸಭೆ ಸಭಾಂಗಣದಲ್ಲಿ ಜರಗಿತು. ತೃಕ್ಕರೀಪುರ ಶಾಸಕ ಎಂ. ರಾಜಗೋಪಾಲನ್ ಕಾರ್ಯಕ್ರಮ ಉದ್ಘಾಟಿಸಿದರು. 4ನೇ ತರಗತಿವರೆಗೆ ಓದುತ್ತಿರುವ ಮಕ್ಕಳು ತಾಯಂದಿರ ಸಹಾಯದಿಂದ ಮನೆಯಲ್ಲಿ ಇಂಗ್ಲಿಷ್ ಕಲಿಯಲು ಬೆಂಬಲ ನೀಡುವುದು ಈ ಯೋಜನೆ ಉದ್ದೇಶ.

ಕುಟುಂಬಶ್ರೀ ಜಿಲ್ಲಾ ಮಿಷನ್ ಆಯೋಜಿಸಿರುವ ಬ್ಯಾಕ್ ಟು ಫ್ಯಾಮಿಲಿ ಅಭಿಯಾನ ವನ್ನು ಇಂಡಿಯಾ ಬುಕ್ ಆಫ್ ರೆಕಾರ್ಡ್ಸ್ ಆಫ್ ದಿ ಟ್ಯಾಲೆಂಟ್ ರೆಕಾರ್ಡ್ ಬುಕ್‌ನಲ್ಲಿಯೂ ನಡೆಸಲಾಯಿತು.

ಪ್ರಶಸ್ತಿ ಪ್ರದಾನವನ್ನು ಗಿನ್ನೆಸ್ ಸತ್ತಾರ್ ಆದೂರು ನಡೆಸಿಕೊಟ್ಟರು. ಶಾಸಕ ಎಂ.ರಾಜಗೋಪಾಲನ್ ಪ್ರಶಸ್ತಿ ಸ್ವೀಕರಿಸಿದರು. 'ಬ್ಯಾಕ್ ಟು ಫ್ಯಾಮಿಲಿ' ಅಭಿಯಾನ ಯೋಜನೆ ಮುಂದುವರಿದ ಟೀಚರ್' ಕಾರ್ಯಕ್ರಮದ ಭಾಗ ಅಮ್ಮ ಸಿದ್ಧಪಡಿಸಲಾಗುತ್ತಿದೆ. ಈ ಯೋಜನೆಯಂಗವಾಗಿ 25 ದಿನಗಳಲ್ಲಿ 50 ಗಂಟೆಗಳ ತರಬೇತಿ ನೀಡಲಾಗುವುದು.

ಉದ್ಘಾಟನಾ ಸಮಾರಂಭದಲ್ಲಿ ನೀಲೇಶ್ವರ ನಗರಸಭಾ ಅಧ್ಯಕ್ಷ ಪಿ.ಪಿ.ಮುಹಮ್ಮದ್ ರಫಿ ಉದ್ಘಾಟನಾ ಸಮಾರಂಭದ ಅಧ್ಯಕ್ಷತೆ ವಹಿಸಿದ್ದರು. ಕುಟುಂಬಶ್ರೀ ಜಿಲ್ಲಾ ಮಿಷನ್ ಸಂಯೋಜಕ ರತೀಶ್ ಪಿಲಿಕೋಡ್ ಯೋಜನೆ ಬಗ್ಗೆ ವಿವರಿಸಿದರು. ನೀಲೇಶ್ವರ ನಗರಸಭೆ ಉಪಾಧ್ಯಕ್ಷೆ ಪಿ.ಎಂ.ಸಂಧ್ಯಾ, ಸಿಡಿಎಸ್ ಅಧ್ಯಕ್ಷೆ ಬಿಂದುರಾಜ್ , ಕೆ.ವಿ.ರವೀಂದ್ರನ್ ಮಾತನಾಡಿದರು. ಎಡಿಎಂಸಿ ಕೆ.ಎಂ.ಕಿಶೋರ್‌ಕುಮಾರ್ ಸ್ವಾಗತಿಸಿ, ಡಿಪಿಎಂ ಮನು ವಂದಿಸಿದರು. ತರಬೇತಿ ಕಾರ್ಯಕ್ರಮ ನೀಲೇಶ್ವರ, ಕಾಞಂಗಾಡು, ಪಳ್ಳಿಕೆರೆ, ಪಿಲಿಕೋಡ್‌ನಲ್ಲಿ ಕೇಂದ್ರಗಳ ಹೊಂದಿದೆ. ಡಾ.ಪಿ.ಭಾಸ್ಕರನ್ ನಾಯರ್, ಕೆ.ವಿ.ರವೀಂದ್ರನ್, ಎ.ವಿ.ಸಂತೋಷ ಕುಮಾರ್, ರಾಧಾಕೃಷ್ಣನ್ ಅಲುವೀಟಿಲ್, ಶಾಂತ ಕುಮಾರ್, ಕೆ.ಬಾಲಕೃಷ್ಣನ್, ಶೀಬಾ ಬಶೀರ್, ಶ್ಯಾಮಿಲಿ, ಎಂ.ಕೆ.ವಿಜಯಕುಮಾರ್ ತರಗತಿ ನಡೆಸಿಕೊಟ್ಟರು.

ಸುತ್ತಮುತ್ತ

ಮಧ್ಯಪ್ರಾಚ್ಯದಲ್ಲಿ ಶಾಂತಿಗಾಗಿ ಚರ್ಚುಗಳಲ್ಲಿ ವಿಶೇಷ ಪ್ರಾರ್ಥನೆ

ಉಡುಪಿ: ಮಧ್ಯಪ್ರಾಚ್ಯ ಮತ್ತು ಗಲ್ಫ್ ರಾಷ್ಟ್ರಗಳಲ್ಲಿ ಉಂಟಾಗಿರುವ ಯುದ್ಧದ ಭೀತಿ ಹಾಗೂ ಉದ್ವಿಗ್ನ ಪರಿಸ್ಥಿತಿಯ ಹಿನ್ನೆಲೆಯಲ್ಲಿ, ಉಡುಪಿ ಧರ್ಮಪ್ರಾಂತ್ಯದ ಎಲ್ಲಾ ಚರ್ಚುಗಳಲ್ಲಿ ಭಾನುವಾರ



ಶಾಂತಿಗಾಗಿ ವಿಶೇಷ ಪ್ರಾರ್ಥನೆ ಸಲ್ಲಿಸಲಾಯಿತು. ಬಿಷಪರ ಮಂಡಳಿಯ ಸೂಚನೆಯಂತೆ ನಡೆದ ಈ ಪ್ರಾರ್ಥನಾ ದಿನದಂದು, ಧರ್ಮಪ್ರಾಂತ್ಯದ ಆಡಳಿತಾಧಿಕಾರಿ ವಂ. ಡಾ. ಜೆರಾಲ್ಡ್ ಐಸಾಕ್ ಲೋಬೊ ಹಾಗೂ ಸಾರ್ವಜನಿಕ ಸಂಪರ್ಕಾಧಿಕಾರಿ ವಂ.ಡೆನಿಸ್ ಡೆಸಾ ಅವರು ಶಾಂತಿ ಮಂತ್ರ ಪಠಿಸಿದರು. ಉಡುಪಿ ಶೋಕಮಾತಾ ದೇವಾಲಯದಲ್ಲಿ ವಂ. ಚಾರ್ಲ್ಸ್ ಮಿನೇಜಸ್, ಮಿಲಾಗ್ರಿಸ್ ಕ್ಯಾಥೆಡ್ರಲ್‌ನಲ್ಲಿ ವಂ. ಫರ್ಡಿನಾಂಡ್ ಗೊನ್ಸಾಲ್ವಿಸ್ ಸೇರಿದಂತೆ ಕುಂದಾಪುರ, ಕಾರ್ಕಳ ಹಾಗೂ ಧರ್ಮಪ್ರಾಂತ್ಯದಾದ್ಯಂತ ಧರ್ಮಗುರುಗಳು ಬಲಿಪೂಜೆ ಮತ್ತು ಆರಾಧನೆಯ ನೇತೃತ್ವ ವಹಿಸಿದ್ದರು. ಮಾ. 13 ರಂದು ಶುಕ್ರವಾರವನ್ನು ಉಪವಾಸ ಮತ್ತು ಪ್ರಾರ್ಥನಾ ದಿನವಾಗಿ ಆಚರಿಸಲು ಹಾಗೂ ಪ್ರತಿದಿನ ಜಪಸರ ಪ್ರಾರ್ಥನೆ ಮಾಡುವಂತೆ ಧರ್ಮಪ್ರಾಂತ್ಯವು ಭಕ್ತರಲ್ಲಿ ಮನವಿ ಮಾಡಿದೆ.

ಡಾ. ಬಿ. ಬಿ. ಹೆಗ್ಡೆ ಕಾಲೇಜು ಎನ್ನೆಸ್ಸೆಸ್, ಎನ್‌ಸಿಸಿಯಿಂದ ರಕ್ತದಾನ ಶಿಬಿರ

ಕುಂದಾಪುರ: ಡಾ. ಬಿ. ಬಿ. ಹೆಗ್ಡೆ ಪ್ರಥಮ ದರ್ಜೆ ಕಾಲೇಜಿನ ಯುವ ರೆಡ್‌ಕ್ರಾಸ್ ಘಟಕ, ಎನ್.ಎಸ್.ಎಸ್. ಮತ್ತು ಎನ್.ಸಿ.ಸಿ. ಘಟಕಗಳ ಸಂಯುಕ್ತ ಆಶ್ರಯದಲ್ಲಿ ಇಂಡಿಯನ್ ರೆಡ್‌ಕ್ರಾಸ್ ಸೊಸೈಟಿ ಕುಂದಾಪುರ ಹಾಗೂ ಲಯನ್ಸ್ ಕ್ಲಬ್, ಕುಂದಾಪುರ ಸಹಯೋಗದೊಂದಿಗೆ ಬೃಹತ್ ರಕ್ತದಾನ ಶಿಬಿರ ಕಾಲೇಜಿನ ಮೂಕಾಂಬಿಕಾ ಸಭಾಂಗಣದಲ್ಲಿ ನಡೆಯಿತು. ಕುಂದಾಪುರ ಇಂಡಿಯನ್ ರೆಡ್‌ಕ್ರಾಸ್ ಸೊಸೈಟಿ ಸಭಾಪತಿ ಜಯಕರ ಶೆಟ್ಟಿ ಶಿಬಿರವನ್ನು ಉದ್ಘಾಟಿಸಿದರು. ಕಾಲೇಜಿನ ಪ್ರಾಂಶುಪಾಲ ಡಾ. ಕೆ. ಉಮೇಶ ಶೆಟ್ಟಿ ಅಧ್ಯಕ್ಷತೆ ವಹಿಸಿದ್ದರು. ಲಯನ್ಸ್ ಇಂಟರ್‌ನ್ಯಾಶನಲ್ ಜಿಲ್ಲೆ 317ಸಿ ಯ ಪ್ರಥಮ ಉಪಗವರ್ನರ್ ರಾಜೀವ ಕೋಟ್ಯಾನ್, ಲಯನ್ಸ್ ಕ್ಲಬ್ ಕುಂದಾಮರ ಅಧ್ಯಕ್ಷ ಸದಾನಂದ ನಾವಡ ಮಾತುಗಳನ್ನಾಡಿದರು. ಲಯನ್ಸ್ ಕ್ಲಬ್ ಕಾರ್ಯದರ್ಶಿ, ಕಾಲೇಜು ಆಡಳಿತ ಮಂಡಳಿಯ ಸದಸ್ಯ ಹುಂತ್ರಿಕೆ ಸುಧಾಕರ ಶೆಟ್ಟಿ ಆಶಯ ನುಡಿಗಳನ್ನಾಡಿದರು. ಉಪ ಪ್ರಾಂಶುಪಾಲ ಡಾ. ಚೇತನ್ ಶೆಟ್ಟಿ ಕೋವಾಡಿ, ಇಂಡಿಯನ್ ರೆಡ್ ಕ್ರಾಸ್ ಸೊಸೈಟಿ ಕಾರ್ಯದರ್ಶಿ ಸತ್ಯನಾರಾಯಣ ಪುರಾಣಿಕ್, ಖಜಾಂಚಿ ಶಿವರಾಮ ಶೆಟ್ಟಿ, ಲಯನ್ಸ್ ಸದಸ್ಯ ಪ್ರಕಾಶ್, ಎನ್.ಎಸ್.ಎಸ್. ಕಾರ್ಯಕ್ರಮಾಧಿಕಾರಿ ರಾಜೇಶ ಶೆಟ್ಟಿ, ಎನ್.ಸಿ.ಸಿ. ಅಧಿಕಾರಿ ಲೆಫ್ಟಿನೆಂಟ್ ಹರೀಶ್ ಬಿ. ಇದ್ದರು. ಯೋಗೀಶ್ ಶ್ಯಾನುಭೋಗ್ ಸ್ವಾಗತಿಸಿ, ಪೂಜಾ ಕುಂದರ್ ವಂದಿಸಿದರು. ಪೃಥ್ವಿಶ್ರೀ ಜಿ.ಶೆಟ್ಟಿ ನಿರೂಪಿಸಿದರು.

ಪರಿಶಿಷ್ಟ ವರ್ಗಗಳ ಕಲ್ಯಾಣಾಧಿಕಾರಿ ಕಚೇರಿಗೆ ದಿಢೀರ್ ಭೇಟಿ

ಮಡಿಕೇರಿ: ಪೊನ್ನಂಪೇಟೆ ತಾಲೂಕಿನ ತಿಮತಿಯಲ್ಲಿರುವ ತಾಲೂಕು ಪರಿಶಿಷ್ಟ ವರ್ಗಗಳ ಕಲ್ಯಾಣಧಿಕಾರಿಗಳ ಕಚೇರಿಗೆ ಶಾಸಕ ಎ.ಎಸ್. ಪೊನ್ನಣ್ಣ ಅವರು ದಿಢೀರ್ ಭೇಟಿ ನೀಡಿ ಸಮಯ ಪಾಲನೆ ಮಾಡದ ಅಧಿಕಾರಿಯನ್ನು ತರಾಟೆಗೆ ತೆಗೆದುಕೊಂಡ ಘಟನೆ ನಡೆದಿದೆ. ತಿತಿಮತಿ ಭಾಗದ ಪ್ರವಾಸದಲ್ಲಿದ್ದ ಶಾಸಕರು ಶನಿವಾರ ಬೆಳಗ್ಗೆ ಪರಿಶಿಷ್ಟ ವರ್ಗಗಳ ಕಲ್ಯಾಣಧಿಕಾರಿಗಳ ಕಚೇರಿಗೆ ದಿಢೀರ್ ಭೇಟಿ ನೀಡಿದರು. ಆದರೆ ಕಚೇರಿಗೆ ಆಗಮಿಸದ ಅಧಿಕಾರಿಗಳ ಗೈರು ಹಾಜರಿ ಕಂಡ ಶಾಸಕರು ಗರಂ ಆದರು. ಕೂಡಲೇ ದೂರವಾಣಿ ಮೂಲಕ ಹಿರಿಯ ಅಧಿಕಾರಿಗಳಿಗೆ ಕರೆ ಮಾಡಿದ ಶಾಸಕರು ವಿವರಣೆ ಕೇಳಿದರು. ಈ ಸಂದರ್ಭದಲ್ಲಿ ದೌಡಾಯಿಸಿಕೊಂಡು ಆಗಮಿಸಿದ ಅಧಿಕಾರಿಗಳಿಗೆ ಖಡಕ್ ಎಚ್ಚರಿಕೆ ನೀಡಿದರಲ್ಲದೆ ವಿವರಣೆ ನೀಡುವಂತೆ ಸೂಚಿಸಿದರು. ಜಿಲ್ಲಾ ಗ್ಯಾರಂಟಿ ಅನುಷ್ಠಾನ ಸಮಿತಿ ಅಧ್ಯಕ್ಷ ತಿತೀರ ಧರ್ಮಜ ಉತ್ತಪ್ಪ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಮಿದೇರೀರ ನವೀನ್, ಬ್ಲಾಕ್ ಪ್ರಧಾನ ಕಾರ್ಯದರ್ಶಿ ಎ. ಜೆ ಬಾಬು, ತಾಲೂಕು ಪ್ರಚಾರ ಸಮಿಯ ಅಧ್ಯಕ್ಷ ಟಾಟು ಮೊಣ್ಣಪ್ಪ, ವಲಯ ಅಧ್ಯಕ್ಷ ನವೀನ್, ಜಿಲ್ಲಾ ಗ್ಯಾರಂಟಿ ಯೋಜನಾ ಸಮಿತಿಯ ಉಪಾಧ್ಯಕ್ಷೆ ಹಾಗೂ ಜಿಲ್ಲಾ ಪಂಚಾಯಿತಿ ಮಾಜಿ ಸದಸ್ಯೆ ಪಂಕಜಾ, ವಿಲ್ಸನ್, ಅಪ್ರೂಜ್, ಫಿಲೋಮೀನಾ, ಮಧ್ಯಸ್ಥ ಹಾಗೂ ಇತರ ಪ್ರಮುಖರು ಹಾಜರಿದ್ದರು.

ಪುಂಜಾಲಕಟ್ಟೆಯಲ್ಲಿ ಸ್ವಸ್ತಿಕ್ ಫ್ರೆಂಡ್ಸ್ ಕ್ಲಬ್‌ನ ಸ್ವಸ್ತಿ ಸಿರಿ, ಸ್ವಸ್ತಿಕ್ ಸಂಭ್ರಮ್ ಪ್ರಶಸ್ತಿ ಪ್ರದಾನ

ಸಾಮೂಹಿಕ ವಿವಾಹದಲ್ಲಿ 6 ಜೋಡಿ ಗೃಹಸ್ಥಾಶ್ರಮ ಪ್ರವೇಶ

ಬಂಟ್ವಾಳ: ಪುಂಜಾಲಕಟ್ಟೆ ಬಂಗ್ಲೆ ಮೈದಾನದಲ್ಲಿ ಭಾನುವಾರ ಸ್ವಸ್ತಿಕ್ ಫ್ರೆಂಡ್ಸ್ ಕ್ಲಬ್ ಪುಂಜಾಲಕಟ್ಟೆ ವತಿಯಿಂದ ಅದ್ದೂರಿಯಾಗಿ ನಡೆದ 18ನೇ ವರ್ಷದ ಸಾಮೂಹಿಕ ವಿವಾಹ ಸಮಾರಂಭದಲ್ಲಿ ಆರು ಜೋಡಿ ಗೃಹಾಸ್ಥಶ್ರಮಕ್ಕೆ ಪಾದರ್ಪಾಣೆಗೈದರು.ಇದೇ ವೇಳೆ ಐವರು ಸಾಧಕರಿಗೆ 'ಸ್ವಸ್ತಿ ಸಿರಿ' ರಾಜ್ಯ ಪ್ರಶಸ್ತಿ ಹಾಗೂ ಇಬ್ಬರಿಗೆ 'ಸ್ವಸ್ತಿಕ್ ಸಂಭ್ರಮ್' ಪ್ರಶಸ್ತಿ ಪ್ರದಾನ ಮಾಡಲಾಯಿತು.





ವೇ.ಮೂ.ಶ್ರೀಕೃಷ್ಣಭಟ್ ಕಾರ್ಕಳ ಮತ್ತವರ ಅರ್ಚಕ ವೃಂದ ವೈಧಿಕ ವಿಧಿ ವಿಧಾನ ನೆರವೇರಿಸಿದರು. ಪಿಲಾತಬೆಟ್ಟು ವ್ಯವಸಾಯ ಸೇವಾ ಸಹಕಾರಿ ಬ್ಯಾಂಕಿನ ಮಾಜಿ ಅಧ್ಯಕ್ಷ ಯು.ಎಸ್. ಚಂದ್ರಶೇಖರ್ ಭಟ್ ಮತ್ತು ಉದ್ಯಮಿ ಹರೀಂದ್ರ ಪೈ ಅವರು ವಧುವಿಗೆ ಮಂಗಲ ಸೂತ್ರ ವಿತರಿಸುವರು. ಇದಕ್ಕು ಮುನ್ನ ನೂತನ ವಧು-ವರರನ್ನು ಮೂರ್ಜೆ ಶ್ರೀರಾಮಾಂಜನೇಯ ಭಜನಾ ಮಂದಿರದ ವಠಾರದಿಂದ ಬಂಗ್ಲೆ ಮೈದಾನದವರೆಗೆ ಭವ್ಯ ಮೆರವಣಿಗೆಯಲ್ಲಿ ಕರೆತರಲಾಯಿತು. ಇಲ್ಲಿ ಅವರನ್ನು ಪೂರ್ಣ ಕುಂಭದೊಂದಿಗೆ ಸ್ವಾಗತಿಸಲಾಯಿತು.

ಪುಂಜಾಲಕಟ್ಟೆ ಯಕ್ಷಧ್ರುವ ಪಟ್ಲ ಫೌಂಡೇಷನ್ ಅಧ್ಯಕ್ಷ ಯಶೋಧರ ಶೆಟ್ಟಿ ದಂಡ, ಮಾಜಿ ಅಧ್ಯಕ್ಷ ರಮೇಶ್ ಶೆಟ್ಟಿ ಮಜಲೋಡಿ ಮೆರವಣಿಗೆಗೆ ಚಾಲನೆ ಚಾಲನೆ ನೀಡಿದರು. ರಾಜ್ಯ ಧಾರ್ಮಿಕ ಪರಿಷತ್ ಸದಸ್ಯ ರವಿಶಂಕರ್ ಶೆಟ್ಟಿ ಬಡಾಜೆಗುತ್ತು ಗಡಿಗಾರರು ಸಭೆಯನ್ನು ಉದ್ಘಾಟಿಸಿ ಮಾತನಾಡಿ, ಸಾಮಾಜಿಕ ಕಳಕಳಿಯ ತುಂಗಪ್ಪ ಬಂಗೇರ ಅವರ ನೇತೃತ್ವದಲ್ಲಿ ನಡೆಸಲಾಗುತ್ತಿರುವ ಸಾಮೂಹಿಕ ವಿವಾಹ ಪಣ್ಯದ ಕಾರ್ಯವಾಗಿದ್ದು ಇಂತಹ ಸಮಾಜಮುಖಿ, ಧರ್ಮ ಕಾರ್ಯಕ್ಕೆ ಎಲ್ಲರೂ ಸಹಕಾರ ನೀಡಬೇಕು ಎಂದ ಹೇಳಿ ನೂತನ ವಧು-ವರರಿಗೆ ಶುಭಹಾರೈಸಿದರು.

ಬಂಟ್ವಾಳ ಶಾಸಕ ರಾಜೇಶ್ ನಾಯ್ಕ್ ಉಳಿಪಾಡಿ ಅವರು ಅಧ್ಯಕ್ಷತೆ ವಹಿಸಿ ಮಾತನಾಡಿ, ಧರ್ಮಸ್ಥಳ ಕ್ಷೇತ್ರದಲ್ಲಿ ಹೊರತು ಪಡಿಸಿದರೆ, ಜಿಲ್ಲೆಯಲ್ಲಿ ಸಾಮೂಹಿಕ ವಿವಾಹದ ಮೂಲಕ 500ಕ್ಕು ಹೆಚ್ಚು ಜೋಡಿಗೆ ವಿವಾಹ ಮಾಡಿರುವ ಕೀರ್ತಿ ತುಂಗಪ್ಪ ಬಂಗೇರ ನೇತೃತ್ವದ ಪುಂಜಾಲಕಟ್ಟೆ ಸ್ವಸ್ತಿಕ್ ಫ್ರೆಂಡ್ಸ್ ಕ್ಲಬ್ ಗೆ ಸಲ್ಲುತ್ತದೆ ಎಂದರು. ಮಾಜಿ ಸಚಿವ ಬಿ.ನಾಗರಾಜ ಶೆಟ್ಟಿ, ಬಿಜೆಪಿ ಮುಖಂಡ ಸಂದೇಶ್ ಶೆಟ್ಟಿ ಆರೆಬೆಟ್ಟು, ಉದ್ಯಮಿಗಳಾದ ವಾಲ್ಟರ್ ನಂದಳಿಕೆ, ಜಗದೀಪ್ ಡಿ. ಸುವರ್ಣಮಂಗಳೂರು, ಬಿಜೆಪಿ ಬಂಟ್ವಾಳ ಮಂಡಲದ ಅಧ್ಯಕ್ಷ ಚೆನ್ನಪ್ಪ ಆರ್ ಕೋಟ್ಯಾನ್, ಸಿದ್ದಕಟ್ಟೆ ಕೃಷಿ ಪತ್ತಿನ ಸಹಕಾರಿ ಸಂಘದ ಅಧ್ಯಕ್ಷ ಪ್ರಭಾಕರ ಪ್ರಭು, ಮಾಲಾಡಿ ಗ್ರಾ.ಪಂ. ಮಾಜಿ ಅಧ್ಯಕ್ಷ ಪುನೀತ್ ಕುಮಾರ್, ಪಿಲಾತಬೆಟ್ಟು ಗ್ರಾ.ಪಂ. ಮಾಜಿ ಅಧ್ಯಕ್ಷೆ ಶಾರದ, ಗುತ್ತಿಗೆದಾರ ಮೋಹನ್ ಶೆಟ್ಟಿ ನರ್ವಲ್ದಡ್ಕ, ಉದ್ಯಮಿ ಹೇಮಂತ್ ಕುಮಾರ್, ಬಡಗಕಜೆಕಾರು ಕೃ.ಪ.ಸ. ಸಂಘದ ಅಧ್ಯಕ್ಷ ಸತೀಶ್ ಪೂಜಾರಿ, ಪುಂಜಾಲಕಟ್ಟೆ ಮುರುಘೇಂದ್ರ ಮಿತ್ರ ಮಂಡಳಿ ಅಧ್ಯಕ್ಷ ಚಂದ್ರಶೇಖರ ಶೆಟ್ಟಿಗಾರ್, ಧಾರ್ಮಿಕ ಮುಖಂಡ ಕಿರಣ್ ಚಂದ್ರ ಪುಷ್ಪಗಿರಿ, ಉದ್ಯಮಿ ಹರೀಂದ್ರ ಪೈ, ಜಗನ್ನಾಥ ಶೆಟ್ಟಿ ಕೆದ್ದಳಿಕೆ, ಪಿಲಾತಬೆಟ್ಟು ಗ್ರಾ.ಪಂ. ಪಿಡಿಒ ಗೀತಾ ಹೆಗ್ಡೆ ಮೊದಲಾದವರು ಅತಿಥಿಗಳಾಗಿದ್ದರು.


ಸ್ವಸ್ತಿಸಿರಿ ಪ್ರಶಸ್ತಿ

ಧಾರ್ಮಿಕ ಕ್ಷೇತ್ರದಲ್ಲಿ ರವಿಶಂಕರ ಶೆಟ್ಟಿ ಬಡಾಜೆಗುತ್ತು, ಯಕ್ಷಗಾನ ಕ್ಷೇತ್ರದಲ್ಲಿ ದಿವಾಕರ ದಾಸ್, ಶಿಕ್ಷಣ ಕ್ಷೇತ್ರದಲ್ಲಿ ಸಂತೋಷ್ ಎಸ್. ಸನಿಲ್, ಉದ್ಯಮ ಕ್ಷೇತ್ರದಲ್ಲಿ ಮೊಹಮ್ಮದ್ ರಫೀಕ್, ಸಮಾಜ ಸೇವೆ ಹಾಗೂ ಸಂಘಟನಾ ಕ್ಷೇತ್ರದಲ್ಲಿ ಸುಧೀರ್ ಪೂಜಾರಿಗೆ 'ಸ್ವಸ್ತಿ ಸಿರಿ' ರಾಜ್ಯ ಪ್ರಶಸ್ತಿ ಪ್ರದಾನ ಮಾಡಲಾಯಿತು.

ಸ್ವಸ್ತಿಕ್ ಸಂಭ್ರಮ್

ಸಹಕಾರಿ ಶಿರೋಮಣಿ ಪ್ರಶಸ್ತಿ ಪುರಸ್ಕೃತರಾದ ಸಿದ್ದಕಟ್ಟೆ ಕೃ.ಪ.ಸ.ಸಂಘದ ಅಧ್ಯಕ್ಷ ಪ್ರಭಾಕರ ಪ್ರಭು ಹಾಗೂ ದಾರು ಶಿಲ್ಪಿ ಸುರೇಶ್ ಆಚಾರ್ಯ ಅವರಿಗೆ 'ಸ್ವಸ್ತಿಕ್ ಸಂಭ್ರಮ' ಪ್ರಶಸ್ತಿ ಪ್ರದಾನ ಮಾಡಲಾಯಿತು. ಸ್ವಸ್ತಿಕ್ ಫ್ರೆಂಡ್ಸ್ ಕ್ಲಬ್‌ನ ಸ್ಥಾಪಕಾಧ್ಯಕ್ಷ ಎಂ. ತುಂಗಪ್ಪ ಬಂಗೇರ ಪ್ರಸ್ತಾವನೆಗೈದರು. ಕ್ಲಬ್ ನ ಅಧ್ಯಕ್ಷ ಅಬ್ದುಲ್ ಹಮೀದ್,,ಮಾಜಿ ಅಧ್ಯಕ್ಷ ಮಾಧವ ಬಂಗೇರ ಮೊದಲಾದವರು ಉಪಸ್ಥಿತರಿದ್ದರು. ಮಾಜಿ ಅಧ್ಯಕ್ಷ ಪಿ.ಎಂ.ಪ್ರಭಾಕರ ನಿರೂಪಿಸಿದರು. ಕಾರ್ಯದರ್ಶಿ ರಾಜೇಶ್ ಪಿ.ಬಂಗೇರ ವಂದಿಸಿದರು.

'ಮೂಡೂರು-ಪಡೂರು' ಕಂಬಳದಲ್ಲಿ 151 ಜೊತೆ ಓಟದ ಕೋಣಗಳು ಭಾಗಿ



ಬಂಟ್ವಾಳ: ನಾವೂರು ಗ್ರಾಮದ ಕೂಡಿಬೈಲಿನಲ್ಲಿ ಎರಡು ದಿನಗಳ ಕಾಲ ನಡೆದ 15ನೇ ವರ್ಷದ ಬಂಟ್ವಾಳ 'ಮೂಡೂರು-ಪಡೂರು' ಜೋಡುಕರೆ ಕಂಬಳಕ್ಕೆ ಭಾನುವಾರ ಸಂಜೆ ತೆರೆ ಬಿದ್ದಿದೆ. ಈ ಕಂಬಳಕೂಟದಲ್ಲಿ ಒಟ್ಟು 151 ಓಟದ ಕೋಣಗಳು ಭಾಗವಹಿಸಿದ್ದವು.

ಫಲಿತಾಂಶ ವಿವರ

ಕನೆ ಹಲಗೆ ವಿಭಾಗ: 6.5 ಕೋಲು ನಿಶಾನೆಗೆ ಬಂಟ್ವಾಳ ಅಲ್ಲಿಪಾದೆ ಕೆಳಗಿನಮನೆ ವಿನ್ಸೆಂಟ್ ಪಿಂಟೋ ಅವರ ಕೋಣ ನೀರು ಹಾಯಿಸಿ ಗಮನಸೆಳೆದಿದೆ. ತೆಕ್ಕಟ್ಟೆ ಸುಧೀರ್ ದೇವಾಡಿಗ ಅವರು ಹಲಗೆ ಮುಟ್ಟಿದ್ದರು.

ಅಡ್ಡ ಹಲಗೆ ವಿಭಾಗದಲ್ಲಿ ಪ್ರಥಮ -ಇರುವೈಲು ದೊಡ್ಡಗುತ್ತು ಜಗದೀಶ್ ಎಂ ಶೆಟ್ಟಿ ಹಲಗೆ ಮುಟ್ಟಿದವರು ತೆಕ್ಕಟ್ಟೆ ಸುಧೀರ್ ದೇವಾಡಿಗ, ದ್ವಿತೀಯ ನಕ್ರೆ ಕೊರವಲಕಟ್ಟೆ ಲವೀನಾ ಡಿ ಅಲ್ಮೇಡ, ಹಲಗೆ ಮುಟ್ಟಿದವರು ಭಟ್ಕಳ ಪಾಂಡು

ಹಗ್ಗ ಹಿರಿಯ ವಿಭಾಗದಲ್ಲಿ: ಪ್ರಥಮ -ನಂದಳಿಕೆ ಶ್ರೀಕಾಂತ್ ಭಟ್ 'ಬಿ' ಕೋಣ ಓಡಿಸಿದವರು ಬಂಬ್ರಾಣಬೈಲು ವಂದಿತ್ ಶೆಟ್ಟಿ, ದ್ವಿತೀಯ ಕೊಳಕೆ ಇರ್ವತ್ತೂರು ಭಾಸ್ಕರ ಎಸ್. ಕೋಟ್ಯಾನ್, ಕೋಣ ಓಡಿಸಿದವರು ಕಕ್ಕೆಪದವು ಪೆಂಗಾಲು ಕೃತಿಕ್ ಗೌಡ.

ಹಗ್ಗ ಕಿರಿಯ ವಿಭಾಗದಲ್ಲಿ

-ಪ್ರಥಮ: ಸುರತ್ಕಲ್ ಪಾಂಚಜನ್ಯ ? ಯೋಗೀಶ್ ಕರಿಯ ಪೂಜಾರಿ, ಕೋಣ ಓಡಿಸಿದವರು ಭಟ್ಕಳ ಶಂಕರ್. ದ್ವಿತೀಯ ಮಿಯಾರ್ ಬೋರ್ಕಟ್ಟೆ ಅನುಗ್ರಹ ಪ್ರಥಮ್ ಪ್ರಭಾಕರ ಶೆಟ್ಟಿ, ಕೋಣ ಓಡಿಸಿದವರು ಹೊಕ್ಕಾಡಿಗೋಳಿ ಗುರುಪ್ರಸಾದ್.

ನೇಗಿಲು ಹಿರಿಯ ವಿಭಾಗದಲ್ಲಿ ಪ್ರಥಮ ಮಾಣಿ ನಾಗರಾಜ ಶೆಟ್ಟಿ 'ಎ' ಕೋಣ ಓಡಿಸಿದವರು ಸೂರಾಲ್ ಪ್ರದೀಪ್ ನಾಯ್ಕ್ಮಣಿ, ದ್ವಿತೀಯ ನಾಗರಾಜ ಶೆಟ್ಟಿ 'ಬಿ' ಕೋಣ ಓಡಿಸಿದವರು ಕುಂದ ಬಾರಂದಡಿ ಮಾಸ್ತಿಕಟ್ಟೆ ಸ್ವರೂಪ್.

ನೇಗಿಲು ಕಿರಿಯ ವಿಭಾಗದಲ್ಲಿ ಪ್ರಥಮ ಪಣೋಲಿಬೈಲು ಭಂಡಾರದಮನೆ ರಮೇಶ್ ಎಂ ಕುಲಾಲ್ 'ಬಿ' ಕೋಣ ಓಡಿಸಿದವರು ಪಡು ಸಾಂತೂರು ಸುಕೇಶ್ ಪೂಜಾರಿ ದ್ವಿತೀಯ 80 ಬಡಗಬೆಟ್ಟು ಕಲ್ಲಪಾವು ಶ್ರೀಕ ಸಂದೀಪ್ ಶೆಟ್ಟಿ ಕೋಣ ಓಡಿಸಿದವರು ಪಡು ಸಾಂತೂರು ಪೃಥ್ವಿರಾಜ್ ಪೂಜಾರಿ ಕಂಬಳ ಸಮಿತಿ ಗೌರವಾಧ್ಯಕ್ಷ ಬಿ.ರಮಾನಾಥ ರೈ,ಕಂಬಳ ಸಮಿತಿ ಅಧ್ಯಕ್ಷ ಪಿಯೂಸ್ ಎಲ್. ರೋಡ್ರಿಗಸ್, ಪದಾಧಿಕಾರಿಗಳು ಬಹುಮಾನ ವಿತರಣೆ ವೇಳೆ ಹಾಜರಿದ್ದರು.

ಮಹಿಳೆ ತಾನು ಸಬಲೆ ಎಂಬುದನ್ನು ಸಾಬೀತುಪಡಿಸಲಿ: ಎ.ಎಸ್. ಪೊನ್ನಣ್ಣ



ಮಡಿಕೇರಿ: ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆಯ ಕೇವಲ ಒಂದು ಆಚರಣೆಯಾಗಿ ಉಳಿಯದೆ ಇದನ್ನು ಪ್ರತಿಯೊಬ್ಬ ಮಹಿಳೆಯು ತನ್ನ ಜೀವನದಲ್ಲಿ ಅಳವಡಿಸಿಕೊಂಡು ಸಮಾಜದಲ್ಲಿ ತಾನು ಸಬಲೆ ಎಂಬುದನ್ನು ಸಾಬೀತುಪಡಿಸಬೇಕು ಎಂದು ಮುಖ್ಯಮಂತ್ರಿಯವರ ಕಾನೂನು ಸಲಹೆಗಾರ, ಶಾಸಕ ಎ.ಎಸ್. ಪೊನ್ನಣ್ಣ ಅವರು ಕರೆ ನೀಡಿದರು.

ಗೋಣಿಕೊಪ್ಪಲುವಿನಲ್ಲಿ ಉಮಾಮಹೇಶ್ವರಿ ದೇವಾಲಯದ ಸಭಾಂಗಣದಲ್ಲಿ ನಡೆದ ವೀರಾಜಪೇಟೆ ಹಾಗೂ ಪೊನ್ನಂಪೇಟೆ ತಾಲೂಕು ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಯಾಗಿ ಪಾಲ್ಗೊಂಡು, ರಾಷ್ಟ್ರೀಯ ಗ್ರಾಮೀಣ ಜೀವನೋಪಾಯ ಅಭಿಯಾನ ನಿರ್ವಹಣಾ ಘಟಕದವರು ಆಯೋಜಿಸಿದ್ದ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಆಚರಣೆಯು ಕೇವಲ ಒಂದು ದಿನಕ್ಕೆ ಸೀಮಿತವಾದರೂ ಇದರ ಅಳವಡಿಕೆ ದಿನನಿತ್ಯದ ಜೀವನದಲ್ಲಿ ಮಾಡಿಕೊಂಡರೆ ಸಮ ಸಮಾಜದ ನಿರ್ಮಾಣ ಆಗುವುದರಲ್ಲಿ ಯಾವುದೇ ಸಂದೇಹವಿಲ್ಲ ಶಾಸಕರು ಬಣ್ಣಿಸಿದರು.

ಈ ಸಂದರ್ಭ ಜಿಲ್ಲಾ ಗ್ಯಾರಂಟಿ ಅನುಷ್ಠಾನ ಸಮಿತಿಯ ಅಧ್ಯಕ್ಷ ತಿತೀರ ಧರ್ಮಜ ಉತ್ತಪ್ಪ, ಪೊನ್ನಂಪೇಟೆ ತಾಲೂಕು ಗ್ಯಾರಂಟಿ ಅನುಷ್ಠಾನ ಅಧ್ಯಕ್ಷರು ಕಾಳಿಮಾಡ ಪ್ರಶಾಂತ್, ವೀರಾಜಪೇಟೆ ತಾಲೂಕು ಗ್ಯಾರಂಟಿ ಅನುಷ್ಠಾನ ಅಧ್ಯಕ್ಷ ಪಿ ವಿ ಜಾನ್ಸನ್, ತಾಲೂಕು ಪಂಚಾಯತ್ ಕಾರ್ಯನಿರ್ವಹಣಾಧಿಕಾರಿ ಅಪ್ಪಣ್ಣ, ಅಜ್ಜಿಕುಟ್ಟಿರ ಧನ್ಯಾ, ಶಾಜಿ ಅಚ್ಚುತನ್, ಖಾಲಿದ್, ಅನೀಶ್, ಮುತಣ್ಣ ಹಾಗೂ ಪ್ರಮುಖರು ಉಪಸ್ಥಿತರಿದ್ದರು.

ಬುಡೆಂಗಿಯಲ್ಲಿ ವಿಷ್ಣುಮೂರ್ತಿ ಒತ್ತೆಕೋಲಕ್ಕೆ ಕೊಳ್ಳಿ ಮುಹೂರ್ತ



ಸುಬ್ರಹ್ಮಣ್ಯ: ಕಡಬ ತಾಲೂಕಿನ ಬಳ್ಪದ ಬುಡೆಂಗಿ ಶ್ರೀ ವಿಷ್ಣುಮೂರ್ತಿ ದೈವಸ್ಥಾನದಲ್ಲಿ ಒತ್ತೆ ಕೋಲ ಮಹೋತ್ಸವವು ಎ.27 ಮತ್ತು 28ರಂದು ನಡೆಯಲಿದ್ದು, ಇದರ ಅಂಗವಾಗಿ ಕೊಳ್ಳಿ ಮುಹೂರ್ತವು ನಡೆಯಿತು.

ದೈವಸ್ಥಾನದ ಪ್ರಧಾನ ಪೂಜಾರಿ ಉದಯಕುಮಾರ್ ಮಾವಿನಕಟ್ಟೆ ವಿಧಿವಿಧಾನಗಳನ್ನು ನೆರವೇರಿಸಿದರು. ಬಳಿಕ ಮುಹೂರ್ತದ ಕೊಳ್ಳಿ ಕಡಿಯಲಾಯಿತು. ಅನಂತರ ಪ್ರಸಾದ ವಿತರಣೆ ನಡೆಯಿತು.

ಈ ಸಂದರ್ಭ ದೈವಸ್ಥಾನದ ಆಡಳಿತ ಮಂಡಳಿ ಅಧ್ಯಕ್ಷ ಡಾ.ದೇವಿಪ್ರಸಾದ್ ಕಾನತ್ತೂರು, ಉಪಾಧ್ಯಕ್ಷ ಉಮೇಶ್ ಬುಡೆಂಗಿ, ನವೀನ್ ಪುಲ್ಲಡ್ಕ, ಕೋಶಾಧಿಕಾರಿ ಸಂತೋಷಕುಮಾರ್ ರೈ ಪಲ್ಲತ್ತಡ್ಕ, ಆಡಳಿತ ಮೊಕ್ತೇಸರರಾದ ಮೋನಪ್ಪ ಬೆಳ್ಳಪ್ಪಾಡ ಬುಡೆಂಗಿ, ಸುಂದರ ಬೆಳಪ್ಪಾಡ ಬುಡೆಂಗಿ, ಪ್ರಮುಖರಾದ ರಾಧಾಕೃಷ್ಣ ಕುಳ, ಕಾರ್ತಿಕ್ ರೈ ಬುಡೆಂಗಿ, ಭಾಸ್ಕರ ಕೊರಪ್ಪಣೆ, ಚಂದ್ರಕಾಂತ್ ಬಳ್ಳ, ಗಿರಿಧರ ಬಿಕೆರೆ, ಪ್ರೇಮನಾಥ ರೈ ಬುಡೆಂಗಿ, ಹರೀಶ್ ಬಿಕೆರೆ, ರಮೇಶ್ ಆಚಾರ್ಯ ಬಿಕೆರೆ, ನೀಲೇಶ್ವರ ಬಿಕೆರೆ, ಸೀತಾರಾಮ ನಾಳ ಎಣ್ಣೆಮಜಲು, ಪವನ್ ಬಿಕೆರೆ, ನಾರಾಯಣ ಕೊರಪ್ಪಣೆ, ವಿಜಯ ಬುಡೆಂಗಿ ಉಪಸ್ಥಿತರಿದ್ದರು.

ಕುಡಿಯುವ ನೀರಿಗೆ ಸಮಸ್ಯೆಯಾಗದಂತೆ ಅಧಿಕಾರಿಗಳ ಜೊತೆ ಡಾ. ಭರತ್ ಶೆಟ್ಟಿ ಸಭೆ



ಮಂಗಳೂರು: ಮುಂಬರುವ ಬೇಸಿಗೆಯನ್ನು ಪರಿಣಾಮಕಾರಿಯಾಗಿ ಎದುರಿಸುವ ನಿಟ್ಟಿನಲ್ಲಿ ಮಂಗಳೂರು ಮಹಾ ನಗರ ಪಾಲಿಕೆಗೆ ಒಳಪಟ್ಟ ಮಂಗಳೂರು ನಗರ ಉತ್ತರ ವಿಧಾನ ಸಭಾ ಕ್ಷೇತ್ರ ವ್ಯಾಪ್ತಿಯ 22 ವಾರ್ಡ್‌ಗಳಲ್ಲಿ ಕುಡಿಯುವ ನೀರಿನ ಸಮಸ್ಯೆಗಳ ಪರಿಹಾರ ಹಾಗೂ ಮುಂಜಾಗ್ರತ ಕ್ರಮಗಳ ಕುರಿತು ಮಾನ್ಯ ಶಾಸಕರು ಡಾ. ವೈ ಭರತ್ ಶೆಟ್ಟಿಯವರ ಅಧ್ಯಕ್ಷತೆಯಲ್ಲಿ, ವಿವಿಧ ಮಟ್ಟದ ಅಧಿಕಾರಿಗಳ ಹಾಗೂ ನಿಕಟಪೂರ್ವ ಪಾಲಿಕೆ ಸದಸ್ಯರ ಉಪಸ್ಥಿತಿಯಲ್ಲಿ ಮಂಗಳೂರು ಮಹಾನಗರ ಪಾಲಿಕೆಯಲ್ಲಿರುವ ಶಾಸಕರ ಕಚೇರಿಯಲ್ಲಿ ಮಹತ್ವದ ಸರಣಿಗಳು ಸಭೆ ನಡೆಯಿತು. ಬೇಸಿಗೆ ಸಮಯದಲ್ಲಿ, ಜನಸಾಮಾನ್ಯರಿಗೆ ನೀರು ಪೂರೈಕೆಯಲ್ಲಿ ಯಾವುದೇ ರೀತಿಯ ವ್ಯತ್ಯಾಯವಾಗಬಾರದು, ಅದಕ್ಕಾಗಿ ಸೂಕ್ತವಾದ ಮುಂಜಾಗ್ರತ ಕ್ರಮ ವಹಿಸಿಸಲು ಅಧಿಕಾರಿಗಳಿಗೆ ಶಾಸಕರು ಸೂಚನೆ ನೀಡಿದರು.



ಕುಂದಾಪುರದ ಹಾಲಾಡಿ ಪಂಚಾಯತ್ ಆವರಣದಲ್ಲಿ ಉಡುಪಿ ಕುಡಿಯುವ ನೀರು ಯೋಜನೆಯ ಕಾಮಗಾರಿ ಹಾಗೂ ಜಲಜೀವನ್ ಮಿಷನ್ ಯೋಜನೆಯ ಕುರಿತು ಅಧಿಕಾರಿಗಳು, ಸಂತ್ರಸ್ತರೊಂದಿಗೆ ಶಾಸಕ ಎ. ಕಿರಣ್ ಕುಮಾರ್ ಕೊಡ್ಗಿ ಚರ್ಚೆ ನಡೆಸಿದರು. ಉಪವಿಭಾಗದ ಸಹಾಯಕ ಆಯುಕ್ತೆ ರಶ್ಮಿ ಎಸ್.ಆರ್., ಕುಡಿಯುವ ನೀರು ಯೋಜನೆ ಅಧಿಕಾರಿ ಉದಯ ಕುಮಾರ್ ಶೆಟ್ಟಿ ಇದ್ದರು.

ಬೆಟ್ಟಂಪಾಡಿ: ವೈದ್ಯಕೀಯ ತಪಾಸಣಾ ಶಿಬಿರ



ನಿಡ್ಪಳ್ಳಿ: ಪುತ್ತಿಲ ಪರಿವಾರ ಸೇವಾ ಟ್ರಸ್ಟ್ ಪುತ್ತೂರು ಇರ್ದೆ-ಬೆಟ್ಟಂಪಾಡಿ, ಪಾಣಾಜೆ, ನಿಡ್ಪಳ್ಳಿ ಘಟಕದ ಆಶ್ರಯದಲ್ಲಿ ಶ್ರೀ ಸತ್ಯಸಾಯಿ ಸೇವಾ ಸಮಿತಿ, ಈಶ್ವರಾಂಭ ಟ್ರಸ್ಟ್ ಗಾಂನಗರ ಮಂಗಳೂರು ಮತ್ತು ಜಸ್ಟಿಸ್ ಕೆ.ಎಸ್. ಹೆಗ್ಡೆ ಚಾರಿಟೇಬಲ್ ಆಸ್ಪತ್ರೆ ದೇರಳಕಟ್ಟೆ ಇವರ ಸಹಯೋಗದೊಂದಿಗೆ ಅಂಬುಲೆನ್ಸ್ ಸೇವೆಯ 3ನೇ ವರ್ಷದ ಪಾದಾರ್ಪಣೆ ಪ್ರಯುಕ್ತ ಉಚಿತ ವೈದ್ಯಕೀಯ ತಪಾಸಣಾ ಶಿಬಿರ ಬೆಟ್ಟಂಪಾಡಿ ಪಂಚಾಯತ್ ಸಭಾಭವನದಲ್ಲಿ ನಡೆಯಿತು.

ಪುತ್ತಿಲ ಪರಿವಾರ ಸೇವಾ ಟ್ರಸ್ಟ್ ಸ್ಥಾಪಕ ಅರುಣ್ ಕುಮಾರ್ ಪುತ್ತಿಲ ದೀಪ ಬೆಳಗಿಸುವ ಮೂಲಕ ಶಿಬಿರ ಉದ್ಘಾಟಿಸಿದರು. ಮುಂಡೂರು ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಘದ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಜಯಪ್ರಕಾಶ್ ರೈ ಚೆಲ್ಯಡ್ಕ ಅಧ್ಯಕ್ಷತೆಯನ್ನು ವಹಿಸಿದ್ದರು. ಸತ್ಯಸಾಯಿ ಸೇವಾ ಸಮಿತಿಯ ಸಂಚಾಲಕ ಆನಂದ ರೈ, ಪುತ್ತಿಲ ಪರಿವಾರ ಸೇವಾ ಟ್ರಸ್ಟ್ ಸಂಘಟನಾ ಕಾರ್ಯದರ್ಶಿ ಅನಿಲ್ ತೆಂಕಿಲ, ಪಾಣಾಜೆ ಗಾರ್ಡನ್ ವ್ಯೂ ಹೆಲ್ತ್ ಸೆಂಟರ್ ಅರ್ಥಮೂಲೆ ಇದರ ಆಯುರ್ವೇದ ತಜ್ಞೆ ಡಾ. ಪ್ರಸನ್ನ ಅಖಿಲೇಶ್, ಇರ್ದೆ ಶ್ರೀ ವಿಷ್ಣು ಮೂರ್ತಿ ದೇವಾಲಯ ವ್ಯವಸ್ಥಾಪನಾ ಸಮಿತಿಯ ನಿಕಟ ಪೂರ್ವ ಅಧ್ಯಕ್ಷ ಬಾಲಕೃಷ್ಣ ಭಟ್ ಘಾಟೆ, ಸಮುದಾಯ ದಂತ ಆರೋಗ್ಯ ವಿಭಾಗ ಯೆನಪೋಯ ದಂತ ಕಾಲೇಜು ಇದರ ಡಾ. ಅಪೂರ್ವ ಕೋಟ್ಯಾನ್, ಕೆ.ಎಸ್. ಹೆಗ್ಡೆ ಆಸ್ಪತ್ರೆ ದೇರಳಕಟ್ಟೆಯ ವೈದ್ಯಕೀಯ ತಜ್ಞೆ ಡಾ.ಗ್ರೀಷ್ಮ ರೈ, ಪುತ್ತಿಲ ಪರಿವಾರ ಸೇವಾ ಟ್ರಸ್ಟ್ ಪುತ್ತೂರು ಕಾರ್ಯದರ್ಶಿ ಪ್ರೇಮ್ ರಾಜ್ ಆರ್ಲಪದವು ಹಾಗೂ ಇರ್ದೆ ಬೆಟ್ಟಂಪಾಡಿ ಪುತ್ತಿಲ ಪರಿವಾರ ಸೇವಾ ಗ್ರಾಮ ಸಮಿತಿ ಅಧ್ಯಕ್ಷ ಸುಜಿತ್ ಕಜೆ ಇದ್ದರು.

ಸಾತ್ವಿಕ ಕಕ್ಕೂರು, ಚೇತಸ್ ಶರ್ಮ ಕಕ್ಕೂರು ಪ್ರಾರ್ಥಿಸಿದರು. ಪುತ್ತಿಲ ಪರಿವಾರ ಸೇವಾ ಟ್ರಸ್ಟ್ ಉಪ್ಪಳಿಗೆ ಬೂತ್ ಅಧ್ಯಕ್ಷ ಪ್ರಸಾದ್ ಚೆಲ್ಯಡ್ಕ ಸ್ವಾಗತಿಸಿದರು. ನಿಡ್ಪಳ್ಳಿ ಪುತ್ತಿಲ ಪರಿವಾರ ಘಟಕ ಅಧ್ಯಕ್ಷ ಕುಮಾರ ನರಸಿಂಹ ಭಟ್ ಪ್ರಾಸ್ತಾವಿಕವಾಗಿ ಮಾತನಾಡಿದರು. ಸೌಮ್ಯ ಪಾಣಾಜೆ ಕಾರ್ಯಕ್ರಮ ವಂದಿಸಿದರು. ಸುಮಾರು 137 ಶಿಬಿರಾರ್ಥಿಗಳು ಭಾಗವಹಿಸಿದ್ದರು.

ಉಜಿರೆ ದೇಗುಲಕ್ಕೆ ಪತ್ರಕರ್ತರ ಸಂಘದ ರಾಜ್ಯಾಧ್ಯಕ್ಷ ಶಿವಾನಂದ ತಗಡೂರು ಭೇಟಿ



ಬೆಳ್ತಂಗಡಿ: ಕರ್ನಾಟಕ ರಾಜ್ಯ ಕಾರ್ಯನಿರತ ಪತ್ರಕರ್ತರ ಸಂಘದ ರಾಜ್ಯಾಧ್ಯಕ್ಷ ಶಿವಾನಂದ ತಗಡೂರು ಅವರು ಉಜಿರೆ ಶ್ರೀ ಜನಾರ್ಧನ ಸ್ವಾಮಿ ದೇವಸ್ಥಾನದ ಬ್ರಹ್ಮಕಲಶೋತ್ಸವ ಸಂದರ್ಭದಲ್ಲಿ ಶನಿವಾರ ದೇವಸ್ಥಾನಕ್ಕೆ ಭೇಟಿ ನೀಡಿ ದೇವರ ದರ್ಶನ ಪಡೆದರು. ಆನುವಂಶೀಯ ಆಡಳ್ತೆ ಮೊಕ್ತೇಸರ ಶರತ್ ಕೃಷ್ಣ ಪಡ್ವೆಟ್ನಾಯ ದೇವಳದ ಪರವಾಗಿ ಗೌರವಿಸಿದರು.

ಈ ಸಂದರ್ಭದಲ್ಲಿ ಬ್ರಹ್ಮಕಲಶೋತ್ಸವ ಸಮಿತಿ ಕಾರ್ಯಾಧ್ಯಕ್ಷ, ಬರೋಡದ ಉದ್ಯಮಿ ಶಶಿಧರ ಶೆಟ್ಟಿ ನವಶಕ್ತಿ ಗುರುವಾಯನಕೆರೆ ಹಾಗೂ ಅಧ್ಯಕ್ಷ ವಿಧಾನ ಪರಿಷತ್ ಶಾಸಕ ಪ್ರತಾಪಸಿಂಹ ನಾಯಕ್ ಬ್ರಹ್ಮ ಕಲಶೋತ್ಸವ ಸಮಿತಿ ವತಿಯಿಂದ ಸನ್ಮಾನಿಸಿ, ಗೌರವಿಸಿದರು. ಬ್ರಹ್ಮ ಕಲಶೋತ್ಸವ ಸಮಿತಿ ಪ್ರಧಾನ ಸಂಚಾಲಕ ಮೋಹನ್ ಕುಮಾರ್ ಅವರ ನೇತೃತ್ವದ ಸುಪ್ರಸಾದ ಭೋಜನ ಶಾಲೆ ವೀಕ್ಷಿಸಿ ಮೆಚ್ಚುಗೆ ವ್ಯಕ್ತಪಡಿಸಿದರು.

ಜಿಲ್ಲಾ ಪತ್ರಕರ್ತರ ಸಂಘದ ಕಾರ್ಯಕಾರಿಣಿ ಸದಸ್ಯ ಭುವನೇಶ್ ಗೇರುಕಟ್ಟೆ, ಬೆಳ್ತಂಗಡಿ ಘಟಕದ ಅಧ್ಯಕ್ಷ ತುಕರಾಮ್, ಶ್ರೀನಿವಾಸ ತಂತ್ರಿ, ಬಿ.ಎಸ್. ಕುಲಾಲ್, ದಿನೇಶ್ ಕೋಟ್ಯಾನ್, ಜಾರಪ್ಪ ಪೂಜಾರಿ ಇದ್ದರು.

ಬೈಂದೂರು ಲಾವಣ್ಯ ರಂಗಶ್ರೀ-ರಂಗಹಬ್ಬದಲ್ಲಿ ಮೋಹನ್ ಕುಮಾರ್ ಶ್ಲಾಘನೆ

ರಂಗಭೂಮಿಯಲ್ಲಿ 'ಲಾವಣ್ಯ' ಸಾಧನೆ ಪರಿಪೂರ್ಣ

ಉಪ್ಪುಂದ: ರಂಗಭೂಮಿ ಕ್ಷೇತ್ರದಲ್ಲಿ ಲಾವಣ್ಯ ತನ್ನ ಪರಿಪೂರ್ಣ ಸಾಧನೆಯ ಮೂಲಕ ರಾಜ್ಯಮಟ್ಟದಲ್ಲಿ ಗುರುತಿಸಿಕೊಂಡಿದೆ. ಇಂದಿನ ಕಾಲಘಟ್ಟಕ್ಕೆ ತಕ್ಕಂತೆ ಅನೇಕ ಬದಲಾವಣೆಗಳಿಗೆ ಒಗ್ಗಿಕೊಂಡು ಅಭಿನಯ, ನಾಟಕದ ಆಯ್ಕೆ ಜತೆಗೆ ಹೊಸ ಪ್ರಸ್ತುತಿಗಳನ್ನು ರಂಗಭೂಮಿಗೆ ನೀಡುತ್ತಿರುವುದು ಸಂಸ್ಥೆ ಹೆಗ್ಗಳಿಕೆಯಾಗಿದೆ ಎಂದು ಉದ್ಯಮಿ ಮೋಹನ್ ಕುಮಾರ್ ಬೈಂದೂರು ಹೇಳಿದರು.



ಬೈಂದೂರು ಶಾರದಾ ವೇದಿಕೆಯಲ್ಲಿ ಶನಿವಾರ ಲಾವಣ್ಯದ ಸ್ಥಾಪಕಾಧ್ಯಕ್ಷ ದಿ.ಯು. ಉಪ್ಪುಂದ ಶ್ರೀನಿವಾಸ ಪ್ರಭು ಅವರ ಸ್ಮರಣಾರ್ಥ ಆಯೋಜನೆಯ ರಂಗಶ್ರೀ-ರಂಗಹಬ್ಬ-2026ರ ನಾಲ್ಕನೇ ದಿನದ ಕಾರ್ಯಕ್ರಮದಲ್ಲಿ ಮಾತನಾಡಿದರು. ಉದ್ಯಮಿ ರಾಜೇಂದ್ರ ಹೆಜ್ಜಾಲು ಅಧ್ಯಕ್ಷತೆವಹಿಸಿದ್ದರು.

ಯಕ್ಷಗಾನ ಭಾಗವತ ಪಸ್ರೆ ಸುಧಾಕರ ಕೊಠಾರಿ ಅವರನ್ನು ಸನ್ಮಾನಿಸಲಾಯಿತು. ಮಾಜಿ ಶಾಸಕ ಕೆ. ಗೋಪಾಲ ಪೂಜಾರಿ, ವಾಣಿಜ್ಯ ತೆರಿಗೆ ಸಹಾಯಕ ಆಯುಕ್ತ ಸತೀಶ ಬಟ್ವಾಡಿ, ಡಾ. ನಂದಿನಿ ಬಿ., ರಂಗ ಕಲಾವಿದ ಅನಿಲ್ ಕುಮಾರ್ ಶ್ಯಾನುಭಾಗ್, ಎಲ್‌ಐಸಿ ನಿವೃತ್ತ ಅಭಿವೃದ್ಧಿ ಅಧಿಕಾರಿ ಯು. ರಾಜೇಂದ್ರ ಪ್ರಭು, ರೋಟರಿ ಅಧ್ಯಕ್ಷ ಸುಬ್ರಹ್ಮಣ್ಯ ಜಿ., ಡಾ. ರಾಘವೇಂದ್ರ ಬೈಂದೂರು, ಜ್ಯೋತಿಷಿ ಬಾಲರಾಜ್ ಶರ್ಮಾ ಇದ್ದರು. ರಾಜೇಶ ನಾಯ್ಕ್ ಸ್ವಾಗತಿಸಿ, ಮಂಜುನಾಥ ಶಿರೂರು ನಿರೂಪಿಸಿದರು. ದಯನಂದ ಪಿ. ವಂದಿಸಿದರು. ಮಕ್ಕಳ ಮತ್ತು ಮಹಿಳಾ ಯಕ್ಷಗಾನ ಸದಸ್ಯರಿಂದ ಯಕ್ಷಗಾನ ಪ್ರದರ್ಶನಗೊಂಡಿತು.

ಅಮೃತಭಾರತಿ ಸಮೂಹ ಶಿಕ್ಷಣ ಸಂಸ್ಥೆಯ ಸೇವಾ ಸಂಗಮ ಶಿಶುಮಂದಿರ

ಸಾಮೂಹಿಕ ಹುಟ್ಟುಹಬ್ಬ, ಪೋಷಕರ ಕಲಾಕಲರವ

ಹೆಬ್ರಿ: ಅಮೃತಭಾರತಿ ಸಮೂಹ ಶಿಕ್ಷಣ ಸಂಸ್ಥೆಯ ಸೇವಾ ಸಂಗಮ ಶಿಶುಮಂದಿರದಲ್ಲಿ ಸಾಮೂಹಿಕ ಹುಟ್ಟು ಹಬ್ಬ ಮತ್ತು ಪೋಷಕರ ಕಲಾಕಲರವ ಕಾರ್ಯಕ್ರಮ ಇತ್ತೀಚೆಗೆ ನಡೆಯಿತು.

ಅಧ್ಯಕ್ಷತೆಯನ್ನು ವಹಿಸಿದ್ದ ಟ್ರಸ್ಟ್‌ನ ಕಾರ್ಯದರ್ಶಿ ಗುರುದಾಸ್ ಶೆಣೈ ಮಾತನಾಡಿ ಕುಟುಂಬ, ಸಾಮರಸ್ಯ, ಪರಿಸರ , ಪ್ಲಾಸ್ಟಿಕ್ ಮುಕ್ತ ಸಮಾಜದಲ್ಲಿ ಮಾತೆಯರ ಪಾತ್ರದ ಬಗ್ಗೆ ಕಿವಿ ಮಾತು ತಿಳಿಸಿದರು.



ಮುಖ್ಯ ಅತಿಥಿಗಳಾಗಿ ನಿವೃತ್ತ ತೆರಿಗೆ ಇಲಾಖೆ ಅಧಿಕಾರಿ ಕೃಷ್ಣಮೂರ್ತಿ ಪ್ರಭು ಮಾತನಾಡಿ, ಸಾಮೂಹಿಕ ಹುಟ್ಟು ಹಬ್ಬ ಆಚರಣೆಯಿಂದ ನಾವೆಲ್ಲರೂ ಒಂದು ಎಂಬ ಭಾವನೆಯನ್ನು ಮೂಡಿಸುತ್ತದೆ. ಸಮಾಜದಲಿ ಸಂಘಟಿತರಾಗಿ ಬಾಳಲು ಶಿಶು ಮಂದಿರದಲ್ಲಿ ಇಂತಹ ಕಾರ್ಯಕ್ರಮಗಳು ನಡೆಯಬೇಕು ಎಂದು ಹೇಳಿದರು.

ಈ ಸಂದರ್ಭದಲ್ಲಿ ಶಿಶು ಮಂದಿರದ ಸದಸ್ಯರಾದ ಆಶಾ ನಾಯಕ್, ನಂದಿನಿ ಡಾಂಗೆ, ಅಮೃತಭಾರತಿ ವಿದ್ಯಾಲಯದ ಮುಖ್ಯ ಶಿಕ್ಷಕಿ ಅಪರ್ಣಾ ಆಚಾರ್, ಸಂಸ್ಕಾರ ಶಿಕ್ಷಣ ಪ್ರಮುಖ್ ಮೀನಾಕ್ಷಿ ಮತ್ತು ವಿದ್ಯಾರ್ಥಿಗಳು, ಪೋಷಕರು ಉಪಸ್ಥಿತರಿದ್ದರು.

ಕಾರ್ಯಕ್ರಮದಲ್ಲಿ ಮಾತೆಯರಾದ ಸ್ವಪ್ನ ಪುತ್ರಾಯ ಪ್ರಾರ್ಥಿಸಿ, ವಿದ್ಯಾಲಯದ ಶಿಕ್ಷಕಿ ಸುಚಿತ್ರಾ ಸ್ವಾಗತಿಸಿ, ಸೌಮ್ಯ ವಂದಿಸಿ, ಪೂರ್ಣಿಮಾ ಭಟ್ ಮತ್ತು ಕೀರ್ತಿ ನಾಯಕ್ ನಿರೂಪಿಸಿದರು.

ಸುತ್ತಮುತ್ತ

ನಾಳೆ ಮಾಧ್ಯಮ ಕಾರ್ಯಕರ್ತರಿಗೆ ತರಬೇತಿ

ಕಾಸರಗೋಡು: ವಿಧಾನಸಭಾ ಚುನಾವಣೆಯ ಅಂಗವಾಗಿ ಕಾಸರಗೋಡು ಜಿಲ್ಲಾ ಮೀಡಿಯಾ ಸರ್ಟಿಫಿಕೇಶನ್ ಆ್ಯಂಡ್ ಮೋನಿಟರಿಂಗ್ ಸಮಿತಿಯ ನೇತೃತ್ವ ಜಿಲ್ಲೆಯ ಮಾಧ್ಯಮ ಕಾರ್ಯಕರ್ತರಿಗೆ ತರಬೇತಿ ನೀಡಲಾಗುವುದು. ಮಾ.10ರಂದು ಬೆಳಿಗ್ಗೆ 10.30ಕ್ಕೆ ಕಾಸರಗೋಡು ಕಲೆಕ್ಟರೇಟ್‌ನ ಮಿನಿ ಕಾನ್ಫರೆನ್ಸ್ ಸಭಾಂಗಣದಲ್ಲಿ ತರಬೇತಿ ನಡೆಯಲಿದೆ ಎಂದು ಜಿಲ್ಲಾ ಮಾಹಿತಿ ಕೇಂದ್ರದ ಅಧಿಕಾರಿ ತಿಳಿಸಿದ್ದಾರೆ.

ಕುಂಬ್ಡಾಜೆ – ಬೆಳಿಂಜ – ನಾಟೆಕಲ್ಲು ರಸ್ತೆ ದುರಸ್ತಿಗೆ 80 ಲ.ರೂ. ಮಂಜೂರು

ಬದಿಯಡ್ಕ: ಕುಂಬ್ಡಾಜೆ – ಬೆಳಿಂಜ – ನಾಟೆಕಲ್ಲು ರಸ್ತೆಯ ದುರಸ್ತಿಗಾಗಿ 80 ಲಕ್ಷ ರೂ. ಮಂಜೂರು ಮಾಡಲಾಗಿದೆಯೆಂದು ಜಿಲ್ಲಾ ಪಂಚಾಯತ್ ಸದಸ್ಯ ರಾಮಪ್ಪ ಮಂಜೇಶ್ವರ ಅವರು ತಿಳಿಸಿದ್ದಾರೆ. ಈ ಜಿಲ್ಲಾ ಪಂಚಾಯತ್ ರಸ್ತೆಯಲ್ಲಿ ವ್ಯಾಪಕ ಹೊಂಡಗಳು ತುಂಬಿದ್ದು ವಾಹನ ಸಂಚಾರವೇ ದುಸ್ತರವೆನಿಸಿತ್ತು. ರಸ್ತೆ ದುರಸ್ತಿಗೊಳಿಸುವಂತೆ ವಾಹನ ಚಾಲಕರು, ಸಾರ್ವಜನಿಕರು ಹಲವು ಬಾರಿ ಒತ್ತಾಯಿಸಿದ್ದರು. ಈ ಹಿನ್ನೆಲೆ 80 ಲಕ್ಷ ರೂ ಮಂಜೂರು ಮಾಡಲಾಗಿದೆ ಎಂದು ರಾಮಪ್ಪ ತಿಳಿಸಿದ್ದಾರೆ. ಅಲ್ಲದೆ ಬದಿಯಡ್ಕ ಗ್ರಾ.ಪಂ. ವ್ಯಾಪ್ತಿಯ ಕನ್ನೆಪ್ಪಾಡಿ – ಮುಂಡಿತ್ತಡ್ಕ ರಸ್ತೆ ದುರಸ್ತಿಗೆ 50 ಲಕ್ಷ ರೂ., ಪೆರಡಾಲ ಸರಕಾರಿ ಹೈಸ್ಕೂಲಿಗೆ 10 ಲ.ರೂ. ಅನುದಾನ ಲಭಿಸಿದೆ ಎಂದರು.

ಬಿಜೆಪಿ ಕುಂಬಳೆ ಮಂಡಲ ಸಮಿತಿಯಿಂದ ಅಭಿನಂದನೆ

ಕುಂಬಳೆ: ದೇಶ ಸ್ವಾತಂತ್ರ್ಯಗೊಂಡು 7 ದಶಕಗಳು ಕಳೆದರೂ ಕೆಲವು ಊರಿನ ಗ್ರಾಮೀಣ ರಸ್ತೆಗಳ ಅಭಿವೃದ್ಧಿ ಪೂರ್ಣಗೊಳ್ಳದಿರುವುದು ಇದುವರೆಗೆ ಆಡಳಿತ ನಡೆಸಿದ ಎಡರಂಗ ಮತ್ತು ಐಕ್ಯರಂಗ ಒಕ್ಕೂಟಗಳ ಬಹುದೊಡ್ಡ ಸಾಧನೆಯಾಗಿದೆ ಎಂದು ಬಿಜೆಪಿ ಕುಂಬಳೆ ಮಂಡಲಾಧ್ಯಕ್ಷ ಸುನೀಲ್ ಅನಂತಪುರ ವ್ಯಂಗ್ಯವಾಡಿದ್ದಾರೆ.
ಎಣ್ಮಕಜೆ ಗ್ರಾಮ ಪಂಚಾಯಯತ್‌ನ ನಲ್ಕ ಸಮೀಪದ ಪಾಪಿತ್ತಡ್ಕ – ನೀರಮೂಲೆ – ಗುರಿನೆರೋಳು ರಸ್ತೆಯ ಅಭಿವೃದ್ಧಿಗಾಗಿ ತಮ್ಮ ಅಭಿವೃದ್ಧಿ ನಿಧಿಯಿಂದ 30 ಲಕ್ಷ ರೂಪಾಯಿಗಳನ್ನು ಮಂಜೂರುಗೊಳಿಸಿದ ರಾಜ್ಯಸಭಾ ಸದಸ್ಯೆ ಹಾಗು ಖ್ಯಾತ ಕ್ರೀಡಾಪಟು ಪಿ.ಟಿ.ಉಷಾ ಅವರನ್ನು ಅಭಿನಂದಿಸುವ ಸಭೆಯಲ್ಲಿ ಭಾಗವಹಿಸಿ ಅವರು ಮಾತನಾಡಿದರು.
ಅದೇ ರೀತಿ ರಾಜ್ಯಸಭಾ ಸದಸ್ಯೆಯವರೊಂದಿಗೆ ಮಾತುಕತೆ ನಡೆಸಿ ತುರ್ತಾಗಿ ಮೊತ್ತವನ್ನು ಮೀಸಲಿಸಲು ಶ್ರಮಿಸಿದ ಬಿಜೆಪಿ ಕೇರಳ ರಾಜ್ಯ ಘಟಕದ ಮಾಜಿ ಅಧ್ಯಕ್ಷ, ಮಂಜೇಶ್ವರ ವಿಧಾನಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಕೆ.ಸುರೇಂದ್ರನ್ ಅವರಿಗೂ ನಾಡಿನ ಜನರ ಪರವಾಗಿ ಧನ್ಯವಾದಗಳನ್ನು ತಿಳಿಸಿದರು. ಭಾರತೀಯ ಜನತಾ ಪಕ್ಷದ ವಿಕಸಿತ ಕೇರಳ ಎಂಬ ಘೋಷಣೆಯೊಂದಿಗೆ ಮಂಜೇಶ್ವರ ಹಾಗೂ ರಾಜ್ಯದಲ್ಲಿ ಅತ್ಯುಜ್ವಲವಾದ ವಿಜಯವನ್ನು ಗಳಿಸಲು ಕಾರ್ಯಕರ್ತರು ಕಟ್ಟಿಬದ್ಧರಾಗಿ ಶ್ರಮಿಸಬೇಕು ಎಂದು ಅವರು ಈ ಸಂದರ್ಭದಲ್ಲಿ ಕರೆ ನೀಡಿದರು.

ಕಾಜಿಕಟ್ಟೆಯಲ್ಲಿ ಹವ್ಯಗಂಧ ಸಭಾಭವನಕ್ಕೆ ಶಿಲಾನ್ಯಾಸ

ಮಂಜೇಶ್ವರ: ಹೊಸನಗರ ಶ್ರೀ ರಾಮಚಂದ್ರಾಪುರ ಮಠದ ಗೋಕರ್ಣ ಮಂಡಲಾಂತರ್ಗತ ಮಂಗಳೂರು ಮಂಡಲದ ಬಾಯಾರು ವಲಯದ ಪೈವಳಿಕೆ ಸಮೀಪದ ಕಾಜಿಕಟ್ಟೆಯಲ್ಲಿ ನೂತನವಾಗಿ ನಿರ್ಮಾಣಗೊಳ್ಳಲಿರುವ ಹವ್ಯಗಂಧ ಸಭಾಭವನದ ಶಿಲಾನ್ಯಾಸ ಕಾರ್ಯಕ್ರಮವು ವಿಧಿವತ್ತಾಗಿ ಜರಗಿತು. ಕಾರ್ಯಕ್ರಮದ ಅಂಗವಾಗಿ ವೇದಮೂರ್ತಿ ಚಂದ್ರಶೇಖರ ಭಟ್ ಕುಡಾಣ ಅವರ ನೇತೃತ್ವದಲ್ಲಿ ಗಣಪತಿ ಹವನ ನೆರವೇರಿತು. ಮಂಗಳೂರು ಮಂಡಲದ ವೈದಿಕ ಪ್ರಧಾನ ವೇದಮೂರ್ತಿ ಶ್ರೀರಾಮ ಭಟ್ ಮುಗುಳಿ ಅವರು ಸಭಾಭವನದ ಶಿಲಾನ್ಯಾಸ ವಿಧಿ ವಿಧಾನಗಳನ್ನು ಶಾಸ್ತ್ರೋಕ್ತವಾಗಿ ನಿರ್ವಹಿಸಿಕೊಟ್ಟರು.
ಡಾ.ಶ್ರೀಧರ ಭಟ್ ಮಾವೆ ಅಧ್ಯಕ್ಷತೆ ವಹಿಸಿದ್ದರು. ಹವ್ಯಗಂಧ ಸಮಿತಿ ಅಧ್ಯಕ್ಷ ಗಣೇಶ್ ಭಟ್ ಕುಂಡೇರಿ ಶುಭಹಾರೈಸಿದರು. ರಾಮಮೂರ್ತಿ ಭಟ್ ಕುಂಡೇರಿ ಪ್ರಾಸ್ತಾವಿಕವಾಗಿ ಮಾತನಾಡಿ, ಯೋಜನೆಯ ರೂಪುರೇಷೆಗಳನ್ನು ವಿವರಿಸಿದರು.
ಮಂಡಲದ ಶಿಷ್ಯ ಮಾಧ್ಯಮ ಸಂಯೋಜಕ ಭಾಸ್ಕರ ಭಟ್ ಹೊರಮನೆ ಮತ್ತು ಹವ್ಯಗಂಧ ಸಮಿತಿ ಗೌರವಾಧ್ಯಕ್ಷ ರಾಮಚಂದ್ರ ಭಟ್ ಉಳುವಾನ ಶುಭಕೋರಿದರು. ಪೈವಳಿಕೆ ಗ್ರಾಮ ಪಂಚಾಯತ್ ಸದಸ್ಯ ಸುಬ್ರಹ್ಮಣ್ಯ ಭಟ್ ಆಟಿಕುಕ್ಕೆ ಮೊದಲಾದವರು ಉಪಸ್ಥಿತರಿದ್ದರು. ಮಂಡಲ ಮತ್ತು ವಲಯದ ವಿವಿಧ ಪದಾಧಿಕಾರಿಗಳು, ಗುರಿಕ್ಕಾರರು ಹಾಗೂ ಅಸಂಖ್ಯಾತ ಗುರುಬಂಧುಗಳು ಪಾಲ್ಗೊಂಡಿದ್ದರು.

ಕೋಟಿ ಚೆನ್ನಯ ನಗರದಲ್ಲಿ ಹಿಂದು ಏಕತಾ ಸಂಗಮ | ಶ್ರೀ ವಿವಿಕ್ತಾನಂದ ಸರಸ್ವತೀ ಸ್ವಾಮೀಜಿ ಆಶೀರ್ವಚನ

ಪಾಶ್ಚಿಮಾತ್ಯ ಶಿಕ್ಷಣ ಪದ್ಧತಿಯಿಂದ ಸನಾತನ ಮೌಲ್ಯಗಳಿಗೆ ಧಕ್ಕೆ

ಕಾಸರಗೋಡು: ಮೆಕಾಲೆ ಶಿಕ್ಷಣ ಪದ್ಧತಿಯಿಂದಾಗಿ ನಮ್ಮ ದೇಶದ ಸಂಸ್ಕೃತಿ, ಸಂಸ್ಕಾರವು ಸಮಸ್ಯೆಗೊಳಗಾಗಿದೆ. ಇದರಿಂದಾಗಿ ಸನಾತನ ಸಂಸ್ಕೃತಿ, ಮೌಲ್ಯಗಳು ಅವಗಣಿಸಲ್ಪಟ್ಟಿವೆ. ಇವೆಲ್ಲದಕ್ಕೂ ಪಾಶ್ಚಾತ್ಯ ಶಿಕ್ಷಣ ವ್ಯವಸ್ಥೆಯೇ ಮುಖ್ಯ ಕಾರಣವೆಂದು ಚಿನ್ಮಯ ಮಿಷನ್‌ನ ಕೇರಳ ಘಟಕದ ಮುಖ್ಯಸ್ಥ ಶ್ರೀ ವಿವಿಕ್ತಾನಂದ ಸರಸ್ವತೀ ಸ್ವಾಮೀಜಿ ಹೇಳಿದ್ದಾರೆ.
ಕಾಸರಗೋಡು ನಗರ ಹಿಂದು ಸಮಾಜೋತ್ಸವ ಸಮಿತಿ ಆಶ್ರಯದಲ್ಲಿ ಕಾಸರಗೋಡಿನ ಕೋಟಿ ಚೆನ್ನಯ ನಗರ (ತಾಳಿಪಡ್ಪು ಮೈದಾನ)ದಲ್ಲಿ ಭಾನುವಾರ ಹಮ್ಮಿಕೊಳ್ಳಲಾಗಿದ್ದ ಹಿಂದು ಏಕತಾ ಸಂಗಮ ಕಾರ್ಯಕ್ರಮವನ್ನು ದೀಪಬೆಳಗಿಸಿ ಉದ್ಘಾಟಿಸಿದ ಬಳಿಕ ಅವರು ಆಶೀರ್ವಚನ ನೀಡಿದರು.
ಪಾಶ್ಚಾತ್ಯ ಶಿಕ್ಷಣದಿಂದಾಗಿ ಭಾರತೀಯರು ಇಂದು ಹಲವು ರೀತಿಯ ಸಂಕಷ್ಟಗಳನ್ನು ಅನುಭವಿಸುವಂತಾಗಿದೆ. ನಮ್ಮಲಿ ಜಾತಿ, ರಾಜಕೀಯ ಕಂಡು ಬರುತ್ತಿದ್ದು ಈ ನಿಟ್ಟಿನಲ್ಲಿ ಭಿನ್ನತೆಗೆ ದಾರಿಮಾಡಿ ಕೊಟ್ಟಂತಾಗಿದೆ. ಸನಾತನ ಹಿಂದು ಧರ್ಮ ಮತವಲ್ಲ, ಅದೊಂದು ಜೀವನ ಪದ್ಧತಿ. ನಮಗೆ ನಮ್ಮದೇ ಆದ ಆಚಾರ,



ಅನುಷ್ಠಾನಗಳಿವೆ ಎಂದು ಸ್ವಾಮೀಜಿ ಹೇಳಿದರು.

ಹಿಂದು ಸಂಗಮ ಹೊಸಯುಗಕ್ಕೆ ಮುನ್ನುಡಿ

ದಿಕ್ಸೂಚಿ ಭಾಷಣ ಮಾಡಿದ ಡಾ.ಎಂ.ಜಿ.ವಿನೋದ್ ಅವರು, ಹಿಂದು ಏಕತಾ ಸಂಗಮವು ಹೊಸಯು ಗಕ್ಕೆ ನಾಂದಿ ಹಾಡುವ ಒಂದು ಪ್ರಮುಖ ಕಾರ್ಯಕ್ರಮವಾಗಿದೆ ಎಂದು ತಿಳಿಸಿದರು. ಹಿಂದುಗಳು ನಿರಂತರ ಅಧ್ಯನಶೀಲರಾಗಬೇಕು. ಎಲ್ಲಾ ರಂಗಗಳಲ್ಲೂ ಸಾಧನೆಗೈದು ಮುಂದೆ ಸಾಗಬೇಕು. ಸಾಮರಸ್ಯದ ಬದುಕು ಸಾಗಿಸುವುದರ ಜೊತೆಗೆ ಸೋಲಿಗೆ ಕಾರಣರಾಗಬಾರದು. ಕ್ರಿಶ್ಚಿಯನ್ನರು, ಮುಸ್ಲಿಮರು ಅವರ ಮತಗಳ ಕುರಿತು ಹಾಗೂ ಸಿದ್ಧಾಂತಗಳ ಬಗ್ಗೆ ಎಳೆಯ ಮಕ್ಕಳಿಗೆ ಕಲಿಸುತ್ತಾರೆ. ಆದರೆ ಹಿಂದುಗಳಲ್ಲಿ ಇಂತಹ ವ್ಯವಸ್ಥೆಯಿಲ್ಲ. ಇಂದು ಎಲ್ಲೆಡೆ ಜಾತಿ ವಿಷ ಬೀಜ ಬಿತ್ತಿ ಹಿಂದು ಸಮಾಜವನ್ನು ಒಡೆಯುವ ಷಡ್ಯಂತ್ರ ನಡೆಸಲಾಗುತ್ತಿದೆ. ಜಾತಿ ಚಿಂತನೆಯನ್ನು ನಮ್ಮಲ್ಲಿ ಮೊದಲು ಬಿತ್ತಿದವರು ಪೋರ್ಚುಗೀಸರು. ಜಾತಿಗಳ ನಡುವಿನ ವೈಷಮ್ಯ ಇಂದಿಗೂ ಮುಂದುವರಿಯುತ್ತಿದೆ ಎಂದರು.
ಕೇರಳದ ಎಡರಂಗ ಸರಕಾರವು ಮಹಿಳೆಯರಿಗೆ ಶಬರಿಮಲೆ ಪ್ರವೇಶ ಒದಗಿಸಿ ಆಚಾರ, ಅನುಷ್ಠಾನಗಳಿಗೆ ಧಕ್ಕೆ ತಂದಿದೆ. ಯುವ ಪೀಳಿಗೆಯು ವಿನಾಶದತ್ತ ಸಾಗುತ್ತಿದ್ದು, ಮಕ್ಕಳು ಮಾದಕ ದ್ರವ್ಯಗಳ ದಾಸರಾಗುತ್ತಿದ್ದಾರೆ. ನಮ್ಮ ಮಕ್ಕಳಲ್ಲಿ ಆಧ್ಯಾತ್ಮಿಕ ಚಿಂತನೆಯನ್ನು

> **ಹಿಂದುಗಳಲ್ಲಿ ಏಕತೆ ಇರಲಿ**
> ಭಾರತದ ಮೂಲ ಬೇರು ಸನಾತನ ಸಂಸ್ಕೃತಿ, ಸಂಸ್ಕಾರವಾಗಿದೆ. ಇತರ ಮತ ಧರ್ಮಗಳಿಗೆ ಹಿಂದು ಧರ್ಮದಷ್ಟು ವ್ಯಾಪಕತೆ ಇರುವುದಿಲ್ಲ. ಎಲ್ಲರೂ ವೇದ, ಉಪನಿಷತ್ತುಗಳ ಕಲಿಯ ಬೇಕು. ಹಿಂದುಗಳಲ್ಲಿ ಏಕತೆ ಇದ್ದರೆ ಎಲ್ಲಾ ಸಮಸ್ಯೆ ಪರಿಹಾರವಾಗಲಿವೆ
> ● ಶ್ರೀ ವಿವಿಕ್ತಾನಂದ ಸ್ವಾಮೀಜಿ

ಮೂಡಿಸಬೇಕು. ಸಂಧ್ಯಾಜಪ, ಭಜನೆ ಇತ್ಯಾದಿಗಳು ಕಡಿಮೆಯಾಗುತ್ತಿದ್ದು ಹಿಂದು ಧರ್ಮದ ಅವನತಿಗೆ ಇದೂ ಕಾರಣವಾಗಿದೆ. ಪ್ರತೀ ಗ್ರಾಮಗಳಲ್ಲಿ ಆಧ್ಯಾತ್ಮಿಕ ತರಬೇತಿ ಕೇಂದ್ರಗಳನ್ನು ಪ್ರಾರಂಭಿಸಬೇಕು ಎಂದರು.
ಮಕ್ಕಳು ಎಳವೆಯಲ್ಲಿಯೇ ಸನಾತನ ಧರ್ಮ ಮೌಲ್ಯಗಳ ಕಲಿಯಬೇಕು. ಈ ನಿಟ್ಟಿನಲ್ಲಿ ಅಗತ್ಯದ ವ್ಯವಸ್ಥೆ ಕಲ್ಪಿಸಬೇಕು. ಹಿಂದುಗಳು ಪ್ರತೀ ವಾರ ದೇವಾಲಯಗಳಿಗೆ ಭೇಟಿ ನೀಡುವ ಸಂಕಲ್ಪ ತೊಡಬೇಕು. 1925ರಲ್ಲಿ ಹೆಗಡೆವಾರ್ ಆರಂಭಿಸಿದ ಆರ್‌ಎಸ್‌ಎಸ್ ಇದೀಗ 100 ವರ್ಷ ಪೂರೈಸಿದೆ. ಆರ್‌ಎಸ್‌ಎಸ್ ಸನಾತನ ಧರ್ಮದ ಕುರಿತು ಜಾಗೃತಿ ಕಾರ್ಯಕ್ರಮ ಅನುಷ್ಠಾನಕ್ಕೆ ತರುತ್ತಿದೆ ಎಂದರು.
ಹಿಂದು ಸಮಾಜೋತ್ಸವ ಸಮಿತಿಯ ಅಧ್ಯಕ್ಷ ಸಂದೀಪ್ ಭಟ್ ಅಧ್ಯಕ್ಷತೆ ವಹಿಸಿದ್ದರು. ಮಾಧವನ್ ಕಾರ್ನವರ್, ಚಿದಾನಂದ ಪೂಜಾರಿ, ಅಶೋಕ, ಗಿರಿಧರ ಕಾಮತ್, ಪುಷ್ಪರಾಜ್, ಸಿ.ವಿ.ಪೊದುವಾಳ್, ರಂಗನಾಥ ಮಲ್ಯ, ಪ್ರದೀಪ್ ಬೇಕಲ್, ಕಲ್ಮಾಡಿ ಸದಾಶಿವ ಆಚಾರ್ಯ, ಎ.ಟಿ.ನಾಯ್ಕ್, ಡಾ.ಕೆ.ಎನ್.ವೆಂಕಟ್ರಮಣ ಹೊಳ್ಳ, ವಿಶ್ವನಾಥ ಮಣಿಯಾಣಿ, ದಾಮೋದರನ್ ನಾಯರ್, ರಾಮ ಪಡುಮಲೆ, ನಾಗೇಶ್ ರೈ ಉಪಸ್ಥಿತರಿದ್ದರು.

ವಿಷ್ಣು ಸಹಸ್ರನಾಮ ಸ್ತೋತ್ರ ಪಾರಾಯಣ

ಅನ್ವಿತಾ ಎಸ್.ರಾವ್ ಮತ್ತು ಆರುಷಿ ವಂದೇ ಮಾತರಂ ಹಾಡಿದರು. ಕಾರ್ಯಕ್ರಮಕ್ಕೆ ಮೊದಲು ವಿಶಿಷ್ಟ ವ್ಯಕ್ತಿಗಳು ಭಾರತಾಂಬೆಯ ಭಾವಚಿತ್ರಕ್ಕೆ ಪುಷ್ಪಾರ್ಚನೆ ನಡೆಸಿದರು. ಕಮಲಾಕ್ಷ ಬೀರಂತಬೈಲು ಸ್ವಾಗತಿಸಿ, ಶ್ರೀಲತಾ ಟೀಚರ್ ವಂದಿಸಿದರು. ಕಾರ್ಯಕ್ರಮಕ್ಕೆ ಮೊದಲು ವಿಷ್ಣುಸಹಸ್ರನಾಮ ಸ್ತೋತ್ರ ಸಾಮೂಹಿಕ ಪಾರಾಯಣ ನೆರವೇರಿತು.

ತ್ಯಾಜ್ಯ ಮುಕ್ತ ನೀಲೇಶ್ವರ: ಸಿಡಿಎಸ್, ಎಡಿಎಸ್ ಕಾರ್ಮಿಕರಿಗೆ ಕಾರ್ಯಾಗಾರ



ಕಾಸರಗೋಡು: ಮಾಲಿನ್ಯಮುಕ್ತಂ ನೀಲೇಶ್ವರ ಅಭಿಯಾನದ ಭಾಗವಾಗಿ ಒಂದು ದಿನದ ಕಾರ್ಯಾಗಾರ ನೀಲೇಶ್ವರ ನಗರಸಭಾ ಸಮ್ಮೇಳನ ಸಭಾಂಗಣದಲ್ಲಿ ಶನಿವಾರ ಜರಗಿತು. ಕೇರಳ ಘನತ್ಯಾಜ್ಯ ನಿರ್ವಹಣಾ ಯೋಜನೆಯ ಆಶ್ರಯದಲ್ಲಿ ನಗರಸಭೆಯ ಮಿತಿಯೊಳಗಿನ ಆಯ್ದ ಸಿಡಿಎಸ್ ಮತ್ತು ಎಡಿಎಸ್ ಕಾರ್ಮಿಕರಿಗೆ ಕಾರ್ಯಾಗಾರ ಏರ್ಪಡಿಸಲಾಯಿತು.
ಕಾರ್ಯಾಗಾರವನ್ನು ನಗರಸಭಾ ಅಧ್ಯಕ್ಷ ಮುಹಮ್ಮದ್ ರಫಿ ಉದ್ಘಾಟಿಸಿದರು. ನಗರಸಭಾ ಉಪಾಧ್ಯಕ್ಷೆ ಸಂಧ್ಯಾ ಅಧ್ಯಕ್ಷತೆ ವಹಿಸಿದ್ದರು. ತ್ಯಾಜ್ಯ ನಿರ್ವಹಣೆ ವಲಯದಲ್ಲಿ ಸಾರ್ವಜನಿಕರ ಭಾಗವಹಿಸುವಿಕೆ ಖಚಿತಪಡಿಸಿಕೊಳ್ಳಲು ಪ್ರತಿನಿಧಿಗಳು ಸ್ವಚ್ಛತಾ ಪ್ರತಿಜ್ಞೆ ಸ್ವೀಕರಿಸಿದರು.
ನವ ಕೇರಳ ಮಿಷನ್ ಸಂಪನ್ಮೂಲ ವ್ಯಕ್ತಿ ದೇವರಾಜನ್, ಕೆಎಸ್‌ಡಬ್ಲ್ಯೂಎಂಪಿ ಉಪ ಜಿಲ್ಲಾ ಸಂಯೋಜಕ ಮಿಥುನ್ ಕೃಷ್ಣನ್, ಸಾಮಾಜಿಕ ತಜ್ಞ ಡಾ.ಸೂರಜ್ ಮತ್ತು ಶ್ರೀಜಿತ್ ತ್ಯಾಜ್ಯ ನಿರ್ವಹಣೆ ಮಹತ್ವ ಮತ್ತು ಯೋಜನೆಗಳ ಪ್ರಾಯೋಗಿಕ ಅಂಶಗಳ ಕುರಿತು ತರಗತಿಗಳನ್ನು ನಡೆಸಿದರು.
ನಗರಸಭಾ ಸ್ಥಾಯಿ ಸಮಿತಿ ಅಧ್ಯಕ್ಷ ಶಮೀನಾ ಮುಹಮ್ಮದ್, ಇ.ಕೆ. ಚಂದ್ರನ್, ಇ.ಚಂದ್ರಾಮತಿ, ಕೆ.ಸತೀಶನ್ ಮತ್ತು ಸಿಡಿಎಸ್ ಅಧ್ಯಕ್ಷೆ ಬಿಂದುರಾಜ್ ಕಾರ್ಯಾಗಾರದಲ್ಲಿ ಮಾತನಾಡಿದರು. ನಗರಸಭಾ ಸಾರ್ವಜನಿಕ ಆರೋಗ್ಯ ನಿರೀಕ್ಷಕ ಶಿಜು ವಂದಿಸಿದರು.

> **ಸ್ವಚ್ಛತಾ ಪ್ರತಿಜ್ಞೆ ಸ್ವೀಕಾರ**
> ತ್ಯಾಜ್ಯ ನಿರ್ವಹಣೆ ವಲಯದಲ್ಲಿ ಸಾರ್ವಜನಿಕರ ಭಾಗವಹಿಸುವಿಕೆ ಖಚಿತಪಡಿಸಿಕೊಳ್ಳಲು ಪ್ರತಿನಿಧಿಗಳು ಸ್ವಚ್ಛತಾ ಪ್ರತಿಜ್ಞೆಯನ್ನು ಸ್ವೀಕರಿಸಿದರು.

ಇಂದು ಮುನಿಪುರ ಶ್ರೀ ಗೋಪಾಲಕೃಷ್ಣ ದೇವಸ್ಥಾನದಲ್ಲಿ ಬ್ರಹ್ಮಕಲಶದ ಸಂಭ್ರಮ



ಬದಿಯಡ್ಕ: ಐತಿಹಾಸಿಕ ಹಿನ್ನೆಲೆಯ ಕುಂಬ್ಡಾಜೆ ಗ್ರಾಮದ ಮುನಿಯೂರು ಮುನಿಪುರ ಶ್ರೀ ಗೋಪಾಲಕೃಷ್ಣ ದೇವಸ್ಥಾನದಲ್ಲಿ ಮಾ.9ರಂದು ಬ್ರಹ್ಮಕಲಶೋತ್ಸವವು ಅತ್ಯಂತ ಶ್ರದ್ಧಾಭಕ್ತಿ ಹಾಗೂ ಧಾರ್ಮಿಕ ಸಂಭ್ರಮ ಸಡಗರಗಳೊಂದಿಗೆ ನಡೆಯಲಿದೆ. ಸಾವಿರಾರು ಮಂದಿ ಭಕ್ತಾದಿಗಳ ಆಗಮನದ ನಿರೀಕ್ಷೆಯ ಹಿನ್ನೆಲೆಯಲ್ಲಿ ಸಕಲ ಸಿದ್ಧತೆಗಳನ್ನು ಕೈಗೊಳ್ಳಲಾಗಿದೆ. ಈ ಪುಣ್ಯ ಕಾರ್ಯಕ್ರಮದ ಮೂಲಕ ಗ್ರಾಮದಲ್ಲಿ ಆಧ್ಯಾತ್ಮಿಕ ಕಳೆ ಹೆಚ್ಚಾಗಿದೆ.

ಧಾರ್ಮಿಕ ವಿಧಿ ವಿಧಾನಗಳು

ಬ್ರಹ್ಮಕಲಶೋತ್ಸವದ ಅಂಗವಾಗಿ ಮಾ.9ರಂದು ಬೆಳಿಗ್ಗೆಯಿಂದಲೇ ದೇವಸ್ಥಾನದಲ್ಲಿ ಬ್ರಹ್ಮಶ್ರೀ ಕುಂಟಾರು ರವೀಶ ತಂತ್ರಿಗಳ ನೇತೃತ್ವದಲ್ಲಿ ವಿವಿಧ ಹೋಮ ಹವನಗಳು ನೆರವೇರಲಿವೆ. ಗಣಪತಿ ಹೋಮ, ಕವಾಟೋದ್ಘಾಟನೆ, ಶಾಂತಿ ಪ್ರಾಯಶ್ಚಿತ್ತ ಹಾಗೂ ತತ್ವ ಹೋಮಗಳ ಕಲಶಾಭಿಷೇಕ, 1008 ಬ್ರಹ್ಮಕಲಶಾಭಿಷೇಕ, ಅವಭೃತ ಪ್ರೋಕ್ಷಣೆ, ಮಹಾಪೂಜೆ, ಮಂಗಲ ಮಂತ್ರಾಕ್ಷತೆ, ರಾತ್ರಿ 7ರಿಂದ ಶ್ರೀ ದೇವರ ಉತ್ಸವ ಬಲಿ, ಬಟ್ಟುಕ್ಲಾಣಿಕೆ ನಡೆಯಲಿದೆ. ಮಧ್ಯಾಹ್ನ 1 ಗಂಟೆಯಿಂದ ಭಕ್ತಭಾವ ಗಾನ ಯಾನ ರಾಘವೇಂದ್ರ ಕಿಗ್ಗ ಶೃಂಗೇರಿ ಅವರಿಂದ ಹಾಗೂ ಅಪರಾಹ್ನ 2.30ರಿಂದ ಶ್ರೀ ಗೋಪಾಲಕೃಷ್ಣ ಕಲಾಸಂಘ ದೇಲಂಪಾಡಿ ಬನಾರಿ ಅವರಿಂದ ಯಕ್ಷಗಾನ ತಾಳಮದ್ದಳೆ ಜರಗಲಿದೆ.
ಶ್ರೀ ಕ್ಷೇತ್ರದಲ್ಲಿ ಹಮ್ಮಿಕೊಳ್ಳಲಾದ ಬ್ರಹ್ಮಕಲಶಕ್ಕೆ ಆಗಮಿಸಿದ ಭಕ್ತಾದಿಗಳಿಗೆ ವಿಶಾಲವಾದ ಚಪ್ಪರದಲ್ಲಿ ಅನ್ನಸಂತರ್ಪಣೆ ಏರ್ಪಡಿಸಲಾಗಿದೆ. ನೂರಾರು ಮಂದಿ ಸ್ವಯಂಸೇವಕರು ಶಿಸ್ತುಬದ್ಧ ಸೇವೆ ಸಲ್ಲಿಸುವ ಮೂಲಕ ಕಾರ್ಯಕ್ರಮದ ಯಶಸ್ಸಿಗೆ ಸಹಕರಿಸುತ್ತಿದ್ದಾರೆ. ವಿವಿಧ ಭಜನಾ ಮಂಡಳಿಗಳಿಂದ ಭಜನೆ, ಸಾಂಸ್ಕೃತಿಕ ಕಲಾತಂಡಗಳಿಂದ ವಿವಿಧ ಪ್ರದರ್ಶನಗಳು ನಡೆಯುತ್ತಿವೆ.

ಅಭಿವೃದ್ಧಿ ಸಮಿತಿ ಸಭೆಯಲ್ಲಿ ಮಂಜೇಶ್ವರ ತಾಲೂಕಿಗೆ ಪ್ರಧಾನ ಕಚೇರಿ ಕಟ್ಟಡಕ್ಕೆ ಪ್ರಸ್ತಾವನೆ



ಮಂಜೇಶ್ವರ: ಪ್ರಸ್ತುತ ಉಪ್ಪಳದಲ್ಲಿ ಬಾಡಿಗೆ ಕಟ್ಟಡದಲ್ಲಿ ಕಾರ್ಯ ನಿರ್ವಹಿಸುತ್ತಿರುವ ಮಂಜೇಶ್ವರ ತಾಲೂಕಿಗೆ ತನ್ನದೇ ಆದ ಶಾಶ್ವತ ಪ್ರಧಾನ ಕಚೇರಿ ಕಟ್ಟಡವನ್ನು ಮಂಜೂರು ಮಾಡಬೇಕೆಂದು ತಾಲೂಕು ಅಭಿವೃದ್ಧಿ ಸಮಿತಿ ಸಭೆಯಲ್ಲಿ ಪ್ರಸ್ತಾಪಿಸಲಾಯಿತು.
ಮಂಜೇಶ್ವರ ತಾಲೂಕು ಸಭಾಂಗಣದಲ್ಲಿ ನಡೆದ ಸಭೆಯಲ್ಲಿ ಅಭಿವೃದ್ಧಿ ಸಮಿತಿ ಈ ಬೇಡಿಕೆಯನ್ನು ಮುಂದಿಟ್ಟಿತು. 2014ರಲ್ಲಿ ರಚನೆಯಾದ ಮಂಜೇಶ್ವರ ತಾಲೂಕು ಕಚೇರಿ ತನ್ನದೇ ಆದ ಕಟ್ಟಡವಿಲ್ಲದೆ ತಾತ್ಕಾಲಿಕ ಸೌಲಭ್ಯಗಳಲ್ಲಿ ಕಾರ್ಯನಿರ್ವಹಿಸುತ್ತಿದೆ. ಇದು ಸಾರ್ವಜನಿಕ ಸೇವೆಗಳಿಗೆ ತೊಂದರೆಗಳನ್ನುಂಟುಮಾಡುತ್ತಿದೆ ಎಂದು ಸಭೆ ಗಮನಿಸಿತು. ಮಂಜೇಶ್ವರ ತಾಲೂಕಿನ ಜನರ ಆಡಳಿತ – ಅಭಿವೃದ್ಧಿ ಅಗತ್ಯಗಳ ಪೂರೈಸಲು ಶಾಶ್ವತ ಪ್ರಧಾನ ಕಚೇರಿ ಕಟ್ಟಡ ಅತ್ಯಗತ್ಯ ಎಂದು ಅಭಿವೃದ್ಧಿ ಸಮಿತಿ ಬೊಟ್ಟುಮಾಡಿತು.
ಜಿ.ಪಂ. ಸದಸ್ಯ ಹರ್ಷಾದ್ ವರ್ಕಾಡಿ ಅಧ್ಯಕ್ಷತೆ ವಹಿಸಿದ್ದರು. ಸಂಚಾಲಕ ಮಂಜೇಶ್ವರ ತಹಶೀಲ್ದಾರ್ ಪಿ. ಸಜಿತ್ ಸ್ವಾಗತಿಸಿದರು. ಸಾರ್ವಜನಿಕ ಪ್ರತಿನಿಧಿಗಳು, ವಿವಿಧ ಇಲಾಖೆಗಳ ಅಧಿಕಾರಿಗಳು ಮತ್ತು ರಾಜಕೀಯ ಪಕ್ಷಗಳ ಪ್ರತಿನಿಧಿಗಳು ಭಾಗವಹಿಸಿದ್ದರು.

ಮಾವಿನಕಟ್ಟೆಯಲ್ಲಿ ನೇತ್ರ ತಪಾಸಣಾ ಶಿಬಿರ



ಬದಿಯಡ್ಕ: ರಾಷ್ಟ್ರೀಯ ಅಂಧತ್ವ ದೃಷ್ಟಿಹೀನತೆ ನಿಯಂತ್ರಣ ಕಾರ್ಯಕ್ರಮದಂಗವಾಗಿ ಕಾಸರಗೋಡು ಜಿಲ್ಲಾ ಸರಕಾರಿ ಆಸ್ಪತ್ರೆಯ ಸಂಚರಿಸುವ ನೇತ್ರ ವಿಭಾಗ ಹಾಗೂ ಚೆಂಗಳ ಪಂಚಾಯಿತಿ ಕುಟುಂಬ ಆರೋಗ್ಯ ಕೇಂದ್ರ ಮತ್ತು ಮಾವಿನಕಟ್ಟೆ ಪರಿವಾರಸಮೇತ ಶ್ರೀ ಅಯ್ಯಪ್ಪ ಭಜನಾ ಮಂದಿರದ ತ್ರಿವೇಣಿ ಸಭಾಂಗಣದಲ್ಲಿ ಶನಿವಾರ ಉಚಿತ ನೇತ್ರ ತಪಾಸಣಾ ಶಿಬಿರ ನಡೆಯಿತು. ಶಿಬಿರದಲ್ಲಿ ಸುಮಾರು 60ಕ್ಕಿಂತಲೂ ಅಧಿಕ ಮಂದಿ ಭಾಗವಹಿಸಿದರು.
ತ್ರಿವೇಣಿ ಸಭಾಭವನದಲ್ಲಿ ನಡೆದ ಕಾರ್ಯಕ್ರಮವನ್ನು ಶ್ರೀಮಂದಿರದ ಅಧ್ಯಕ್ಷ ವಿಶ್ವನಾಥ ಬಳ್ಳಪದವು ಉದ್ಘಾಟಿಸಿದರು. ಶಿಬಿರದ ಸಂಯೋಜಕ ರಾಜೇಶ್ ನೆಕ್ರಾಜೆ ಉಪಸ್ಥಿತರಿದ್ದರು. ಶಿಬಿರದಲ್ಲಿ ಡಾ.ಅಪರ್ಣ ಎಸ್., ಜಿಲ್ಲಾ ಕೋ ಓರ್ಡಿನೇಟರ್ ಒಪ್ಟೋಮೆಟ್ರಿಸ್ಟ್ ಕವಿತಾ ಪಿ., ಮೊಬೈಲ್ ಯುನಿಟ್‌ನ ಒಪ್ಟೋಮೆಟ್ರಿಸ್ಟ್ ನಮಿತಾ, ಚೆರ್ಕಳ ಎಫ್‌ಎಚ್‌ಸಿಯ ಒಪ್ಟೋಮೆಟ್ರಿಸ್ಟ್ ಫಾತಿಮಾ ಹಬೀಬಾ ತಸ್ಲೀಂ ಪಿ.ಎಸ್., ಬದಿಯಡ್ಕ ಸಿಎಚ್‌ಸಿಯ ಒಪ್ಟೋಮೆಟ್ರಿಸ್ಟ್ ಆದರ್ಶ್ ಎಂ., ನರ್ಸಿಂಗ್ ಅಸಿಸ್ಟೆಂಟ್ ಬಾಸು ಸಿ., ಚಾಲಕ ಜೋಮನ್ ಮತ್ತಿತರರು ಈ ಸಂದರ್ಭದಲ್ಲಿ ಪಾಲ್ಗೊಂಡಿದ್ದರು.



ಭಾರತೀಯ ಸೇನೆಗೆ ಆಯ್ಕೆಯಾದ ಮಧುರಾಜ್ ದೇವರಮೆಟ್ಟು ಅವರನ್ನು ಬದಿಯಡ್ಕ ಸಮೀಪದ ಕುಂಟಿಕಾನ ಶ್ರೀ ಭಾರತಾಂಬಾ ಸೇವಾ ಟ್ರಸ್ಟ್‌ನಿಂದ ಶಾಲು ಹೊದಿಸಿ ಸಿಹಿತಿಂಡಿ ನೀಡಿ ಗೌರವಿಸಲಾಯಿತು.

ಕೂಡ್ಲು ಕುತ್ಯಾಳ ಶ್ರೀ ಗೋಪಾಲಕೃಷ್ಣ ಕ್ಷೇತ್ರ: ಮನರಂಜಿಸಿದ ಸಾಂಸ್ಕೃತಿಕ ಕಲಾ ವೈಭವ



ಕಾಸರಗೋಡು: ಇತಿಹಾಸ ಪ್ರಸಿದ್ಧ ಕೂಡ್ಲು ಕುತ್ಯಾಳ ಶ್ರೀ ಗೋಪಾಲಕೃಷ್ಣ ದೇವಸ್ಥಾನದಲ್ಲಿ ವಾರ್ಷಿಕ ಜಾತ್ರಾ ಮಹೋತ್ಸವವು ವಿವಿಧ ವೈದಿಕ, ಧಾರ್ಮಿಕ ವಿಧಿ ವಿಧಾನಗಳೊಂದಿಗೆ ಅತ್ಯಂತ ವಿಜೃಂಭಣೆಯಿಂದ ಜರಗಿತು. ಈ ಮಹೋತ್ಸವದ ಪ್ರಯುಕ್ತ ನೆರವೇರಿದ ಸಾಂಸ್ಕೃತಿಕ ಕಾರ್ಯಕ್ರಮದ ಅಂಗವಾಗಿ ಗಡಿನಾಡ ಸಾಂಸ್ಕೃತಿಕ ಕಲಾ ವೇದಿಕೆ ಕಾಸರಗೋಡು ಸಂಸ್ಥೆಯ ವತಿಯಿಂದ ಸಾಂಸ್ಕೃತಿಕ ಕಲಾ ವೈಭವವು ಯಶಸ್ವಿಯಾಗಿ ನಡೆದು ಜನ ಮೆಚ್ಚುಗೆ ಪಡೆಯಿತು.
ಗುರುರಾಜ್ ಕಾಸರಗೋಡು ಅವರ ಸಂಯೋಜನೆ ಹಾಗೂ ನಿರೂಪಣೆಯೊಂದಿಗೆ ನಡೆದ ಕಾರ್ಯಕ್ರಮದಲ್ಲಿ ವರ್ಷಾ ಶೆಟ್ಟಿ, ಧೀಕ್ಷಾ ಕುಲಾಲ್, ಭಾನ್ವಿ ಕುಲಾಲ್, ಆರಾಧ್ಯ ಪೂಜಾರಿ, ತನುಜಾ ಕಡಿಯವರ್, ಅನ್ವಿತ್ ಪೂಜಾರಿ, ತ್ರಿಷಾ ಅಡಕಳಕಟ್ಟೆ, ಆನ್ಮೇತಾ ಶೆಟ್ಟಿ ಕೋಡಿಜಾಲ್, ರಕ್ಷಾ ಕುಲಾಲ್, ಅರ್ಚನಾ ಹೇರೂರು, ಆಶ್ವಿತಾ, ತೇಜೂಶಾ, ವೃದ್ಧಿ ದ್ರಿಷಾ, ಲಕ್ಷ್ಯ, ಸುಶ್ಮಿತಾ, ಅಂಜನಾ, ಅನನ್ಯ, ಜೀನ, ಶ್ರೇಯಾ, ಫ್ಲೇವಿಯಾ, ಆರ್ಯಲಕ್ಷ್ಮಿ, ತನುಶ್ರೀ, ವೈಷ್ಣವಿ, ರಿಷಿಕಾ, ಅಕ್ಷಿತಾ, ಲಾಸ್ಯ, ಹರಿನಂದನ ಮುಂತಾದ ಸಂಸ್ಥೆಯ ಕಲಾವಿದರು ಕಲಾ ಪ್ರಸ್ತುತಿಗೈದರು.
ಕಾರ್ಯಕ್ರಮದ ಕೊನೆಯಲ್ಲಿ ಭಾಗವಹಿಸಿದ ಕಲಾವಿದರಿಗೆ ಸಂಸ್ಥೆಯ ವತಿಯಿಂದ ಸ್ಮರಣಿಕೆ ನೀಡಿ ಸನ್ಮಾನಿಸಲಾಯಿತು.

> **ಗೌರವ**
> ದೇವಳ ಆಡಳಿತ ಮೊಕ್ತೇಸರ ಕೂಡ್ಲು ಗೋಪಾಲಕೃಷ್ಣ ಶ್ಯಾನುಭೋಗ್, ಕೆ.ಜಗದೀಶ್ ಕೂಡ್ಲು ಮುಂತಾದ ಗಣ್ಯರ ಸಮ್ಮುಖದಲ್ಲಿ ಸ್ಮಿತಾ, ನಿಶಿತಾ ಅವರನ್ನು ಸಂಸ್ಥೆಯಿಂದ ಗೌರವಿಸಲಾಯಿತು.

ಮಂಗಳೂರು-ಧರ್ಮತ್ತಡ್ಕ ರೂಟ್‌ನಲ್ಲಿ ಶೀಘ್ರ ಕರ್ನಾಟಕ ಕೆಎಸ್ಸಾರ್ಟಿಸಿ ಬಸ್ ಸೇವೆ



ಕಾಸರಗೋಡು: ಇನ್ನು ಮುಂದೆ ಕುಬಣೂರು, ಪಚ್ಚಂಬಳ, ಬಿ.ಸಿ.ರೋಡ್, ಕಯ್ಯಾರು, ಸುಬ್ಬಯ್ಯಕಟ್ಟೆ, ಚೇವಾರು, ಪೆರ್ಮುದೆ, ಧರ್ಮತ್ತಡ್ಕ ಮೊದಲಾದ ಪ್ರದೇಶಗಳ ನಿವಾಸಿಗಳಿಗೆ ಮಂಗಳೂರಿಗೆ ತೆರಳುವುದು ಅತ್ಯಂತ ಸುಲಭವಾಗಲಿದೆ. ಆದರಂತೆ ಮಂಗಳೂರಿನಿಂದ ಬಂದ್ಯೋಡು ದಾರಿಯಾಗಿ ಧರ್ಮತ್ತಡ್ಕ ರೂಟ್‌ನಲ್ಲಿ ಕರ್ನಾಟಕ ಕೆಎಸ್‌ಆರ್‌ಟಿಸಿ ಬಸ್ ಸಂಚಾರ ಶೀಘ್ರದಲ್ಲೇ ಪುನರಾರಂಭಗೊಳ್ಳಲಿದೆ ಎಂದು ಮಂಗಳೂರು ಕೆಎಸ್‌ಆರ್‌ಟಿಸಿ ವಿಭಾಗೀಯ ನಿಯಂತ್ರಣಾಧಿಕಾರಿಗಳು ಮತ್ತು ಮಂಜೇಶ್ವರ ಶಾಸಕ ಎ.ಕೆ.ಎಂ.ಅಶ್ರಫ್ ತಿಳಿಸಿದ್ದಾರೆ.
ಕಳೆದ ಕೆಲವು ವರ್ಷಗಳ ಹಿಂದೆ ಮಂಗಳೂರು – ಧರ್ಮತ್ತಡ್ಕ ರೂಟ್‌ನಲ್ಲಿ ಕರ್ನಾಟಕ ಕೆಎಸ್‌ಆರ್‌ಟಿಸಿ ಬಸ್ ಸೇವೆಯಿತ್ತು. ಬಳಿಕ ಕಾರಣಾಂತರಗಳಿಂದ ನಿಲ್ಲಿಸಲಾಗಿತ್ತು. ಬಂದ್ಯೋಡು ಒಳಭಾಗದ ಅನೇಕ ಮಂದಿ ಶಾಲಾ ಕಾಲೇಜು ವಿದ್ಯಾರ್ಥಿಗಳು, ರೋಗಿಗಳು, ಉದ್ಯೋಗಿಗಳು, ವ್ಯಾಪಾರಿಗಳು , ಇತರರು ಶೈಕ್ಷಣಿಕ ಸಂಸ್ಥೆಗಳು, ಆಸ್ಪತ್ರೆಗಳು, ವಾಣಿಜ್ಯ ಅಗತ್ಯತೆಗಳು, ಉದ್ಯೋಗ ವಲಯಗಳು ಮುಂತಾದವು ಗಳಿಗೆ ಮಂಗಳೂರು ಪ್ರದೇಶವನ್ನು ಆಶ್ರಯಿಸುತ್ತಾರೆ.
ಆದರೆ ಧರ್ಮತ್ತಡ್ಕ ರೂಟ್‌ನಿಂದ ನೇರವಾಗಿ ಬಸ್ ಸಂಚಾರ ಇಲ್ಲದ ಕಾರಣ ಬಂದ್ಯೋಡಿಗೆ ತೆರಳಿ ಅಲ್ಲಿಂದ ಮಂಗಳೂರು ಬಸ್‌ಗಳ ಆಶ್ರಯಿಸಬೇಕಾಗುತ್ತದೆ. ಇದರಿಂದ ಸಮಯ ನಷ್ಟ ಆರ್ಥಿಕ ನಷ್ಟ ಇತ್ಯಾದಿಗಳನ್ನು ಅನುಭವಿಸಬೇಕಾಗುತ್ತದೆ. ಭಾನುವಾರ, ಶುಕ್ರವಾರ ಮೊದಲಾದ ದಿನಗಳಲ್ಲಿ ಕೆಲವೊಮ್ಮೆ ಧರ್ಮತ್ತಡ್ಕ ರೂಟ್‌ನಲ್ಲಿ ಬಸ್‌ಗಳು ಸಂಚರಿಸದೇ ಪ್ರಯಾಣಿಕರು ಭಾರೀ ಸಮಸ್ಯೆಗೆ ಒಳಗಾಗುತ್ತಿದ್ದರು. ಇದೀಗ ನೇರ ಬಸ್ ಆರಂಭಗೊಂಡರೆ ಸಮಸ್ಯೆಗೆ ಪರಿಹಾರ ಸಿಗಬಹುದು.

> **ಸಾರಿಗೆ ಸಮಸ್ಯೆಗೆ ಪರಿಹಾರ**
> ಮಂಗಳೂರಿನಿಂದ ಧರ್ಮತ್ತಡ್ಕಕ್ಕೆ ನೇರ ಬಸ್ ಸಂಚಾರ ಆರಂಭಗೊಂಡರೆ ಎಲ್ಲಾ ಪ್ರಯಾಣಿಕರಿಗೂ ಅಪಾರ ಪ್ರಯೋಜನವಾಗಲಿದ್ದು, ಜೊತೆಗೆ ಈ ಭಾಗದ ಸಾರಿಗೆ ಸಮಸ್ಯೆಗೆ ಪರಿಹಾರ ದೊರಕಲಿದೆ.

ಕುಟುಂಬಶ್ರೀ ಭೂಸಮೃದ್ಧಿ ಯೋಜನೆ: ರಾಜ್ಯಮಟ್ಟದ ಉದ್ಘಾಟನೆ



ಕಾಸರಗೋಡು: ಭೂಸಮೃದ್ಧಿ ಯೋಜನೆಯ ರಾಜ್ಯಮಟ್ಟದ ಉದ್ಘಾಟನೆ ಪರಪ್ಪ ಬ್ಲಾಕ್ ಪಂ. ಸಭಾಂಗಣದಲ್ಲಿ ಶನಿವಾರ ನಡೆಯಿತು. ಕಾಞಂಗಾಡು ಶಾಸಕರು ಇ.ಚಂದ್ರಶೇಖರನ್ ಉದ್ಘಾಟಿಸಿದರು. ಕರಿಂದಳಂ ಗ್ರಾ.ಪಂ. ಅಧ್ಯಕ್ಷ ಎಂ. ರಾಜನ್ ಅಧ್ಯಕ್ಷತೆ ವಹಿಸಿದ್ದರು.
ಕುಟುಂಬಶ್ರೀ ಜಿಲ್ಲಾ ಮಿಷನ್ ಕೃಷಿ ಜೀವನೋಪಾಯ ವಲಯದಲ್ಲಿ ಸುಸ್ಥಿರ ಬೆಳವಣಿಗೆಗೆ ಪ್ರಯೋಜನಕಾರಿಯಾದ ದೊಡ್ಡ ಪ್ರಮಾಣದ ಯೋಜನೆಗಳೊಂದಿಗೆ ಮುಂದುವರಿಯುತ್ತಿದೆ.

ಕೃಷಿ ಕ್ಷೇತ್ರದಲ್ಲಿ ಮಹತ್ವದ ಚಟುವಟಿಕೆ

ಬೇಸಿಗೆ ಸಿಹಿ ಗೆಣಸು ಮತ್ತು ಸೌತೆಕಾಯಿ ಗಳು ಸೇರಿದಂತೆ ನವೀನ ತಂತ್ರಜ್ಞಾನಗಳ ಮೂಲಕ ಕೃಷಿ ಕ್ಷೇತ್ರದಲ್ಲಿ ಮಹತ್ವದ ಚಟುವಟಿಕೆ ನಡೆಸಲಾಗುತ್ತಿದೆ.
ಭೂಸಮೃದ್ಧಿ ಎಂಬುದು ಕುಟುಂಬಶ್ರೀ ಜಿಲ್ಲಾ ಮಿಷನ್ ಭೂಬಳಕೆ ಇಲಾಖೆಯ ಸಹಯೋಗದೊಂದಿಗೆ ಜಾರಿಗೆ ತಂದ ಯೋಜನೆಯಾಗಿದೆ. ಯೋಜನೆಯ ಮೂಲಕ ಜಿಲ್ಲೆಯಲ್ಲಿ ಪಾಳುಭೂಮಿಗಳನ್ನು ಗುರುತಿಸುವ ಕಾರ್ಯ ಪರಪ್ಪ ಬ್ಲಾಕ್‌ನಲ್ಲಿ ಪೂರ್ಣಗೊಳಿಸಲಾಯಿತು.
ಸ್ಥಳೀಯ ಸಮುದಾಯದಿಂದ ಆಯ್ಕೆಯಾದ 40 ಕೃಷಿ ಫಲಾನುಭವಿಗಳಿಗೆ ಸಾವಯವ ಗೊಬ್ಬರ, ನಾಟಿ ಸಾಮಗ್ರಿಗಳು ಮತ್ತು ಕೃಷಿ ಉಪಕರಣಗಳ ವಿತರಿಸಲಾಗುತ್ತಿದೆ.
ಕುಟುಂಬಶ್ರೀ ರಾಜ್ಯ ಮಿಷನ್ ಕಾರ್ಯನಿರ್ವಾಹಕ ನಿರ್ದೇಶಕ ಎಚ್.ದಿನೇಶನ್ ಪುನರ್ಜೀವನಂ 2.0 ಯೋಜನೆ ಉದ್ಘಾಟಿಸಿದರು.
ಪರಪ್ಪ ಬ್ಲಾಕ್ ಪಂಚಾಯತ್ ಅಧ್ಯಕ್ಷೆ ಬಿಂದು ಕೃಷ್ಣನ್ ಅತಿಥಿಯಾಗಿದ್ದರು. ಬ್ಲಾಕ್ ಪಂಚಾಯತ್ ಸ್ಥಾಯೀ ಸಮಿತಿ ಸದಸ್ಯ ಪಾರಕೋಲ್ ರಾಜನ್, ಜಿಲ್ಲಾ ಮಿಷನ್ ಸಂಯೋಜಕ ರತೀಶ್ ಪಿಲಿಕೋಡ್, ಎಡಿಎಂ ಎ.ಸಿ.ಹರಿದಾಸ್, ಮತ್ತು ಡಿ.ಪಿ.ಎಂ.ಆದಿರಾ ಮಾತನಾಡಿದರು.

> **ಕೃಷಿ ಉಪಕರಣಗಳ ವಿತರಣೆ**
> ಕಾಸರಗೋಡಿನ ಗುಡ್ಡಗಾಡು ಮಣ್ಣು, ಬುಡಕಟ್ಟು ಪ್ರದೇಶಗಳಲ್ಲಿ ಸಿಹಿ ಗೆಣಸು ಕೃಷಿಯನ್ನು ವಿಸ್ತರಿಸುವ ಮೂಲಕ ಆದಾಯ ಖಚಿತಪಡಿಸಿಕೊಳ್ಳಲು ಕೇಂದ್ರ ಆಲೂಗಡ್ಡೆ ಸಂಶೋಧನಾ ಕೇಂದ್ರದ ಸಹಯೋಗದೊಂದಿಗೆ ಜಾರಿಗೆ ತರಲಾಗಿದೆ. ಸ್ಥಳೀಯ ಸಮುದಾಯದಿಂದ ಆಯ್ಕೆಯಾದ 40 ಕೃಷಿ ಫಲಾನುಭವಿಗಳಿಗೆ ಸಾವಯವ ಗೊಬ್ಬರ, ನಾಟಿ ಸಾಮಗ್ರಿಗಳು ಮತ್ತು ಕೃಷಿ ಉಪಕರಣಗಳ ವಿತರಿಸಲಾಗುತ್ತಿದೆ.

ಮಾ.10, -12: ಶ್ರೀ ಸತ್ಯಸಾಯಿ ಪ್ರೇಮ ಪ್ರವಾಹಿನಿ ರಥಯಾತ್ರೆ

ಕಾಸರಗೋಡು: ಸತ್ಯಸಾಯಿಬಾಬಾರವರ 100ನೇ ಜನ್ಮದಿನಾಚರಣೆ ಅಂಗವಾಗಿ ಶ್ರೀ ಸತ್ಯಸಾಯಿ ಸೇವಾ ಸಂಸ್ಥೆಯ ಶ್ರೀ ಸತ್ಯಸಾಯಿ ಪ್ರೇಮ ಪ್ರವಾಹಿನಿ ರಥಯಾತ್ರೆ ಮಾ.10, 11 ಮತ್ತು 12ರಂದು ಕಾಸರಗೋಡು ಜಿಲ್ಲೆಯಲ್ಲಿ ನಡೆಯಲಿದೆ.

ಸತ್ಯ, ಧರ್ಮ, ಶಾಂತಿ, ಪ್ರೇಮ

ಪುಟ್ಟಪರ್ತಿಯ ಪ್ರಶಾಂತಿ ನಿಲಯದಿಂದ ಪ್ರಾರಂಭವಾದ ಈ ಅಭಿಯಾನವು ಬಾಬಾರವರು ಬೋಧಿಸಿದ ಸತ್ಯ, ಧರ್ಮ, ಶಾಂತಿ, ಪ್ರೇಮ ಮತ್ತು ಅಹಿಂಸೆಯ ಮೌಲ್ಯಗಳನ್ನು ಸಮಾಜಕ್ಕೆ ಹರಡುವ ಗುರಿಯನ್ನು ಹೊಂದಿದೆ. ಇದರ ಅಂಗವಾಗಿ ಶ್ರೀ ಸತ್ಯಸಾಯಿ ಸೇವಾ ಸಂಸ್ಥೆ ಕಾಸರಗೋಡು ಜಿಲ್ಲೆ, ಜಿಲ್ಲೆಯಲ್ಲಿ ವಿವಿಧ ಆಧ್ಯಾತ್ಮಿಕ ಮತ್ತು ಸೇವಾ ಕಾರ್ಯಕ್ರಮಗಳು ಹಾಗೂ ಸಂದೇಶ ಅಭಿಯಾನಗಳನ್ನು ಹಮ್ಮಿಕೊಳ್ಳಲಾಗುವುದು ಎಂದು ಜಿಲ್ಲಾಧ್ಯಕ್ಷ ಎಚ್.ಮಹಾಲಿಂಗ ಭಟ್ ಶನಿವಾರ ಪ್ರೆಸ್‌ಕ್ಲಬ್‌ನಲ್ಲಿ ಜರಗಿದ ಸುದ್ದಿಗೋಷ್ಠಿಯಲ್ಲಿ ತಿಳಿಸಿದ್ದಾರೆ.
ದಕ್ಷಿಣ ಕನ್ನಡದ ಶ್ರೀ ಸತ್ಯಸಾಯಿ ಲೋಕಸೇವಾ ವಿಹಾರ ಆಳಿಕೆಯಿಂದ ಹಸ್ತಾಂತರಗೊಳ್ಳುವ ರಥಯಾತ್ರೆಯು ಕಾಸರಗೋಡು ಜಿಲ್ಲೆಗೆ ಆಗಮಿಸಲಿದೆ. ಮಾ.10ರಂದು ಕಾಟುಕುಕ್ಕೆ ಸಾಯಿ ಮಂದಿರದಿಂದ ಹೊರಟು ಪೆರ್ಲ, ಮಧೂರು ದೇವಸ್ಥಾನ, ಕಾಸರಗೋಡು ಟೌನ್ ಸಾಯಿ ಮಂದಿರ, ತಾಳಿಪಡ್ಪುವಿನ ಭಗವಾನ್ ಸತ್ಯಸಾಯಿ ಬಾಬಾ ಅಭಯ ನಿಕೇತನದಲ್ಲಿ ರಾತ್ರಿ ತಂಗುತ್ತಾರೆ.
ಮಾ.11ರಂದು ಬೆಳಿಗ್ಗೆ 8 ಗಂಟೆಗೆ ಅಭಯ ನಿಕೇತನದಿಂದ ಹೊರಟು, ಕಿಳಿಂಗಾರು, ಶಿರಿಯಾ, ಉಪ್ಪಳ ಸಾಯಿ ಮಂದಿರಗಳು, ಕೊಂಡೆವೂರು ನಿತ್ಯಾನಂದ ಆಶ್ರಮ, ಜೋಡುಕಲ್ಲು, ಆಟಿಕುಕ್ಕೆ ಪೆಟ್ರೋಲ್ ಪಂಪ್‌ನಿಂದ ಆರಂಭಗೊಳ್ಳುವ ಶೋಭಾಯಾತ್ರೆಯೊಂದಿಗೆ ವಿವಿದ ಧಾರ್ಮಿಕ ಸಾಂಸ್ಕೃತಿಕ ಕಾರ್ಯಕ್ರಮದೊಂದಿಗೆ ರಾತ್ರಿ ಬಾಯಾರು ಪ್ರಶಾಂತಿ ವಿದ್ಯಾಕೇಂದ್ರದಲ್ಲಿ ತಂಗುತ್ತಾರೆ.
ಮಾ.12ರಂದು ಬೆಳಿಗ್ಗೆ 7 ಗಂಟೆಗೆ ಹೊರಟು ದೈಗೋಳಿ ಸಾಯಿ ನಿಕೇತನ ಸೇವಾಶ್ರಮ, ಹೊಸಂಗಡಿ, ಮಂಜೇಶ್ವರ ಮೂಲಕ ತಲಪ್ಪಾಡಿಯಲ್ಲಿ ರಥವನ್ನು ದ.ಕ. ಜಿಲ್ಲೆಗೆ ಹಸ್ತಾಂತರಿಸಲಾಗುತ್ತದೆ.
ಲಲಿತ್‌ಕುಮಾರ್ ಬಿ., ಬಾಬು ಪಟ್ಟಾಳಿ ಮಧೂರು, ಕೃಷ್ಣಪ್ರಸಾದ್ ಜಿ., ಶಿವರಾಮ ಶೆಟ್ಟಿ ಪ್ರೇಮ್ ಪ್ರಕಾಶ್ ಬೇಕಲ್ ಸುದ್ದಿಗೋಷ್ಠಿಯಲ್ಲಿ ಉಪಸ್ಥಿತರಿದ್ದರು.

ಸುತ್ತಮುತ್ತ

ಸಾಧಕ ಸ್ತ್ರೀ ಪುರಸ್ಕಾರಕ್ಕೆ ಫಿಲೋಮಿನಾ ಫೆರ್ನಾಂಡೀಸ್ ಆಯ್ಕೆ

ಕುಂದಾಪುರ: ಡಾ. ಶಿವರಾಮ ಕಾರಂತ ಹುಟ್ಟೂರ ಪ್ರಶಸ್ತಿ ಪ್ರತಿಷ್ಠಾನ ಕೋಟ, ಕೋಟತಟ್ಟು ಗ್ರಾಮ ಪಂಚಾಯತ್, ಅಮೃತೇಶ್ವರಿ ಮಹಿಳಾ ಮೀನುಗಾರರ ಸಹಕಾರಿ ಸಂಘ ಕೋಟ, ನೆನಪು ಉತ್ತು ಉಸಿರು ಕೋಟ ವತಿಯಿಂದ 2026ನೇ ಸಾಲಿನ ವಿಶ್ವ ಮಹಿಳಾ ದಿನಾಚರಣೆ ಅಂಗವಾಗಿ ಡಾ. ಶಿವರಾಮ ಕಾರಂತ ಸಾಧಕ ಸ್ತ್ರೀ ಪುರಸ್ಕಾರಕ್ಕೆ ಗಂಗೊಳ್ಳಿ ಗ್ರಾಮದ ದಾಕುಹಿತ್ಲು ಅಂಗನವಾಡಿ ಕೇಂದ್ರದ ಕಾರ್ಯಕರ್ತೆ, ಉಡುಪಿ ಜಿಲ್ಲಾ ಅಂಗನವಾಡಿ ಕಾರ್ಯಕರ್ತೆಯರು ಮತ್ತು ಸಹಾಯಕಿಯರ ಸಂಘದ ಅಧ್ಯಕ್ಷೆ ಫಿಲೋಮಿನಾ ಫೆರ್ನಾಂಡಿಸ್ ಆಯ್ಕೆಯಾಗಿದ್ದಾರೆ. ಕೋಟದ ಡಾ. ಶಿವರಾಮ ಕಾರಂತ ಥೀಮ್ ಪಾರ್ಕ್‌ನಲ್ಲಿ ಮಾ.15ರಂದು ಮಧ್ಯಾಹ್ನ 2 ಗಂಟೆಗೆ ನಡೆಯಲಿದೆ. ಸಮಾರಂಭದಲ್ಲಿ ಪ್ರದಾನ ಮಾಡಲಾಗುವುದು.



ಮಾ.12 'ಸುರಗಂಗಾ ಕಲಾ-ಸಾಹಿತ್ಯ ಮಹಿಳಾ ವೇದಿಕೆ'ಯ ಉದ್ಘಾಟನೆ

ಕುಂದಾಪುರ: ಕುಂದಾಪುರದಲ್ಲಿ ಹೊಸದಾಗಿ ಅಸ್ತಿತ್ವಕ್ಕೆ ಬರುತ್ತಿರುವ 'ಸುರಗಂಗಾ ಕಲಾ-ಸಾಹಿತ್ಯ ಮಹಿಳಾ ವೇದಿಕೆ'ಯ ಉದ್ಘಾಟನಾ ಕಾರ್ಯಕ್ರಮ ಮಹಿಳಾ ದಿನಾಚರಣೆಯೊಂದಿಗೆ ಕುಂದಾಪುರ ಶಾಸ್ತ್ರಿ ಸರ್ಕಲ್ ಸಮೀಪದ ಕಾಲೇಜು ರಸ್ತೆಯಲ್ಲಿರುವ ಜನಪ್ರತಿನಿಧಿ ಪ್ರಕಾಶನದ ಕಚೇರಿಯ ಸಭಾಭವನದಲ್ಲಿ ಮಾ.12ರಂದು ನಡೆಯಲಿದೆ. ಲೇಖಕಿ ಉತ್ತು ರಂಗ ನಟಿ ಪೂರ್ಣಿಮಾ ಸುರೇಶ್ ಸುರಗಂಗಾ ಕಲಾ-ಸಾಹಿತ್ಯ ಮಹಿಳಾ ವೇದಿಕೆಯನ್ನು ಉದ್ಘಾಟಿಸಲಿದ್ದಾರೆ. ಲೇಖಕಿ ಉತ್ತು ಕಲಾವಿದೆ ಸುಪ್ರಸನ್ನ ನಕ್ಕತ್ತಾಯ ಮುಖ್ಯ ಅತಿಥಿಗಳಾಗಿ ಭಾಗವಹಿಸಲಿದ್ದಾರೆ. ವೇದಿಕೆಯ ಗೌರವಾಧ್ಯಕ್ಷೆ ಡಾ.ಪಾರ್ವತಿ ಜಿ.ಐತಾಳ್ ಸಭಾಧ್ಯಕ್ಷತೆ ವಹಿಸಲಿದ್ದಾರೆ. ಮಹಿಳಾ ದಿನಾಚರಣೆಯ ಅಂಗವಾಗಿ ಚಿತ್ರಕಲಾವಿದೆ ನೇಹಾ ಗಂಗೊಳ್ಳಿ ಅವರನ್ನು ಸನ್ಮಾನಿಸಲಾಗುವುದು. ಕಾರ್ಯದರ್ಶಿ ಪೂರ್ಣಿಮಾ ನರಸಿಂಹ, ಜತೆ ಕಾರ್ಯದರ್ಶಿ ಜೆಸ್ಸಿ ಎಲಿಝುಬೆತ್, ಸುಪ್ರೀತಾ ಪುರಾಣಿಕ್ ಮತ್ತು ಸುಮತಿ ಶೆಣೈ ಕಾರ್ಯಕ್ರಮವನ್ನು ನಡೆಸಿಕೊಡಲಿದ್ದಾರೆ ಎಂದು ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ಜೈ ಕುಂದಾಪುರ ಸಂಭ್ರಮ-2026ರ ಪೋಸ್ಟರ್ ಬಿಡುಗಡೆ

ಕೋಟ: ಜೈ ಕುಂದಾಪುರ ಸೇವಾ ಟ್ರಸ್ಟ್ ಕುಂದಾಪುರ ಇದರ ಜೈ ಕುಂದಾಪುರ ಸಂಭ್ರಮ-2026 ಸೇವೆ,ಸನ್ಮಾನ,ಸಡಗರ ಎಂಬ ವಿನೂತನ ಮಾದರಿಯ ಕಾರ್ಯಕ್ರಮ ಬರುವ ಏ.12ರಂದು ಕೋಟದ ಪೊಲೀಸ್ ಠಾಣೆಯ ಮುಂಭಾಗದಲ್ಲಿ ನಡೆಯಲಿದೆ ಈ ಹಿನ್ನಲೆಯಲ್ಲಿ ಇದರ ಪೋಸ್ಟರ್ ಬಿಡುಗಡೆ ಕಾರ್ಯಕ್ರಮ ಭಾನುವಾರ ಕೋಟ ಅಮೃತೇಶ್ವರೀ ದೇಗುಲದಲ್ಲಿ ನಡೆಯಿತು. ಕೋಟ ಅಮೃತೇಶ್ವರೀ ದೇಗುಲದ ವ್ಯವಸ್ಥಾಪನಾ ಸಮಿತಿಯ ಅಧ್ಯಕ್ಷ ಆನಂದ್ ಸಿ ಕುಂದರ್ ಪೋಸ್ಟರ್ ಅನ್ನು ಬಿಡುಗಡೆಗೊಳಿಸಿ ಶುಭಹಾರೈಸಿದರು. ಜೈಕುಂದಾಪುರ ಸೇವಾ ಟ್ರಸ್ಟ್ ಪ್ರಮುಖರಾದ ಪುಂಡಲೀಕ ಮೊಗವೀರ, ಜಯರಾಜ್ ಸಾಲಿಯಾನ್ ಪಡುಕರೆ,ಸುಧಾಲು ಕುಂಭಾಶಿ, ಶಿಲರಾಜ್ ಪಡುಕರೆ,ನಾಗರತ್ನ ತೆಕ್ಕಟ್ಟೆ,ದಿನೇಶ್ ಬಾರಿಕೆರೆ, ಗೌರಲ ಸಲಹೆಗಾರ ದಿನೇಶ್ ಗಾಣಿಗ, ಸಾಲೂಜಿಕ ಕಾರ್ಯಕರ್ತ ರಮೇಶ್ ಮೆಂಡನ್, ಪಂಚಲರ್ಣ ಯುಲಕ ಮಂಡಲದ ಅಧ್ಯಕ್ಷ ಲುನೋಹರ್ ಪೂಜಾರಿ, ಸಮಾಜ ಸೇವಕ ಆದಿತ್ಯ ಕೋಟ, ಸತ್ಯಪ್ರಕಾಶ ಪಡುಕರೆ ಇದ್ದರು.


ಬಿಸಿಲಿನಿಂದ ಉಂಟಾಗುವ ನಿರ್ಜಲೀಕರಣ, ಶಾಖಾಘಾತ | ಹವಾಮಾನ ಇಲಾಖೆಯ ಎಚ್ಚರಿಕೆ

ಕರಾವಳಿಯಲ್ಲಿ ಬಿಸಿಲ ಧಗೆ ತೀವ್ರ ಏರಿಕೆ, ಬೇಕಿದೆ ಮುನ್ನೆಚ್ಚರಿಕೆ

ಉಡುಪಿ: ರಾಜ್ಯದ ಬಹುತೇಕ ಭಾಗಗಳಲ್ಲಿ ಈ ಬಾರಿ ಬೇಸಿಗೆಯ ತಾಪಮಾನ ಸಾಮಾನ್ಯಕ್ಕಿಂತ ಹೆಚ್ಚಿರುವ ಸಾಧ್ಯತೆಯಿದೆ ಎಂದು ಹವಾಮಾನ ಇಲಾಖೆ ಎಚ್ಚರಿಸಿದೆ. ವಿಶೇಷವಾಗಿ ಕರಾವಳಿ ಮತ್ತು ಮಲೆನಾಡು ಜಿಲ್ಲೆಗಳಲ್ಲಿ ಗರಿಷ್ಠ ತಾಪಮಾನ ಏರಿಕೆಯಾಗುವ ಹಿನ್ನೆಲೆಯಲ್ಲಿ, ಸಾರ್ವಜನಿಕರ ಆರೋಗ್ಯ ರಕ್ಷಣೆಗಾಗಿ ಜಿಲ್ಲಾ ವಿಪತ್ತು ನಿರ್ವಹಣಾ ಪ್ರಾಧಿಕಾರವು ಮಹತ್ವದ ಮಾರ್ಗಸೂಚಿಗಳನ್ನು ಬಿಡುಗಡೆ ಮಾಡಿದೆ. ಬಿಸಿ ಗಾಳಿಯ ಪ್ರಭಾವ ಇನ್ನೂ ಹೆಚ್ಚಾಗುವ ಸಾಧ್ಯತೆಯಿದ್ದು, ತೀರ ಪ್ರದೇಶದ ನಿವಾಸಿಗಳು ಈ 'ಹಬೆ' ಬಿಸಿಲಿನಿಂದ ಹೆಚ್ಚಿನ ಜಾಗ್ರತೆ ವಹಿಸಬೇಕಿದೆ. ಬಿಸಿಲಿನಿಂದ ಉಂಟಾಗುವ ನಿರ್ಜಲೀಕರಣ ಮತ್ತು ಶಾಖಾಘಾತ ತಡೆಗಟ್ಟಲು ಸಾರ್ವಜನಿಕರು ಮುನ್ನೆಚ್ಚರಿಕೆಗಳನ್ನು ವಹಿಸುವುದು ಕಡ್ಡಾಯವಾಗಿದೆ.

ರಕ್ಷಣಾ ಕ್ರಮಗಳು

ಸಾಧ್ಯವಾದಷ್ಟು ಮಧ್ಯಾಹ್ನ 12ರಿಂದ 3 ಗಂಟೆಯವರೆಗೆ ಬಿಸಿಲಿನಲ್ಲಿ ಓಡಾಡುವುದನ್ನು ತಪ್ಪಿಸಿ.



ನೀರಿನ ಸೇವನೆ

ಬಾಯಾರಿಕೆ ಇಲ್ಲದಿದ್ದರೂ ನಿಯಮಿತವಾಗಿ ಸಾಕಷ್ಟು ನೀರು ಕುಡಿಯಿರಿ. ಪ್ರಯಾಣಿಸುವಾಗ ನೀರಿನ ಬಾಟಲಿಯನ್ನು ಜೊತೆಯಲ್ಲೇ ಇಟ್ಟುಕೊಳ್ಳಿ.

ಉಡುಗೆ-ತೊಡುಗೆ

ಹಗುರವಾದ, ತಿಳಿ ಬಣ್ಣದ, ಸಡಿಲವಾದ ಹತ್ತಿ ಬಟ್ಟೆಗಳನ್ನು ಧರಿಸಿ. ಹೊರಗೆ ಹೋಗುವಾಗ ಛತ್ರಿ, ಟೋಪಿ ಮತ್ತು ಸನ್‌ಗ್ಲಾಸ್‌ಗಳನ್ನು ಬಳಸಿ.

ಶಾಖಾಘಾತದ ಲಕ್ಷಣ ಕಂಡರೆ ಏನು ಮಾಡಬೇಕು?

ಬಿಸಿಲಿನ ಬೇಗೆಯಿಂದ ಯಾರಾದರೂ ಪ್ರಜ್ಞೆತಪ್ಪಿದರೆ ಅಥವಾ ಅತಿಯಾದ ಸುಸ್ತು ಅನುಭವಿಸಿದರೆ ಅವರನ್ನು ತಕ್ಷಣ ನೆರಳಿನ ಪ್ರದೇಶಕ್ಕೆ ಸ್ಥಳಾಂತರಿಸಿ. ಒದ್ದೆ ಬಟ್ಟೆಯಿಂದ ಮೈ ಒರೆಸಿ, ದೇಹದ ಉಷ್ಣತೆ ತಗ್ಗಿಸಲು ತಲೆಯ ಮೇಲೆ ನೀರು ಹಾಕಬೇಕು. ಕೂಡಲೇ ಹತ್ತಿರದ ವೈದ್ಯರನ್ನು ಸಂಪರ್ಕಿಸಿ ಚಿಕಿತ್ಸೆ ಕೊಡಿಸಬೇಕು.

ಆಹಾರ ಕ್ರಮ ಹೀಗಿರಲಿ

ಮನೆಯಲ್ಲಿ ತಯಾರಿಸಿದ ಮಜ್ಜಿಗೆ, ನಿಂಬೆ ಪಾನಕ ಹಾಗೂ ಓ.ಆರ್.ಎಸ್ ಸೇವಿಸಿ. ಹೆಚ್ಚಿನ ನೀರಿನಂಶವಿರುವ ಕಲ್ಲಂಗಡಿ, ಕಿತ್ತಳೆ, ಎಳನೀರು ಹಾಗೂ ತರಕಾರಿಗಳನ್ನು ಹೆಚ್ಚಾಗಿ ಬಳಸಿ.

ಮುನ್ನೆಚ್ಚರ ವಹಿಸಿ

ಮಧ್ಯಾಹ್ನ 12ರಿಂದ 3ರ ಅವಧಿಯಲ್ಲಿ ಅತಿಯಾದ ಶ್ರಮದಾಯಕ ಚಟುವಟಿಕೆಗಳನ್ನು ಮಾಡಬಾರದು.

'ಫೀಲ್ ಲೈಕ್' ತಾಪಮಾನ ಆತಂಕ

ಜಿಲ್ಲೆಯಲ್ಲಿ ಪ್ರಸ್ತುತ ದಾಖಲಾಗುತ್ತಿರುವ ತಾಪಮಾನಕ್ಕಿಂತಲೂ ಅದರ ತೀವ್ರತೆ ಸಾರ್ವಜನಿಕರನ್ನು ಹೆಚ್ಚು ಕಾಡುತ್ತಿದೆ. ತೇವಾಂಶ ಭರಿತ ಹವಾಮಾನದ ಕಾರಣದಿಂದಾಗಿ, ಥರ್ಮಾಮೀಟರ್‌ನಲ್ಲಿ 34 ಡಿಗ್ರಿ ಸೆಲ್ಸಿಯಸ್ ತೋರಿಸುತ್ತಿದ್ದರೂ, ಜನರಿಗೆ 38ರಿಂದ 40 ಡಿಗ್ರಿಯಷ್ಟು ಭಾಸವಾಗುತ್ತಿದೆ.

ದೇಹವನ್ನು ನಿರ್ಜಲೀಕರಣಗೊಳಿಸುವ ಆಲ್ಕೋಹಾಲ್, ಚಹಾ, ಕಾಫಿ ಮತ್ತು ಕಾರ್ಬೋನೇಟೆಡ್ ತಂಪು ಪಾನೀಯಗಳ ಸೇವನೆ ಕಡಿಮೆ ಮಾಡಬೇಕು. ಸುರಕ್ಷತೆ ನಿಲ್ಲಿಸಿದ ವಾಹನಗಳಲ್ಲಿ ಮಕ್ಕಳನ್ನು ಅಥವಾ ಸಾಕುಪ್ರಾಣಿಗಳನ್ನು ಒಂಟಿಯಾಗಿ ಬಿಡಬಾರದು. ಬೆಳಿಗ್ಗೆ 11ರಿಂದ ಸಂಜೆ 4ರ ಅವಧಿಯಲ್ಲಿ ಹೊರಾಂಗಣ ಸಭೆ ಹಮ್ಮಿಕೊಂಡಿದ್ದರೆ, ಕಡ್ಡಾಯವಾಗಿ ಶಾಮಿಯಾನ, ಕುಡಿಯುವ ನೀರಿನ ವ್ಯವಸ್ಥೆ ಮಾಡಬೇಕು.

ಸ್ಮಾರ್ಟ್‌ಫೋನ್, ಇಲೆಕ್ಟ್ರಾನಿಕ್ ಸಾಧನ ಬಳಕೆ ಬಗ್ಗೆ ಎಚ್ಚರ

ತೀವ್ರತರವಾದ ಬಿಸಿಲು ಕೇವಲ ಮನುಷ್ಯರ ಆರೋಗ್ಯದ ಮೇಲಷ್ಟೇ ಅಲ್ಲದೆ, ನಾವು ಬಳಸುವ ಎಲೆಕ್ಟ್ರಾನಿಕ್ ಉಪಕರಣಗಳ ಮೇಲೂ ಗಂಭೀರ ಪರಿಣಾಮ ಬೀರುತ್ತದೆ. ದ್ವಿಚಕ್ರ ವಾಹನಗಳ ಮೊಬೈಲ್ ಹೋಲ್ಡರ್‌ಗಳಲ್ಲಿ ಫೋನ್ ಇಟ್ಟು ಓಡಾಡುವ ಡೆಲಿವರಿ ಬಾಯ್ಸ್ ಮತ್ತು ಸಾರ್ವಜನಿಕರು ಈ ಬಗ್ಗೆ ಎಚ್ಚರಿಕೆ ವಹಿಸಬೇಕು. ಬಿಸಿಲಿನ ತಾಪಕ್ಕೆ ವಾಹನಗಳ ಒಳಗೆ ಫೋನ್ ಅಥವಾ ಪವರ್ ಬ್ಯಾಂಕ್ ಬಿಟ್ಟು ಹೋಗಬಾರದು. ಅತಿಯಾದ ತಾಪಮಾನದಿಂದಾಗಿ ಸಾಧನಗಳು ಓವರ್ ಹೀಟ್' ಆಗಿ ಮದರ್ ಬೋರ್ಡ್ ವೈಫಲ್ಯ ಉಂಟಾಗುವ ಸಾಧ್ಯತೆ ಇರುವುದರಿಂದ, ಸಾಧನಗಳನ್ನು ತಂಪಾದ ಜಾಗದಲ್ಲಿ ಇರಿಸಿ ಹಾಗೂ ಚಾರ್ಜಿಂಗ್ ಮಾಡುವಾಗ ಹೆಚ್ಚಿನ ಜಾಗ್ರತೆ ವಹಿಸಬೇಕಿದೆ.

ಸರ್ಕಾರಿ ನಿವೃತ್ತ ನೌಕರರ ಸಂಘ ಕುಂದಾಪುರ ಶಾಖೆ ಮಾಸಿಕ ಸಭೆ



ಕುಂದಾಪುರ: ಕರ್ನಾಟಕ ರಾಜ್ಯ ಸರ್ಕಾರಿ ನಿವೃತ್ತ ನೌಕರರ ಸಂಘ ಕುಂದಾಪುರ ತಾಲೂಕು ಶಾಖೆಯ ಮಾಸಿಕ ಸಭೆ ಕುಂದಾಪುರದ ಶ್ರೀ ಕುಂದೇಶ್ವರ ದೇವಸ್ಥಾನದ ಸಭಾ ಭವನದಲ್ಲಿ ನಡೆಯಿತು.

ಸಭೆಯ ಅಧ್ಯಕ್ಷತೆಯನ್ನು ಸಂಘದ ಅಧ್ಯಕ್ಷ ವಸಂತ ಹೆಗ್ಡೆ ವಹಿಸಿದ್ದರು. ನಿವೃತ್ತರ ಪಿಂಚಣಿಯಲ್ಲಿ ಮರುಪಾವತಿಯಾಗುತ್ತಿರುವ ಕಮ್ಯೂಟೇಷನ್ ಕಡತದಲ್ಲಿ ಆಗುತ್ತಿರುವ ಅನ್ಯಾಯದ ಸಲುವಾಗಿ ನ್ಯಾಯಾಲಯದ ಮೊರೆ ಹೋಗುವ ಕುರಿತು ಸಭೆಯಲ್ಲಿ ಚರ್ಚಿಸಲಾಯಿತು.

ಗೌರವಾಧ್ಯಕ್ಷ ವಕ್ವಾಡಿ ಭಾಸ್ಕರ್ ಶೆಟ್ಟಿ ಮಾರ್ಗದರ್ಶನ ಮಾಡಿದರು. ಪದ್ಮನಾಭ ಅಡಿಗ, ಶಂಕರ ಪೂಜಾರಿ, ಸಹಕರಿಸಿದರು. ಈ ದಿನ ಸಂಘದ ಸದಸ್ಯತ್ವ ಸ್ವೀಕರಿಸಿದ ನಿವೃತ್ತ ಶಿಕ್ಷಕರಾದ ಎ. ನಾಗೇಶರಾವ್, ಗೋಪಾಲಕೃಷ್ಣ ಶೆಟ್ಟಿ, ಸಂಜೀವ ಎಂ. ಪಿ., ಗ್ಲಾಡಿಸ್ ಡಿಸೋಜ, ಅಶೋಕ್ ಹೊಳ್ಳ ವಿ., ರಾಜೀವ್ ಶೆಟ್ಟಿ ಬಿ., ನಾರಾಯಣ ದೇವಾಡಿಗ ಅವರನ್ನು ಸನ್ಮಾನಿಸಿ ಬರಮಾಡಿಕೊಳ್ಳಲಾಯಿತು.

ಸಭೆಯಲ್ಲಿ ಉಪಾಧ್ಯಕ್ಷೆ ಸೂರ್ಯಕಾಂತಿ, ಹಿರಿಯ ಸದಸ್ಯರಾದ ಬಿ. ಭೋಜರಾಜ ಶೆಟ್ಟಿ ಸಿ.ಎಚ್. ಜಗನ್ನಾಥ ಶೆಟ್ಟಿ ಜಿ. ಗಣಪಯ್ಯ, ಎ. ಮುತ್ತಯ್ಯ ಶೆಟ್ಟಿ ಮೊದಲಾದವರು ಉಪಸ್ಥಿತರಿದ್ದರು. ಶಂಕರ ಬಿಲ್ಲವ ಕಟ್‌ಬೇಲ್ತೂರು ಪ್ರಾರ್ಥನೆ ಹಾಡಿದರು. ಕಾರ್ಯದರ್ಶಿ ರಘುವೀರ ಕೆ. ಸ್ವಾಗತಿಸಿ, ಗತಸಭೆಯ ವರದಿ ವಾಚಿಸಿದರು. ಖಜಾಂಚಿ ಎಚ್. ಸುಬ್ರಾಯ ಗಾಣಿಗ ಲೆಕ್ಕ ಪತ್ರ ಮಂಡಿಸಿದರು.

ರಸ್ತೆ ಸುರಕ್ಷತೆ ಅರಿವು ಮೂಡಿಸುವ ಕಾರ್ಯ ಶ್ಲಾಘನೀಯ: ಠಾಣಾಧಿಕಾರಿ ಸುನೀಲ್



ಉಪ್ಪುಂದ: ರಾಷ್ಟ್ರೀಯ ರಸ್ತೆ ಸುರಕ್ಷತೆಯ ಅರಿವು ಮೂಡಿಸಲು ಸ್ಕೇಟಿಂಗ್ ಮತ್ತು ಸೈಕಲ್ ಜಾಥಾ ಆಯೋಜಿಸಿರುವುದು ಅತ್ಯಂತ ಶ್ಲಾಘನೀಯ ಕಾರ್ಯ. ವಿದ್ಯಾರ್ಥಿಗಳು ನಾಳೆಯ ನಾಗರಿಕರು. ಈ ಜಾಥಾ ಕೇವಲ ಕಾರ್ಯಕ್ರಮವಲ್ಲ, ಇದು ಸಮಾಜಕ್ಕೆ ಒಳ್ಳೆಯ ಸಂದೇಶ ನೀಡುವ ಚಳುವಳಿ ಎಂದು ಬೈಂದೂರು ಠಾಣಾಧಿಕಾರಿ ಸುನಿಲ್ ಕುಮಾರ್ ಹೇಳಿದರು.

ಕೇಂದ್ರೀಯ ಪ್ರೌಢ ಶಿಕ್ಷಣ ಮಂಡಳಿ, ಸಡಕ್ ಸುರಕ್ಷಾ ಜೀವನ ರಕ್ಷಾ ಎಂಬ ರಸ್ತೆ ಸುರಕ್ಷತೆಯ ಥೀಮ್, ಬೈಂದೂರು ಸೈಂಟ್ ಥೋಮಸ್ ಸಿಬಿಎಸ್‌ಇ ಶಾಲೆಯ ಸಹಯೋಗದಲ್ಲಿ ನಡೆದ ಸ್ಕೇಟಿಂಗ್ ಮತ್ತು ಸೈಕಲ್ ಜಾಥಾಕ್ಕೆ ಚಾಲನೆ ನೀಡಿ ಮಾತನಾಡಿದರು. ರಸ್ತೆ ಸುರಕ್ಷತೆ ಇಂದು ಅತ್ಯಂತ ಮಹತ್ವದ ವಿಷಯವಾಗಿದೆ. ಹೆಚ್ಚುತ್ತಿರುವ ವಾಹನಗಳ ಸಂಖ್ಯೆ ಮತ್ತು ಅಜಾಗರೂಕ ಚಾಲನೆ ಕಾರಣದಿಂದ ರಸ್ತೆ ಅಪಘಾತಗಳು ಹೆಚ್ಚುತ್ತಿವೆ. ಇಂತಹ ಸಂದರ್ಭ ಜನರಲ್ಲಿ ರಸ್ತೆ ಸುರಕ್ಷತೆಯ ಬಗ್ಗೆ ಅರಿವು ಮೂಡಿಸುವುದು ಅತ್ಯವಶ್ಯಕ.ಎಂದು ಅವರು ಹೇಳಿದರು.

ಪ್ರಾಂಶುಪಾಲ ರೇ. ಫಾ. ಫಾದರ್ ಫಿಲಿಪ್ ನೆಲ್ಲಿವಿಳಾ ಮಾತನಾಡಿ, ನಮ್ಮ ಶಾಲೆಯಲ್ಲಿ ರಾಷ್ಟ್ರೀಯ ರಸ್ತೆ ಸುರಕ್ಷತಾ ಜಾಗೃತಿ ಕಾರ್ಯಕ್ರಮದ ಅಂಗವಾಗಿ ಸ್ಕೇಟಿಂಗ್ ಮತ್ತು ಸೈಕಲ್ ಜಾಥಾ ಆಯೋಜನೆ ಯಿಂದ ವಿದ್ಯಾರ್ಥಿಗಳಲ್ಲಿ ಶಿಸ್ತು, ಜವಾಬ್ದಾರಿ ಮತ್ತು ಸಮಾಜಮುಖಿ ಚಿಂತನೆ ಬೆಳೆಸುವುದು ನಮ್ಮ ಮುಖ್ಯ ಉದ್ದೇಶ ಎಂದರು.

ಜಾಥಾ

ಶಾಲಾ ವಿದ್ಯಾರ್ಥಿಗಳು, ಶಿಕ್ಷಕರು, ವಾಹನ ಚಾಲಕರು, ಪೋಷಕ ಪ್ರತಿನಿಧಿಗಳ ಭಾಗವಹಿಸಿದ್ದ ಜಾಥಾ ಯಡ್ತರೆಯಿಂದ ಸೋಮೇಶ್ವರ ಮಾರ್ಗವಾಗಿ ಪಟ್ಟಣದ ಪ್ರಮುಖ ಬೀದಿಗಳಲ್ಲಿ ಸಾಗಿ ಶಾಲೆ ತಲುಪಿತು.

ಶ್ರೀ ಮಲ್ಲಿಕಾರ್ಜುನ ಸಹಕಾರಿ ಸಂಘಕ್ಕೆ ಗೋವಾ ಸಹಕಾರಿಗಳ ಭೇಟಿ



ಬ್ರಹ್ಮಾವರ: ಗೋವಾ ರಾಜ್ಯದ ದಿ.ಮಾರ್ಷಲ್ ಅರ್ಬನ್ ಕೋ-ಆಪರೇಟಿವ್ ಕ್ರೆಡಿಟ್ ಸೊಸೈಟಿ ನಿಯಮಿತ ಆಡಳಿತ ಮಂಡಳಿ ಸದಸ್ಯರು ಮತ್ತು ಮಾಜಿ ನಿರ್ದೇಶಕರು ಉಡುಪಿ ಜಿಲ್ಲೆಯ ಗ್ರಾಮೀಣ ಭಾಗದಲ್ಲಿ ಕಳೆದ 23 ವರ್ಷಗಳಿಂದ ಆರ್ಥಿಕವಾಗಿ ಹಿಂದುಳಿದಿರುವ ಸಮಾಜದ ಸಹಕಾರಿಗಳಿಗೆ ಸಹಕಾರಿ ಸೇವೆ ನೀಡುತ್ತಿರುವ ಶ್ರೀ ಮಲ್ಲಿಕಾರ್ಜುನ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿ ಶಿರೂರು-ಮೂರ್ಕೈಗೆ ಹೋಳಿ ಸಂದರ್ಭದಲ್ಲಿ ಭೇಟಿ ನೀಡಿದರು.

ಸಂಘದ ವಾರ್ಷಿಕ ಮಹಾಸಭೆಗೆ ಬರುವ ಸದಸ್ಯರು, ಸದಸ್ಯರ ಮಕ್ಕಳಿಗೆ ನೀಡುವ ವಿದ್ಯಾರ್ಥಿವೇತನ, ಶಾಲಾ ಕಾಲೇಜುಗಳಿಗೆ ನೀಡುತ್ತಿರುವ ಧನ ಸಹಾಯ, ಸದಸ್ಯರ ಮರಣೋತ್ತರ ನಿಧಿ ಪಾವತಿ, ಸಾಲಗಾರ ಸದಸ್ಯರಿಗೆ ವಿಮಾ ಸೌಲಭ್ಯ, ಸ್ವಂತ ಆಡಳಿತ ಕಚೇರಿ ಮತ್ತು ಶಾಖಾ ಕಚೇರಿ, ಸೋಲಾರ್ ಅಳವಡಿಸಿದ ಗ್ರಾಮೀಣ ಸಹಕಾರಿ, ಉಚಿತ ಸಂದೇಶ ರವಾನೆ, ಸ್ವಂತ ನಿವೇಶನ ಮತ್ತು ಸುಸಜ್ಜಿತ ಆಡಳಿತ ಕಚೇರಿ, ಗ್ರಾಹಕರಿಗೆ ಲಾಕರ್ ಸೌಲಭ್ಯ, ನಿರಂತರ ನೀಡುತ್ತಿರುವ ಗರಿಷ್ಠ ಪಾಲು ಮುನಾಫೆ, 50 ಕೋಟಿ ಠೇವಣಿ, 43 ಕೋಟಿ ಸಾಲ, 17 ಕೋಟಿ ಹೂಡಿಕೆ ಹಾಗೂ ವರ್ಷದಿಂದ ವರ್ಷಕ್ಕೆ ನಿರಂತರ ಪ್ರಗತಿಯನ್ನು ನೋಡಿ ಅಧ್ಯಯನಕ್ಕೆ ಯೋಗ್ಯ ಸಹಕಾರಿ ಸಂಘವೆಂದು ಶ್ಲಾಘಿಸಿದರು.

ಮೆಚ್ಚುಗೆ

ಕಳೆದ 34 ವರ್ಷಗಳಿಂದ ಸಹಕಾರಿ ಕ್ಷೇತ್ರದಲ್ಲಿ ತೊಡಗಿಸಿಕೊಂಡ ಈ ಸಹಕಾರಿ ಧುರೀಣರು, ಮಲ್ಲಿಕಾರ್ಜುನ ಸಹಕಾರಿ ಸಂಘವು ಕನಿಷ್ಠ ಅವಧಿಯಲ್ಲಿ ಸಾಧಿಸಿದ ಸಾಧನೆಗಳನ್ನು ಪರಿಶೀಲಿಸಿ ಮೆಚ್ಚುಗೆ ವ್ಯಕ್ತಪಡಿಸಿದರು.

ಮಾರ್ಷಲ್ ಅರ್ಬನ್ ಆಪರೇಟಿವ್ ಕ್ರೆಡಿಟ್ ಸೊಸೈಟಿ ಉಪಾಧ್ಯಕ್ಷ ಪ್ರಕಾಶ ಟಿ.ನಾಯಕ್, ಹಿರಿಯ ನಿರ್ದೇಶಕ ಭಾನುದಾಸ್ ಕೆ.ನಾಯ್ಕ ಗಾಂವ ಮತ್ತು ಆಡಳಿತ ಮಂಡಳಿಯ ಸದಸ್ಯರು ಉಪಸ್ಥಿತರಿದ್ದರು. ಸಂಘದ ಆಡಳಿತ ಮಂಡಳಿ ಸದಸ್ಯ ಜಯಪ್ರಕಾಶ, ಮಹದೇವ, ಮಾಜಿ ಸದಸ್ಯ ಚಂದ್ರ ನಾಯ್ಕ ಉಪಸ್ಥಿತರಿದ್ದರು. ಮಲ್ಲಿಕಾರ್ಜುನ ಸಹಕಾರಿ ಸಂಘದ ಸಿಇಒ ನರಸಿಂಹ ನಾಯ್ಕ ಸ್ವಾಗತಿಸಿದರು. ಪ್ರಾಸ್ತಾವಿಕ ಮಾತನಾಡಿದರು. ಅಧ್ಯಕ್ಷ ಕೃಷ್ಣನಾಯ್ಕ ಸಂಘದ ಕಾರ್ಯ ಚಟುವಟಿಕೆಯ ವಿವರ ನೀಡಿದರು. ಶಾಖಾಧಿಕಾರಿ ಕೃಷ್ಣನಾಯ್ಕ ವಂದಿಸಿದರು.

ವಿಶ್ವ ಮಹಿಳಾ ದಿನಾಚರಣೆಯ ಪ್ರಯುಕ್ತ ಕ್ರೀಡಾಕೂಟ

ಉಡುಪಿ: ಭಾರತ ಸರಕಾರದ ಮಿನಿಸ್ಟ್ರಿ ಆಫ್ ಯೂತ್ ಅಫೈರ್ಸ್ ಆ್ಯಂಡ್ ಸ್ಪೋರ್ಟ್ಸ್, ಸ್ಪೋರ್ಟ್ಸ್ ಅಥಾರಿಟಿ ಆಫ್ ಇಂಡಿಯಾ, ಜಿಲ್ಲಾ ಅಥ್ಲೆಟಿಕ್ಸ್ ಅಸೋಸಿಯೇಷನ್, ಅಸ್ಮಿತಾ ಹಾಗೂ ಖೇಲೋ ಇಂಡಿಯಾ ಆಶ್ರಯದಲ್ಲಿ ವಿಶ್ವ ಮಹಿಳಾ ದಿನಾಚರಣೆ ಪ್ರಯುಕ್ತ ಕ್ರೀಡಾಕೂಟವನ್ನು ಭಾನುವಾರ ಉಡುಪಿ ಜಿಲ್ಲಾ ಮಹಾತ್ಮ ಗಾಂಧಿ ಕ್ರೀಡಾಂಗಣದಲ್ಲಿ ಆಯೋಜಿಸಲಾಯಿತು.



ಕಾರ್ಯಕ್ರಮವನ್ನು ಉದ್ಘಾಟಿಸಿದ ಉಡುಪಿ ಜಿಲ್ಲಾ ಅಥ್ಲೆಟಿಕ್ಸ್ ಅಸೋಸಿಯೇಷನ್ ಅಧ್ಯಕ್ಷ ಹರಿಪ್ರಸಾದ್ ರೈ ಮಾತನಾಡಿ, ಮಹಿಳೆಯರು ಇಂತಹ ಕ್ರೀಡಾಕೂಟಗಳಲ್ಲಿ ಭಾಗವಹಿಸುವ ಮೂಲಕ ತಮ್ಮ ಪ್ರತಿಭೆಯನ್ನು ಪ್ರದರ್ಶಿಸಿ ರಾಜ್ಯ, ದೇಶ ಹಾಗೂ ಅಂತಾರಾಷ್ಟ್ರೀಯ ಮಟ್ಟದಲ್ಲಿ ಸಾಧನೆ ಮಾಡಬೇಕು ಎಂದರು.

ಉಡುಪಿ ಯುವಜನ ಸೇವಾ ಮತ್ತು ಸಬಲೀಕರಣ ಇಲಾಖೆಯ ಸಹಾಯಕ ನಿರ್ದೇಶಕ ಡಾ. ರೋಶನ್ ಕುಮಾರ್ ಶೆಟ್ಟಿ ಸ್ವಾಗತಿಸಿದರು. ಉಡುಪಿ ಜಿಲ್ಲಾ ಅಥ್ಲೆಟಿಕ್ಸ್ ಅಸೋಸಿಯೇಷನ್ ಪ್ರಧಾನ ಕಾರ್ಯದರ್ಶಿ ದಿನೇಶ್ ಶೆಟ್ಟಿ ವಂದಿಸಿದರು. ಸುದರ್ಶನ್ ನಾಯಕ್ ಕಾರ್ಯಕ್ರಮ ನಿರೂಪಿಸಿದರು.

ಮೆಸ್ಕಾಂ ಜನ ಸಂಪರ್ಕ ಸಭೆ

ಕಾರ್ಕಳ: ಮೆಸ್ಕಾಂ ಕಾರ್ಕಳ ಉಪವಿಭಾಗ ಕಛೇರಿಯಲ್ಲಿ ಮಾ.10ರಂದು ಸಮಯ ಬೆಳಿಗ್ಗೆ 10.30ರಿಂದ 12 ಗಂಟೆಯವರೆಗೆ ಜನ ಸಂಪರ್ಕ ಸಭೆ ನಡೆಯಲಿದ್ದು, ಮೆಸ್ಕಾಂನ ಅಧಿಕಾರಿಗಳು ಭಾಗವಹಿಸಲಿದ್ದಾರೆ.

ಪಡುಬಿದ್ರಿ ಶ್ರೀ ಮಹಾಲಿಂಗೇಶ್ವರ ಮಹಾಗಣಪತಿ ದೇವಸ್ಥಾನ

ಸ್ಥಾಪನೆಗೊಂಡಿತು ನೂತನ ಧ್ವಜಸ್ತಂಭ

ಪಡುಬಿದ್ರಿ: ಇತಿಹಾಸ ಪ್ರಸಿದ್ಧ ಪಡುಬಿದ್ರಿ ಶ್ರೀ ಮಹಾಲಿಂಗೇಶ್ವರ ಮಹಾಗಣಪತಿ ದೇವಸ್ಥಾನವು ಜೀರ್ಣೋದ್ಧಾರ, ಬ್ರಹ್ಮಕಲಶೋತ್ಸವಾದಿಗಳ ಹೊಸ್ತಿಲಲ್ಲಿದ್ದು, ಭಾನುವಾರದಂದು ನೂತನ ಧ್ವಜಸ್ತಂಭದ ಸ್ಥಾಪನೆಯು ವಿದ್ಯುಕ್ತವಾಗಿ ಶ್ರೀ ಕ್ಷೇತ್ರದ ತಂತ್ರಿಗಳಾದ ವೇದಮೂರ್ತಿ ಕಂಬ್ಳಕಟ್ಟ ರಾಧಾಕೃಷ್ಣ ಉಪಾಧ್ಯಾಯ, ವೇದಮೂರ್ತಿ ಸುರೇಂದ್ರ ಉಪಾಧ್ಯಾಯ ಅವರ ನೇತೃತ್ವದಲ್ಲಿ ನಡೆಯಿತು.



ದೇಗುಲದ ಪ್ರಧಾನ ದ್ವಾರದ ಮುಂಬದಿಯಲ್ಲಿ ಭಕ್ತ ಜನರ ಜಯಘೋಷಗಳ ನಡುವೆ ಕಾಷ್ಠಶಿಲ್ಪಿ ಮಾಧವ ಆಚಾರ್ಯ ಮುಂದಾಳುತ್ವದಲ್ಲಿ ಸುಮಾರು 5 ಅಡಿಗಳಷ್ಟು ಆಳದ ತಳಪಾಯದಲ್ಲಿ ಧ್ವಜಸ್ತಂಭ ಸ್ಥಾಪಿಸಲಾಯಿತು.

ಮಾಜಿ ಸಚಿವ ವಿನಯ ಕುಮಾರ್ ಸೊರಕೆ, ದೇಗುಲದ ಅರ್ಚಕ ಎರ್ಮಾಳು ಗುರುರಾಜ ಭಟ್, ಹೆಜಮಾಡಿ ಪದ್ಮನಾಭ ಭಟ್, ಅನುವಂಶಿಕ ಮೊಕ್ತೇಸರ ಪಡುಬಿದ್ರಿ ಪೇಟೆಮನೆ ಭವಾನಿಶಂಕರ ಹೆಗ್ಡೆ, ಜೀರ್ಣೋದ್ಧಾರ ಸಮಿತಿಯ ಗೌರವಾಧ್ಯಕ್ಷ ಕೊರ್ನಾಯ ಪದ್ಮನಾಭ ರಾವ್, ಉಪಾಧ್ಯಕ್ಷ ಪಿ. ರವೀಂದ್ರನಾಥ ಜಿ. ಹೆಗ್ಡೆ, ಕಾರ್ಯದರ್ಶಿ ನಡ್ಸಾಲುಗುತ್ತು ಶ್ರೀನಾಥ್ ಹೆಗ್ಡೆ, ವೈ. ಸುಕುಮಾರ್, ಸಹಕಾರ್ಯದರ್ಶಿ ನವೀನ್‌ಚಂದ್ರ ಜೆ. ಶೆಟ್ಟಿ, ವೈ.ಎನ್. ರಾಲುಚಂದ್ರ ರಾವ್, ವಿಷ್ಣುಮೂರ್ತಿ ಆಚಾರ್ಯ ಪಾದೆಬೆಟ್ಟು, ಉದ್ಯಮಿ ಸಂತೋಷ್ ಕುಮಾರ್ ಶೆಟ್ಟಿ ಕುರ್ಕಿಲ್‌ಬೆಟ್ಟು ಪುಣೆ, ನವೀನ್ ಎನ್. ಶೆಟ್ಟಿ ಪೇಟೆಮನೆ ಅನಿಲ್ ಕುಮಾರ್ ಶೆಟ್ಟಿ ಸಂತೋಷ್ ಕುಮಾರ್ ಶೆಟ್ಟಿ ಪಲ್ಲವಿ, ಮಾಧವ ಶೆಟ್ಟಿ ಸರಾಫ್ ಸಂಪತ್ ಆಚಾರ್ಯ, ರಮಾಕಾಂತ ರಾವ್, ಪ್ರಕಾಶ್ ದೇವಾಡಿಗ, ಪಿ.ಕೆ. ಸದಾನಂದ, ಭಾಸ್ಕರ ಕೆ., ಪ್ರಶಾಂತ್ ಶೆಣೈ, ಮುರಳೀನಾಥ ಶೆಟ್ಟಿ ವಿಶುಕುಲೂರ್ ಶೆಟ್ಟಿವಾಲ್, ಕೃಷ್ಣ ಶೆಟ್ಟಿ ಕಂಕಣಗುತ್ತು, ಅಶೋಕ್ ಸಾಲ್ಯಾನ್, ಕುಮಾರ್ ಸಾಲ್ಯಾನ್, ಅಶೋಕ್ ಬಂಗೇರ, ಅನಂತಪಟ್ಟಾಭಿ ರಾವ್, ವಿಠಲ ಬಂಗೇರ, ಶಶಿ ಮತ್ತಿತರರಿದ್ದರು.

ಧ್ವಜಸ್ತಂಭ ಶುದ್ಧೀಕರಣ

ದೇವತಾ ಪ್ರಾರ್ಥನೆಯ ಬಳಿಕ ರತ್ನನ್ಯಾಸ ಹೋಮ, ನವರತ್ನ ನ್ಯಾಸಗಳನ್ನು ಧ್ವಜಸ್ತಂಭದ ತಳಭಾಗದಲ್ಲಿ ರಾಧಾಕೃಷ್ಣ ಉಪಾಧ್ಯಾಯ ನೆರವೇರಿಸಿದರು. ಬಳಿಕ ಇದುವರೆಗೆ ಜಲಾಧಿವಾಸ, ತೈಲಾಧಿವಾಸಗಳನ್ನು ಪೂರೈಸಿರುವ ಧ್ವಜಸ್ತಂಭವನ್ನು ಕ್ರೇನ್ ಬಳಸಿ ದೇಗುಲದ ಹೊರಾಂಗಣಕ್ಕೆ ತರಲಾಯಿತು. ತೀರ್ಥ ಪ್ರೋಕ್ಷಣೆಯೊಂದಿಗೆ ಧ್ವಜಸ್ತಂಭವನ್ನು ಮೊದಲಾಗಿ ಶುದ್ಧೀಕರಿಸಲಾಯಿತು.